"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

22ನೇ ಮಾರ್ಚ್ 2021
ಸೋಮವಾರ

## ವಿಷಯಾನುಕ್ರಮಣಿಕೆ

**01. ಸಂತಾಪ ಸೂಚನೆ**

**ಮಾಜಿ ಸಚಿವರು ಹಾಗೂ ವಿಧಾನಸಭೆಯ ಮಾಜಿ ವಿರೋಧ ಪಕ್ಷದ ನಾಯಕರಾಗಿದ್ದ ಶ್ರೀ ಹೆಚ್.ಟಿ.ಕೃಷ್ಣಪ್ಪನವರ ನಿಧನದ ಬಗ್ಗೆ.**

– ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು)
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**02. 2020–21ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ 62 ನರ್ಸಿಂಗ್ ಮತ್ತು 40 ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳನ್ನು ಪ್ರಾರಂಭಿಸಲು ಅವಶ್ಯವಿರುವ ಮೂಲಭೂತ ಸೌಕರ್ಯ ಹಾಗೂ ಬೋಧಕ ಸಿಬ್ಬಂದಿಗಳ ಕೊರತೆ ಇದ್ದರೂ ಕೂಡ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಿರುವ ಕುರಿತು ಸದನ ಸಮಿತಿಯನ್ನು ರಚಿಸುವ ಬಗ್ಗೆ.**

– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಡಾ:ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)
– ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು)
– ಶ್ರೀ ಮರಿತಿಬ್ಬೇಗೌಡ
– ಶ್ರೀ ಎನ್.ರವಿಕುಮಾರ್
– ಶ್ರೀ ಎಸ್.ಎಲ್.ಭೋಜೇಗೌಡ
– ಶ್ರೀ ಪಿ.ಆರ್.ರಮೇಶ್

**03. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**1833– ಅನುದಾನಿತ ಪದವಿ ಕಾಲೇಜುಗಳಲ್ಲಿ ಅನುಕಂಪದ ಹುದ್ದೆ ಭರ್ತಿ ಮಾಡುವ ಬಗ್ಗೆ.**

– ಶ್ರೀ ಅರುಣ ಶಹಾಪುರ
– ಡಾ: ಸಿ.ಎನ್.ಅಶ್ವಥ್ ನಾರಾಯಣ(ಉಪ ಮುಖ್ಯಮಂತ್ರಿ, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)

**1873 – ಮೂಲ ವಿಜ್ಞಾನದ ಕುರಿತಂತೆ ರಾಜ್ಯದ ವಿದ್ಯಾರ್ಥಿಗಳಲ್ಲಿರುವ ಆಸಕ್ತಿ ಬಗ್ಗೆ**

– ಶ್ರೀಮತಿ ಭಾರತಿ ಶೆಟ್ಟಿ

– ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**1830 – ಗಡಿಭಾಗದ ಶಾಲೆಗಳ ಅಭಿವೃದ್ಧಿ ಬಗ್ಗೆ.**

– ಶ್ರೀ ಚಿದಾನಂದ್ ಎಂ.ಗೌಡ

– ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**1752 – ನೀಲಗಿರಿ ಮತ್ತು ಅಕೇಶಿಯಾ ಮರಗಳ ಬಗ್ಗೆ.**

– ಶ್ರೀ ಕೆ.ಸಿ.ಕೊಂಡಯ್ಯ

– ಶ್ರೀ ಜಗದೀಶ್ ಶೆಟ್ಟರ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)(ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ)

**04. ಪ್ರಕಟಣೆ**

**05. ಪ್ರಶ್ನೋತ್ತರಗಳು**

**ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು (ಮುಂದುವರೆದದ್ದು)**

**1729+**

**1851 – ಕೊಡಗು ಜಿಲ್ಲೆಯ ಮಡಿಕೇರಿ ನಗರದಲ್ಲಿರುವ ಜನರಲ್ ತಿಮ್ಮಯ್ಯ ಮ್ಯೂಸಿಯಂ ಬಗ್ಗೆ.**

– ಶ್ರೀಮತಿ ಎಸ್.ವೀಣಾ ಅಚ್ಚಯ್ಯ

– ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ

– ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು) )(ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ)

**1750 – ಡೈರಿ ಮತ್ತು ಇದಕ್ಕೆ ಸಂಬಂಧಪಟ್ಟ ಕೈಗಾರಿಕೆಗಳ ಬಗ್ಗೆ**

– ಶ್ರೀ ಎಂ.ಎ.ಗೋಪಾಲಸ್ವಾಮಿ

– ಶ್ರೀ ಸಿ.ಪಿ.ಯೋಗೇಶ್ವರ್(ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿ ಪರಿಸ್ಥಿತಿ ಸಚಿವರು)

**1813 – ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮದ ಬಗ್ಗೆ**
**1818**

– ಶ್ರೀ ಹೆಚ್.ಎಂ.ರಮೇಶ್‌ಗೌಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ಜಿ.ರಘು ಆಚಾರ್
– ಶ್ರೀ ಸಿ.ಪಿ.ಯೋಗೇಶ್ವರ್(ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿ ಪರಿಸ್ಥಿತಿ ಸಚಿವರು)

**1820 – ಆನ್‌ಲೈನ್ ಶಿಕ್ಷಣದಿಂದ ಶಾಲಾ ಮಕ್ಕಳಲ್ಲಿ ದೃಷ್ಟಿದೋಷ ಉಂಟಾಗಿರುವ ಬಗ್ಗೆ**
– ಶ್ರೀ ಯು.ಬಿ.ವೆಂಕಟೇಶ್
– ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**1286 – ವಿಶ್ವವಿದ್ಯಾಲಯಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ**
**1083 ನೀಡಿದ ಸೌಲಭ್ಯಗಳ ಬಗ್ಗೆ.**
– ಶ್ರೀ ಎನ್.ಅಪ್ಪಾಜಿಗೌಡ
– ಶ್ರೀ ಎಸ್.ಎಲ್.ಭೋಜೇಗೌಡ
– ಶ್ರೀ ಜಗದೀಶ್ ಶೆಟ್ಟರ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)(ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ)

**ಆ) ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ**

**06. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ವಿಜಯಪುರ ಜಿಲ್ಲೆಯ ವಂದಾಲ ಗ್ರಾಮವು ಆಲಮಟ್ಟಿ ಜಲಾಶಯದ 3ನೇ ಹಂತದ ಯೋಜನೆಗಾಗಿ ಮುಳುಗಡೆಯಾಗುತ್ತಿರುವ ಹಿನ್ನೆಲೆಯಲ್ಲಿ ಮೂಲ ಸೌಕರ್ಯ ಒದಗಿಸುವ ಬಗ್ಗೆ.**
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ) ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತಂಬ್ರಹಳ್ಳಿಯಲ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಬಗ್ಗೆ.**
– ಶ್ರೀ ಕೆ.ಸಿ.ಕೊಂಡಯ್ಯ
– ಶ್ರೀ ಡಾ: ಸಿ.ಎನ್.ಅಶ್ವಥ್ ನಾರಾಯಣ(ಉಪ ಮುಖ್ಯಮಂತ್ರಿ, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)

**ಇ) ರಾಜ್ಯದ ಶಿಕ್ಷಕರು ಮತ್ತು ಉಪನ್ಯಾಸಕರಿಗೆ ಕೋವಿಡ್ ಲಸಿಕೆ ಹಾಕುವ ಬಗ್ಗೆ.**
– ಶ್ರೀ ಅರುಣ ಶಹಾಪೂರ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

"ತಿದ್ದುಪಡಿಯಾಗದ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಈ) ಭಾರತೀಯ ಸೇನೆಗೆ ಸೇರಲು ರಾಜ್ಯದ ನಾನಾ ಕಡೆಗಳಿಂದ ಬರುವ ದೇಶ ಸೇವಾಕಾಂಕ್ಷಿಗಳಿಗೆ ಮೂಲಭೂತ ಸೌಲಭ್ಯ ಒದಗಿಸುವ ಬಗ್ಗೆ.**

– ಶ್ರೀ ಸಿ.ಎಂ.ಮುನಿರಾಜು ಗೌಡ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಉ) ಚಾರ್ಮಾಡಿ ಘಾಟ್ ರಸ್ತೆ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ಬಗ್ಗೆ.**

– ಶ್ರೀ ಕೆ.ಹರೀಶ್ ಕುಮಾರ್
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಊ) ಓ.ಎಫ್.ಸಿ. ಕೇಬಲ್ ಅಳವಡಿಕೆಯಲ್ಲಿ ಬಿಬಿಎಂಪಿ ಅಧಿಕಾರಿಗಳು ಮುಂಜಾಗ್ರತೆ ಕ್ರಮ ತೆಗೆದುಕೊಳ್ಳದೇ ಇರುವ ಬಗ್ಗೆ.**

– ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಋ) ಉಡುಪಿ ಜಿಲ್ಲೆ ಬೈಂದೂರು ತಾಲ್ಲೂಕಿನ ಖಂಬದ ಕೋಣೆ ಗ್ರಾಮದ ಹಲಗೇರಿ ಸರ್ವೆ ನಂ. 166ರಲ್ಲಿನ 30 ಎಕರೆ ಅರಣ್ಯ ಪ್ರದೇಶವನ್ನು ಕೈಗಾರಿಕಾ ವಲಯ ಪ್ರದೇಶವಾಗಿ ಗುರುತಿಸಿರುವ ಬಗ್ಗೆ.**

– ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಎ) ಗದಗ ಜಿಲ್ಲೆ ಶಿರಹಟ್ಟಿ ಪಟ್ಟಣದಲ್ಲಿ ಎಸ್.ಸಿ./ಎಸ್.ಟಿ. ವಿದ್ಯಾರ್ಥಿನಿಯರ ವಸತಿ ನಿಲಯ 2017ರಲ್ಲಿ ಉದ್ಘಾಟನೆ ಆದರೂ ವಿದ್ಯಾರ್ಥಿನಿಯರಿಗೆ ಲಭ್ಯವಾಗದೇ ಇರುವ ಬಗ್ಗೆ.**

– ಶ್ರೀ ಎಸ್.ವ್ಹಿ.ಸಂಕನೂರ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಏ) ವಿಜಯಪುರ ನಿವಾಸಿಗಳಿಗೆ ಕುಡಿಯುವ ನೀರನ್ನು 9–10 ದಿನಗಳಿಗೆ ಒಮ್ಮೆ ಸರಬರಾಜು ಮಾಡುತ್ತಿರುವ ಬಗ್ಗೆ.**

– ಶ್ರೀ ಪ್ರಕಾಶ್ ಕೆ.ರಾಥೋಡ್
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**7. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರುಗಳಿಂದ ಉತ್ತರ.**

**ಅ) ಕೊಡಗು ಜಿಲ್ಲೆಯಲ್ಲಿ ಹುಲಿ ದಾಳಿಯಿಂದ ಉಂಟಾಗುತ್ತಿರುವ ಅಪಾಯಕಾರಿ ಮತ್ತು ಆತಂಕಕಾರಿ ಸಮಸ್ಯೆ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ತ್ಯಾಜ್ಯ ವಸ್ತುವನ್ನು ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸಬಲ್ಲ ಪರಿಸರ ಸ್ನೇಹಿಯಾಗಿ ಅಭಿವೃದ್ಧಿಪಡಿಸಿರುವ "ಥರ್ಮೋ ಎಲೆಕ್ಟ್ರಿಕ್ ತಂತ್ರಾಂಶ"ವನ್ನು ಜನತೆಯ ತನಕ ತರಲು ಅಗತ್ಯ ಪ್ರೋತ್ಸಾಹ ನೀಡುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಉಪ ಮುಖ್ಯಮಂತ್ರಿ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಇಲಾಖೆ ಪರವಾಗಿ)

**ಇ) ಉಡುಪಿ ಜಿಲ್ಲೆಯ ಪಡುಬಿದ್ರೆಯಲ್ಲಿರುವ 2x600 ಮೆಗಾವ್ಯಾಟ್ ಸಾಮರ್ಥ್ಯದ ಯು.ಪಿ.ಎಸ್.ಎಲ್. ಉಷ್ಣ ವಿದ್ಯುತ್ ಸ್ಥಾವರದ ಮಾಲಿನ್ಯದಿಂದ ಉಂಟಾಗಿರುವ ಅನಾಹುತದ ಬಗ್ಗೆ**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿ ಪರಿಸ್ಥಿತಿ ಸಚಿವರ ಪರವಾಗಿ)

**ಈ) ಬೇರೆ ರಾಜ್ಯಗಳಲ್ಲಿ ಕನ್ನಡ ಪತ್ರಿಕೋದ್ಯಮದಲ್ಲಿ ತೊಡಗಿಕೊಂಡಿರುವ ಮಾಧ್ಯಮ ಪ್ರತಿನಿಧಿಗಳ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರ ಪರವಾಗಿ)

**ಉ) ಬಾಲ್ಯ ವಿವಾಹ ನಿಷೇಧ ಕಾಯ್ದೆ 2006ರ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಪರವಾಗಿ)

**ಊ) ಗ್ರಾಮೀಣ ಪ್ರದೇಶಗಳಲ್ಲಿ ಸಾಲ ನೀಡುತ್ತಿರುವ ಮೈಕ್ರೋ ಫೈನಾನ್ಸ್‌ಗಳನ್ನು ನಿಯಮಗಳಡಿಯಲ್ಲಿ ತರುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)

**ಋ) ಕಾವೇರಿ ನದಿ ನೀರಿಗೆ ಕಾರ್ಖಾನೆಗಳ ಕೆಮಿಕಲ್ ಮಿಶ್ರಿತ ಹಾಗೂ ಒಳಚರಂಡಿ ಕಲ್ಮಶ ನೀರು ಮಿಶ್ರಣವಾಗುತ್ತಿರುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿ ಪರಿಸ್ಥಿತಿ ಸಚಿವರ ಪರವಾಗಿ)

**ಎ) ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸುತ್ತಿರುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಪರವಾಗಿ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಏ) ಕೇಂದ್ರ ಸರ್ಕಾರದ ಜಲ ಜೀವನ್ ಮಿಷನ್ ಯೋಜನೆ ಗ್ರಾಮೀಣ ಪ್ರದೇಶಗಳ ಮನೆ ಮನೆಗೂ ನೀರು ಪೂರೈಕೆಯಲ್ಲಿ ರಾಜ್ಯ ಹಿಂದುಳಿದಿರುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ)

**ಐ) "ಉದಯರವಿ" ಮನೆಯನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಪರಿವರ್ತಿಸುವ ಬಗ್ಗೆ**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ)

**08. ಕಾರ್ಯದರ್ಶಿಯವರ ವರದಿ**

**09. ಶಾಸನ ರಚನೆ**

**ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ಕೃಷ್ಣ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ನಿರಸನಗೊಳಿಸುವ) ವಿಧೇಯಕ 2021**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)

– ಶ್ರೀ ಕೆ.ಎ.ತಿಪ್ಪೇಸ್ವಾಮಿ

**(ನಿರಸನಗೊಳಿಸುವ ವಿಧೇಯಕ ಅಂಗೀಕರಿಸಲ್ಪಟ್ಟಿತು)**

**10. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ಮಾಜಿ ಸಚಿವರೊಬ್ಬರದ್ದೆನ್ನಲ್ಲಾದ ಲೈಂಗಿಕ ಸಿ.ಡಿ. ಬಿಡುಗಡೆ ಪ್ರಕರಣ ಹಾಗೂ ಮಾಧ್ಯಮಗಳು ತಮ್ಮ ಬಗ್ಗೆ ಕಲ್ಪಿತ ವಿಷಯಗಳನ್ನು ಬಿತ್ತರಿಸದಂತೆ ಹಾಲಿ 6 ಜನ ಸಚಿವರು ನ್ಯಾಯಾಲಯದ ಮೊರೆ ಹೋಗಿರುವ ಬಗ್ಗೆ.**

– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

– ಡಾ:ಕೆ.ಸಿ.ನಾರಾಯಣಗೌಡ(ಯುವಜನ ಸಬಲೀಕರಣ ಮತ್ತು ಕ್ರೀಡೆ ಹಾಗೂ ಯೋಜನಾ ಸಚಿವರು)

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

– ಶ್ರೀ ಪ್ರಕಾಶ್ ಕೆ.ರಾಥೋಡ್

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**

**11. ವಿತ್ತೀಯ ಕಾರ್ಯಕಲಾಪ**

**2021–22ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

– ಶ್ರೀ ಲಹರ್ ಸಿಂಗ್ ಸಿರೋಯಾ

– ಶ್ರೀ ಹೆಚ್.ಎಂ.ರಮೇಶ್‌ಗೌಡ

**12. ನಿಯಮ 72ರ ಮೇರೆಗೆ ಗಮನ ಸೆಳೆಯುವ ಸೂಚನೆಗಳು**

**ಅ) ಕೋಲಾರ ಜಿಲ್ಲೆಯ ಕೋಳಿ ಸಾಕಾಣಿಕೆದಾರರಿಗೆ ಜಿಲ್ಲಾಡಳಿತ ಹಾಗೂ ಸಂಬಂಧಪಟ್ಟ**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇಲಾಖೆಯ ವತಿಯಿಂದ ಸೌಲಭ್ಯಗಳು ದೊರೆಯದೆ ಇರುವುದರಿಂದ ಕೋಳಿ ಸಾಕಾಣಿಕೆದಾರರು ಸಂಕಷ್ಟ ಅನುಭವಿಸುತ್ತಿರುವ ಬಗ್ಗೆ.**

- ಶ್ರೀ ಗೋವಿಂದ ರಾಜು
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಪಶುಸಂಗೋಪನಾ ಸಚಿವರ ಪರವಾಗಿ)

**ಆ) ಸರ್ಕಾರದ ವಿವಿಧ ಯೋಜನೆಗಳಲ್ಲಿ ಟ್ಯಾಕ್ಸಿ ಸೇವೆಗಾಗಿ ನಾಲ್ಕು ಚಕ್ರದ ವಾಹನ ಖರೀದಿಸಲು ಬಿ.ಪಿ.ಎಲ್. ಕಾರ್ಡ್ ಕಡ್ಡಾಯ ಮಾಡಿದ್ದು, ಪ್ರಸ್ತುತ ನಾಲ್ಕು ಚಕ್ರ ವಾಹನ ಹೊಂದಿರುವವರ ಬಿ.ಪಿ.ಎಲ್. ಕಾರ್ಡ್ ರದ್ದುಪಡಿಸಲಾಗುವುದೆಂದು ಸರ್ಕಾರ ಆದೇಶ ಹೊರಡಿಸಿರುವುದರಿಂದ ಫಲಾನುಭವಿಗಳು ಗೊಂದಲಕ್ಕೀಡಾಗಿರುವುದರ ಬಗ್ಗೆ.**

- ಶ್ರೀ ಶಾಂತರಾಮ್ ಬುಡ್ನ ಸಿದ್ದಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಸಚಿವರ ಪರವಾಗಿ)

**13. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ**

**ಅ) ಖಾಸಗಿ ಅನುದಾನ ರಹಿತ ಹಾಗೂ ಅನುದಾನ ಸಹಿತ ಸ್ಥಳಾಂತರ ಹಾಗೂ ಹಸ್ತಾಂತರವಾದ ಶಾಲೆ ಹಾಗೂ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ.**

- ಶ್ರೀ ಅರುಣ ಶಹಾಪುರ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ಚಿದಾನಂದ್ ಎಂ.ಗೌಡ
- ಶ್ರೀ ಮರಿತಿಬ್ಬೇಗೌಡ
- ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

**ಆ) ಸರ್ಕಾರಿ ವಸತಿಯುತ ಕಿವುಡ ಮಕ್ಕಳ ಶಾಲೆಯ ಅಂಗವಿಕಲ ಶಿಕ್ಷಕರಿಗೆ ವಿಶೇಷ ವಿನಾಯಿತಿ ನಿಯಮಗಳನ್ನು ರೂಪಿಸಿ ಜೇಷ್ಠತೆಯನ್ನು ನಿಗದಿಗೊಳಿಸಿ ನಿವೃತ್ತ ಸಿಬ್ಬಂದಿಗಳಿಗೆ ಪಿಂಚಣಿ ನೀಡಲು ಸರ್ಕಾರದಿಂದ ಭರವಸೆ ನೀಡಲಾಗಿದ್ದರೂ ಪ್ರಸ್ತಾವನೆಯು ಜಾರಿಗೆ ಬಂದಿಲ್ಲದಿರುವ ಬಗ್ಗೆ.**

- ಶ್ರೀ ಎನ್.ಅಪ್ಪಾಜಿಗೌಡ
- ಶ್ರೀ ಮರಿತಿಬ್ಬೇಗೌಡ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀಮತಿ ಶಶಿಕಲಾ ಅಣ್ಣಾ ಸಾಹೇಬ್ ಜೊಲ್ಲೆ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು)
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯ ಅಥವಾ ಪ್ರಕಟಣೆಗೆ ಉಪಯೋಗಿಸಕೂಡದು"

**14. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ**

**ಡೀಸೆಲ್, ಪೆಟ್ರೋಲ್ ಹಾಗೂ ಗ್ಯಾಸ್ ಬೆಲೆಗಳು ಹೆಚ್ಚಾಗಿರುವುದರಿಂದ ದಿನನಿತ್ಯ ಬಳಕೆಯ ವಸ್ತುಗಳು ದುಬಾರಿಯಾಗಿರುವ ಕಾರಣ ಸಾಮಾನ್ಯ ಜನರ ಪರಿಸ್ಥಿತಿ ಚಿಂತಾಜನಕವಾಗಿರುವ ಬಗ್ಗೆ.**

- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಮುರುಗೇಶ್ ಆರ್.ನಿರಾಣಿ(ಗಣಿ ಮತ್ತು ಭೂವಿಜ್ಞಾನ ಸಚಿವರು)
- ಶ್ರೀ ಎನ್.ರವಿಕುಮಾರ್

– – –

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(523) 22.3.2021 11.00 ಪಿಕೆ:ವಿಕೆ**

**<u>ಕರ್ನಾಟಕ ವಿಧಾನ ಪರಿಷತ್ತು</u>**

**ಸೋಮವಾರ, 22ನೇ ಮಾರ್ಚ್, 2021**

**ಸದನವು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 07 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು ಸಭಾಪೀಠದಲ್ಲಿ ಉಪಸ್ಥಿತರಿದ್ದರು.**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಸದನ ಪ್ರಾರಂಭವಾಗುತಿದ್ದಂತೆ ಜನತಾದಳ(ಎಸ್) ಪಕ್ಷದ ಸದಸ್ಯರು ಬಾವಿಯೊಳಗಿಳಿದು ಧರಣಿಯನ್ನು ಮುಂದುವರಿಸಿದರು)**

**ಸಭಾಪತಿಯವರು:–** ಒಂದು ಸಂತಾಪ ಸೂಚನ ಪ್ರಸ್ತಾವ ಇದೆ. ಅದು ಮುಗಿಯುವ ತನಕ ಬಾವಿಯಲ್ಲಿರುವ ಸದಸ್ಯರುಗಳು ತಮ್ಮ ಸ್ಥಳಗಳಿಗೆ ನಿರ್ಗಮಿಸಬೇಕು. ಸಂತಾಪ ಸೂಚನೆ ಪ್ರಸ್ತಾವ ಮಂಡಿಸುವ ಸಂದರ್ಭದಲ್ಲಿ ಬಾವಿಯೊಳಗೆ ಯಾವ ಸದಸ್ಯರೂ ಇರಬಾರದು. ದಯವಿಟ್ಟು ನಿಮ್ಮ ನಿಮ್ಮ ಸ್ಥಳಗಳಿಗೆ ಹೋಗಿ.

**(ಈ ಹಂತದಲ್ಲಿ ಜೆಡಿ(ಎಸ್) ಪಕ್ಷದ ಸದಸ್ಯರು ತಮ್ಮ ಸ್ಥಾನಗಳಿಗೆ ತೆರಳಿದರು)**

**1. ಸಂತಾಪ ಸೂಚನೆ**

**ವಿಷಯ: ಮಾಜಿ ಸಚಿವರು ಹಾಗೂ ವಿಧಾನಸಭೆಯ ಮಾಜಿ ವಿರೋಧ ಪಕ್ಷದ ನಾಯಕರಾಗಿದ್ದ ಶ್ರೀ ಹೆಚ್.ಟಿ.ಕೃಷ್ಣಪ್ಪನವರ ನಿಧನದ ಬಗ್ಗೆ.**

**ಸಭಾಪತಿಯವರು:–** ಮಾಜಿ ಸಚಿವರು ಹಾಗೂ ವಿಧಾನಸಭೆಯ ಮಾಜಿ ವಿರೋಧ ಪಕ್ಷದ ನಾಯಕರಾಗಿದ್ದ ಶ್ರೀ ಹೆಚ್.ಟಿ.ಕೃಷ್ಣಪ್ಪ ಅವರು ದಿನಾಂಕ 18.3.2021ರಂದು ನಿಧನ ಹೊಂದಿರುತ್ತಾರೆ.

1930 ಮೇ 30ರಂದು ನಾಗಮಂಗಲ ತಾಲ್ಲೂಕಿನ ಹೆರಗನಹಳ್ಳಿ ಗ್ರಾಮದಲ್ಲಿ ಜನಿಸಿದ ಶ್ರೀಯುತರು ಬಿ.ಎ., ಹಾಗೂ ಕಾನೂನು ಪದವಿಯನ್ನು ಹೊಂದಿದ್ದರು. ವಕೀಲರಾಗಿ ವೃತ್ತಿ ಆರಂಭಿಸಿದ ಶ್ರೀಯುತರು ನಾಗಮಂಗಲದ ಸೊಗಡನ್ನು ಮೈಗೂಡಿಸಿಕೊಂಡು ಪೌರಾಣಿಕ ರಂಗಭೂಮಿ ಕಲಾವಿದರಾಗಿ, ಕಲಾ ಪೋಷಕರಾಗಿ, ಪುಣ್ಯಕೋಟಿ ಇತ್ಯಾದಿ ಪುಸ್ತಕಗಳನ್ನು ಬರೆದು ಜನಮನ್ನಣೆ ಪಡೆದಿದ್ದರು. ನಾಗಮಂಗಲ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರಾಗಿ, ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಿಂದ ಒಟ್ಟು ನಾಲ್ಕು ಬಾರಿ 5, 6, 7 ಮತ್ತು 8ನೇ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ರೇಷ್ಮೆ ವ್ಯವಸಾಯ ರಾಜ್ಯ ಸಚಿವರಾಗಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಅಬಕಾರಿ ಸಚಿವರಾಗಿ, 1976ರಲ್ಲಿ ವಿಧಾನಸಭೆಯ ಹಂಗಾಮಿ ವಿರೋಧ ಪಕ್ಷದ ನಾಯಕರಾಗಿ ಸೇವೆ ಸಲ್ಲಿಸಿದ್ದರು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕೀಯ ಮುತ್ಸದ್ಧಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**ಶ್ರೀ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ತಾವು ತಂದಿರುವ ಸಂತಾಪ ಸೂಚನಾ ಪ್ರಸ್ತಾವಕ್ಕೆ ಬೆಂಬಲವನ್ನು ಸೂಚಿಸುತ್ತೇನೆ. ಮಾಜಿ ಸಚಿವರು ಹಾಗೂ ವಿಧಾನಸಭೆಯ ಮಾಜಿ ವಿರೋಧ ಪಕ್ಷದ ನಾಯಕರಾಗಿದ್ದ ಶ್ರೀ ಹೆಚ್.ಟಿ.ಕೃಷ್ಣಪ್ಪ ಅವರು ನಾಲ್ಕು ಸಲ ವಿಧಾನಸಭೆಗೆ ಆಯ್ಕೆಯಾಗಿ ತಮ್ಮದೇ ಆದ ರೀತಿಯಲ್ಲಿ ಜನಸೇವೆ ಮಾಡಿದಂತಹ ಹಿರಿಯ ನಾಯಕರಾಗಿದ್ದರು. ಪೌರಾಣಿಕ ರಂಗಭೂಮಿ ಕಲಾವಿದರಿಗೆ ಮತ್ತು ಅನೇಕ ರೀತಿಯ ಅಭಿವೃದ್ಧಿ ಕಾರ್ಯಕ್ಕೆ ಹೆಚ್ಚು ಒತ್ತನ್ನು ಕೊಟ್ಟು ಕೆಲಸ ಮಾಡಿದಂತಹ ಶ್ರೀಯುತರು ನಿಧನರಾಗಿದ್ದಾರೆ. ಅವರ ಮನೆಯವರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಮಂಡಿಸಿದ ಸಂತಾಪ ಸೂಚನೆಗೆ ನನ್ನ ಬೆಂಬಲ ವ್ಯಕ್ತಪಡಿಸುತ್ತೇನೆ. ಶ್ರೀ ಹೆಚ್.ಟಿ.ಕೃಷ್ಣಪ್ಪ ಅತ್ಯಂತ ಜನಪರ ನಿಲುವಿನ, ಅಭಿವೃದ್ಧಿಪರ ಚಿಂತಕರೆಂದು ಖ್ಯಾತರಾಗಿದ್ದರು. ಅಷ್ಟೇ ಅಲ್ಲದೇ, ಮಂಡ್ಯ ಜಿಲ್ಲೆಯಲ್ಲಿ ಒಳ್ಳೆಯ ಹೆಸರು ಪಡೆದಂಥವರಾಗಿದ್ದರು. ಸಾಹಿತಿಗಳು ಮತ್ತು ಕಲಾವಿದರಾಗಿ ಕೂಡ ಕೆಲಸ ಮಾಡಿದ್ದನ್ನು ನಾನಿಲ್ಲಿ ನೆನಪಿಸಕೊಳ್ಳಬಯಸುತ್ತೇನೆ.

**(ಮುಂದು)**

**(524) 22-03-2021 11.10 ಜಿಎಸ್-ಬಿಎನ್‌ಎಸ್**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಇವರು ವೃತ್ತಿಯಿಂದ ನ್ಯಾಯವಾದಿಗಳು, ಅವರ ಪ್ರವೃತ್ತಿಯಿಂದ ರಾಜಕಾರಣಿಗಳಾಗಿ ಮಂಡ್ಯ ಜಿಲ್ಲೆಯ ನಾಗಮಂಗಲ ವಿಧಾನಸಭೆಯ ಮತ ಕ್ಷೇತ್ರಕ್ಕೆ 4 ಬಾರಿ ವಿಧಾನಸಭೆಯ ಸದಸ್ಯರಾಗಿ ಅನೇಕ ಬಾರಿ ಮಂತ್ರಿಗಳಾಗಿ ಕೂಡ ಅತ್ಯುತ್ತಮವಾಗಿ ಕೆಲಸ ಮಾಡಿದಂತಹ ದಾಖಲೆ ಇದೆ. ಇವರಿಗೆ ಅಭಿವೃದ್ಧಿ ಪರ ಚಿಂತಕರು, ಅಜಾತಶತ್ರು ಎಂದು ಕರೆಯುತ್ತಿದ್ದರು. ಇವರು ನಾಗಮಂಗಲ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರಾಗಿದ್ದರು, ಅನಂತರ ಇವರು ವಿಧಾನಸಭೆಯ ಹಂಗಾಮಿ ವಿರೋಧ ಪಕ್ಷದ ನಾಯಕರಾಗಿ ಅತ್ಯುತ್ತಮವಾಗಿ ಕೆಲಸ ಮಾಡಿದ್ದಾರೆ. ಸಾರ್ವಜನಿಕ ಬದುಕಿನಲ್ಲಿ ಶ್ರೀ ಹೆಚ್.ಟಿ.ಕೃಷ್ಣಪ್ಪ ರವರು ತಮ್ಮದೇ ಆದಂತಹ ಛಾಪನ್ನು ಮೂಡಿಸಿದಂತಹ ಒಬ್ಬ ಶ್ರೇಷ್ಠ ರಾಜಕಾರಣಿ, ಇವರ ಅಗಲಿಕೆಯಿಂದ ಕನ್ನಡ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾಡಿನ ಸಾರ್ವಜನಿಕ ಬದುಕಿನಲ್ಲಿ ಒಬ್ಬ ಶ್ರೇಷ್ಠ ಅಭಿವೃದ್ಧಿ ಪರ ಚಿಂತಕರನ್ನು ಕಳೆದುಕೊಂಡಿರುವಂತಹ ಅನುಭವವಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ವ್ಯಕ್ತ ಮಾಡಿ ಮೃತರ ಆತ್ಮಕ್ಕೆ ಆ ಭಗವಂತ ಚಿರಶಾಂತಿಯನ್ನು ನೀಡಲಿ ಮತ್ತು ಮೃತರ ಅಗಲಿಕೆಯ ನೋವನ್ನು ಸಹಿಸುವಂತಹ ಶಕ್ತಿಯನ್ನು ಭಗವಂತ ಅವರ ಕುಟುಂಬ ವರ್ಗದವರಿಗೆ, ಅಭಿಮಾನಿಗಳಿಗೆ, ಗೆಳೆಯರಿಗೆ, ಆ ಭಾಗದ ಸಮಸ್ತ ಜನತೆಗೆ ಆ ಶಕ್ತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

**ಸಭಾಪತಿಯವರು:–** ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿ ಕೊಡಲಾಗುವುದು.

**(ಈ ಹಂತದಲ್ಲಿ ಶ್ರೀ ಕೆ.ಟಿ.ಶ್ರೀಕಂಠೇಗೌಡರವರನ್ನು ಹೊರತುಪಡಿಸಿ, ಜೆಡಿ(ಎಸ್) ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಧರಣಿ ಮುಂದುವರೆಸಿದರು)**

**2. 2020–21ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ 62 ನರ್ಸಿಂಗ್ ಮತ್ತು 40 ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳನ್ನು ಪ್ರಾರಂಭಿಸಲು ಅವಶ್ಯವಿರುವ ಮೂಲಭೂತ ಸೌಕರ್ಯ ಹಾಗೂ ಬೋಧಕ ಸಿಬ್ಬಂದಿಗಳ ಕೊರತೆ ಇದ್ದರೂ ಕೂಡ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಿರುವ ಬಗ್ಗೆ ಸದನ ಸಮಿತಿ ರಚನೆಗೆ ಒತ್ತಾಯದ ಬಗ್ಗೆ.**

------

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕಳೆದ ಗುರುವಾರ ಮತ್ತು ಶುಕ್ರವಾರ ಎರಡು ದಿನಗಳ ಕಾಲ ಧರಣಿಯಲ್ಲಿದ್ದೇವೆ. ಇವತ್ತು ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉಪಸ್ಥಿತರಿರುವ ಕಾರಣ ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುವುದಕ್ಕೆ ಬಯಸುತ್ತಿದ್ದೇನೆ. ಒಂದು ಅತ್ಯಂತ ಮಹತ್ವದ ವಿಚಾರವನ್ನು ಆಳುವ ಪಕ್ಷದ ಸದಸ್ಯರಾದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಎನ್.ರವಿಕುಮಾರ್‌ರವರು ಪ್ರಸ್ತಾಪ ಮಾಡಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ 62 ಬಿ.ಎಸ್‌ಸಿ., ನರ್ಸಿಂಗ್ ಮತ್ತು 40 ಪ್ಯಾರಾ ಮೆಡಿಕಲ್ ಕೋರ್ಸ್‌ಗಳನ್ನು ಮಂಜೂರು ಮಾಡಿದಂತಹ ಸಂದರ್ಭಗಳಲ್ಲಿ, ಇನ್ನು ಸಾಕಷ್ಟು ಕಾಲೇಜುಗಳಿಗೆ ಮಂಜೂರಾತಿಗೆ ಶಿಫಾರಸ್ಸು ಆಗಿರುವುದು ಒಂದು ಕಡೆ, ಮತ್ತೊಂದು ಕಡೆ ಪ್ಯಾರಾ ಮೆಡಿಕಲ್ ಕೋರ್ಸ್‌ಗಳು ನಮ್ಮ ನಾಡಿನ ಜನರ ಆರೋಗ್ಯಕ್ಕೆ ಸಂಬಂಧಪಟ್ಟ ಅಧ್ಯಯನದ ಕೋರ್ಸ್‌ಗಳಾಗಿದ್ದು, ಬಹಳಷ್ಟು ಕೋರ್ಸ್‌ಗಳು ಅವು ಭೌತಿಕವಾಗಿ ನಡೆಯುತ್ತಿಲ್ಲ, ಕೇವಲ ಮೆಡಿಕಲ್ ಕಾಲೇಜುಗಳು ಮತ್ತು ದೊಡ್ಡ ಆಸ್ಪತ್ರೆಗಳಲ್ಲಿರುವಂತಹ ಕೋರ್ಸ್‌ಗಳು ಮಾತ್ರ ನಡೆಯುತ್ತಿವೆ. ಇದು ಹೊರ ರಾಜ್ಯದವರಿಗೆ ಒಂದು ರೀತಿಯಲ್ಲಿ ಹೆಬ್ಬಾಗಿಲು ರೀತಿಯಲ್ಲಿ ಆಗಿದ್ದು, ದೊಡ್ಡ ಪ್ರಮಾಣದಲ್ಲಿ ಶುಲ್ಕವನ್ನು ಪಡೆದು ಅವರು ಕೇವಲ ಪರೀಕ್ಷೆಗೆ ಬರುವುದು, ಸರ್ಟಿಫಿಕೇಟ್ ತೆಗೆದುಕೊಂಡು ಹೋಗುವುದು, ದೇಶ ಮತ್ತು ವಿದೇಶಗಳಲ್ಲಿ ಕೆಲಸ ಮಾಡುವಂತಹದ್ದು, ಇದು ಆಗಬಾರದು. ಆ ಎಲ್ಲಾ ಪ್ಯಾರಾ ಮೆಡಿಕಲ್ ಕೋರ್ಸ್‌ಗಳು, ನಮ್ಮ ನಾಡಿನ ನಾಗರಿಕರ ಬದುಕಿನ ವಿಚಾರಕ್ಕೆ ಸಂಬಂಧಪಟ್ಟ ಕಾರಣ ಅವೆಲ್ಲಾ ವ್ಯವಸ್ಥಿತವಾಗಿ ನಡೆಯಬೇಕು, ಆ ಕೋರ್ಸ್‌ಗಳನ್ನು ಸ್ಟ್ರೀಮ್‌ಲೈನ್‌ಗೆ ತರಬೇಕು ಮತ್ತು ಈ ವಿಚಾರದಲ್ಲಾಗಿರುವಂತಹ ತಪ್ಪುಗಳು ಏನಿವೆ ಆ ಕುರಿತು ಸಮಗ್ರ ತನಿಖೆ ನಮ್ಮ ಸದನ ಸಮಿತಿಯಿಂದ ಆಗಬೇಕು, ಆಳುವ ಪಕ್ಷದ ಸದಸ್ಯರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿ ಅದರಲ್ಲಿ ಚರ್ಚೆ ಮಾಡಿ ಅದನ್ನು ಸರಿ ದಾರಿಗೆ ತರುವ ಪ್ರಯತ್ನವನ್ನು ಮಾಡೋಣ ಎನ್ನುವ ಒತ್ತಾಯವನ್ನು ನಾವು ಮಾಡಿದ್ದೇವೆ. ಈಗಾಗಲೇ ಕುಡಿಯುವ ನೀರಿನ ವಿಚಾರದಲ್ಲಿ ಸದನ ಸಮಿತಿಗಳಾಗಿವೆ. ಗಂಗಾಕಲ್ಯಾಣ ವಿಚಾರಕ್ಕೂ ಸದನ ಸಮಿತಿಯಾಗಿದೆ. ಇದು ಆರೋಗ್ಯದ ವಿಚಾರವಾಗಿರುವುದರಿಂದ ನಮ್ಮ ಜನರ ಬದುಕಿನ ಭವಿಷ್ಯದ ವಿಚಾರವಾಗಿರುವ ಕಾರಣ, ಇದು ಅತ್ಯಂತ ಮಹತ್ವದ ವಿಚಾರ ಮತ್ತು ನಾಡಿನ ಜ್ವಲಂತ ಸಮಸ್ಯೆಗಳಲ್ಲಿ ಒಂದಾಗಿರುವ ಕಾರಣ, ಇವುಗಳನ್ನು ಸರಿ ದಾರಿಗೆ ತರುವ ದಿಸೆಯಲ್ಲಿ ಸದನ ಸಮಿತಿಯನ್ನು ಮಾಡಬೇಕು. ಆಳುವ ಸದಸ್ಯರ ಅಧ್ಯಕ್ಷತೆಯಿಂದಲೇ ಈ ಸಮಿತಿ ರಚನೆಯಾಗಲಿ, ಏನಾದರೂ ಮಾಡಿ ಇದನ್ನು ಸ್ಟ್ರೀಮ್‌ಲೈನ್‌ಗೆ ತರೋಣ, ಇಲ್ಲಿ ಆಗುತ್ತಿರುವಂತಹ ತಪ್ಪುಗಳನ್ನು ಸರಿಪಡಿಸುವ ಕೆಲಸಗಳನ್ನು ಮಾಡಬೇಕಾದ್ದು ನಾಗರಿಕ ಸರ್ಕಾರದ ಜವಾಬ್ದಾರಿಯಾಗಿದೆ. ಕಳೆದ 6-7 ದಶಕಗಳಿಂದ, 60-70 ವರ್ಷಗಳಿಂದ ಇವುಗಳನ್ನು ಸರಿ ದಾರಿಗೆ ತರುವುದಕ್ಕೆ ಆಗಲಿಲ್ಲ. ಕಳೆದ 2-3 ದಿನಗಳಿಂದ ನಾನು ಸಾರ್ವಜನಿಕ ಅಭಿಪ್ರಾಯವನ್ನು ಕೇಳಿದ್ದೇನೆ, ನೀವು ಕೈಗೆತ್ತಿಕೊಂಡಿರುವಂತಹ ವಿಚಾರ ಸರಿಯಾಗಿದೆ, ಈ ದಿಸೆಯಲ್ಲಿ ನೀವು ಸದನ ಸಮಿತಿಯನ್ನು ಮಾಡಿಸಿ, ಅದನ್ನು ಸರಿಯಾದ ದಾರಿಗೆ ತನ್ನಿ ಎಂದು ಸಾರ್ವಜನಿಕರು ಕೂಡ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಶಾಲಾ-ಕಾಲೇಜುಗಳ ಆಡಳಿತ ಮಂಡಳಿಯವರು ಅದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹಾಗಾಗಿ ತಮ್ಮ ಮೂಲಕ ಗೌರವಾನ್ವಿತ ಮಾನ್ಯ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಖ್ಯಮಂತ್ರಿಗಳಿಗೆ ನಾನು ಮನವಿ ಮಾಡುತ್ತೇನೆ, ಇದಕ್ಕೆ ಹಠ ಹಿಡಿಯುವುದು ಬೇಡ. ನಾವು ಪದೇಪದೇ ಹೇಳುತ್ತಿದ್ದೇವೆ, ಆಳುವ ಪಕ್ಷದ ಸದಸ್ಯರ ಅಧ್ಯಕ್ಷತೆಯಿಂದಲೇ ಸಮಿತಿ ರಚನೆಯಾಗಲಿ, ಇವುಗಳನ್ನು ಸ್ಟ್ರೀಮ್‌ಲೈನ್‌ಗೆ ತರುವಂತಹ ಕೆಲಸವನ್ನು ಮಾಡೋಣ. ಆಗ ಜನರು ಮೆಚ್ಚುತ್ತಾರೆ, ಅವರ ಆರೋಗ್ಯ ಉಳಿಯುತ್ತದೆ, ಭವಿಷ್ಯ ಉಳಿಯುತ್ತದೆ, ಜೀವ ಉಳಿಯುತ್ತದೆ, ಜೀವದ ಜೊತೆಯಲ್ಲಿ ನಾವು ಚೆಲ್ಲಾಟ ಆಡುವಂಥದ್ದು ಬೇಡ. ಏಕೆಂದರೆ, ಬಿ.ಎಸ್‌ಸಿ., ನರ್ಸಿಂಗ್ ಎಂದರೆ ಅವರು almost ವೈದ್ಯರು ಇದ್ದ ಹಾಗೆ. ಅವರು ಕಾಲೇಜಿಗೆ ಬರುವುದಿಲ್ಲ, ಪಾಠವನ್ನೇ ಕೇಳುವುದಿಲ್ಲ, ಪರೀಕ್ಷೆ ಬರೆಯುತ್ತೇನೆಂದರೆ, ಹಣ ಕೊಟ್ಟವರಿಗೆ ಮೆರಿಟ್ ಮೇಲೆ ರ್‍ಯಾಂಕ್ ಕೊಡುತ್ತಾರೆಂದರೆ ಅರ್ಥ ಏನು? ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಸದನ ಸಮಿತಿಯನ್ನು ಘೋಷಣೆ ಮಾಡಬೇಕು. ಆ ಮೂಲಕ ಪ್ಯಾರಾ ಮೆಡಿಕಲ್ ಕೋರ್ಸ್‌ಗಳನ್ನು ಸರಿ ದಾರಿಗೆ ತರುವ ದಿಸೆಯಲ್ಲಿ ಒಂದು ದೊಡ್ಡ ನಾಂದಿಗೆ ತಾವು ಕಾರಣರಾಗಬೇಕೆಂದು ತಮ್ಮ ಮೂಲಕ ನಾನು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

**(ಈ ಹಂತದಲ್ಲಿ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಸದನದ ಬಾವಿಗೆ ಆಗಮಿಸಿ ಇತರರ ಜೊತೆಗೆ ಧರಣಿಯಲ್ಲಿ ನಿರತರಾದರು)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸದನದ ಕಲಾಪ ನಡೆಯದೆ ಇವತ್ತು ಸತತವಾಗಿ ಮೂರನೇ ದಿನವಾಗಿದೆ. ಎರಡು ದಿವಸ ಕಲಾಪ ವ್ಯತ್ಯಯವಾಗಿದೆ. ಮೊದಲ ದಿವಸ ಮಧ್ಯಾಹ್ನದ ಮೇಲೆ ಕಲಾಪ ವ್ಯತ್ಯಯವಾದರೆ, ಶುಕ್ರವಾರ ದಿವಸ ಪೂರ್ತಿಯಾಗಿ ಕಲಾಪ ವ್ಯತ್ಯಯವಾಗಿದೆ. ಇವತ್ತು ಸದನ ಪ್ರಾರಂಭವಾಗಿದೆ. ಆದರೆ ಇನ್ನೂ ಜಾತ್ಯಾತೀತ ಜನತಾ ದಳದ ಸದಸ್ಯರು ಬಾವಿಯಲ್ಲಿದ್ದಾರೆ. ತಾವು ಅನೇಕ ಸುತ್ತಿನ ಮಾತುಕತೆಗಳನ್ನು ಮಾಡಿದ್ದೀರಿ. ಜಾತ್ಯಾತೀತ ಜನತಾ ದಳದವರ ವಿಚಾರವೇನೆಂದರೆ, ಇದರಲ್ಲಿ ಸರ್ಕಾರ ಏಕೆ ಪ್ರತಿಷ್ಠೆ ಮಾಡಿಕೊಳ್ಳಬೇಕು, ಸದನ ಸಮಿತಿ ನೇಮಿಸಿ ಬಿಟ್ಟರೆ ಸತ್ಯಾಸತ್ಯತೆ ಹೊರಗೆ ಬರುತ್ತದೆ. ಇವತ್ತು ಪ್ಯಾರಾ ಮೆಡಿಕಲ್ ಕೋರ್ಸ್ ಆಗಲಿ ಮತ್ತು ನರ್ಸಿಂಗ್ ಕಾಲೇಜುಗಳ ಮಂಜೂರಾತಿಯಲ್ಲಿ ಅವ್ಯವಹಾರವಾಗಿದೆ ಎನ್ನುವ ಬಗ್ಗೆ ರಾಜ್ಯದ ಉದ್ದಗಲಕ್ಕೂ ವಿಚಾರ ಇಟ್ಟುಕೊಂಡು ಮಾನ್ಯ ರವಿಕುಮಾರ್‌ರವರು ತಂದಿರುವಂತಹ ವಿಚಾರವನ್ನು ಇವತ್ತು ಜಾತ್ಯಾತೀತ ಜನತಾ ದಳದವರು ಪ್ರತಿಪಾದನೆ ಮಾಡುತ್ತಿದ್ದಾರೆ. ಇವತ್ತು ಸುದೈವದಿಂದ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದಿದ್ದಾರೆ. ತಾವು ಅನೇಕ ಸುತ್ತಿನ ಮಾತುಕತೆಗಳನ್ನು ಮಾಡಿದ್ದೀರಿ. ಆದರೆ ಆದು ಫಲ ನೀಡಿಲ್ಲ. ತಾವು ಸಾಕಷ್ಟು ಪ್ರಯತ್ನ ಮಾಡಿದ್ದೀರಿ, ಮಾಡಿಲ್ಲ ಎಂದು ಹೇಳುತ್ತಿಲ್ಲ. ಅನೇಕ ಸಲ ಸದನವನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಂದೂಡಿದ್ದೀರಿ. Conciliation proceedings ಬಹಳಷ್ಟು ಆಗಿವೆ. ಸಾಕಷ್ಟು ಶ್ರಮ ವಹಿಸಿದರೂ ಕೂಡ ಇದು ಒಂದು ಇತ್ಯರ್ಥಕ್ಕೆ ಬರಲಾರದ ಸ್ಥಿತಿ ಇದೆ. ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಮಾನ್ಯ ಗೌರವಾನ್ವಿತ ಮುಖ್ಯಮಂತ್ರಿಗಳಿಗೆ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಚರ್ಚೆಯ ಸಂದರ್ಭದಲ್ಲಿ ಬಂದಿರುವಂತಹ ವಿಚಾರಗಳನ್ನು ನಾನು ಹೇಳುತ್ತಿದ್ದೇನೆ, ನಿಷ್ಪಕ್ಷಪಾತವಾದ, ಪ್ರಾಮಾಣಿಕವಾದ ದಕ್ಷ ಅಧಿಕಾರಿಯನ್ನು ನೇಮಿಸುತ್ತೇನೆಂದು ಹೇಳಿದರು. ಥರ್ಡ್ ಪಾರ್ಟಿಯನ್ನು ಕೂಡ ನೇಮಿಸುತ್ತೇನೆ ಎಂದು ಹೇಳಿದ್ದಕ್ಕೆ ಒಪ್ಪಿಲ್ಲ. ನಮ್ಮ ಸದನದ ಸದಸ್ಯರ ಮೇಲೆ ಗೌರವವಿದೆ, ಅದರಲ್ಲೂ ವಿಶೇಷವಾಗಿ ಆಳುವ ಪಕ್ಷದ ಸದಸ್ಯರೇ ಅದರ ಅಧ್ಯಕ್ಷರಾಗಿ ಕೆಲಸ ಮಾಡುತ್ತಾರೆ. ನಾವೆಲ್ಲರೂ ರಾಜ್ಯದ ಹಿತದೃಷ್ಟಿಯಿಂದ ಒಂದಾಗಿ ಏನಾದರೂ ಅವ್ಯವಹಾರವಾಗಿದ್ದರೆ ಅದನ್ನು ಎತ್ತಿ ತೆಗೆದು ಮುಂದೆ ಅದು ಆಗಲಾರದ ಹಾಗೆ ನೋಡಿಕೊಳ್ಳುವಂತಹ ಜವಾಬ್ದಾರಿ ಸದನ ಸಮಿತಿ ಮೇಲೆ ಇದೆ. ತಪ್ಪುಗಳನ್ನು ಸರಿಪಡಿಸುವಂತಹ ಜವಾಬ್ದಾರಿ ಸದನ ಸಮಿತಿ ಮೇಲೆ ಇದೆ. ಸರ್ಕಾರಕ್ಕೆ ನಮ್ಮ ಸದನದ ಸದಸ್ಯರ ಮೇಲೆ ಗೌರವ ಇರಬೇಕಲ್ಲವೇ, ನಂಬಿಕೆ, ವಿಶ್ವಾಸ ಇರಬೇಕು. ನಾವು ಅಧಿಕಾರಿಗಳನ್ನು ನೇಮಿಸುತ್ತೇವೆ, ತಜ್ಞರುಗಳನ್ನು ನೇಮಿಸುತ್ತೇವೆ ಎನ್ನುವುದರ ಬದಲು ಇದೇ ಸದನದ ಸದಸ್ಯರು, ಚಿಂತಕರ ಛಾವಡಿಯ ಸದಸ್ಯರು, ಅದರಲ್ಲಿ ಆಡಳಿತ ಪಕ್ಷದ ಸದಸ್ಯರನ್ನು ಅಧ್ಯಕ್ಷರನ್ನಾಗಿ ಮಾಡಿ ಸದನ ಸಮಿತಿ ರಚನೆ ಮಾಡಬೇಕು. ಅನೇಕ ಸಂದರ್ಭದಲ್ಲಿ, ಮೊನ್ನೆ ಕುಡಿಯುವ ನೀರಿನ ಸದನ ಸಮಿತಿ, ಈಗಾಗಲೇ ಮೂರು ಸದನ ಸಮಿತಿಗಳು ಅಸ್ತಿತ್ವದಲ್ಲಿವೆ. ಇದೊಂದು ಸದನ ಸಮಿತಿ ನೇಮಿಸಿದರೆ ಸರ್ಕಾರಕ್ಕೆ ಏನು ತೊಂದರೆಯಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೃದಯ ಶ್ರೀಮಂತಿಕೆಯ ರಾಜಕಾರಣಿಗಳು. ಅವರು ಹೋರಾಟದಿಂದ ಈ ಕುರ್ಚಿಗೆ ಬಂದಿದ್ದಾರೆ. ಹಾಗೆ ಬಂದಿಲ್ಲ. ಅವರು ಈ ವಿಷಯದ ಗಾಂಭೀರ್ಯವನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಮನವಿ ಮಾಡುತ್ತಿದ್ದೇನೆ. ಇದರಲ್ಲಿ ಸರ್ಕಾರ ಪ್ರತಿಷ್ಠೆ ಮಾಡಿಕೊಳ್ಳುವುದು ಬೇಡ. ಪ್ರತಿಷ್ಠೆ ಮಾಡಿಕೊಂಡು, ಇಲ್ಲ ನಾವು ಮಾಡುವುದಿಲ್ಲ ಎಂದು ಹೇಳುವುದು ಬೇಡ. ಏಕೆಂದರೆ, ಇದು ಬಜೆಟ್ ಅಧಿವೇಶನ. ಈ ಅಧಿವೇಶನದಲ್ಲಿ ಬಹಳಷ್ಟು ವಿಚಾರಗಳನ್ನು ಚರ್ಚೆ ಮಾಡಬೇಕಾಗಿದೆ. ಪ್ರತಿಪಕ್ಷದ ನಾಯಕನಾಗಿ ನಾನು ಕೂಡ ಬಜೆಟ್ ಬಗ್ಗೆ ಮಾತನಾಡಿಲ್ಲ. ಈಗ ನನಗೆ ಬಹಳ ಆತಂಕ ಪ್ರಾರಂಭವಾಗಿದೆ. ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ಬೆಳಕು ಚೆಲುವುದಕ್ಕೆ ನಮ್ಮ ಸದಸ್ಯರುಗಳು ತುದಿಗಾಲಿನಲ್ಲಿ ನಿಂತಿದ್ದಾರೆ. ಇಂತಹ ಸಂದರ್ಭದಲ್ಲಿ ಇವತ್ತು ಸರ್ಕಾರ ಪ್ರತಿಷ್ಠೆ ಮಾಡಿಕೊಳ್ಳಬಾರದು. ಮಾನ್ಯ ಮುಖ್ಯಮಂತ್ರಿಗಳು ಸ್ವತಃ ನಮ್ಮ ಸದನಕ್ಕೆ ಬಂದಿದ್ದಾರೆ. ಬೇಕಾದರೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ತಮ್ಮ ಕೊಠಡಿಯಲ್ಲಿ ಹತ್ತು ನಿಮಿಷ ಚರ್ಚೆ ಮಾಡಿ ಇದಕ್ಕೆ ಮಂಗಳ ಹಾಡಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಈ ರೀತಿ ಸದನದ ಕಲಾಪ ಹಾಳಾಗಿ

ಹೋದರೆ ಬಹುತೇಕವಾಗಿ ರಾಜ್ಯದ ಜನರು ಕ್ಷಮಿಸುವುದಿಲ್ಲ ಎಂದು ನಾನು ಹೇಳುತ್ತಿದ್ದೇನೆ. ಇಡೀ ರಾಜ್ಯದ ಆರೂವರೆ ಕೋಟಿ ಜನ ನೋಡುತ್ತಿದ್ದಾರೆ.

**(ಮುಂದು)**

## (525) 22-03-2021/11-20/bkp-bns

**ಶ್ರೀ ಎಸ್.ಆರ್. ಪಾಟೀಲ್ (ಮುಂದು)**

ಮೇಲ್ಮನೆಯ ಸದನದಲ್ಲಿ ಏತಕ್ಕೆ ಕಲಾಪಗಳು ನಡೆಯುತ್ತಿಲ್ಲ, ಏಕೆ ನಮ್ಮ ವಿಚಾರಗಳು ಬರುತ್ತಿಲ್ಲ, ಏಕೆ ನಮ್ಮ ಸಮಸ್ಯೆಗಳನ್ನು ನಮ್ಮ ಸದಸ್ಯರು ಚರ್ಚೆ ಮಾಡುತ್ತಿಲ್ಲವೆಂದು ನಮಗೂ ಕೂಡ ಬಹಳಷ್ಟು pressure ಇದೆ, ಒತ್ತಡವಿದೆ; ನಾವು ಆತಂಕದಲ್ಲಿದ್ದೇವೆ. ದಯಮಾಡಿ ತಾವು ಇನ್ನೊಮ್ಮೆ 5-10 ನಿಮಿಷಗಳ ಕಾಲ ಮಾನ್ಯ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಒಂದು ಚರ್ಚೆ ಮಾಡಿ ಇದನ್ನು ಇತ್ಯರ್ಥ ಮಾಡಬೇಕೆಂದು ತಮ್ಮ ಮುಖಾಂತರ ನಾನು ಈ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

**ಸಭಾಪತಿಯವರು:** ವೈದ್ಯಕೀಯ ಶಿಕ್ಷಣ ಸಚಿವರು ಏನಾದರೂ ಹೇಳುವುದು ಇದ್ದರೆ ಸಂಕ್ಷಿಪ್ತವಾಗಿ ಹೇಳಿ. ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ.

**ಡಾ॥ ಕೆ.ಸುಧಾಕರ್ (ವೈದ್ಯಕೀಯ ಶಿಕ್ಷಣ ಸಚಿವರು):** ಮಾನ್ಯ ಸಭಾಪತಿಯವರೆ, ಕಳೆದ ಗುರುವಾರ ಮತ್ತು ಶುಕ್ರವಾರ ಎರಡು ದಿನಗಳ ಕಾಲ ಸವಿಸ್ತಾರವಾಗಿ ನಾನು ಯಾವ ರೀತಿಯಾಗಿ ಕಾಲೇಜಿಗೆ ಪರವಾನಗಿ ಕೊಡುವಂತಹದ್ದು ಆಗುತ್ತದೆ ಎನ್ನುವುದರ ಬಗ್ಗೆ ಕೂಡ ಗೌರವಾನ್ವಿತ ಸದಸ್ಯರುಗಳಿಗೆ ಈ ಸದನದಲ್ಲಿ ತಿಳಿಸಿದ್ದೇನೆ ಈ ವರ್ಷವೇ ಮೊದಲನೆಯ ವರ್ಷವೇನೂ ಅಲ್ಲ; ನರ್ಸಿಂಗ್ ಕಾಲೇಜುಗಳಿಗೆ, paramedical courses ಗೆ ಹೊಸದಾಗಿ ಪರವಾನಗಿಯನ್ನು ಕೊಡುವುದು ಮೊದಲನೆಯ ವರ್ಷವೇನೂ ಅಲ್ಲ. ಕಳೆದ 60 ವರ್ಷಗಳಿಂದ ಇದು ಆಗಿದೆ. ಈ ಬಾರಿಗೂ ಹಾಗೂ ಕಳೆದ ಬಾರಿಗೂ ವ್ಯತ್ಯಾಸವೇನಾದರೂ ಆಗಿದೆಯೇ? ಯಾವ ರೀತಿಯಲ್ಲಿ ಆಗಿದೆ ಎಂದರೆ, ಇನ್ನೂ ಕೂಡ ಅದಕ್ಕೆ ಮೂರು ಹಂತದಲ್ಲಿ ಇದನ್ನು ಪರಿವೀಕ್ಷಣೆ ಮಾಡಿ, ಸಭೆಗಳನ್ನು ಮಾಡಿ ಮೂರು ಹಂತದಲ್ಲಿ ಸಮಿತಿಗಳನ್ನೂ ಕೂಡ ಮಾಡಿದ್ದೇವೆ. ಇನ್ನೂ ಕೂಡ ಗಟ್ಟಿ ಮಾಡಿದ್ದೇವೆ. ಕಳೆದ ಸಾಲುಗಳಿಗೆ ಹೋಲಿಕೆ ಮಾಡಿದರೆ ಈ ಒಂದು ಪರವಾನಗಿ ಕೊಡುವಂತಹ ವ್ಯವಸ್ಥೆಯನ್ನು ಗಟ್ಟಿ ಮಾಡಿದ್ದೇವೆ. ಇದು ಪಾರದರ್ಶಕತೆಯಿಂದ ಕೂಡಿರುವಂತಹ ಒಂದು ವ್ಯವಸ್ಥೆಯಾಗಿದೆ. ಯಾವುದೇ ಲೋಪದೋಷಗಳನ್ನು ತಾಂತ್ರಿಕವಾಗಿ ನೀವು ಹೇಳಿ ಎಂದರೆ, ಅದನ್ನು ಗೌರವಾನ್ವಿತ ಸದಸ್ಯರುಗಳು ಲೋಪದೋಷಗಳು ಕಾಣಿಸುತ್ತಿಲ್ಲ. ಯಾವುದಾದರೂ ಕಾಲೇಜಿನಲ್ಲಿ ಅವರಿಗೆ ಒಂದು ವ್ಯವಸ್ಥೆ ಇಲ್ಲದೇ ಇರುವಂತಹದ್ದು, ಮೂಲಭೂತ ಸೌಕರ್ಯಗಳು ಇಲ್ಲದೇ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದ್ದಂತಹ ಪಕ್ಷದಲ್ಲಿ ಅಥವಾ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಬಗ್ಗೆ ಅಲ್ಲಿ ಲೋಪವೇನಾದರೂ ಇದ್ದರೆ ಅಂತಹದ್ದನ್ನು ಕೂಡಲೇ ಹೇಳಿದರೆ ಅದರ ಬಗ್ಗೆ ಕೂಡ ನಾವು ಸೂಕ್ತ ಕ್ರಮ ವಹಿಸುತ್ತೇವೆ. ತಕ್ಷಣ ಅದಕ್ಕೆ ಸಮಿತಿಯನ್ನು ನೇಮಕ ಮಾಡುತ್ತೇವೆ ಎನ್ನುವುದನ್ನೂ ಸಹಿತ ಹೇಳಿದ್ದೇನೆ. ಆದರೆ, ಪ್ರತಿಷ್ಠೆಯಿಂದ ಕೂಡಿರುವಂತಹ ಕೆಲವು ತೀರ್ಮಾನಗಳು ಇವತ್ತು ನಿಜವಾಗಿಯೂ ಕೂಡ ಈ ನರ್ಸಿಂಗ್ ವ್ಯವಸ್ಥೆಯ ಮೇಲೆ ಅದರಲ್ಲಿಯೂ ಕೋವಿಡ್ ಬಂದಂತಹ ಸಂದರ್ಭದಲ್ಲಿ ಇವತ್ತು ವೈದ್ಯಕೀಯ ಜಗತ್ತಿಗೆ ನಿಜವಾಗಿಯೂ ಕೂಡ ಒಳ್ಳೆಯದಲ್ಲ.

ಇವತ್ತು ಇಡೀ ದೇಶದಲ್ಲಿ ಮಾನ್ಯ ಸಭಾಪತಿಯವರೆ, ವೈದ್ಯಕೀಯ ಕ್ಷೇತ್ರದಲ್ಲಿರುವಂತಹ ಅನೇಕ ಸಂಸ್ಥೆಗಳು ಹಾಗೂ ಸಾವಿರಾರು ವಿದ್ಯಾರ್ಥಿಗಳು ಇವತ್ತು ಕರ್ನಾಟಕದಲ್ಲಿ ಓದುತ್ತಿದ್ದಾರೆ. ಇವತ್ತು ನಾವು ಈ ರೀತಿಯಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡರೆ ನಿಜವಾಗಿಯೂ ಕೂಡ ಅನೇಕ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಈಗಾಗಲೇ ಕಳೆದ ಒಂದು ವರ್ಷದಿಂದ [illegible] ಅವರು ಇವತ್ತು ಹೊಸ ವಿದ್ಯಾರ್ಥಿಗಳಿಗೆ ನೋಂದಣಿಯನ್ನು ಮಾಡಿಕೊಂಡಿರುತ್ತಾರೆ, ಅವರ ಭವಿಷ್ಯವನ್ನೂ ಕೂಡ ನಾವು ಹಾಳು ಮಾಡಿದ ಹಾಗೆ ಆಗುತ್ತದೆ. ಬೇರೆ ಬೇರೆ ರಾಜ್ಯಗಳೂ ಕೂಡ ಅಂದರೆ ಕೇರಳವಿರಬಹುದು, ಇವತ್ತು ಕರ್ನಾಟಕಕ್ಕೆ ಹೋಲಿಕೆ ಮಾಡಿ ನೋಡಿದಾಗ ಯಾವುದೇ ರಾಜ್ಯದಲ್ಲಿ ಈ ರೀತಿಯ ಮೂಲಭೂತ ಸೌಕರ್ಯ ಮತ್ತು ಅತೀ ಹೆಚ್ಚು ವಿದ್ಯಾ ಸಂಸ್ಥೆಗಳು, ವೈದ್ಯಕೀಯ ಕ್ಷೇತ್ರದಲ್ಲಿ ಬೇರೆ ಯಾವುದೂ ಉದಾಹರಣೆಯಿಲ್ಲ. ಹಾಗಾಗಿ, ನಾವು ಯಾವ ರೀತಿಯಾಗಿ ಉದ್ದೇಶವನ್ನು ರವಾನೆ ಮಾಡುತ್ತೇವೆ ಎನ್ನುವುದನ್ನು ಕೂಡ ದೀರ್ಘಕಾಲಕ್ಕೆ ನಾವು ವಿಚಾರ ಮಾಡಬೇಕಾಗುತ್ತದೆ. ಹಾಗಾಗಿ, ಗೌರವಾನ್ವಿತ ಸದಸ್ಯರುಗಳು ಈ ಪ್ರತಿಷ್ಠೆಯನ್ನು ಬಿಟ್ಟು ನಾವು ಸರ್ಕಾರ ಇವತ್ತು ಹೇಳುತ್ತಿದ್ದೇವೆ, experts Committee ಯನ್ನು ಅಂದರೆ ಏನು ಆ ವಿಷಯದಲ್ಲಿ experts ಇರುತ್ತಾರೆ, ಸಮಾಜದಲ್ಲಿ eminence ಇರುತ್ತದೆ, ಅಂತಹ ವ್ಯಕ್ತಿಗಳನ್ನು ಅಂದರೆ ಅಂತಹ ಮೂರು ಮಂದಿಯನ್ನೊಳಗೊಂಡ ಒಂದು ಸಮಿತಿ ಮಾಡಿ ನಿಷ್ಪಕ್ಷಪಾತವಾಗಿ ಕಳೆದ ಎಲ್ಲಾ ಸಂಸ್ಥೆಗಳು ಕೂಡ ಇವತ್ತು ಏನು ಸುಮಾರು 600ಕ್ಕೂ ಹೆಚ್ಚು ಸಂಸ್ಥೆಗಳು ಇವೆ. ನಾನು ಇದಕ್ಕೆ ಒಂದು ವರ್ಷದ್ದು ಮಾತ್ರ ತೆಗೆದುಕೊಳ್ಳುತ್ತಿಲ್ಲ. 600 ಸಂಸ್ಥೆಗಳ ಮೇಲೆ ಕೂಡ ಒಂದು ವರದಿಯನ್ನು ತರಿಸಿಕೊಂಡು 6 ತಿಂಗಳೊಳಗಡೆ ಅದಕ್ಕೆ ಬಿಗಿಯಾದಂತಹ ಕ್ರಮ ಮಾಡಬೇಕೆಂದು ಹೇಳಿದ್ದೇನೆ. ಕಳೆದ ವರ್ಷ ಕೂಡ ನಾನು ಪತ್ರ ಬರೆದಿರುವುದನ್ನು ಈ ಸದನದಲ್ಲಿ ಓದಿದ್ದೇನೆ. ಆಗ ಯಾರೂ ಕೂಡ ಈ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ನನಗೆ ಹೇಳಿರಲಿಲ್ಲ. ಇಲ್ಲಿ ನ್ಯೂನತೆಗಳು ಇದೆ ಎಂದು ಕಂಡುಬಂದು ನಾನೇ ಇದನ್ನು ಇಲಾಖೆಯ ವತಿಯಿಂದ ಇವತ್ತು ಸಂಬಂಧಪಟ್ಟಂತಹ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶ್ವವಿದ್ಯಾಲಯಕ್ಕೆ ನಾವು ರವಾನೆ ಮಾಡಿದ್ದೇವೆ. ಸರ್ಕಾರದ ಪಾತ್ರ ಇಲ್ಲಿ ಎಷ್ಟಿದೆ ಎಂದರೆ, ಎಲ್ಲಾ ಹಂತಗಳಲ್ಲಿಯೂ ಕೂಡ ವಿಶ್ವವಿದ್ಯಾಲಯ ಅಂದರೆ autonomous Body ಸ್ವಾಯತ್ತತೆ ಇರತಕ್ಕಂತಹ ಒಂದು . . .

**ಸಭಾಪತಿಯವರು:** ತಮ್ಮ ತೀರ್ಮಾನವನ್ನು ಹೇಳಿಬಿಡಿ. ಇಷ್ಟೆಲ್ಲಾ ಹೇಳಿದ್ದೀರಿ. ಈಗ ಏನು ಮಾಡುತ್ತೀರಿ ಎಂದು final ಆಗಿ ಹೇಳಿ.

**ಡಾ॥ಕೆ.ಸುಧಾಕರ್:** ಮಾನ್ಯ ಸಭಾಪತಿಯವರೆ, ಇದರಲ್ಲಿ ಮೇಲ್ನೋಟಕ್ಕೆ ನನಗೆ ತಾಂತ್ರಿಕವಾದಂತಹ ಯಾವುದೇ ಒಂದು ತಪ್ಪು ಕಂಡುಬರುತ್ತಿಲ್ಲ. ಆದರೂ ಕೂಡ ಇವತ್ತು ಗೌರವಾನ್ವಿತ ಸದಸ್ಯರುಗಳು ಎತ್ತಿರುವಂತಹ ಒಂದು ವಿಷಯದ ಗಂಭೀರತೆಯನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈಗಾಗಲೇ ನಾವು ಹೇಳಿರುವಂತೆ ತಾಂತ್ರಿಕವಾಗಿರುವಂತಹ ಒಂದು ಸಮಿತಿಯನ್ನು ರಚನೆ ಮಾಡಿ. ಅದು ಸರ್ಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವಂತಹ ಅಥವಾ ಸ್ವಸಮಾಜದಲ್ಲಿ ಬೇರೆ ಬೇರೆ ಒಳ್ಳೆಯ ಹುದ್ದೆಗಳಲ್ಲಿರತಕ್ಕಂತಹ experts ಗಳ ಸಮಿತಿ ರಚನೆ ಮಾಡಿ ಅವರ ಕಡೆಯಿಂದ ಒಂದು ವರದಿಯನ್ನು ಸಂಪೂರ್ಣವಾಗಿ ತೆಗೆದುಕೊಳ್ಳಬಹುದು ಎಂದು ಸರ್ಕಾರ ತೀರ್ಮಾನ ಮಾಡಿದೆ.

**(ಗೊಂದಲ)**

**ಸಭಾಪತಿಯವರು:** ಏಕೆ ಮಾತನಾಡುತ್ತೀರಿ? ಬಾವಿಯಲ್ಲಿ ನಿಂತು ಮಾತನಾಡುವುದು ಯಾವುದೂ ಕಡತಕ್ಕೆ ಹೋಗುವುದಿಲ್ಲ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ. ಎಸ್.ಎಲ್.ಭೋಜೇಗೌಡ ರವರು ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)**

**ಸಭಾಪತಿಯವರು:** ನೀವು ಬಾವಿಯಲ್ಲಿ ನಿಂತು ಮಾತನಾಡಿದರೆ ಕಡತಕ್ಕೆ ಹೋಗುವುದಿಲ್ಲ. ತಮ್ಮ ಸ್ಥಾನದಲ್ಲಿ ನಿಂತು ಮಾತನಾಡಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು):** ಮಾನ್ಯ ಸಭಾಪತಿಯವರೆ, ಈ ಮನೆಯಲ್ಲಿ ತಾವೆಲ್ಲರೂ ಧರಣಿ ಕುಳಿತಾದ ಮೇಲೆ ನಾನು ಇಲ್ಲಿಗೆ ಬಂದೆ. ನಾನು ಆ ಮನೆಗೆ ಹೋಗದೇ ಇಲ್ಲಿಗೆ ಬಂದಿದ್ದೇನೆ. ನಿಮಗೆ Expert Committee ಯಿಂದ ತನಿಖೆ ಮಾಡುವುದು ಬೇಡವೆಂದರೆ ನಿವೃತ್ತ ಹೈಕೋರ್ಟ್ ಜಡ್ಜ್ ಯಾರು ಆಗಬೇಕೆಂದು ನೀವೇ ಸಲಹೆ ಕೊಡಿ. ಅವರ ಒಂದು ಅಧ್ಯಕ್ಷತೆಯಲ್ಲಿ ಮೂವರು ಸದಸ್ಯರ ಒಂದು ಸಮಿತಿ ರಚನೆಮಾಡಿ ತನಿಖೆಯನ್ನು ಮಾಡಿಸೋಣ. ಸತ್ಯಾಸತ್ಯತೆಗಳನ್ನು. . .

(ಗೊಂದಲ)

**ಸಭಾಪತಿಯವರು:** ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಬಿ.ಎಸ್.ಯಡಿಯೂರಪ್ಪ:** ಮಾನ್ಯ ಸಭಾಪತಿಯವರೆ, ಯಾವುದೇ ಕಾರಣಕ್ಕೂ ಸದನ ಸಮಿತಿ ಮಾಡುವುದಕ್ಕೆ ಬರುವುದಿಲ್ಲ ಸರ್. ನಾನು ನಿಮಗೆ ಇಷ್ಟೇ request ಮಾಡಿಕೊಳ್ಳುವುದು, ವಿರೋಧ ಪಕ್ಷದ ಸ್ಥಾನದಲ್ಲಿರುವಂತಹ ಎಲ್ಲರಿಗೂ request ಮಾಡಿಕೊಳ್ಳುತ್ತೇನೆ. ನಿವೃತ್ತ ಹೈಕೋರ್ಟ್‌ನ ಜಡ್ಜ್ ಯಾರು ಇರಬೇಕೆಂದು ನೀವೇ ಸಲಹೆ ಕೊಡಿ. ಮೂವರು ಸದಸ್ಯರ ಒಂದು ಸಮಿತಿ ರಚನೆ ಮಾಡಿ 3–4 ತಿಂಗಳುಗಳ ಕಾಲ ತನಿಖೆ ಮಾಡಿ ವರದಿಯನ್ನು ಕೊಡಿ ಎಂದು ಹೇಳೋಣ. ದಯಮಾಡಿ ತಾವು ಒಪ್ಪಿಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಬಂದು ಉತ್ತರ ಹೇಳಿದ್ದಕ್ಕೆ ನಾನು ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ದಿನವೂ ಕೂಡ ಕೆಲವು ಅಂಶಗಳನ್ನು ಸದನದ ಗಮನಕ್ಕೆ ಅಂದರೆ ನಮ್ಮ ಗಮನಕ್ಕೆ ತಂದಿದ್ದಾರೆ. ನೋಡಿ ಮಾನ್ಯ ಸಭಾಪತಿಗಳೇ, ಶ್ರೀ ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದಲ್ಲಿ ಹಾಲಿ ಸೆನೆಟ್ ಸದಸ್ಯರಾಗಿರುವಂತಹ ಮಾನ್ಯ ಸದಸ್ಯರಾಗಿರುವ ರವಿಕುಮಾರ್‌ರವರೇ ಈ ಪ್ರಶ್ನೆಯನ್ನು ತಂದಿದ್ದಾರೆ. ಅವರಿಗೆ ಅಲ್ಲಿ ನಡೆಯುತ್ತಿರುವಂತಹ ಎಲ್ಲಾ ವ್ಯವಹಾರಗಳು ಗೊತ್ತಿದ್ದರಿಂದ ಈಗ ತಂದಿದ್ದಾರೆ. ನಾವು ಕೇಳಿದ್ದು ಏನೆಂದರೆ, 2020–21ನೇ ಸಾಲಿನಲ್ಲಿ ಏನು ನರ್ಸಿಂಗ್ ಕಾಲೇಜು ಮತ್ತು Allied Science ಕಾಲೇಜುಗಳನ್ನು ಕೊಟ್ಟಿದ್ದಾರೆಯೋ ಅದು ನಿಯಮಬಾಹಿರವಾಗಿದೆ. ಅದು Indian Nursing Council ನಿಯಮವನ್ನೂ ಕೂಡ ಪಾಲನೆ ಮಾಡಿಲ್ಲ, ವೈದ್ಯಕೀಯ ವಿಶ್ವವಿದ್ಯಾನಿಲಯದ ನಿಯಮಗಳು ಕೂಡ ಪಾಲನೆಯಾಗಿಲ್ಲ, ಇದರಿಂದ ಬಹಳಷ್ಟು ಮಂದಿ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುತ್ತಿದೆ. ಇಲ್ಲಿ ದುಡ್ಡಿನ ದಂಧೆ, ವ್ಯವಹಾರಗಳು ನಡೆದು ಆ ಸಂಸ್ಥೆಯವರು ವಿದ್ಯಾರ್ಥಿಗಳ ಬದುಕನ್ನೇ ಹಾಳು

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುತ್ತಿದ್ದಾರೆ. ಸಮಾಜದ ಸ್ವಾಸ್ತ್ಯ ಹಾಳಾಗುತ್ತಿದೆ. ಅದರಿಂದ ಇವುಗಳ ಬಗ್ಗೆ ಒಂದು ತನಿಖೆಯಾಗಬೇಕೆಂದು ನಾವು ಹೇಳಿದ್ದೇವೆ. ಆದರೆ, ಮಾನ್ಯ ಸಚಿವರು ಏನು ಮಾಡಿದರು ಎಂದರೆ ಈ ನರ್ಸಿಂಗ್ ಕಾಲೇಜುಗಳು ಈ ರಾಜ್ಯದಲ್ಲಿ ಪ್ರಾರಂಭವಾಗಿದೆ ಎಂದು ಕೂಡ ಆ ವಿಚಾರವನ್ನೆಲ್ಲಾ ಪ್ರಸ್ತಾಪ ಮಾಡಿದರು, ಆಗಲಿ. ಆದರೆ, ನಾವು ಕೇಳುತ್ತಿರುವಂತಹದ್ದು ಏನೆಂದರೆ, 2020-21ನೇ ಸಾಲಿನಲ್ಲಿ ಎಲ್ಲಾ ನಿಯಮಗಳನ್ನು ಮಾಡಿದ್ದೇವೆ, ನಾವು ಮೂರು ಹಂತದಲ್ಲಿ streamline ಮಾಡಿದ್ದೇವೆಂದು ಹೇಳಿದ್ದರು. ಈ ರೀತಿ ಮನಸ್ಸಿಗೆ ಬಂದಹಾಗೆ ಮೂರು ಹಂತದಲ್ಲಿ streamline ಮಾಡುವುದಕ್ಕೆ ಬರುವುದಿಲ್ಲ. ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದಲ್ಲಿ ಕೂಡ LIC Committee ಯಲ್ಲಿ experts ಇದ್ದಾರೆ, Dean ಗಳಿದ್ದಾರೆ, faculty ಇದ್ದಾರೆ. ಅವರೆಲ್ಲರೂ ಕೂಡ ಸ್ಥಳ ಪರಿಶೀಲನೆ ಮಾಡಿ ಶಿಫಾರಸ್ಸು ಮಾಡಿದ್ದಾರೆ. ಸುಮಾರು 120 ಅರ್ಜಿಗಳಲ್ಲಿ 62 ಅರ್ಜಿಗಳನ್ನು ಅವರುಗಳು finalise ಮಾಡಿದ್ದರು. ಆದರೆ, ಆ ನಂತರ ಮೂರು ಜನರ ಸಿಂಡಿಕೇಟ್ ಸದಸ್ಯರುಗಳ ಒಂದು ತಂಡವನ್ನು ರಚನೆ ಮಾಡಿ ಮತ್ತೆ ಪರಿಶೀಲನೆ ಮಾಡುತ್ತಾರೆ. ಅದೆಲ್ಲವನ್ನೂ ಕೂಡ ಸರ್ಕಾರದ ಹಂತಕ್ಕೆ ಕಳುಹಿಸುತ್ತಾರೆ. ಸರ್ಕಾರದಲ್ಲಿ High Power Committee ಎಂದು ಮಾಡಿ ಅಲ್ಲಿ ಅಧಿಕಾರಿಗಳೇ ಇರುವುದು, ಅವರುಗಳು ಏನೂ ಸ್ಥಳಕ್ಕೆ ಹೋಗಿ ನೋಡಿಲ್ಲ, ಮತ್ತೊಂದಿಲ್ಲ, ಕೇವಲ ದಾಖಲೆಗಳನ್ನು ಪರಿಶೀಲನೆ ಮಾಡಿ ಅರ್ಜಿಗಳ ಸಂಖ್ಯೆಯನ್ನು 47ಕ್ಕೆ ಹಾಗೂ 45ಕ್ಕೆ ಇಳಿಸುತ್ತಾರೆ. ಇದರಲ್ಲಿ ಬಹಳಷ್ಟು ಗೋಲ್‌ಮಾಲ್ ಆಗಿದೆ. ಏನು ಎಂದರೆ, ನೋಡಿ. ಮಾನ್ಯ ಸಭಾಪತಿಗಳೇ, ಸ್ವಂತ ಕಟ್ಟಡವಿಲ್ಲ ಅಥವಾ ಅವರದ್ದು 30 ವರ್ಷಗಳ Lease Deed ಇಲ್ಲ. ಮತ್ತೆ ಜೊತೆಗೆ ಅವರ ಆ Trust ಪ್ರಾರಂಭವಾಗಿ ಮೂರು ವರ್ಷಗಳಾಗಿರಬೇಕು, ಮೂರು ವರ್ಷಗಳ ಆಡಿಟ್ ವರದಿ ಕೊಡಬೇಕು. ಅದು ಯಾವುದೂ ಕೊಟ್ಟಿಲ್ಲ. ಮತ್ತೆ ಅವರದ್ದು ಸ್ವಂತ ಆಸ್ಪತ್ರೆಯೊಂದು ಇರಬೇಕು ಎಂದು ಹೇಳುತ್ತಾರೆ ಅಥವಾ ಎಲ್ಲಾದರೂ ಕೂಡ ಬೇರೆ ಆಸ್ಪತ್ರೆಯನ್ನು ಅವರು ಮಾಡಿಕೊಂಡಿದ್ದರೂ ಕೂಡ ಅವರು

**(ಗೊಂದಲ)**

**ಡಾ|| ಕೆ.ಸುಧಾಕರ್ (ವೈದ್ಯಕೀಯ ಶಿಕ್ಷಣ ಸಚಿವರು):** ಮಾನ್ಯ ಸಭಾಪತಿಯವರೆ, ಅವರು ಹೇಳುತ್ತಿರುವುದರಲ್ಲಿ ತಪ್ಪು ಇದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ಪ್ರಕಟಣೆಗಾಗಿ ಅಲ್ಲ"

**ಶ್ರೀ ಮರಿತಿಬ್ಬೇಗೌಡ:** ಮಾನ್ಯ ಸಭಾಪತಿಯವರೆ, ಆಮೇಲೆ ಒಂದು ರೋಗಿಗೆ ಮೂರು ಬೆಡ್ ಇರಬೇಕು. 45 students ಅನ್ನು . . .

**ಸಭಾಪತಿಯವರು:** ನೀವು ಇದನ್ನು ಬಹಳ ಸಲ ಹೇಳಿದ್ದೀರಿ. Short ಆಗಿ ಹೇಳಿ.

**ಶ್ರೀ ಮರಿತಿಬ್ಬೇಗೌಡ:** ಮಾನ್ಯ ಸಭಾಪತಿಯವರೇ, ನಾನು ವಿಷಯವನ್ನು ಹೇಳಿಲ್ಲ. ನಾನು short ಆಗಿ ಹೇಳುತ್ತೇನೆ.

**(ಮುಂದು)**

**(526) 22.03.2021 11.30 ಎಸ್‌ವಿ–ಜಿಆರ್**

**ಶ್ರೀ ಮರಿತಿಬ್ಬೇಗೌಡ (ಮುಂದು):–**

ಈಗ ನರ್ಸಿಂಗ್ ಕಾಲೇಜಿನಲ್ಲಿ 45 ವಿದ್ಯಾರ್ಥಿಗಳಿಗೆ ದಾಖಲಾತಿಯನ್ನು ನೀಡಲಾಗುವುದು. 45 ವಿದ್ಯಾರ್ಥಿಗಳು ಇರಬೇಕೆಂದರೆ ಅದು 150 ಹಾಸಿಗೆ ಸೌಲಭ್ಯವುಳ್ಳ ಆಸ್ಪತ್ರೆಯನ್ನು ಹೊಂದಿರಬೇಕು. 150 ಹಾಸಿಗೆ ಸೌಲಭ್ಯವಲ್ಲ, ಕೇವಲ 50 ಹಾಸಿಗೆ ಸೌಲಭ್ಯಗಳನ್ನು ಒಳಗೊಂಡಿರುವುದಿಲ್ಲ. ಇವರಿಂದ ಪರವಾನಗಿಯನ್ನು ಪಡೆದವರು ಒಂದು ಆಸ್ಪತ್ರೆಯನ್ನು ನಾಲ್ಕು ಕಾಲೇಜುಗಳೊಂದಿಗೆ tie-up ಮಾಡಿಕೊಂಡಿದ್ದಾರೆ. ಯಾವುದೇ ನಿಯಮವನ್ನೂ ಕೂಡ ಪಾಲನೆಯಾಗಿಲ್ಲ.

ಮಾನ್ಯ ಸಭಾಪತಿಯವರೇ, ಇಷ್ಟು ಕಾಲೇಜುಗಳಿಗೆ ಅನುಮತಿಯನ್ನು ಕೊಡಬೇಕೆಂದು High Power Committee ಯಲ್ಲಿ ತೀರ್ಮಾನವಾಯಿತು. High Power Committee ಯಲ್ಲಿ ತೀರ್ಮಾನವಾದರೂ ಸಹ ಆರೇಳು ತಿಂಗಳುಗಳ ಕಾಲ ಇವರ ಕಛೇರಿಯಲ್ಲಿಟ್ಟುಕೊಂಡು ಹಣ ಕೊಡುವವರೆವಿಗೂ ಅವರಿಗೆ ಅನುಮತಿ ಕೊಡಲಿಲ್ಲ. ಈಗ ದುಡ್ಡು ಕೊಟ್ಟಿರುವವರು ಮಾನ್ಯ ರವಿಕುಮಾರ್ ಅವರಿಗೆ ಯಾರು ಕೊಟ್ಟರು. ಈಗ ಹೊಸದಾಗಿ ಮಾಡಿರುವ ಕಾಲೇಜುಗಳಲ್ಲಿ ಇವರದೇ ಒಂದು ಕಾಲೇಜು ಮಾಡಿಕೊಂಡಿದ್ದು, ಅದಕ್ಕೆ eligibility ಇಲ್ಲ. ರಾಜೀವ್ ಗಾಂಧಿ ವಿಶ್ವವಿದ್ಯಾಲಯವು ರಾಜ್ಯವ್ಯಾಪ್ತಿಯನ್ನು ಹೊಂದಿದೆ. ಅಲ್ಲಿರುವಂತಹ ಸಿಂಡಿಕೇಟ್ ಸದಸ್ಯರು, ಸೆನೆಟ್ ಸದಸ್ಯರು ಚಿಕ್ಕಬಳ್ಳಾಪುರ ಜಿಲ್ಲೆಯವರೇ ಆಗಿದ್ದಾರೆ. ಮಾನ್ಯ ಸಚಿವರು ಎಷ್ಟು ಪಾರದರ್ಶಕತೆಯನ್ನು ಹೊಂದಿದ್ದಾರೆಂಬುದು ನಮಗೆ ತಿಳಿದಿದೆ.

ಮಾನ್ಯ ಮುಖ್ಯಮಂತ್ರಿಯವರೇ, ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಇದೇ ಸದನದಲ್ಲಿ ತಮ್ಮ ಸರ್ಕಾರವೇ ಮೂರು ಸದನ ಸಮಿತಿಗಳನ್ನು ಮಾಡಿದೆ. ಇದು ರಾಜ್ಯದ ಜನರ ಆರೋಗ್ಯದ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಶ್ನೆಯಾಗಿರುವುದರಿಂದ ದಯಮಾಡಿ ಇಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಬಗ್ಗೆ ವಿಚಾರ ಮಾಡಬೇಕಾಗಿದೆ. 2020-21ನೇ ಸಾಲಿನಲ್ಲಿ ಯಾವ ಯಾವ ಹೊಸ ಕಾಲೇಜುಗಳಿಗೆ ಮಂಜೂರಾತಿಯನ್ನು ನೀಡಲಾಗಿದೆಯೋ ಅದರ ಕುರಿತು ತಮ್ಮದೇ ಪಕ್ಷದ ಶಾಸಕರ ಅಧ್ಯಕ್ಷತೆಯಲ್ಲಿ ಸದನ ಸಮಿತಿಯನ್ನು ರಚಿಸುವಲ್ಲಿ ಸರ್ಕಾರಕ್ಕೆ ವಿಶ್ವಾಸವಿಲ್ಲ. ತಾವು ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡುತ್ತೇವೆಂದು ಹೇಳಿದಿರಿ. ನಿವೃತ್ತ ನ್ಯಾಯಾಧೀಶರು ಮಾಡಿರುವಂತಹ ಅನೇಕ ಸಮಿತಿಗಳ ವರದಿಗಳು ಇಲ್ಲಿ ಬಂದಿದೆ. ಇಷ್ಟೆಲ್ಲಾ ಮಾಡುವ ಮಾನ್ಯ ಸಚಿವರು ಅವರನ್ನು ಕೂಡ ಬುಕ್ ಮಾಡಿಕೊಂಡು ಬಿಡುತ್ತಾರೆ. ನಾನು ನೇರವಾಗಿಯೇ ಹೇಳುತ್ತೇನೆ. ಇವರ ಚರಿತ್ರೆ ದೊಡ್ಡದಿದೆ. ಎಷ್ಟು ಬೇಕಾದರೂ ಹೇಳುತ್ತೇನೆ. ದಯಮಾಡಿ ಸದನ ಸಮಿತಿ ರಚನೆಯಾಗಬೇಕು.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಹಾಗೆಲ್ಲಾ ಮಾತನಾಡಬೇಡಿ. ವಿಷಯವನ್ನು ಬಿಟ್ಟು ಹೋಗಬೇಡಿ.

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, this is too much.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ವೈಯಕ್ತಿಕವಾದುದೆಲ್ಲಾ ಮಾತನಾಡಬಾರದು. ಮಾನ್ಯ ರವಿಕುಮಾರ್ ಅವರೇ, ನೀವು ಮಾತನಾಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಈಗ ಮೂರು ದಿನದ ಕೆಳಗೆ ನರ್ಸಿಂಗ್ ಕಾಲೇಜುಗಳು ಮತ್ತು ಹೆಲ್ತ್ ಅಲೈಡ್ ಕಾಲೇಜುಗಳಿಗೆ ಸರ್ಕಾರ ಅನುಮತಿಯನ್ನು ನೀಡಿರುವ ಬಗ್ಗೆ ಮತ್ತು ಪ್ರಸಕ್ತ ನರ್ಸಿಂಗ್ ಕಾಲೇಜುಗಳ ಸ್ಥಿತಿ ಗತಿಗಳ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆನು. ಚರ್ಚೆ ಆರಂಭವಾದ ಮೇಲೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಮಾನ್ಯ ಗೃಹ ಸಚಿವರು ಎಲ್ಲರೂ ಚರ್ಚೆ ಮಾಡಿ ಮೂರು ಜನ ತಜ್ಞ ವೈದ್ಯರ ಸಮಿತಿಯನ್ನು ರಚನೆ ಮಾಡೋಣ, ಅವರು ತನಿಖೆಯನ್ನು ನಡೆಸಲಿ ಎನ್ನುವಂತಹ ಒಂದು ಸಲಹೆಯನ್ನು ಕೊಟ್ಟಿದ್ದರು. ಈ ಸಲಹೆಯನ್ನು ಜೆ.ಡಿ.ಎಸ್.ನ ಗೌರವಾನ್ವಿತ ಸದಸ್ಯರು ಒಪ್ಪಿಕೊಳ್ಳಲಿಲ್ಲ.

ಇಂದು ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮಧ್ಯೆ ಈ ಸದನದಲ್ಲಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇರುವುದರಿಂದ ನಾನು ಎರಡು ವಾಕ್ಯಗಳನ್ನು ಹೇಳಬಯಸುತ್ತೇನೆ. ಸಾವಿರಾರು ಜನ ವಿದ್ಯಾರ್ಥಿಗಳು ಕೇರಳ, ಪಶ್ಚಿಮ ಬಂಗಾಳ, ರಾಜಾಸ್ಥಾನ ಹಾಗೂ ಇತರೆ ರಾಜ್ಯಗಳಿಂದ ಕರ್ನಾಟಕಕ್ಕೆ ಬಂದು ನರ್ಸಿಂಗ್ ವ್ಯಾಸಂಗ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುತ್ತಿದ್ದಾರೆ. ಅನೇಕರು ತರಗತಿಗಳಿಗೆ ಹಾಜರಾಗದೆ ನೇರವಾಗಿ ಪರೀಕ್ಷೆಗಳಿಗೆ ಹಾಜರಾಗುತ್ತಾರೆ. ಅಂತಹವರು ನರ್ಸ್‌ಗಳಾಗಿ ಸೇವೆಗಾಗಿ ಹೊರಬರುತ್ತಾರೆ. ಅವರಿಂದ ಗುಣಮಟ್ಟದ ಚಿಕಿತ್ಸೆಯನ್ನು ಕೊಡಲು ಸಾಧ್ಯವಿಲ್ಲ. ಕಾಲೇಜುಗಳಲ್ಲಿ ಕೂಡ ಸಾಕಷ್ಟು lacuna ಇದೆ. ಈ ಹಿನ್ನೆಲೆಯಲ್ಲಿ enquiry ಅನ್ನು ಮಾಡುತ್ತೇನೆಂದು ಮಾನ್ಯ ಸಚಿವರು ಹೇಳಿದಾಗ ಪ್ರಶ್ನೆಯನ್ನು ಕೇಳಿದ ನಾನು ಒಪ್ಪಿಕೊಂಡೆನು. ಇದಕ್ಕೆ ಜೆ.ಡಿ.ಎಸ್., ನ ಮಾನ್ಯ ಸದಸ್ಯರು ಒಪ್ಪಿಕೊಳ್ಳಲಿಲ್ಲ. ಅವರಲ್ಲಿ ನಾನು ಒಂದು ವಿನಂತಿಯನ್ನು ಮಾಡುತ್ತೇನೆ. ಈ ಹಿಂದೆ ವಿಶ್ವವಿದ್ಯಾಲಯಗಳ ಕುಲಸಚಿವರು ಮಾಡಿರತಕ್ಕಂತಹ ಅವ್ಯವಹಾರಗಳ ಬಗ್ಗೆ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಸಮಿತಿಗಳು ಸಾಕಷ್ಟು ಒಳ್ಳೆಯ ವರದಿಗಳನ್ನು ನೀಡಿರುವ ಉದಾಹರಣೆಗಳಿವೆ. ಆ ರೀತಿ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಒಂದು Enquiry Committee ಯನ್ನು ಮಾಡಲಿ. ನರ್ಸಿಂಗ್ ಕ್ಷೇತ್ರದಲ್ಲಿರುವಂತಹ ಸುಮಾರು 650ಕ್ಕಿಂತಲೂ ಹೆಚ್ಚು ಇರುವ ಎಲ್ಲಾ ನರ್ಸಿಂಗ್ ಕಾಲೇಜುಗಳಲ್ಲಿ ಗುಣಮಟ್ಟದ infrastructure ಬರಬೇಕಾಗಿದೆ. ಮೂಲಭೂತ ಅವಶ್ಯಕತೆಗಳನ್ನು fulfil ಮಾಡಬೇಕಾಗಿದೆ. ಗುಣಮಟ್ಟದ ನರ್ಸ್‌ಗಳನ್ನು ಕೊಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಶಿಕ್ಷಣ ಪಡೆದವರು ವಿದೇಶಕ್ಕೂ ಹೋಗುತ್ತಿದ್ದು, ಅಂತಹ ನರ್ಸ್‌ಗಳ ಅವಶ್ಯಕತೆ ಬಹಳಷ್ಟಿದೆ. ಅನೇಕ ಬಾರಿ ಹಿರಿಯ ನರ್ಸ್‌ಗಳೇ ಚಿಕಿತ್ಸೆಯನ್ನು ನೀಡುವಂತಹ ಪರಿಸ್ಥಿತಿಯಿದೆ.

ಈ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈಗ ಹೇಳಿದಂತೆ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು Enquiry Committee ಯನ್ನು ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ವೈದ್ಯಕೀಯ ಶಿಕ್ಷಣ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಸಮಸ್ಯೆಗಳಿವೆ. ಈ ಸಮಸ್ಯೆಗಳ ಮೂಲೋತ್ಪಾಟನೆಗಾಗಿ ಸರ್ಕಾರ ಏನು ಮಾಡಬೇಕೋ ಅದನ್ನು ಮಾಡಲಿ. ಅದನ್ನು ಗೌರವಾನ್ವಿತ ಸದಸ್ಯರು ಒಪ್ಪಿಕೊಳ್ಳಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

ಸದನ ಸಮಿತಿಯನ್ನು ಮಾಡಿದಾಗ್ಯೂ ಕೂಡ ಸದನ ಸಮಿತಿಗೂ ಸಹ ಈ ಕ್ಷೇತ್ರದಲ್ಲಿ ಸಾಕಷ್ಟು ಅನುಭವದ ಕೊರತೆ ಇರುತ್ತದೆ. ನಾವು ವೈದ್ಯರ, ನರ್ಸ್‌ಗಳ ಸಹಾಯವನ್ನು ತೆಗೆದುಕೊಳ್ಳಲೇ ಬೇಕು. ಈ ಹಿನ್ನೆಲೆಯಲ್ಲಿ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಸಮಿತಿಯನ್ನು ಮಾಡುವುದಕ್ಕೆ ಜೆ.ಡಿ.ಎಸ್.ನ ಮಾನ್ಯ ಸದಸ್ಯರು ಒಪ್ಪಿಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

**(ಈ ಹಂತದಲ್ಲಿ ಧರಣಿ ನಿರತರಾಗಿದ್ದ ಮಾನ್ಯ ಎಸ್.ಎಲ್.ಭೋಜೇಗೌಡ ಅವರು ತಮ್ಮ ಸ್ಥಾನಕ್ಕೆ ತೆರಳಿದರು.)**

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಕಳೆದ ಗುರುವಾರ ಮತ್ತು ಶುಕ್ರವಾರ ಇದೇ ಕಾರಣದಿಂದಾಗಿ ಈ ಸದನದಲ್ಲಿ ಕಾರ್ಯಕಲಾಪ ನಡೆದಿರುವುದಿಲ್ಲ. ಸರ್ಕಾರ ಸದನ ಸಮಿತಿಯನ್ನು ಮಾಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ವಿರೋಧ ಪಕ್ಷದವರು ಸದನ ಸಮಿತಿಯನ್ನು ರಚಿಸುವಂತೆ ಪಟ್ಟು ಹಿಡಿದಿದ್ದಾರೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಇನ್ನೂ ಎಷ್ಟು ದಿನಗಳ ಕಾಲ ಸದನವನ್ನು ಮುಂದೂಡಲು ಸಾಧ್ಯವಾಗುತ್ತದೆ? ಸರ್ಕಾರ ತೆಗೆದುಕೊಳ್ಳುವ ತೀರ್ಮಾನವನ್ನು ಒಪ್ಪುವುದೂ ಬಿಡುವುದು ಮಾನ್ಯ ಸದಸ್ಯರಿಗೆ ಬಿಟ್ಟ ವಿಚಾರ. ಅಂತಿಮವಾಗಿ ಈ ವಿಷಯದಲ್ಲಿ ಒಂದು ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲವಾದಲ್ಲಿ ಇದೇ ರೀತಿ ದಿನ ನಿತ್ಯ ಸದನವನ್ನು ಮುಂದೂಡಿದರೆ ಸದನದ ಬಗ್ಗೆ ಸಾರ್ವಜನಿಕರಲ್ಲಿ ಯಾವ ರೀತಿಯ ಭಾವನೆಯುಂಟಾಗುತ್ತದೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ದಯಮಾಡಿ ಬಾವಿಯಲ್ಲಿರುವ ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಕ್ಕೆ ತೆರಳಿ ಸದನವನ್ನು ನಡೆಸುವುದಕ್ಕೆ ಅನುವು ಮಾಡಿಕೊಡಬೇಕೆಂದು ಮತ್ತೊಮ್ಮೆ ವಿನಂತಿ ಮಾಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–**ಮಾನ್ಯ ಸಭಾಪತಿಯವರೇ, ಸದನದ ಸಮಯವನ್ನು ಹಾಳು ಮಾಡುವುದಕ್ಕೆ ನಾವು ಇಷ್ಟ ಪಡುವುದಿಲ್ಲ.

**ಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ಈ ವಿಷಯ ಗಂಭೀರವಾಗಿದೆ ಎನ್ನುವುದು ಸದನದಲ್ಲಿ ಎಲ್ಲರಿಗೂ ಮನವರಿಕೆಯಾಗಿದ್ದು, ಸರ್ಕಾರ ಸದನ ಸಮಿತಿ ರಚನೆಗೆ ಒಪ್ಪುವುದಿಲ್ಲವೆಂದು ಹೇಳುತ್ತದೆ. ನೀವು ಬಾವಿಯಿಂದ ಹೊರಬರಲು ಒಪ್ಪುವುದಿಲ್ಲ ಎಂದು ಹೇಳುತ್ತೀರಿ. ಸದನವನ್ನು ಹೇಗೆ ನಡೆಸಬೇಕು? ದಾರಿ ಹೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಇನ್ನೂ ಕೆಲವು ವಿಚಾರಗಳನ್ನು ಮನವರಿಕೆ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ಸರ್ಕಾರ ದಯಮಾಡಿ ಸ್ವಲ್ಪ ಕಣ್ತೆರೆದು ನೋಡಲಿ. ಇಲ್ಲಿ ನನಗೆ ಬಹಳ ನೋವಾದ ವಿಚಾರವೇನೆಂದರೆ ಮಾನ್ಯ ಆರೋಗ್ಯ ಸಚಿವರು ಮಾತನಾಡುವಾಗ ಈ ವಿಷಯ ಗಂಭೀರವಾದುದು ಎಂದು ಹೇಳಿದರು. ಮತ್ತೊಂದು ಕಡೆ ನಮ್ಮ ಪ್ರತಿಷ್ಠೆ ಎಂದು ಹೇಳಿದರು. ದಯಮಾಡಿ ಕ್ಷಮಿಸಬೇಕು. ಒಂದು ಪ್ರಾಥಮಿಕ ಶಾಲೆಯನ್ನು ತೆರೆಯಬೇಕಾದರೆ how many conditions you are going to impose now? Supreme Court has already given its verdict. ಏನೆಂದು ಹೇಳಿದೆ? Department of Fire Safety and Emergency Services ನವರಿಂದ Clearance Certificate, building safety

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

clearance, BWSSB ನವರಿಂದ clearance – ಹೀಗೆ ಎಲ್ಲವನ್ನೂ ಹೇಳಿದೆ. ಅವು ಸರ್ಕಾರಿ ಶಾಲೆಗೆ ಅನ್ವಯವಾಗುವುದಿಲ್ಲವೇ? ಸರ್ಕಾರಿ ಶಾಲೆಯನ್ನು ಬಿಟ್ಟು ಅನುದಾನಿತ ಮತ್ತು ಅನುದಾನ ರಹಿತ ಎಂದು ಹೋಗುತ್ತಾರೆ. ಇಂದು ಆರೋಗ್ಯಕ್ಕೆ ಸಂಬಂಧಿಸಿರುವ ನರ್ಸಿಂಗ್ ಕಾಲೇಜುಗಳ ವಿಚಾರವನ್ನು ನಾವು ಗಂಭೀರವಾಗಿ ಪರಿಗಣಿಸಬಾರದೇ? So many enquiries have been ordered involving the sitting Judges. ಈ ಸದನದಲ್ಲಿ ಹಾಗೂ ಕೆಳಮನೆಯಲ್ಲಿ ಆಗಿದೆ. What is the result? What is the outcome? What about the period? ಐದು ವರ್ಷಗಳಾದರೂ ಆಚೆ ಬರಲಿಲ್ಲ. ಅವರ ಬಗ್ಗೆ ನಂಬಿಕೆಯನ್ನು ಎರಡೂ ಸದನಗಳೂ ಕಳೆದುಕೊಂಡಿವೆ. ನಮ್ಮ ಸದನದಲ್ಲಿರುವ ಸದಸ್ಯರ ಬಗ್ಗೆ ಸರ್ಕಾರಕ್ಕೆ ವಿಶ್ವಾಸವಿಲ್ಲ ಎನ್ನುವುದಾದರೆ ಹೊರಗಡೆಯವರ ಮೇಲೆ ವಿಶ್ವಾಸವಿದೆಯೇ?

ಆಡಳಿತ ಪಕ್ಷದ ಯಾವುದೇ ಸದಸ್ಯರನ್ನು ಅಧ್ಯಕ್ಷರನ್ನಾಗಿ ಮಾಡಿ. ನಿಮ್ಮದೇ ಸದಸ್ಯರ majority ಯನ್ನೊಳಗೊಂಡಿರಲಿ. ನಿಮಗೆ ವಿಶ್ವಾಸವಿಲ್ಲವೇ? ನಿಮಗೆ ವಿಶ್ವಾಸವಿದ್ದರೆ ವಿರೋಧಪಕ್ಷದವರನ್ನು ಸದಸ್ಯರನ್ನಾಗಿ ಮಾಡಿ ಸದನ ಸಮಿತಿಯನ್ನು ರಚನೆ ಮಾಡಿ. ಇದನ್ನೇ ನಾವು ಕೇಳಿರುವುದು. What else we have asked? ಇದು ಬಹಳ ಕಷ್ಟವಾದ ಪ್ರಶ್ನೆಯೇ ಅಥವಾ ಇದು ಮಾಡಲಿಕ್ಕೆ ಆಗದಿರುವ ವಿಚಾರವೇ?

ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೈಜೋಡಿಸಿ ವಿನಂತಿಸುತ್ತೇನೆ. ತಾವು ರೈತರ ಪರವಾಗಿ, ಎಲ್ಲಾ ವರ್ಗಗಳ ಪರವಾಗಿ ಹೋರಾಟ ಮಾಡಿಕೊಂಡು ಬಂದು ನಾಲ್ಕನೆಯ ಬಾರಿಗೆ ಈ ಸ್ಥಾನದಲ್ಲಿ ಕುಳಿತಿದ್ದೀರಿ. ದಯಮಾಡಿ ಸದನ ಸಮಿತಿಯ ಮೇಲೆ ವಿಶ್ವಾಸವಿಟ್ಟು, ಸದನ ಸಮಿತಿಯನ್ನು ರಚನೆ ಮಾಡಬೇಕೆಂದು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

**(ಈ ಹಂತದಲ್ಲಿ ಮಾನ್ಯ ಭೋಜೇಗೌಡರು ಪುನಃ ಸದನದ ಬಾವಿಗೆ ಬಂದು ಧರಣಿನಿರತರಾದರು)**

**ಸಭಾಪತಿಯವರು(ಬಾವಿಯಲ್ಲಿ ನಿಂತಿದ್ದ ಸದಸ್ಯರನ್ನು ಕುರಿತು):–** ಇದು ನಿಮ್ಮ ಅಂತಿಮ ತೀರ್ಮಾನವೇ? ಹಾಗಾದರೆ ಮಾನ್ಯ ಮುಖ್ಯಮಂತ್ರಿಯವರೇ, ನಾನು ಹತ್ತು ನಿಮಿಷಗಳ ಕಾಲ ಸದನವನ್ನು ಮುಂದೂಡುತ್ತೇನೆ. ದಯಮಾಡಿ ತಾವು ಹಾಗೂ ವಿರೋಧಪಕ್ಷದ ಪ್ರಮುಖರು ನನ್ನ ಕೊಠಡಿಗೆ ಬನ್ನಿ. ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರೋಣ. ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ. ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(527) 22–03–2021(11–50)ಎಂವಿ–ಎಂಡಿ(ವಿಕೆ)**

**(ಬೆಳಗ್ಗೆ 11 ಗಂಟೆ 39 ನಿಮಿಷಕ್ಕೆ ಮುಂದೂಡಲ್ಪಟ್ಟಿದ್ದ ಸದನವು ಪುನಃ ಬೆಳಗ್ಗೆ 11 ಗಂಟೆ 59 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಸಭಾ ಪೀಠವವನ್ನು ಅಲಂಕರಿಸಿದರು)**

**(ಸದನ ಪ್ರಾರಂಭವಾಗುತ್ತಿದ್ದಂತೆಯೇ ಜಾತ್ಯಾತೀತ ಜನತಾದಳ ಪಕ್ಷದ ಸದಸ್ಯರುಗಳು ಸದನದ ಬಾವಿಗಿಳಿದು ಧರಣಿಯನ್ನು ಮುಂದುವರೆಸಿದರು)**

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಈಗತಾನೆ ತಾವು ಕರೆದಂತಹ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಈ ಪಕ್ಷದ ನಾಯಕರು ಮತ್ತು ಸಂಬಂಧಪಟ್ಟಂತಹ ಸಚಿವರು, ಸಭಾನಾಯಕರು...

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಧರಣಿಯಲ್ಲಿ ನಿರತರಾಗಿರುವಂತಹ ಮಾನ್ಯ ಸದಸ್ಯರನ್ನು ತಮ್ಮ ತಮ್ಮ ಸ್ಥಳದಲ್ಲಿ ಕುಳಿತುಕೊಳ್ಳುವಂತೆ ತಿಳಿಸಿ.

**ಸಭಾಪತಿಯವರು:–** ನಾನು ಕುಳಿತುಕೊಳ್ಳುವಂತೆ ತಿಳಿಸಿದ್ದೇನೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮತ್ತೆ ಸಂಬಂಧಪಟ್ಟಂತಹ ಸದಸ್ಯರೆಲ್ಲರನ್ನು ಕರೆದು ಚರ್ಚೆ ಮಾಡಲಾಗಿದೆ. ಇವತ್ತು ನರ್ಸಿಂಗ್ ಕ್ಷೇತ್ರದಲ್ಲಿ ಗುಣಮಟ್ಟ ಕಡಿಮೆಯಾಗಿದೆ ಮತ್ತು ಅಲ್ಲಿ lacunas ಇದೆ. ಈಗ ನರ್ಸ್‌ಗಳು ಒಳ್ಳೆಯ ಗುಣಮಟ್ಟದ ಶಿಕ್ಷಣ ಮತ್ತು ತರಬೇತಿಯನ್ನು ಪಡೆದುಕೊಂಡು ಹೊರಗಡೆಗೆ ಬರಬೇಕು.

**(ಮುಂದು)**

**(528) 12.00 22.03.2021 ಎಲ್‌ಎಲ್/ಎಂಡಿ(ವಿಕೆ)**

**ಶ್ರೀ ಎನ್. ರವಿಕುಮಾರ್(ಮುಂದು):–**

ಆ ಮೂಲಕ ನಮ್ಮ ರಾಜ್ಯದಿಂದ, ದೇಶಕ್ಕೆ ಅಥವಾ ವಿದೇಶಕ್ಕೆ ಹೋಗುವಂತಹ ನರ್ಸ್‌ಗಳ ಗುಣಮಟ್ಟ ಕೂಡ ಹೆಚ್ಚಿರಬೇಕೆಂಬ ಹಿನ್ನೆಲೆಯಲ್ಲಿ ಈ ವಿಷಯ ಸದನದಲ್ಲಿ ಬಹಳಷ್ಟು ಚರ್ಚೆಯಾಯಿತು. ಆ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ದಿನ ಸದನಕ್ಕೆ ಆಗಮಿಸಿ, "ಈ ಬಗ್ಗೆ ತನಿಖೆ ಮಾಡಲು ಒಬ್ಬ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಒಂದು ಸಮಿತಿ ರಚನೆ ಮಾಡೋಣ, ಆ ಮೂಲಕ ತನಿಖೆಯಾಗಲಿ" ಎಂದು ಹೇಳಿದರು. ಆದರೆ, ಗೌರವಾನ್ವಿತ ಜೆ.ಡಿ.(ಎಸ್) ಪಕ್ಷದ ಸದಸ್ಯರುಗಳು ಅದನ್ನು ಒಪ್ಪಿಕೊಳ್ಳಲಿಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದಕ್ಕಾಗಿ, ನಾನು ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ, "ಗೌರವಾನ್ವಿತ ಸದಸ್ಯರುಗಳು ಜಂಟಿ ಸದನ ಸಮಿತಿಯನ್ನು ರಚನೆ ಮಾಡಬೇಕೆಂದು ಏನು ಹೇಳುತ್ತಿದ್ದಾರೆ, overall ನರ್ಸಿಂಗ್ ಕ್ಷೇತ್ರದಲ್ಲಿ ಅದು ಈ ಸರ್ಕಾರದ ಅಧಿಕಾರಾವಧಿಯಲ್ಲಿರಬಹುದು ಅಥವಾ ಕಳೆದ ಸರ್ಕಾರದ ಅವಧಿಯಲ್ಲಿರಬಹುದು ಒಟ್ಟು 700ಕ್ಕೂ ಹೆಚ್ಚು ಕಾಲೇಜುಗಳು ಏನಿವೆ ಆ ಎಲ್ಲಾ ಕಾಲೇಜುಗಳ ಗುಣಮಟ್ಟದ ಬಗ್ಗೆ ತನಿಖೆ ಆಗಬೇಕು. ಇದರಿಂದಾಗಿ, ನರ್ಸಿಂಗ್ ಕ್ಷೇತ್ರದಲ್ಲಿರುವ ಎಲ್ಲಾ ಕೊಳೆಯನ್ನು ಒಂದೇ ಸಲ ತೆಗೆದು ಹಾಕಬೇಕು. ಆ ಹಿನ್ನೆಲೆಯಲ್ಲಿ ಗುಣಮಟ್ಟ ಹೆಚ್ಚಾಗುವಂತಹ ಸದುದ್ದೇಶದ ಹಿನ್ನೆಲೆಯಲ್ಲಿ ಮತ್ತು ಆ ಕಾಲೇಜುಗಳಿಂದ ಒಳ್ಳೆಯ ನರ್ಸ್‌ಗಳನ್ನು ಸಮಾಜಕ್ಕೆ ಕೊಡಬೇಕು ಎನ್ನುವಂತಹ ಹಿನ್ನೆಲೆಯಲ್ಲಿ ಸದನ ಸಮಿತಿ ರಚನೆ ಮಾಡಬೇಕು" ಎಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಈ ದಿನ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ವೈದ್ಯಕೀಯ ಶಿಕ್ಷಣ ಸಚಿವರು ಮತ್ತು ಸಭಾನಾಯಕರು ಇದ್ದಾರೆ. ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾನು ಕೇಳಿದಂತಹ ಪ್ರಶ್ನೆಯಲ್ಲಿ ಯಾವುದೇ ದುರದ್ದೇಶ ಇಟ್ಟುಕೊಂಡು ಪ್ರಶ್ನೆ ಕೇಳುತ್ತಿರುವುದಿಲ್ಲವೆಂದು ಈ ಸದನಕ್ಕೆ ವಿನಂತಿ ಮಾಡುತ್ತೇನೆ. ಬದಲಾಗಿ, ಇದರಲ್ಲಿ ನನಗಿರುವ ಒಂದೇ ಉದ್ದೇಶವೇನೆಂದರೆ, ಈ ಕ್ಷೇತ್ರದಿಂದ ಗುಣಮಟ್ಟದ ಶಿಕ್ಷಣ ಕೊಡಬೇಕು ಮತ್ತು ಕರ್ನಾಟಕ ರಾಜ್ಯಕ್ಕೆ ಕೆಟ್ಟ ಹೆಸರು ಬರಬಾರದು. ಏಕೆಂದರೆ, ಕೇರಳ ರಾಜ್ಯದಿಂದ ವಿದ್ಯಾರ್ಥಿಗಳು ಬಂದು ಕೇವಲ ಪರೀಕ್ಷೆ ಬರೆದು ಹೋಗುತ್ತಾರೆಂದು ಹೇಳುತ್ತಾರೆ.

**ಸಭಾಪತಿಯವರು:–** ಆಯಿತು, ಅದೆಲ್ಲ ವಿಚಾರದ ಬಗ್ಗೆ ಈಗಾಗಲೇ ಚರ್ಚೆ ಆಗಿದೆ. ಹಾಗಾಗಿ, ಈ ವಿಷಯದಲ್ಲಿ ಏನು ಆಗಬೇಕೆಂಬ ಬಗ್ಗೆ ಮಾತ್ರ ಹೇಳಿ.

**ಶ್ರೀ ಎನ್. ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಇದು ಯಾವುದೂ ಕೂಡ ಆಗಬಾರದು ಮತ್ತು ನಮ್ಮ ರಾಜ್ಯಕ್ಕೆ ಕೆಟ್ಟ ಹೆಸರು ಬರಬಾರದು ಎನ್ನುವ ಉದ್ದೇಶದಿಂದ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಹಾಗಾಗಿ, ಮಾನ್ಯ ಮುಖ್ಯಮಂತ್ರಿಗಳು, ವೈದ್ಯಕೀಯ ಶಿಕ್ಷಣ ಸಚಿವರು ಮತ್ತು ಸಭಾನಾಯಕರು ಸದನ ಸಮಿತಿ ರಚನೆ ಮಾಡಬೇಕೆಂದು ಈ ಮೂಲಕ ವಿನಂತಿ ಮಾಡುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ನಾನು ಆಗಲೇ ಮಾತನಾಡುತ್ತಾ ಪ್ರತಿಪಕ್ಷದ ಎಲ್ಲಾ ಸದಸ್ಯರುಗಳಿಗೆ, "ಈ ಬಗ್ಗೆ ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರಿಂದ ತನಿಖೆ ಮಾಡಿಸೋಣ. ಅಲ್ಲದೇ, ತಾವು ಹೈಕೋರ್ಟ್‌ನ ಯಾವ ನ್ಯಾಯಾಧೀಶರಿಂದ

ತನಿಖೆ ಮಾಡಿಸಬೇಕು ಎಂದು ಹೆಸರು ಸೂಚಿಸುತ್ತೀರೋ ಅವರಿಂದಲೇ ತನಿಖೆ ಮಾಡಿಸೋಣ" ಎಂದು ಹೇಳಿರುತ್ತೇನೆ. ಅದಕ್ಕೆ ಮಾನ್ಯ ಪ್ರತಿಪಕ್ಷದವರು, "ಇದರಲ್ಲಿ ಸದನ ಸಮಿತಿಯೇ ಆಗಬೇಕೆಂದು" ಹೇಳಿರುತ್ತಾರೆ. ಇದರಲ್ಲಿ ನಾವು ಯಾವುದೇ ಪ್ರತಿಷ್ಠೆಗೆ ಒಳಗಾಗಿರುವುದಿಲ್ಲ. ಏಕೆಂದರೆ, ನಾವು ಸರಿ ಇದ್ದಾಗ ಇದರ ಬಗ್ಗೆ ಹೆದರುವ ಅಥವಾ ಬೆದರುವ ಅಗತ್ಯ ಇರುವುದಿಲ್ಲ. ಹಾಗಾಗಿ, ಪ್ರಸ್ತುತ ಯಾವ ನರ್ಸಿಂಗ್ ಕಾಲೇಜುಗಳಿಗೆ ನಾವು ಅನುಮತಿ ನೀಡಿದ್ದೇವೆ ಮತ್ತು ಈ ಹಿಂದೆ ಯಾವ ನರ್ಸಿಂಗ್ ಕಾಲೇಜುಗಳಿಗೆ ಅನುಮತಿ ನೀಡಿದ್ದಾರೆ. ಈ ಎಲ್ಲಾ ಕಾಲೇಜುಗಳ ಬಗ್ಗೆ ಸಮಗ್ರವಾದ ತನಿಖೆಯಾಗಲಿ. ಅದಕ್ಕಾಗಿ, ಈ ಬಗ್ಗೆ ಜಂಟಿ ಸದನ ಸಮಿತಿ ಮೂಲಕ ತನಿಖೆ ಮಾಡಿಸುವುದಕ್ಕೆ ತಾವು ಆದೇಶ ಕೊಡಬೇಕೆಂದು ಕೋರುತ್ತೇನೆ.

**(ಈ ಹಂತದಲ್ಲಿ ಧರಣಿ ನಿರತರಾಗಿದ್ದ ಜೆ.ಡಿ.(ಎಸ್) ಪಕ್ಷದ ಎಲ್ಲಾ ಸದಸ್ಯರು ಧರಣಿಯನ್ನು ಕೈಬಿಟ್ಟು, ಸದನದ ಬಾವಿಯಿಂದ ತಮ್ಮ ತಮ್ಮ ಸ್ಥಾನಗಳತ್ತ ತೆರಳಿದರು)**

**ಶ್ರೀ ಸಿ.ಎಂ. ಇಬ್ರಾಹಿಂ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈ ಜಂಟಿ ಸದನ ಸಮಿತಿ ಪ್ರಶ್ನೆ ಉದ್ಭವವಾಗಿರುವಂಥದ್ದು ಈ ಸದನದಿಂದ. ಹಾಗಾಗಿ, ಈ ಸದನದ ಸದಸ್ಯರೇ ಆ ಜಂಟಿ ಸದನ ಸಮಿತಿಗೆ ಅಧ್ಯಕ್ಷರಾಗಿರಬೇಕೆಂಬುದು ನಮ್ಮೆಲ್ಲರ ಆಶಯವಾಗಿದೆ. ಇದನ್ನು ತಾವು ದಯವಿಟ್ಟು ಪರಿಗಣಿಸಬೇಕು.

**ಸಭಾಪತಿಯವರು:-** ಅದನ್ನು ನಿಯಮದ ಪ್ರಕಾರ ಮಾಡಬೇಕಾಗುತ್ತದೆ. ಆಯಿತು, ತಾವು ಈ ವಿಷಯದಲ್ಲಿ ತಮ್ಮ ಸಲಹೆಯನ್ನು ನೀಡಿದ್ದೀರಿ. ಅದರಂತೆ, ಇದರಲ್ಲಿ ನಿಯಮದ ಪ್ರಕಾರ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ಅವರು ಈ ವಿಷಯದಲ್ಲಿ ಒಳ್ಳೆಯ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ.

**ಡಾ: ಕೆ. ಸುಧಾಕರ್:-** ಮಾನ್ಯ ಸಭಾಪತಿಯವರೇ...

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸಿ.ಎಂ. ಇಬ್ರಾಹಿಂರವರು ಮಾತನಾಡಿದ ನಂತರ ತಮಗೆ ಅವಕಾಶ ನೀಡುತ್ತೇನೆ.

**ಶ್ರೀ ಸಿ.ಎಂ. ಇಬ್ರಾಹಿಂ:-** ಅದೇ ರೀತಿ ಮುಂದೆಯೂ ಕೂಡ ತೀರ್ಮಾನ ತೆಗೆದುಕೊಂಡರೆ ಎಲ್ಲವೂ ಸುಸೂತ್ರವಾಗಿ ನಡೆದುಹೋಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರವರೇ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಸಹ ಧನ್ಯವಾದ ಹೇಳಬೇಕಲ್ಲವೇ?

**ಸಭಾಪತಿಯವರು:-** ಈಗ ಮಾನ್ಯ ಸಚಿವರು ಮಾತನಾಡುತ್ತಾರೆ. ದಯಮಾಡಿ, ತಾವು ಕುಳಿತುಕೊಳ್ಳಿ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, I have a point of order.

**ಸಭಾಪತಿಯವರು:-** ಮಾನ್ಯ ರಮೇಶ್‌ರವರೇ, ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ. ಮೊದಲು ಮಾನ್ಯ ಸಚಿವರು ಮಾತನಾಡಲಿ.

**ಡಾ: ಕೆ. ಸುಧಾಕರ್(ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ನಡೆದಿರುವಂತಹ ಸವಿಸ್ತಾರವಾದಂತಹ ವಾದ-ವಿವಾದಗಳನ್ನು ಮಾನ್ಯ ಮುಖ್ಯಮಂತ್ರಿಗಳು ಆಲಿಸಿರುತ್ತಾರೆ. ಈ ವಿಷಯದ ಬಗ್ಗೆ ಕಳೆದ ನಾಲ್ಕು ದಿನಗಳಿಂದ ಈ ಸದನದಲ್ಲಿ ಚರ್ಚೆ ನಡೆಯುತ್ತಿತ್ತು. ಈ ಬಗ್ಗೆ ಪ್ರಾರಂಭದಲ್ಲಿಯೇ ನಾನು ಸಹ ಹೇಳಿದ್ದೆನು. ಆದರೆ, ಅವೊತ್ತಿನ ದಿವಸ ಈ ಸದನದ ಸಭಾನಾಯಕರು ತನಿಖೆಗೆ ಒಳಪಡಿಸೋಣವೆಂದು ಹೇಳಿದ್ದರು. ಆದರೂ, ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಜಂಟಿ ಸದನ ಸಮಿತಿ ರಚನೆ ಮಾಡುವುದು ಮತ್ತು ಅದರ ಮೂಲಕವೇ ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಕಾಲೇಜುಗಳ ಎಲ್ಲಾ ಲೋಪದೋಷಗಳನ್ನು ಕಂಡುಹಿಡಿದು ಇನ್ನು ಮುಂದೆ ಅವುಗಳು ನಮ್ಮ ರಾಜ್ಯದಲ್ಲಿ ಸರಿಯಾದ ದಾರಿಯಲ್ಲಿ ನಡೆದುಕೊಂಡು ಹೋಗುವುದಕ್ಕೆ ಅವಕಾಶ ಆಗಲಿ ಎನ್ನುವ ದೃಷ್ಟಿಯಿಂದ ಈ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಆ ತೀರ್ಮಾನವನ್ನು ನಾನು ಕೂಡ ಹೃದಯಪೂರ್ವಕವಾಗಿ ಸ್ವಾಗತ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಪಿ.ಆರ್. ರಮೇಶ್‌ರವರೇ ಈಗ ತಾವು ಮಾತನಾಡಿ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ನಿಯಮ...

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ರಮೇಶ್‌ರವರೇ, ದಯಮಾಡಿ ತಮ್ಮ 'ಪಾಯಿಂಟ್ ಆಫ್ ಆರ್ಡರ್' ಅನ್ನು ನಂತರ ಕೇಳಿ. ಒಂದು ನಿಮಿಷದಲ್ಲಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರು ಏನು ಹೇಳುತ್ತಾರೆ, ಅದನ್ನು ಎಲ್ಲರೂ ಮೊದಲು ಕೇಳಬೇಕು. ನಂತರ ಉಳಿದವರು ಮಾತನಾಡಬೇಕು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇಲ್ಲ ಸರ್. ನಾನು request ಮಾಡಿಕೊಂಡಿದ್ದೇನಷ್ಟೇ.

**ಸಭಾಪತಿಯವರು:–** ಇಲ್ಲ ಬಿಡಿ. ತಾವು ಹೇಳಿದ್ದನ್ನು ಎಲ್ಲರೂ ಕೇಳಬೇಕಷ್ಟೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾಡಿನ ಜನತೆಯ ಆರೋಗ್ಯದ ಹಿತದೃಷ್ಟಿಯಿಂದ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಶಿಕ್ಷಣ ವ್ಯವಸ್ಥೆಯಲ್ಲಿ ಗುಣಾತ್ಮಕವಾದಂತಹ ಶಿಕ್ಷಣವನ್ನು ಕೊಡಬೇಕೆಂಬ ದೃಷ್ಟಿಯಿಂದ ಕಳೆದ ಎರಡು ದಿನಗಳಿಂದ ಚರ್ಚೆ ನಡೆದಂತಹ ಈ ವಿಷಯ ಸಂಬಂಧವಾಗಿ ನಾಡಿನ ಸರ್ವತೋಮುಖ ಆರೋಗ್ಯದ ಹಿತದೃಷ್ಟಿಯಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಜಂಟಿ ಸದನ ಸಮಿತಿ ರಚಿಸಲು ಒಪ್ಪಿಗೆ ಸೂಚಿಸಿದ್ದಾರೆ. ಅದಕ್ಕಾಗಿ, ನಾನು ನನ್ನ ಎಲ್ಲಾ ಸದಸ್ಯರ ಪರವಾಗಿ ತುಂಬು ಹೃದಯದಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ.

**ಶ್ರೀ ಪಿ.ಆರ್. ರಮೇಶ್(ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಜಂಟಿ ಸದನ ಸಮಿತಿ ರಚನೆ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನು ತೀರ್ಮಾನ ತೆಗೆದುಕೊಂಡಿದ್ದಾರೆ, ಅದು ಸ್ವಾಗತಾರ್ಹವಾದದ್ದು. ಆದರೆ, ಇದರಲ್ಲಿ ಹಕ್ಕುಚ್ಯುತಿ ಏನಾಗಿದೆಯೆಂದರೆ, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಶುಕ್ರವಾರ ನಡೆದಂತಹ ಸದನದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಕಡತದಲ್ಲಿ ದಾಖಲಾಗಿರುತ್ತದೆ. ಅದೇನೆಂದರೆ, **"**ಈ ಸದನ ಸಮಿತಿಗಳನ್ನು ರಚನೆ ಮಾಡುವುದರಿಂದ ಅದರಲ್ಲಿ ಸಾಕಷ್ಟು ರೀತಿಯ ಬೇರೆ ವ್ಯವಹಾರಗಳು ನಡೆಯುತ್ತವೆ**"** ಎನ್ನುವ ಭಾವನೆಯಲ್ಲಿ ಅವರು ಹೇಳಿರುವಂಥದ್ದಾಗಿದೆ. ದಯಮಾಡಿ, ತಾವು ಅದನ್ನು ಕಡತದಿಂದ ತೆಗೆಯಬೇಕಾಗುತ್ತದೆ. ಎರಡನೆಯದಾಗಿ, ಮಾನ್ಯ ಸಚಿವರು ಈ ಬಗ್ಗೆ ಸದನದ ಮುಂದೆ ಕ್ಷಮೆಯನ್ನು ಕೇಳಬೇಕಾಗುತ್ತದೆ. ಹಾಗಾಗಿ, ಮಾನ್ಯ ಸಚಿವರು ದಯಮಾಡಿ ಕ್ಷಮೆ ಕೇಳಲಿ. ಅಲ್ಲದೇ, ಈ ವಿಷಯದ ಬಗ್ಗೆ ಜಂಟಿ ಸದನ ಸಮಿತಿ ರಚನೆ ಮಾಡಿರುವುದು ಸ್ವಾಗತಾರ್ಹವಾದುದು. ಆದರೆ, ಕಡತದಲ್ಲಿ ದಾಖಲಾಗಿರುವುದನ್ನು ತೆಗೆದು ಹಾಕಬೇಕು.

**ಸಭಾಪತಿಯವರು:–** ಆ ದಾಖಲೆಯನ್ನು ನನ್ನ ಅವಗಾಹನೆಗೆ ಸಲ್ಲಿಸಿ. ಅದನ್ನು ಪರಿಶೀಲಿಸಿದ ನಂತರ ನಾನು ತೀರ್ಮಾನ ತೆಗೆದುಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ಕೆ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಆ ದಿನ ನಾನು ಮಾನ್ಯ ಸದಸ್ಯರ ಬಗ್ಗೆ ಹೇಳಿದ್ದನ್ನು ಹೊರತುಪಡಿಸಿದರೆ, ಸದನದ ಸಮಿತಿ ಬಗ್ಗೆ ಹೇಳಿರುವುದಿಲ್ಲ. ಆ ಮಾತನ್ನು ನಾನು ಏತಕ್ಕೆ ಹೇಳಿದ್ದೇನೆಂದರೆ,..

**ಸಭಾಪತಿಯವರು:-** ಇಲ್ಲ, ಅದು ಬೇಡ ಬಿಡಿ.

**ಡಾ: ಕೆ. ಸುಧಾಕರ್:-** ಅದರಲ್ಲಿ ಹಣ ಹೊಡೆದಿದ್ದಾರೆ ಎನ್ನುವಂತಹ ಒಂದು ಮಾತನ್ನು ಹೇಳಿದ್ದಾರೆ. ಅದನ್ನು ಸಹ ಕಡತದಿಂದ ತೆಗೆದು ಹಾಕಬೇಕು.

**ಸಭಾಪತಿಯವರು:-** ಆ ದಿನ ಈ ವಿಷಯದ ಬಗ್ಗೆ ನಡೆದಂತಹ ಚರ್ಚೆಯ ನಡಾವಳಿಯನ್ನು ನನ್ನ ಅವಗಾಹನೆಗೆ ಸಲ್ಲಿಸಿ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ಬೆಳಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಪ್ರವೇಶ ಮಾಡಿದಾಗ ನಾನು ಆಶಾದಾಯಕವಾಗಿದ್ದೆನು. ಏಕೆಂದರೆ, ಈ ಹಿಂದೆ ಕೆಳಮನೆಯಲ್ಲಿ ಇದೇ ರೀತಿ deadlock ಆದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು intervention ಮಾಡಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಮಾನ್ಯ ಸದಸ್ಯರು ಸದನದ ಬಾವಿಯಿಂದ ಹೊರಗೆ ಬರುವುದಕ್ಕೆ ಅವರು ಒಂದು ದಿಟ್ಟವಾದ ನಿರ್ಧಾರ ಕೈಗೊಂಡಿದ್ದರು. ಅದೇ ರೀತಿ ನಮ್ಮ ಸದನದಲ್ಲಿಯೂ ಸಹ ಕಳೆದ ಎರಡು ದಿವಸದಿಂದ ಅಂದರೆ, ಗುರುವಾರ ಮತ್ತು ಶುಕ್ರವಾರ ಅಡೆ ಆತಂಕ ನಿರ್ಮಾಣವಾಗಿತ್ತು. ಈ ದಿನ ಸಹ ಅದೇ ವಾತಾವರಣ ಮುಂದುವರೆಯುತ್ತದೆಯೇ ಎನ್ನುವ ಆತಂಕದಲ್ಲಿ ಪ್ರತಿಪಕ್ಷದ ಸದಸ್ಯರಾದ ನಾವುಗಳು ಇದ್ದೆವು. ಏಕೆಂದರೆ, ಕಲಾಪಗಳು ನಡೆಯಬೇಕು ಮತ್ತು ರಾಜ್ಯದ ಅನೇಕ ಜನರ ಸಮಸ್ಯೆಗಳು ಇತ್ಯರ್ಥವಾಗಬೇಕು ಎನ್ನುವಂತಹ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ದಿಟ್ಟವಾದ ನಿರ್ಧಾರ ಕೈಗೊಂಡಿದ್ದಾರೆ. ಜಾತ್ಯಾತೀತ ಜನತಾ ದಳದ ಮಾನ್ಯ ಸದಸ್ಯರು ಸದನದ ಬಾವಿಗೆ ಪ್ರವೇಶ ಮಾಡಿ ಈ ವಿಷಯದ ಬಗ್ಗೆ ಸದನ ಸಮಿತಿ ರಚನೆ ಮಾಡಬೇಕೆಂದು ಒತ್ತಾಯಿಸಿದಾಗ, ಮಾನ್ಯ ಮುಖ್ಯಮಂತ್ರಿಗಳು, "ಇಡೀ ರಾಜ್ಯದಲ್ಲಿ ಎಷ್ಟು ನರ್ಸಿಂಗ್ ಕಾಲೇಜುಗಳು ಮತ್ತು ಪ್ಯಾರಾ ಮೆಡಿಕಲ್ ಕಾಲೇಜುಗಳಿವೆ ಅವುಗಳೆಲ್ಲವನ್ನೂ ಒಟ್ಟಾರೆಯಾಗಿ ಸದನ ಸಮಿತಿ ರಚನೆ ಮಾಡದೇ, ಜಂಟಿ ಸದನ ಸಮಿತಿ ಮುಖಾಂತರ ತನಿಖೆ ಮಾಡೋಣ" ಎನ್ನುವಂತಹ ನಿರ್ಧಾರ ಕೈಗೊಂಡಿದ್ದಾರೆ. ಅದನ್ನು ನಾನು ಕೂಡ ಸ್ವಾಗತಿಸುತ್ತೇನೆ. ಆದರೆ, ಈ ಪ್ರಶ್ನೆ ಉದ್ಭವಿಸಿದ್ದು ಅಥವಾ ಸದನ ಸಮಿತಿ ರಚನೆ ಮಾಡಬೇಕೆಂಬ ವಿಚಾರ ಬಂದಿದ್ದು ಮೇಲ್ಮನೆಯಲ್ಲಿ. ಅದಕ್ಕಾಗಿ, ನಾನು ತಮ್ಮ ಮುಖಾಂತರ

ಮನವಿ ಮಾಡಿಕೊಳ್ಳುವುದೇನೆಂದರೆ, ಆ ಜಂಟಿ ಸದನ ಸಮಿತಿಗೆ ಮೇಲ್ಮನೆಯ ಸದಸ್ಯರನ್ನು ಅಧ್ಯಕ್ಷರನ್ನಾಗಿ ಮಾಡಬೇಕು. ಉಳಿದ ಸದಸ್ಯರನ್ನು ನಿಯಮದ ಪ್ರಕಾರ ನೇಮಕ ಮಾಡಬಹುದು.

**ಸಭಾಪತಿಯವರು:–** ನಿಯಮದ ಪ್ರಕಾರವೇ ಜಂಟಿ ಸದನ ಸಮಿತಿಗೆ ಸದಸ್ಯರನ್ನು ನೇಮಕ ಮಾಡುತ್ತೇವೆ.

**ಶ್ರೀ ಎಸ್.ಆರ್. ಪಾಟೀಲ್:–** ಆ ನಿಯಮವನ್ನು ಬಿಟ್ಟು ನಮಗೆ ಬೇರೆ ಏನು ಹೇಳುವುದಕ್ಕೆ ಅವಕಾಶವಿರುವುದಿಲ್ಲ. ಅದರಂತೆ, ನಿಯಮದ ಪ್ರಕಾರವೇ ತಾವು ಹೋಗಬೇಕಾಗುತ್ತದೆ. ಇವೊತ್ತು ದಿವಸ ಈ ಸಮಸ್ಯೆಯನ್ನು ಇತ್ಯರ್ಥ ಮಾಡಿ, ಇದಕ್ಕೆ ಒಂದು ಇತಿಶ್ರೀ ಹಾಡಿ, ಜಂಟಿ ಸದನ ಸಮಿತಿ ಮಾಡುತ್ತೇನೆ ಎಂಬ ದಿಟ್ಟವಾದ ನಿರ್ಧಾರ ಪ್ರಕಟಿಸಿದಂತಹ ಗೌರವಾನ್ವಿತ ಮುಖ್ಯಮಂತ್ರಿಗಳಿಗೆ ನಾನು ಪ್ರತಿಪಕ್ಷದ ಎಲ್ಲಾ ಸದಸ್ಯರ ಪರವಾಗಿ ಹೃದಯಪೂರ್ವಕವಾಗಿ ಅಭಿನಂದನೆ ಸಲ್ಲಿಸುತ್ತೇನೆ.

## 3. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಸಭಾಪತಿಯವರು:–** ಈಗ ಪ್ರಶ್ನೋತ್ತರ ಅವಧಿ. ಮೊದಲನೆಯ ಪ್ರಶ್ನೆ ಶ್ರೀ ಅರುಣ ಶಹಾಪುರರವರದ್ದು.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ...

**ಸಭಾಪತಿಯವರು:–** ಇದು ಪ್ರಶ್ನೋತ್ತರ ಅವಧಿಯಾಗಿದ್ದರಿಂದ ತಮಗೆ ಅವಕಾಶ ನೀಡಲು ಸಾಧ್ಯವಿಲ್ಲ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಹಾಜರಿರುವುದರಿಂದ ಒಂದು ಮನವಿ ಮಾಡುವುದಕ್ಕೆ ಇಷ್ಟಪಡುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಇಲ್ಲ, ಆಗುವುದಿಲ್ಲ. ಮೊದಲು ಪ್ರಶ್ನೋತ್ತರ ಅವಧಿ ಮುಗಿಯಲಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಶಾಸಕರ ಅನುದಾನದ ಬಗ್ಗೆ ಮನವಿ ಮಾಡಲು ತಾವು ಅವಕಾಶ ಮಾಡಿಕೊಡಿ.

**(ಗೊಂದಲ)**

**ಸಭಾಪತಿಯವರು:–** ಅದನ್ನು ನಂತರ ಕೇಳಿ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ನಾವು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಬೇಕು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:1833**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಆದರೆ, ಮಾನ್ಯ ಉಪ ಮುಖ್ಯಮಂತ್ರಿಗಳಾಗಿರುವ ಡಾ: ಅಶ್ವತ್ಥನಾರಾಯಣ ಸಿ.ಎನ್. ರವರಿಂದ ನಾನು ಈ ಉತ್ತರವನ್ನು ನಿರೀಕ್ಷಿಸಿರಲಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ,...

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಇದು ಅನುಕಂಪದ ಆಧಾರದ ನೌಕರಿ. ವಿವಿಧ ಇಲಾಖೆಗಳಲ್ಲಿ ಈಗಾಗಲೇ...

**(ಗೊಂದಲ)**

**ಸಭಾಪತಿಯವರು:–** ಈಗ ಪ್ರಶ್ನೋತ್ತರ ಅವಧಿ. ಅದರಂತೆ ಮೊದಲನೆಯ ಪ್ರಶ್ನೆ ಕೇಳುವುದಕ್ಕೆ ಈಗಾಗಲೇ ನಾನು ಅವಕಾಶ ನೀಡಿರುತ್ತೇನೆ. ಅದರಂತೆ ಮಾನ್ಯ ಸದಸ್ಯರು ತಮ್ಮ ಪ್ರಶ್ನೆ ಬಗ್ಗೆ ಮಾತನಾಡುತ್ತಿದ್ದಾರೆ. ಅದು ಮುಗಿಯಲಿ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಮೊದಲು ನನ್ನ ಪ್ರಶ್ನೆ ಮುಗಿಸುತ್ತೇನೆ. ಇಲ್ಲವಾದರೆ ಇದು divert ಆಗುತ್ತದೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವೇ ಸದನ ಇಷ್ಟು ಹೊತ್ತು ನಡೆಯಬೇಕೆಂದು ಹೇಳಿ, ಹೀಗೆ ಮಾಡಿದರೆ ಹೇಗೆ. ಮೊದಲು ಪ್ರಶ್ನೋತ್ತರ ಅವಧಿ ಮುಗಿಯಲಿ ನಂತರ ತಮಗೆ ಅವಕಾಶ ನೀಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ಪ್ರಶ್ನೋತ್ತರ ಅವಧಿಯನ್ನು ಬಹಳ ಗಡಿಬಿಡಿಯಿಂದ ಕರೆದಿರುತ್ತೀರಿ. ನನಗೆ ಸಂಬಂಧಪಟ್ಟ ನಿಯಮ 59ರ ವಿಷಯ ಕೂಡ ಇರುತ್ತದೆ.

**ಸಭಾಪತಿಯವರು:–** ನಂತರ ತಮಗೆ ಅವಕಾಶ ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅರುಣ ಶಹಾಪುರ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಸದಸ್ಯರುಗಳಾದ ನಮಗೆ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕೊಡಿ. ಯಾವಾಗಲೂ ತಾವೇ ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಿದರೆ ಹೇಗೆ?

**ಸಭಾಪತಿಯವರು:-** ಆಯಿತು, ತಾವು ತಮ್ಮ ಪ್ರಶ್ನೆಯನ್ನು ಪ್ರಾರಂಭ ಮಾಡಿ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಅನುಕಂಪಕದ ಆಧಾರದ ಮೇರೆಗೆ ನೌಕರಿ ಕೊಡುವಂತಹ ವ್ಯವಸ್ಥೆ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿದೆ.

**(ಮುಂದು)**

**(529) 22.03.2021 12.10 ವೈಎಲ್-ಎಕೆ**

**ಶ್ರೀ ಅರುಣ ಶಹಾಪುರ (ಮುಂದು):-**

ಆದರೆ, ಅನುದಾನಿತ ಪದವಿ ಕಾಲೇಜಿನಲ್ಲಿ ಮಾತ್ರ ಅನುಕಂಪದ ಆಧಾರದ ಮೇಲೆ ಉದ್ಯೋಗ ಕೊಡುವ ವ್ಯವಸ್ಥೆ ಇರುವುದಿಲ್ಲವೆಂಬ ಪ್ರಶ್ನೆಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ ಎನ್ನುವಂಥ ಉತ್ತರವನ್ನು ನೀಡಿದ್ದಾರೆ. ಆದರೆ, ನಿಯಮವೇನು ಬ್ರಹ್ಮ ಲಿಖಿತವಲ್ಲ. ನಿಯಮವನ್ನು ತಿದ್ದುಪಡಿ ಮಾಡುವುದಕ್ಕಾಗಿಯೇ ನಾವುಗಳು ಇರುವುದು. ಹಾಗಾಗಿ ನಾನು ವಿನಂತಿಸುವುದೇನೆಂದರೆ, ನಿಯಮದಲ್ಲಿ ಬದಲಾವಣೆ ತನ್ನಿ. ಉಳಿದೆಲ್ಲ ಇಲಾಖೆಗಳಲ್ಲಿ ಇರುವಂಥ ಅನುಕಂಪದ ಆಧಾರದ ನೌಕರರು ಪದವಿ ಕಾಲೇಜುಗಳಲ್ಲಿ ಇಲ್ಲ ಎನ್ನುವಂಥ ಉತ್ತರವು ಎಲ್ಲಿಯೋ ಒಂದು ಕಡೆ ಮಾನ್ಯ ಉಪ ಮುಖ್ಯಮಂತ್ರಿಗಳ ಹತ್ತಿರ ಅನುಕಂಪ ಇಲ್ಲ ಎನ್ನುವಂಥ ಉತ್ತರವೆನ್ನಿಸುತ್ತಿದೆ. ದಯವಿಟ್ಟು ಇವರಿಗೂ ಅನುಕಂಪ ಆಧಾರದ ಮೇಲೆ ಉದ್ಯೋಗ ಕಲ್ಪಿಸುವ ದೃಷ್ಟಿಯಿಂದ ಇದರ ಮೇಲೆ ಕ್ರಮ ಕೈಗೊಳ್ಳಬೇಕೆಂದು ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ.

**ಡಾ॥ ಅಶ್ವಥ್ ನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂಥ ಪ್ರಶ್ನೆಗೆ ಅನುದಾನಿತ ಕಾಲೇಜಿನಲ್ಲಿ non-teaching staff ಸೇವೆಯಲ್ಲಿದ್ದಾಗ ಮರಣ ಹೊಂದಿದ ನೌಕರನ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಲು ಅವಕಾಶ ಇರುವುದಿಲ್ಲವೆಂದು ದಿನಾಂಕ: 07.08.2003ರಲ್ಲಿಯೇ ಅಧಿಸೂಚನೆ ಹೊರಡಿಸಲಾಗಿದೆ. 2001ನೇ

“ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸಾಲಿನಿಂದಲೇ ಈ ಹುದ್ದೆಗಳನ್ನು ಖಾಯಂ ಆಗಿ ಅನುದಾನರಹಿತವೆಂದು ಪರಿಗಣಿಸಲಾಗಿದೆ. ಯಾರಾದರೂ ರಾಜೀನಾಮೆ ನೀಡಿದ್ದಲ್ಲಿ, ಮರಣ ಹೊಂದಿದ್ದಲ್ಲಿ, ಸೇವೆಯಿಂದ ವಜಾಗೊಂಡಿದ್ದರೆ ಅಥವಾ ತೆಗೆದಿದ್ದಂಥವರಿಗೆ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ಒದಗಿಸಲು ಅವಕಾಶ ಇರುವುದಿಲ್ಲ.

**ಸಭಾಪತಿಯವರು:–** 2001ನೇ ಸಾಲಿಗಿಂತ ಮೊದಲು ನೇಮಕಾತಿ ಹೊಂದಿದ್ದರೆ?

**ಡಾ॥ ಅಶ್ವಥ್ ನಾರಾಯಣ ಸಿ.ಎನ್:–** ಮಾನ್ಯ ಸಭಾಪತಿಯವರೇ, 2001ನೇ ಸಾಲಿಗಿಂತ ಮೊದಲು ನೇಮಕಾತಿ ಹೊಂದಿದವರಿಗೆ ಅವಕಾಶ ಇತ್ತು.

**ಸಭಾಪತಿಯವರು:–** ಹಾಗಾದರೆ, 2001ರ ನಂತರ ನೇಮಕಾತಿ ಹೊಂದಿದವರಿಗೂ ಮಾಡಬೇಕಾಗುತ್ತದೆ.

**ಡಾ॥ ಅಶ್ವಥ್ ನಾರಾಯಣ ಸಿ.ಎನ್:–** ಮಾನ್ಯ ಸಭಾಪತಿಯವರೇ, ತಮಗೂ ಗೊತ್ತಿರುವ ಹಾಗೆ ಈಗ ಅನುಮೋದನೆಯಾಗಿರುವ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಸಾಕಷ್ಟು ಸಮಸ್ಯೆಗಳಿವೆ. 2001ನೇ ಸಾಲಿನಿಂದ ಯಾವುದೇ resignation, death, dismissal, removal ನಿಂದ ತೆರವಾದ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶ ಇರುವುದಿಲ್ಲ. ಹಾಗಾಗಿ ಮತ್ತೆ ಅವಕಾಶ ಕಲ್ಪಿಸಲು ಸಾಧ್ಯವಾಗುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸ್ಪಬಯಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 2001ನೇ ಸಾಲಿಗಿಂತ ಮೊದಲು ಅನುಕಂಪದ ಆಧಾರದ ಮೇಲೆ ಹುದ್ದೆಯನ್ನು ಭರ್ತಿ ಮಾಡಲು ಅವಕಾಶ ನೀಡಲಾಗಿದೆ.

**ಶ್ರೀ ಎಸ್.ವಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:–** ಒಂದು ನಿಮಿಷ ಕುಳಿತುಕೊಳ್ಳಿ. ನಾನು ತಮಗೆ ಮಾತನಾಡಲು ಕರೆದಿರುವುದಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಯವರೇ, ಎಲ್ಲಾ ಇಲಾಖೆಗಳಲ್ಲಿಯು ಏನು ನಿಯಮ ಇದೆ, ಆ ನಿಯಮದ ಪ್ರಕಾರ ಮಾಡಲು ಕ್ರಮ ತೆಗೆದುಕೊಳ್ಳಿ. ನಿಮ್ಮ ಇಲಾಖೆ ಮಾತ್ರ ಬೇರೆ ಏನಲ್ಲ. ಎಲ್ಲಾ ಇಲಾಖೆಗಳಲ್ಲಿ ಏನು ನಿಯಮ ಇದೆ, ಅದರ ಪ್ರಕಾರ ಕ್ರಮ ತೆಗೆದುಕೊಳ್ಳಿ. ಮುಂದಿನ ದಿನಗಳಲ್ಲಿ ನಿಯಮದ ಪ್ರಕಾರ ಕ್ರಮ ತೆಗೆದುಕೊಂಡು, ಎಲ್ಲರಿಗೂ ಇರುವಂಥ ಕಾಯ್ದೆಯನ್ನೇ ಇವರಿಗೂ ಮುಂದುವರೆಸಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ. ಈಗಾಗಲೇ ಪ್ರೌಢ ಶಾಲೆ ಮತ್ತು ಪಿ.ಯು.ಸಿ. ಹಂತದವರೆಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲಾಗಿದೆ. ಆದರೆ, ಪದವಿ ಕಾಲೇಜುಗಳಲ್ಲಿ ಮಾತ್ರ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೆ ಈಗಾಗಲೇ ನಾನು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ತಿಳಿಸಿದ್ದೇನೆ. ಆದರೆ,...

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇನ್ನು ಸಹ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುತ್ತಿದ್ದರು.

**ಸಭಾಪತಿಯವರು:-** ಆಗಲಿ. ಈಗಾಗಲೇ ನಾನು ಹೇಳಿದ್ದು, ನಂತರ ಯೋಚನೆ ಮಾಡೋಣ.

**ಪ್ರಶ್ನೆ ಸಂಖ್ಯೆ 1743**

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್ ರವರ ಪ್ರಶ್ನೆ ಸಂಖ್ಯೆ 1743 ಕ್ಕೆ ಮಾನ್ಯ ಸಚಿವರು 15 ದಿವಸಗಳ ಕಾಲ ಕಾಲಾವಕಾಶ ಕೋರಿದ್ದಾರೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಅವರು ಬೇಕಾದರೆ ಉತ್ತರ ನೀಡಲು ಕಾಲಾವಕಾಶವನ್ನು ತೆಗೆದುಕೊಳ್ಳಲಿ.

**ಸಭಾಪತಿಯವರು:-** ಈಗಾಗಲೇ 15 ದಿವಸಗಳ ಕಾಲ ಕಾಲಾವಕಾಶ ಕೋರಿದ್ದು, ನಾನು ಒಂದು ವಾರದೊಳಗೆ ಉತ್ತರ ನೀಡುವಂತೆ ನಿರ್ದೇಶನ ನೀಡಿದ್ದೇನೆ. ಹಾಗಾಗಿ ತಾವು ಪ್ರಶ್ನೆಯನ್ನು ಪ್ರಸ್ತಾಪ ಮಾಡುವುದು ಬೇಡ. ಉತ್ತರವೇ ಬಂದಿಲ್ಲವೆಂದರೆ, ಏನು ಪ್ರಶ್ನೆ ಕೇಳುತ್ತೀರಿ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಆಗಲಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1873**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸವಿಸ್ತಾರವಾದಂಥ ಉತ್ತರವನ್ನು ನೀಡಿದ್ದಾರೆ. ಏಕೆಂದರೆ, ಅವರೊಬ್ಬರು ಮೂಲ ವಿಜ್ಞಾನಿ. ಬಿ.ಎಸ್ಸಿ ಪದವಿ ಹೊಂದಿದವರು. ಜ್ಞಾನ ಜಗತ್ತನ್ನು ಆಳುತ್ತದೆ ಎಂದು ಏನು ಹೇಳುತ್ತೇವೆ, ಆ ಜ್ಞಾನ ಸುಜ್ಞಾನವಾಗಬೇಕು. ಮಾನ್ಯ ಸಚಿವರು ನೀಡಿರುವಂಥ ಉತ್ತರದಲ್ಲಿ ಮೂಲ ವಿಜ್ಞಾನದ ಅಧ್ಯಯನದಲ್ಲಿ ಶಿಕ್ಷಣ ಪಡೆದವರ ಗುಣಮಟ್ಟದ ಬಗ್ಗೆ ಬಹಳ ಸುದೀರ್ಘವಾದ ವಿವರವನ್ನು ನೀಡುತ್ತಾ, ಉಲ್ಲೇಖ ಮಾಡಿದ್ದಾರೆ. ಅದರಲ್ಲಿ 10565 ಪದವೀಧರರನ್ನು ಪ್ರಾಥಮಿಕ ಶಿಕ್ಷಕರ ಹುದ್ದೆಗಳಿಗೆ ನೇಮಕಾತಿಗೆ ಅಧಿಸೂಚಿಸಲಾಗಿತ್ತು. ಆದರೆ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ನೇಮಕಾತಿಗೆ ಅರ್ಹರಾದಂಥ 1994 ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ. ಏಕೆಂದರೆ, ಅರ್ಹ ಅಭ್ಯರ್ಥಿಗಳ ಕೊರತೆಯಿಂದ ನಿರೀಕ್ಷಿತ ಮಟ್ಟದಲ್ಲಿ ಅಭ್ಯರ್ಥಿಗಳು ದೊರೆಯುತ್ತಿಲ್ಲ ಎಂದು ಉತ್ತರ ನೀಡಿದ್ದಾರೆ. ಮಾನ್ಯ ಸಚಿವರಲ್ಲಿ ನನ್ನ ವಿನಂತಿಯೇನೆಂದರೆ, ಮಕ್ಕಳಲ್ಲಿ ಆಸಕ್ತಿ ಬೆಳೆಸಿ, ವಿಜ್ಞಾನ ಕಲಿಸುವಂತೆ ಮಾಡುವ ಕುರಿತು ಬಹಳ ಉದ್ದವಾದ ಉತ್ತರವನ್ನು ನೀಡಿದ್ದು, ಪ್ರಯೋಗಾಲಯದ ಬಗ್ಗೆ ಸಹ ಉಲ್ಲೇಖ ಮಾಡಿದ್ದಾರೆ. ದೊಡ್ಡ–ದೊಡ್ಡ ಶಾಲೆಗಳಲ್ಲಿ ಶುಲ್ಕ ಭರಿಸಿ, ವಿದ್ಯಾಭ್ಯಾಸ ಹೊಂದುವವರು ಏನಿದ್ದಾರೆ, ಅಂಥವರಿಗೆ ಮೂಲ ಶಿಕ್ಷಣಕ್ಕೆ ಒತ್ತು ಸಿಗುತ್ತದೆ. ಆದರೆ, ಸರ್ಕಾರಿ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಪ್ರಯೋಗಕ್ಕಾಗಿ ಸರ್ಕಾರ ನೀಡುವಂಥ ವಸ್ತುಗಳೇನಿವೆ, ಅದನ್ನು ಶಿಕ್ಷಕರು ಅವರ ಕಪಾಟಿನಲ್ಲಿಟ್ಟು ಬೀಗ ಹಾಕಿ ಹೋಗುವಂಥ ಪರಿಸ್ಥಿತಿ ಇದೆ. ಏಕೆಂದರೆ, ಆ ಪ್ರಯೋಗವನ್ನು ವಿದ್ಯಾರ್ಥಿಗಳಿಗೆ ಕಲಿಸಲು ಶಿಕ್ಷಕರಿಗೆ ಗೊತ್ತಿರುವುದಿಲ್ಲ. ಆ ಶಿಕ್ಷಕರು 'ಮಕ್ಕಳ ಕಡೆ ಬಂದು ಶಾಲೆಗೆ ಹೆಚ್ಚು ವಿದ್ಯಾರ್ಥಿಗಳು ಬರುವಂತೆ ಮಾಡುವ ಕಡೆ ಹೆಚ್ಚು ಗಮನ' ಹರಿಸುತ್ತಾರೆ. ಹಾಗಾಗಿ ನನ್ನ ವಿನಂತಿಯೇನೆಂದರೆ, ಈಗಾಗಲೇ ಮಾನ್ಯ ಸಚಿವರು ಉತ್ತರದಲ್ಲಿ ಅರ್ಹ ಅಭ್ಯರ್ಥಿಗಳ ಕೊರತೆ ಇದೆ ಎಂದು ತಿಳಿಸಿದ್ದಾರೆ. ಹಾಗೆಯೇ ವಿದ್ಯಾರ್ಥಿಗಳಿಗೆ ಪಾಠ ಮಾಡಲು ಶಿಕ್ಷಕರನ್ನು ರೂಪಿಸಲು ಸರ್ಕಾರದ ಪ್ರಯತ್ನಗಳೇನು ಎನ್ನುವಂಥ ಪ್ರಶ್ನೆಯನ್ನು ಕೇಳಿದ್ದು, ಶಿಕ್ಷಕರನ್ನು ಸಿದ್ಧಪಡಿಸುವ ಯೋಜನೆ ಇರುವುದಿಲ್ಲ ಎಂದು ಉತ್ತರ ನೀಡಿದ್ದಾರೆ. ಗಣಿತ ಮತ್ತು ವಿಜ್ಞಾನ ಕಲಿಸಲು ವಿಶೇಷ ಜ್ಞಾನ ಪಡೆದ ಶಿಕ್ಷಕರನ್ನು ರೂಪಿಸಿದರೆ, ಇಡೀ ದೇಶದಲ್ಲಿ ಕರ್ನಾಟಕ ಪ್ರಥಮ ರಾಜ್ಯವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಈ ಹಿಂದೆ ಉನ್ನತ ಶಿಕ್ಷಣ ಸಚಿವರಾಗಿದ್ದಂತಹ ಮಾನ್ಯ ರಾಮಚಂದ್ರಗೌಡರು ಈ ಪ್ರಯತ್ನಕ್ಕೆ ಕೈ ಹಾಕಿದ್ದರು. ಆದರೆ, ಅದು ಕಾರ್ಯಗತವಾಗಲಿಲ್ಲ. ತಮ್ಮ ಕಾಲದಲ್ಲಿಯಾದರೂ ಆಗಬೇಕು. ಕಳೆದ ಬಾರಿ ಪ್ರತಿಪಕ್ಷದ ನಾಯಕರು ಸಹ ಮಾಹಿತಿ ಮತ್ತು ಉನ್ನತ ಶಿಕ್ಷಣ ಸಚಿವರಾಗಿದ್ದರು. ಆಗ ಸಹ ಇದು ಕಾರ್ಯಗತವಾಗಲಿಲ್ಲ. ಎಲ್ಲರೂ

ದೊಡ್ಡದಾಗಿ ಬಾಷಣ ಮಾಡುತ್ತಾರೆ. ಎಲ್ಲಾ ವೇದಿಕೆಯಲ್ಲಿ ಶಿಕ್ಷಣಕ್ಕೆ ಮೂಲ ಒತ್ತು ನೀಡಬೇಕೆಂದು ಹೇಳುತ್ತಾರೆ. ಆದರೆ, ಒಂದು ಕಡೆ ಶಿಕ್ಷಕರ ಕೊರತೆ ಇದ್ದು, ಶಿಕ್ಷಕರು ಇಲ್ಲದಂತಾಗಿದೆ. ಶಿಕ್ಷಕರನ್ನು ಉತ್ಪತ್ತಿ ಮಾಡುವುದಿಲ್ಲ. ಶಿಕ್ಷಕರಿಗೆ ತರಬೇತಿ ನೀಡುವುದಿಲ್ಲ. ಆದಕಾರಣ ದಯವಿಟ್ಟು ಮಾನ್ಯ ಸಚಿವರ ಅವಧಿಯಲ್ಲಾದರೂ 10ನೇ ತರಗತಿಯ ನಂತರ ಒಂದು ಕೋರ್ಸನ್ನು ಪ್ರಾರಂಭ ಮಾಡುವ ನಿಟ್ಟಿನಲ್ಲಿ ಚಾಲನೆಯಾಗಬೇಕು. ಅದಕ್ಕೆ ತಗಲುವ ಕಾಲಾಮಿತಿಯನ್ನು ಸಹ ತಿಳಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಬಹಳ ಮಹತ್ವವಾದ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಮೂಲ ವಿಜ್ಞಾನದ ಬಗ್ಗೆ ಆಸಕ್ತಿಯನ್ನುಂಟು ಮಾಡುವುದು, ಮಕ್ಕಳಲ್ಲಿ ಪ್ರಚೋದನೆ ಉಂಟು ಮಾಡುವುದು ನಮ್ಮ ಕರ್ತವ್ಯವಾಗಿದೆ. ಏಕೆಂದರೆ, ಬಹಳಷ್ಟು ಜನ ಇಂಜಿನೀಯರ್ಸ್, ಡಾಕ್ಟರ್ಸ್ ಆಗಬೇಕೆಂದು ವಿಜ್ಞಾನದ ಕಡೆ ಗಮನ ಹರಿಸುತ್ತಿಲ್ಲ ಎಂದು ಎಲ್ಲಾ ಕಡೆಯಿಂದ ಮಾತು ಕೇಳಿ ಬರುತ್ತಿದೆ. ಅದಕ್ಕಾಗಿ ನಾವು ರಾಜ್ಯದ 5 ಕಡೆಗಳಲ್ಲಿ ಅಂದರೆ, ಕಲಬುರ್ಗಿ, ಧಾರವಾಡ, ಬಾಗಲಕೋಟೆ, ಶಿವಮೊಗ್ಗ, ಚಿತ್ರದುರ್ಗ ಇಲ್ಲಿ ಮಕ್ಕಳಿಗೋಸ್ಕರ ಉತ್ತಮ ಪ್ರಯೋಗಾಲಯವನ್ನು, ವಿಜ್ಞಾನ ಕೇಂದ್ರವನ್ನು ತೆರೆದಿದ್ದು, ತಮಗೂ ಸಹ ತಿಳಿದ ವಿಚಾರವಾಗಿದೆ. ಜೊತೆಗೆ ಅಗಸ್ತ್ಯ ಇಂಟರ್‌ನ್ಯಾಷನಲ್ ಫೌಂಡೇಷನ್ ಎಂದು ಏನಿದೆ, ಅವರ ಸಹಾಯದ ವತಿಯಿಂದ ಸಹ ಈ ಮಕ್ಕಳಿಗೆ Mobile Laboratory ಕಲ್ಪಿಸಿ ಅದರಲ್ಲಿ ಆಸಕ್ತಿ ಮೂಡುವಂತೆ ಮಾಡುತ್ತಿದ್ದೇವೆ. ಈಗಾಗಲೇ ಮಾನ್ಯ ಗೌರವಾನ್ವಿತ ಸದಸ್ಯರು ನೀಡಿರುವ ಸಲಹೆ ಏನಿದೆ, ಅವರ ಸಲಹೆಯನ್ನು ಅನುಷ್ಠಾನಗೊಳಿಸಲು, ಮಕ್ಕಳಲ್ಲಿ ಮತ್ತು ವಿಶೇಷವಾಗಿ ಒಬ್ಬ ಶಿಕ್ಷಕನಾಗಿ ಆ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ತಿಳಿಸಲಿಚ್ಛಿಸುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರಲ್ಲಿ ನನ್ನ ಒಂದು ಪ್ರಶ್ನೆಯೇನೆಂದರೆ, ಮೂಲ ವಿಜ್ಞಾನದಲ್ಲಿ ಆಸಕ್ತಿ ಮೂಡಿಸಲು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕೆಲಸವು ಸಹ ಕೇವಲ ತೋರಿಕೆಯಾಗಿರುತ್ತದೆ. ಇದನ್ನು ದೂರಗೊಳಿಸಲು ಉನ್ನತ ಶಿಕ್ಷಣ ಇಲಾಖೆಯ ಪಾತ್ರ ಪ್ರಮುಖವಾಗಿದೆ. ಇದರ ಬಗ್ಗೆ ಇಲಾಖೆ ಕೈಗೊಳ್ಳುವ ಕ್ರಮಗಳೇನು ಎಂಬುದನ್ನು ತಿಳಿಸಬೇಕೆಂದು ಮಾನ್ಯ ಉನ್ನತ ಶಿಕ್ಷಣ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೂ ಈ ವಿಷಯವನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೋರುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಅತ್ಯುತ್ತಮವಾದಂಥ ಪ್ರಶ್ನೆಯನ್ನು ಪ್ರಸ್ತಾಪಿಸಿದ್ದಾರೆ. ತಾವು ಸಹ ಅನೇಕ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿದ್ದೀರಿ. ಯಾವುದೇ ವಿದ್ಯಾರ್ಥಿಯನ್ನು ಕರೆದು ನೀನು ಏನಾಗಬೇಕೆಂದು ಬಯಸುತ್ತೀಯಾ ಎಂದು ಕೇಳಿದರೆ, ಇಂಜಿನೀಯರ್, ಡಾಕ್ಟರ್, ಐ.ಎ.ಎಸ್., ಐ.ಪಿ.ಎಸ್., ಆಗಬೇಕೆಂದು ಈ ರೀತಿಯಾಗಿ ಉತ್ತರವನ್ನು ನೀಡುತ್ತಾರೆ ವಿನಃ ಒಬ್ಬ ವಿದ್ಯಾರ್ಥಿಯಾದರೂ ನಾನು ವಿಜ್ಞಾನಿಯಾಗಬೇಕೆಂದು ಹೇಳುವುದಿಲ್ಲ. Basic science develop ಮಾಡಲಿಲ್ಲವೆಂದರೆ ಹೇಗೆ? 21ನೇ ಶತಮಾನದ ಹೊಸ್ತಿಲಿನಲ್ಲಿರುವಂಥ ಸಂದರ್ಭದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯಾಗಲಿಲ್ಲವೆಂದರೆ ಹೇಗೆ? ಹಾಗಾಗಿ ವಿಜ್ಞಾನ ದೇಶವನ್ನು ಬೆಳೆಸುತ್ತದೆ ಎನ್ನುವ ನಿಟ್ಟಿನಲ್ಲಿ ನನಗೆ ಅಪಾರವಾದ ನಂಬಿಕೆ ಇದೆ. ಈಗಾಗಲೇ ಕಲಬುರ್ಗಿ, ಧಾರವಾಡ, ಬಾಗಲಕೋಟೆ, ಶಿವಮೊಗ್ಗ, ಚಿತ್ರದುರ್ಗ ಕಡೆಗಳಲ್ಲಿ Regional Science Centre ತೆರೆಯಲಾಗಿದೆ ಎಂದು ಮಾನ್ಯ ಸುರೇಶ್ ಕುಮಾರ್‌ರವರು ತಿಳಿಸಿದರು. ಜೊತೆಗೆ Mini-Planetarium ಸಹ ಆಗಿದ್ದು, ಬಹಳಷ್ಟು ಸಂದರ್ಭದಲ್ಲಿ ಮಕ್ಕಳಿಗೆ ವಿಜ್ಞಾನದಲ್ಲಿ ಆಸಕ್ತಿ ಮೂಡಿಸುವಂಥ ಕೆಲಸವಾಗಿದೆ. ಆದರೆ, ಸರ್ಕಾರ ಅಮೂಲಾಗ್ರವಾಗಿ ವಿದ್ಯಾರ್ಥಿಗಳು ಕಲಿಯುವ ಹಂತದಲ್ಲಿಯೇ ವಿಜ್ಞಾನದ ಬಗ್ಗೆ ಅಭಿರುಚಿ ಉಂಟು ಮಾಡುವಂಥ ವ್ಯವಸ್ಥೆಯಾಗಲೇ ಬೇಕಾಗಿದ್ದು, ಬಹಳ ಅವಶ್ಯಕವಾಗಿದೆ. ಹಾಗಾಗಿ ಪಟ್ಟಣದಲ್ಲಿ ಮಕ್ಕಳಿಗೆ ವಿಜ್ಞಾನದ ಬಗ್ಗೆ ಅಭಿರುಚಿ ಬರುವ ನಿಟ್ಟಿನಲ್ಲಿ ಅಮೂಲಾಗ್ರವಾಗಿ ಬದಲಾವಣೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತೇನೆ.

**(ಮುಂದು)**

**(530) 22.03.2021/12.20/ಎಸ್‌ಕೆ-ಎಕೆ**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಎಂಜಿನೀಯರಿಂಗ್ ಪದವಿಯು ಅನ್ವಯಿಕ ವಿಜ್ಞಾನಕ್ಕಾಗಿ ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ನೀಡಬೇಕು.

• **ಸಭಾಪತಿಯವರು:-** ಮಾನ್ಯ ಸಚಿವರು ಇದರ ಬಗ್ಗೆ ಹೇಳುತ್ತಾರೆ.

**ಶ್ರೀಮತಿ ಭಾರತಿ ಶೆಟ್ಟಿ:-** ಆದ್ದರಿಂದ, ನಾನು ಕೇಳಿರುವ ಪ್ರಶ್ನೆಗೆ ದಯವಿಟ್ಟು, ಮಾನ್ಯ ಸಚಿವರು ಉತ್ತರವನ್ನು ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್. ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಸ್ಪಷ್ಟವನ್ನು ಪಡಿಸಿದ್ದೇನೆ. ವಿಜ್ಞಾನದ ಬಗ್ಗೆ ಮಕ್ಕಳಲ್ಲಿ ಆಸಕ್ತಿಯನ್ನು ಉಂಟು ಮಾಡಬೇಕಾಗಿರುವುದು ನಮ್ಮ ಕರ್ತವ್ಯವಾಗಿದೆ. ಡೋನೇಷನ್ ತೆಗೆದುಕೊಳ್ಳುವ ಬಹಳಷ್ಟು ಶಾಲೆಗಳಲ್ಲಿ ಈ ಕೆಲಸವಾಗುತ್ತಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರಿಗೆ ನಾನು ಕೇಳಿಕೊಳ್ಳುವುದೇನೆಂದರೆ, ದಯವಿಟ್ಟು, ತಾವು ನಮ್ಮ ಜೊತೆ ಬನ್ನಿ ಎಂದು ನಾನು ಕೇಳಿಕೊಳ್ಳುತ್ತೇನೆ. ರಾಜ್ಯದ ಅನೇಕ ಸರ್ಕಾರಿ ಶಾಲೆಗಳಲ್ಲಿರುವ ಶಿಕ್ಷಕರು ಆಸಕ್ತಿಯನ್ನು ತೆಗೆದುಕೊಂಡು, ಆ ಮಕ್ಕಳಲ್ಲಿ ವಿಜ್ಞಾನದ ಬಗ್ಗೆ ಉತ್ಸಾಹ ಬರುವುದಕ್ಕೆ ಮತ್ತು ಆಸಕ್ತಿಯನ್ನು ಉಂಟು ಮಾಡುವುದಕ್ಕೆ ಏನೇನು ಕಾರ್ಯಗಳನ್ನು ಮಾಡುತ್ತಾರೆ ಎಂಬುದನ್ನು ನಾನು ತಮಗೆ ತೋರಿಸುತ್ತೇನೆ. ಎಲ್ಲಾ ಜಿಲ್ಲೆಗಳಲ್ಲಿರುವ ಅನೇಕ ಶಾಲೆಗಳಲ್ಲಿಯೂ ಕೂಡ ಅದು ಇನ್ನೂ ಜಾಸ್ತಿಯಾಗಬೇಕು. ವಿಜ್ಞಾನದ ಶಿಕ್ಷಕರನ್ನು ರೂಪುಗೊಳಿಸುವುದಕ್ಕೆ ಒಂದು ಹೊಸ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂಬ ಬಗ್ಗೆ ನಾನು ಖಂಡಿತವಾಗಿಯೂ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1830**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಚಿದಾನಂದ್ ಎಂ. ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸವಿವರವಾದ ಉತ್ತರವನ್ನು ಒದಗಿಸಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಗಡಿ ಭಾಗದ ಶಾಲೆಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು; ಗಡಿ ಭಾಗದ ಕೆ.ಪಿ.ಎಸ್. ಶಾಲೆಗಳ ಅಭಿವೃದ್ಧಿಗೆ ಕೈಗೊಂಡ ಕ್ರಮಗಳೇನು; ಸಿ.ಎಸ್.ಆರ್. ಅಡಿಯಲ್ಲಿ ಅಭಿವೃದ್ಧಿಗೊಂಡ ಶಾಲೆಗಳ ಸಂಖ್ಯೆ ಎಷ್ಟು? ಈ ಮೂರು ಪ್ರಶ್ನೆಗಳಿಗೆ ಸವಿವರವಾದ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ನಾನು ಈ ಪ್ರಶ್ನೆಗಳನ್ನು ಕೇಳುವುದಕ್ಕೆ ಉದ್ದೇಶವೇನೆಂದರೆ, ಬರೀ ಮೂಲಭೂತ ಸೌಕರ್ಯದ ಬಗ್ಗೆ ಮಾತ್ರ ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ ಅಭಿವೃದ್ಧಿ ಮೂಲಭೂತ ಸೌಕರ್ಯದಿಂದ ಮಾತ್ರವಾಗುವುದಿಲ್ಲ. ಗಡಿ ಭಾಗದ ಶಾಲೆಗಳಲ್ಲಿ ಬಹುಪಾಲು ಶಿಕ್ಷಕರ ಸಂಖ್ಯೆ ಅರ್ಧಕ್ಕಿಂತ ಕಡಿಮೆ ಇದೆ. ಉದಾಹರಣೆಗೆ ಶಿರಾ ತಾಲ್ಲೂಕು ಪಾವಗಡ ಬಿಜ್ಜೇಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸುಮಾರು 62 ಜನ ಮಕ್ಕಳಿದ್ದಾರೆ. ಆ ಶಾಲೆಯಲ್ಲಿ ನಾಲ್ಕು ಹುದ್ದೆಗಳಿವೆ. ಇದರಲ್ಲಿ ಒಬ್ಬರು ಮಾತ್ರ ಶಿಕ್ಷಕರು ಇದ್ದಾರೆ. ಮೂರು ಹುದ್ದೆಗಳು ಖಾಲಿಯಿವೆ. ತಡಕಲೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸುಮಾರು 65 ಜನ ಮಕ್ಕಳಿದ್ದಾರೆ. ಆ ಶಾಲೆಯಲ್ಲಿ ನಾಲ್ಕು ಹುದ್ದೆಗಳಿವೆ. ಅದರಲ್ಲಿ ಇಬ್ಬರು ಶಿಕ್ಷಕರು ಮಾತ್ರವಿದ್ದಾರೆ. ಆದರೆ ಎರಡು ಹುದ್ದೆಗಳು ಖಾಲಿಯಿವೆ. ಕೆರೆತಿಮ್ಮನಹಳ್ಳಿ ಹೆಚ್.ಪಿ.ಎಸ್ ಶಾಲೆಯಲ್ಲಿ ಸುಮಾರು 80 ಜನ ಮಕ್ಕಳಿದ್ದಾರೆ. ಆ ಶಾಲೆಯಲ್ಲಿ ನಾಲ್ಕು ಹುದ್ದೆಗಳು ಖಾಲಿಯಿವೆ. ಇಬ್ಬರು ಶಿಕ್ಷಕರು ಇದ್ದಾರೆ. ಆದರೆ ಇಬ್ಬರು ಶಿಕ್ಷಕರು ಇಲ್ಲ. ಹಾಗೆಯೇ ಕರಿದಾಸನಹಳ್ಳಿಯ ಹೆಚ್.ಪಿ.ಎಸ್. ಶಾಲೆಯಲ್ಲಿ ಸುಮಾರು 69 ಜನ ಮಕ್ಕಳಿದ್ದಾರೆ. ಆ ಶಾಲೆಯಲ್ಲಿ ನಾಲ್ಕು ಹುದ್ದೆಗಳಲ್ಲಿ ಎರಡು ಹುದ್ದೆಗಳು ಖಾಲಿಯಿವೆ. ಪಾವಗಡ ತಾಲ್ಲೂಕು ತಿರುಮಣಿ ಹೆಚ್.ಪಿ.ಎಸ್. ಶಾಲೆಯಲ್ಲಿ ಸುಮಾರು 150 ಜನ ಮಕ್ಕಳಿದ್ದಾರೆ. ಆ ಶಾಲೆಯಲ್ಲಿ 7 ಹುದ್ದೆಗಳಿವೆ. ಅದರಲ್ಲಿ ನಾಲ್ಕು ಜನ ಶಿಕ್ಷಕರಿದ್ದಾರೆ. ಇನ್ನು ಮೂರು ಜನ ಶಿಕ್ಷಕರು ಇಲ್ಲ. ಈ ರೀತಿ ಗಡಿ ಭಾಗದ ಶಾಲೆಗಳಲ್ಲಿ ಸುಮಾರು 31,211 ಪ್ರಾಥಮಿಕ ಶಾಲೆಗಳು ಹಾಗೂ ಸುಮಾರು 1,384 ಪ್ರೌಢಶಾಲೆಗಳಿವೆ. ಈ ಶಾಲೆಗಳಲ್ಲಿ ಶೇಕಡ 50 ಕ್ಕಿಂತ ಹೆಚ್ಚು ಶಿಕ್ಷಕರ ಕೊರತೆ ಜಾಸ್ತಿಯಿದೆ. ಇವತ್ತು ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವಂತಹ ಮಕ್ಕಳಿಗೆ ಸರ್ಕಾರ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಡುತ್ತಿದೆ. ಆ ವಿದ್ಯಾರ್ಥಿಗಳಿಗೆ ಒದಗಿಸಿಕೊಡುವಂತಹ ಬಿಸಿಯೂಟ, ಸಮವಸ್ತ್ರ ಹಾಗೂ ಎಲ್ಲಾ ರೀತಿಯ ಸೌಲಭ್ಯವನ್ನು ಕೊಟ್ಟಾಗಿಯೂ ಕೂಡ ಮೂಲಭೂತವಾಗಿ ಕೊಡಬೇಕಾದುದನ್ನು ಕೊಡಲಿಲ್ಲವೆಂದರೆ, ಎಲ್ಲೋ ಒಂದು ರೀತಿ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವಂತಹ ಮಕ್ಕಳಿಗೆ ಉಚಿತವಾಗಿ ಶಿಕ್ಷಣವನ್ನು ಕೊಡುತ್ತೇವೆ ಎನ್ನುವ

ಕಾರಣಕ್ಕಾಗಿ, ಈ ರೀತಿ ಶಿಕ್ಷಕರು ಇಲ್ಲದೇ ಶಾಲೆಯನ್ನು ನಡೆಸುವುದು ಯಾವ ನ್ಯಾಯ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಎಸ್. ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಹಾಗೇ ಶೇಕಡ 50 ರಷ್ಟು ಶಿಕ್ಷಕರು ಇಲ್ಲ ಎಂದು ಹೇಳಿದ್ದಾರೆ. ಅದು ಸತ್ಯಕ್ಕೆ ದೂರವಾದ ಮಾತು. ನಿಜವಾಗಲೂ ಶಿಕ್ಷಕರ ಕೊರತೆಯಿದೆ. ಆ ಗಡಿ ಭಾಗದ ಶಾಲೆಗಳಿಗೆ ಶಿಕ್ಷಕರು ಹೋಗುವುದಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಅದಕ್ಕಾಗಿ ನಾವು ಮುಂದೆ ಹೊಸದಾಗಿ ನೇಮಕಾತಿಯನ್ನು ಮಾಡುತ್ತೇವೆ, ಈ ಗಡಿ ಭಾಗದ ಶಾಲೆಗಳಿಗೆ ಶಿಕ್ಷಕರ ಕೊರತೆಯನ್ನು ತುಂಬುವುದಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಚಿದಾನಂದ್ ಎಂ. ಗೌಡ:-** ಮಾನ್ಯ ಸಭಾಪತಿಯವರೇ, ನಾನು ಕೊಟ್ಟಿರತಕ್ಕಂತಹ ಕೆಲವು ಶಾಲೆಗಳ ಅಂಕಿ-ಅಂಶದಲ್ಲಿ ಶೇಕಡಾ 50 ಕ್ಕಿಂತ ಹೆಚ್ಚು ಶಿಕ್ಷಕರು ಕಡಿಮೆ ಇರುವುದರ ಬಗ್ಗೆ ಮಾಹಿತಿಯಿದೆ. ಇದರ ಜೊತೆಗೆ ಗಡಿ ಭಾಗಕ್ಕೂ ಹೋಗಿ ಕೆಲಸ ಮಾಡತಕ್ಕಂತಹ ಶಿಕ್ಷಕರು ಯಾರಿದ್ದಾರೆ? ಅಲ್ಲಿ ಯಾರೂ ಹೋಗುವುದಕ್ಕೆ ಒಪ್ಪುವುದಿಲ್ಲ. ಅವರಿಗೇನಾದರೂ ವಿಶೇಷವಾದ ಪ್ಯಾಕೇಜ್‌ನ್ನು ಕೊಟ್ಟು, ಆ ಭಾಗದ ಶಾಲೆಗಳಿಗೆ ಕೆಲಸ ಮಾಡುವಂತಹ ಶಿಕ್ಷಕರಿಗೆ . . .

**ಸಭಾಪತಿಯವರು:-** ಮಾನ್ಯ ಸಚಿವರೇ, counselling ಮುಖಾಂತರ ಅವರು ಅಲ್ಲಿಗೆ ಹೋಗಲೇಬೇಕು. ಅವರು ಅಲ್ಲಿಗೆ ಹೋಗುವುದಕ್ಕೆ ಹಿಂದುಳಿಯುವ ಪ್ರಶ್ನೆಯೇ ಬರುವುದಿಲ್ಲ. ಹೊಸ ನೇಮಕಾತಿಯಾದರೆ, 'ಸಿ' ವಲಯಕ್ಕೆ ಹೋಗಲೇಬೇಕು.

**ಶ್ರೀ ಎಸ್. ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಹೊಸ ನೇಮಕಾತಿಯಾದರೆ, 'ಸಿ' ವಲಯಕ್ಕೆ ಹೋಗಲೇಬೇಕು.

**ಸಭಾಪತಿಯವರು:-** ಹೌದು.

**ಶ್ರೀ ಎಸ್. ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಆದರೆ ಅಲ್ಲಿಗೆ ಹೋದಂತಹವರು ಪುನಃ ಅನೇಕ ಶಿಕ್ಷಕರು ವಾಪಸ್ಸು ಬರುತ್ತಿದ್ದಾರೆ.

**ಸಭಾಪತಿಯವರು:-** ಅಲ್ಲಿಗೆ ಹೋದಂತಹವರು ವಾಪಸ್ಸು ಬರುವುದಕ್ಕೆ ಬರುವುದಿಲ್ಲ.

**ಶ್ರೀ ಎಸ್. ಸುರೇಶ್ ಕುಮಾರ್:-** ಅದು ಸಮಸ್ಯೆಯಾಗುತ್ತಿದೆ. ಅದನ್ನು ನಾನು ಖಂಡಿತವಾಗಿಯೂ ಮಾಡುತ್ತೇನೆ.

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಚಿದಾನಂದ್ ಎಂ. ಗೌಡ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಪೂರಕವಾಗಿ . . .

**ಸಭಾಪತಿಯವರು:–** ಮಾನ್ಯ ಚಿದಾನಂದ್ ಗೌಡರೇ ಮಾನ್ಯ ಸಚಿವರು ಸರಿಪಡಿಸುತ್ತೇನೆಂದು ಹೇಳಿದ್ದಾರೆ.

**ಶ್ರೀ ಚಿದಾನಂದ್ ಎಂ. ಗೌಡ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಪೂರಕವಾಗಿ ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ಸಹ ಪ್ರಶ್ನೆಯನ್ನು ಕೇಳಿದ್ದಾರೆ. ಈಗ ಶಿಕ್ಷಕರು ಅದರ ಅರ್ಹತೆಯನ್ನು ಪಡೆದುಕೊಳ್ಳುತ್ತಾರೆಂದರೆ . . .

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಮಾನ್ಯ ಸಚಿವರು ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ.

**ಶ್ರೀ ಚಿದಾನಂದ್ ಎಂ. ಗೌಡ:–** ಮಾನ್ಯ ಸಭಾಪತಿಯವರೇ, ಶಿಕ್ಷಕರು ಇದೇ ರೀತಿ ಸುಮಾರು 10,000 ಜನ ಶಿಕ್ಷಕರನ್ನು ಕರೆದರೆ, ಸುಮಾರು 2,000 ಜನ ಸಾವಿರ ಶಿಕ್ಷಕರು eligible ಆಗುತ್ತಾರೆ. ಇದಕ್ಕೆ ಏನಾದರೋ ಮಾರ್ಗೋಪಾಯವನ್ನು ಕಂಡಹಿಡಿಯಬೇಕಾಗುತ್ತದೆ.

**ಸಭಾಪತಿಯವರು:–** ಇದು ಮುಂದೆ ಆಗದಂತೆ ನೋಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1752**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಸಿ. ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ಸರ್ಕಾರ ನೀಲಗಿರಿ ಮತ್ತು ಅಕೇಶಿಯಾ ಮರ ಬೆಳೆಯುವುದನ್ನು ನಿಷೇಧಿಸಿ ಆದೇಶ ಹೊರಡಿಸಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ 2011 ರಲ್ಲಿ ಇದನ್ನು ನಿಷೇಧಿಸಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈ ಮರಗಳನ್ನು ಏಕೆ ಬೆಳೆಯಬಾರದು ಎಂಬ ಕಾರಣವನ್ನು ತಿಳಿಸಿದ್ದಾರೆ. ಏಕೆಂದರೆ ಭೂಮಿ ಕುಸಿಯುತ್ತದೆ. ಜಲಸಂಪನ್ಮೂಲ ಕಡಿಮೆಯಾಗುತ್ತದೆ ಎನ್ನುವ ಉದ್ದೇಶದಿಂದಾಗಿ ನಿಷೇಧವನ್ನು ಮಾಡಿದ್ದಾರೆ. ಆದರೆ 2017 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಹಾಕಿದ್ದಾರೆಂದು ಹೇಳಿ, ಅದನ್ನು ಹಾಗೆಯೇ ಮುಂದುವರೆಸುತ್ತಿದ್ದಾರೆ. ಅದರ ಜೊತೆಗೆ 2020 ರಲ್ಲಿ ಸುಮಾರು 20,000 ಎಕರೆ ಪ್ರದೇಶದದಲ್ಲಿ MPM ಗೆ renewal ಅನ್ನು ಮಾಡಿದ್ದೀರಿ. ಆದರೆ ಒಂದು ಕಡೆ ಸರ್ಕಾರ ನಿಷೇಧ ಮಾಡಬೇಕೆಂಬ ಉದ್ದೇಶವಿದೆ. ಆದರೆ ಇನ್ನೊಂದು ಕಡೆ MPM ಗೆ ಉಪಯೋಗ ಮಾಡುವ ಸಲುವಾಗಿ renewal ಅನ್ನು ಮಾಡಿದ್ದೀರಿ. ಇದು ಯಾವ ದ್ವಂದ್ವ ನೀತಿ? 2017 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಇದ್ದಾಗ, ಅದನ್ನು stay vacate ಮಾಡಿಸುವುದಕ್ಕೆ ಸರ್ಕಾರ ಏಕೆ ಪ್ರಯತ್ನ ಮಾಡಲಿಲ್ಲ? ಇದರಿಂದ MPM ಗೆ ಇತರೆ ಪೇಪರ್ ಮಿಲ್‌ಗಳಿಗೆ raw material ಆಗುತ್ತದೆಂದು ಹೇಳಿದಾಗ, ಕಂಟಿನ್ಯೂ ಆದರೂ ಮಾಡಿ. ಇದರ ಬಗ್ಗೆ ಸ್ಪಷ್ಟವಾದ ನಿಲುವನ್ನು ಹೇಳಬೇಕೆಂದು, ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿಯನ್ನು ಮಾಡುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)(ಅರಣ್ಯ ಹಾಗೂ ಕನ್ನಡ ಸಂಸ್ಕೃತಿ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಹಿರಿಯರಾದಂತಹ ಮಾನ್ಯ ಕೆ.ಸಿ. ಕೊಂಡಯ್ಯನವರು ಕೇಳಿದಂತಹ ಪ್ರಶ್ನೆ ಬಹಳ ಸಲ ಚರ್ಚೆಯಾಗಿದೆ. ಅಕೇಶಿಯಾ ಮತ್ತು ನೀಲಗಿರಿ ಮರಗಳನ್ನು ಬೆಳೆಸಬಾರದು ಎಂಬುದರ ಬಗ್ಗೆ ನಿಷೇಧ ಹೇರಬೇಕು. ಈ ಹಿಂದೆ ಅಂದರೆ, ದಿನಾಂಕ 19.03.2011 ರಲ್ಲಿ ಒಮ್ಮೆ ನಿಷೇಧವಾಯಿತು. ಅಷ್ಟಾದ ಮೇಲೆಯೂ ಕೂಡ ಇದರ ಬಗ್ಗೆ ಚರ್ಚೆಯಾಗುತ್ತಲೇ ಇದೆ. ದಿನಾಂಕ 23.02.2017 ಮತ್ತೊಮ್ಮೆ ನಿಷೇಧ ಹೇರಿ, ಮತ್ತೊಂದು ಸರ್ಕಾರಿ ಆದೇಶವಾಯಿತು. 2017 ರಲ್ಲಿ ಆದೇಶವೇನಾಯಿತು ಎಂದರೆ, ಅದನ್ನು ಚಾಲೆಂಜ್ ಮಾಡಿ, ಕೆಲವರು ಮಾನ್ಯ ನ್ಯಾಯಾಲಯದ ಮೊರೆ ಹೋಗಿ ರಿಟ್ ಪಿಟಿಷನ್ ಮಾಡಿದರು. ದಿನಾಂಕ 29.01.2019 ಕ್ಕೆ ಮಧ್ಯಂತರ ಅರ್ಜಿಯನ್ನು ತೆಗೆದುಕೊಂಡು ಬಂದಿದ್ದಾರೆ. ಸರ್ಕಾರ ಮಾಡಿರುವ ನಿಷೇಧ ಆದೇಶವೇನಿತ್ತೋ, ಅದನ್ನೇ ಮಾನ್ಯ ನ್ಯಾಯಾಲಯದಲ್ಲಿ

Interim Order ಮಾಡಿದ್ದಾರೆ. ನಮ್ಮ ಸರ್ಕಾರದ ಪರವಾಗಿ ಮತ್ತು ಅರಣ್ಯ ಇಲಾಖೆಯ ಪರವಾಗಿ ವಕೀಲರು ಹಾಜರಾಗಿದ್ದಾರೆ. ಅದಕ್ಕೆ ಏನು objection ಸಲ್ಲಿಸಬೇಕೋ ಅದನ್ನು ಸಲ್ಲಿಸಿದ್ದಾರೆ. ತಡೆಯಾಜ್ಞೆಯನ್ನು vacate ಮಾಡುವಂತಹ ಪ್ರಯತ್ನವೂ ಕೂಡ ಒಂದು ಕಡೆ ನಡೆಯುತ್ತಿದೆ. ಆ ಕೋರ್ಟ್ ಪ್ರೊಸಿಡಿಂಗ್ಸ್ ಇದ್ದಿದ್ದಕ್ಕೆ, ಆದೇಶದ ಪ್ರಕಾರ ಇನ್ನು ಮುಂದೆ ನಾವು ನಿಷೇಧ ಮಾಡುವಂತಹದ್ದು, implement ಮಾಡುವುದಕ್ಕಾಗಲಿಲ್ಲ. ಅರಣ್ಯ ಇಲಾಖೆಯಾಗಲೀ, ಮತ್ತೊಂದಾಗಲೀ, ಸರ್ಕಾರದ ವ್ಯವಸ್ಥೆಯಲ್ಲಿ ಈ ಒಂದು ನಿಷೇಧದ ಆದೇಶವಾದ ಮೇಲೆ ಎಲ್ಲಿಯೂ ಕೂಡ ಅಕೇಶಿಯಾ, ನೀಲಗಿರಿ ಮರಗಳನ್ನು ಬೆಳೆಯುವುದಕ್ಕೆ ಪ್ರೋತ್ಸಾಹವನ್ನು ಕೊಟ್ಟಿಲ್ಲ ಮತ್ತು ಮಾಡುತ್ತಿಲ್ಲ. ಅದು ನಮ್ಮಲ್ಲಿಯೇ ಇದೆ. ಮಾನ್ಯ ಸದಸ್ಯರು MPM ಬಗ್ಗೆ ನಿರ್ದಿಷ್ಟವಾಗಿ ಹೇಳಿದ್ದಾರೆ. MPM ಇವತ್ತು ಸಾಕಷ್ಟು ಮುಚ್ಚು ಹೋಗಿದೆ ಮತ್ತು ಅದು ಏನಾಗಿದೆ ಎಂದರೆ, ಅದನ್ನು renewal ಮಾಡದೇ ಇದ್ದರೆ ಮುಂದೆ ಬೇರೆಯವರಿಗೆ lease ಗೆ ಕೊಡಬೇಕು ಎಂಬುದರ ಬಗ್ಗೆ ಚರ್ಚೆ ನಡೆದಿದೆ. ಈಗಾಗಲೇ MPM ಮುಚ್ಚಿ ಹೋಗಿಬಿಟ್ಟಿದೆ. ಅದರಿಂದಾಗಿ, ನೌಕರಿಗೆ ಆ ಭಾಗದ ಜನರಿಗೆ ಬಹಳಷ್ಟು ತೊಂದರೆಯಾಗಿದೆ. ಆ ಹಿನ್ನೆಲೆಯಲ್ಲಿ renewal ಮಾಡದಿದ್ದರೆ, ಕೆಲವು ತಾಂತ್ರಿಕ ಸಮಸ್ಯೆಗಳಾಗುತ್ತಿದ್ದವು, ನಾವು renewal ಅನ್ನು ಮಾಡಿದೆವು. ಆದರೆ ಹೊಸದಾಗಿ ಎಲ್ಲಿಯೂ ಕೂಡ ಅಕೇಶಿಯಾ, ನೀಲಗಿರಿ ಮರ ಬೆಳೆಯುವಂತಹದ್ದಕ್ಕೆ ಆಸ್ಪದ ಮಾಡಿಲ್ಲ.

**ಶ್ರೀ ಕೆ.ಸಿ. ಕೊಂಡಯ್ಯ:-** ಈ MPM ಅನ್ನು renewal ಮಾಡದೇ ಹೋದರೆ close ಆಗುವುದರಲ್ಲಿ ಇದೆ. ಅಂದರೆ, ಅವರಿಗೆ ನೀಲಗಿರಿ ಬೆಳೆಯಬಹುದೆಂದು ಅನುಮತಿಯನ್ನು ಕೊಟ್ಟಿದ್ದೀರಾ. ಹಾಗಿದ್ದರೆ, ಖಾಸಗಿಯವರು ಕೂಡ ನಮ್ಮಲ್ಲಿ ಪೇಪರ್ ಮಿಲ್ ಇದೆ, polyfibres ಇದೆ ಎಂದು ಅಪ್ಲೈ ಮಾಡುತ್ತಾರೆ. ಅವರಿಗೆ ಅನುಮತಿಯನ್ನು ಕೊಡುತ್ತೀರಾ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, writ petition file ಆಗಿ stay ಆಗಿದ್ದರೂ ಮತ್ತೊಂದು ತಾಂತ್ರಿಕವಾಗಿ renewal ಮಾಡಬೇಕಾಗಿತ್ತು. Renewalನ್ನು ಮಾಡುವುದಕ್ಕೆ ಕೊಟ್ಟಿರುವಂತಹದ್ದು, ಹೊಸದಾಗಿ ಬೆಳೆಯಬೇಕು ಮತ್ತೊಂದಲ್ಲ. ಈಗ ಇರುವಂತಹ ವ್ಯವಸ್ಥೆಯ ಅಡಿಯಲ್ಲಿ ಸಾಕಷ್ಟು ಜಾಗದಲ್ಲಿ ನೀಲಗಿರಿ ಮರಗಳಿವೆ ಮತ್ತೊಂದು ಗಿಡಗಳಿವೆ. ಇದನ್ನು ಮತ್ತೊಮ್ಮೆ ಹೊಸದಾಗಿ ಕೊಡುವಂತಹ ಅವಕಾಶ ಎಂಬ ಅರ್ಥವಲ್ಲ. ಆ renewal ಮಾಡುವಂತಹದ್ದು, ತಾಂತ್ರಿಕ ಸಲುವಾಗಿ renewal ಅನ್ನು ಮಾಡಿದ್ದೇವೆ.

**ಶ್ರೀ ಕೆ.ಸಿ. ಕೊಂಡಯ್ಯ:-** ನೀವು technical ಕಾರಣಗಳಿಗಾಗಿ ಮಾಡಿದ್ದೀರಾ.

**ಶ್ರೀ ಜಗದೀಶ್ ಶೆಟ್ಟರ್:-** ಹೌದು ಅಷ್ಟೆ.

**ಶ್ರೀ. ಕೆ.ಸಿ. ಕೊಂಡಯ್ಯ:-** ಅವರು ನಾಳೆ raw material ಇಲ್ಲ ಎಂದು ಬೆಳೆಯವುದಕ್ಕೆ ಹೋದರೆ ಅನುಮತಿಯನ್ನು ಕೊಡುತ್ತೀರಾ.

**(ಮುಂದು)**

**(531)22.03.2021, 12.30, ಟಿಸಿಹೆಚ್-ಆರ್ಎನ್**

**ಶ್ರೀ ಜಗದೀಶ್ ಶೆಟ್ಟರ್ (ಬೃಹತ್ ಕೈಗಾರಿಕಾ ಸಚಿವರು)(ಅರಣ್ಯ ಹಾಗೂ ಕನ್ನಡ ಸಂಸ್ಕೃತಿ ಸಚಿವರ ಪರವಾಗಿ):-** ಈಗ ನೋಡಿ, 2017ರ ಆದೇಶ ನಿಷೇಧ ಆಗಿದೆ. ಆ ನಿಷೇಧ ಮಾಡಿರುವುದು ಮತ್ತೆ ಕೋರ್ಟ್‌ನಲ್ಲಿ ಸ್ಟೇ ಆಗಿದೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಅದರ shelter ಮೇಲ್ಲೇ ಅವರಿಗೆ stay ಮಾಡಿದ್ದಾರೆ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಗಳವರೇ, ಇಲ್ಲ, ಆ shelter ತೆಗೆದುಕೊಂಡು ಮಾಡಿ ಎಂದು ನಾವೇನು ಎಲ್ಲಿಯೂ ಹೇಳಿಲ್ಲ. ಆದರೆ, ಈ ಒಂದು ತಾಂತ್ರಿಕ ಕಾರಣದ ಸಲುವಾಗಿ renew ಮಾಡುವುದು ಬಹಳ ಅವಶ್ಯಕತೆ ಇದೆ ಎಂದು renewal ಮಾಡಿದ್ದೇವೆಯೇ ಹೊರತು, ಅದಕ್ಕೆ ಎಲ್ಲಾ ರೀತಿಯ ಅವಕಾಶ ಇದೆ ಎಂದು ಅರ್ಥ ಮಾಡಿಕೊಳ್ಳುವುದು ಅವಶ್ಯಕತೆ ಇದೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಈಗ ನಮ್ಮ ಕಡೆ ಬಯಲು ಪ್ರದೇಶವಾದ ಕೂಡ್ಲಗಿಯಲ್ಲಿ ನೀಲಗಿರಿ ಮರಗಳನ್ನು ಸುಮಾರು 20-30 ಎಕರೆಯಲ್ಲಿ ಬೆಳೆದಿದ್ದಾರೆ. ಒಂದು ಕಡೆ ಸರ್ಕಾರ ಅದನ್ನು ಬೆಳೆಯುವುದನ್ನು ನಿಷೇಧಿಸಿದೆ. ಆದರೆ ಆ ಮರಗಳನ್ನು ಕಡಿಯುವುದಕ್ಕೆ ಅರಣ್ಯ ಇಲಾಖೆಯವರು ಆ ಭೂಮಾಲೀಕರಿಗೆ ನಮ್ಮ ಅನುಮತಿ ಪಡೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಅವುಗಳನ್ನು ತೆಗೆಯಲು ಅರಣ್ಯ ಇಲಾಖೆಯ ಅನುಮತಿ ಏಕೆ ಬೇಕು? ಈಗಾಗಲೇ ಸರ್ಕಾರ ಆ ಮರಗಳನ್ನು ಬೆಳೆಯಬಾರದೆಂದು ನಿಷೇಧ ಮಾಡಿದೆ. ಆ ರೈತ ಈಗಾಗಲೇ ಬೆಳೆಸಿರುವ ಮರಗಳನ್ನು ಕತ್ತರಿಸಿ ಉಪಯೋಗಿಸಿಕೊಳ್ಳುವುದಕ್ಕೆ ಅರಣ್ಯ ಇಲಾಖೆ ಪರ್ಮಿಷನ್ ಏಕೆ ತೆಗೆದುಕೊಳ್ಳಬೇಕು? ಆತ ಸುಮಾರು 6-8 ತಿಂಗಳು ಅವರ ಕಚೇರಿಗಳಿಗೆ ಸುತ್ತುತ್ತಿದ್ದಾನೆ. ಇದಕ್ಕೆ ಅರಣ್ಯ ಇಲಾಖೆಯವರು ಈ ವಿಚಾರವನ್ನು ಗಮನಕ್ಕೆ ತೆಗೆದುಕೊಂಡು ಯಾರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭೂಮಾಲಿಕರಿದ್ದಾರೆ, ಅವರಷ್ಟಕ್ಕೆ ಅವರೇ ವಾಲೆಂಟ್ರಿಯಾಗಿ ಕಡಿದುಕೊಳ್ಳುತ್ತಾರೆಂದರೆ, ನೀವು ಪರ್ಮಿಷನ್ ಕೊಡಿ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡುತ್ತೇವೆ. ಈ ರೀತಿಯಾದ ಕೆಲವೊಂದು ತೊಂದರೆಗಳಿವೆ ಮತ್ತು ಈ ಮಧ್ಯೆ ಕೋರ್ಟ್‌ನಿಂದ ತಡೆಯಾಜ್ಞೆ ಕೂಡ ಇದೆ. ಈ ಎಲ್ಲಾ ಹಿನ್ನೆಲೆ ಇಟ್ಟುಕೊಂಡು ಇವತ್ತಿನ ದಿವಸ ಆ ಮರಗಳನ್ನು ಕಡಿದುಕೊಂಡು ಹೋಗುತ್ತಾರೆಂದರೆ, ಅವರಿಗೆ ಪರ್ಮಿಷನ್ ಕೊಡುವಂಥದ್ದಕ್ಕೆ ಆ ಪ್ರೋಸೆಸ್ ಆಗಬೇಕು. ಆ ಹಿನ್ನೆಲೆಯಲ್ಲಿ ನಮ್ಮ ಇಲಾಖೆಯ ಅಧಿಕಾರಿಗಳ ಜೊತೆ ಮಾತನಾಡಿ ಒಂದು ನಿರ್ಧಾರ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಶ್ರೀ ಯು.ಬಿ.ವೆಂಕಟೇಶ್‌ರವರು ಗೈರು ಹಾಜರಿಯಾಗಿರುತ್ತಾರೆ. ಈಗ ಒಂದು ಪ್ರಕಟಣೆ ಇದೆ. ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಆದೇಶ ಬಂದಿರುತ್ತದೆ.

## 4. ಪ್ರಕಟಣೆ

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 104ರ ಮೇರೆಗೆ ವಿಧಾನಸಭೆಯು ದಿನಾಂಕ 18.03.2021ರಂದು “ಕರ್ನಾಟಕ ಕೃಷ್ಣ ಜಲನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ನಿರಸನಗೊಳಿಸುವ) ವಿಧೇಯಕ, 2021ನ್ನು ಅಂಗೀಕರಿಸಿತೆಂದೂ ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀ ನಿರಾಣಿ ಹಣಮಂತ್ ರುದ್ರಪ್ಪನವರು ಗೈರು ಹಾಜರಿಯಾಗಿರುತ್ತಾರೆ. ಮತ್ತೆ ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿ ರವರು ಪ್ರಶ್ನೆ ಸಂಖ್ಯೆ.1836.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರತಕ್ಕಂಥ ಪ್ರಶ್ನೆ ಸಂಖ್ಯೆ 1836 ನ್ನು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಿಂದ ನಾನು ಉತ್ತರವನ್ನು ಕೇಳಲು ಇಚ್ಛಿಸುವುದಿಲ್ಲ.

**ಸಭಾಪತಿಯವರು:-** ಮಾನ್ಯ ಕೆ.ಪ್ರತಾಪ ಚಂದ್ರಶೆಟ್ಟಿಯವರೇ, ತಾವು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರವನ್ನು ಕೇಳಲು ಇಚ್ಛಿಸುವುದಿಲ್ಲವೇ?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಇಚ್ಛಿಸುವುದಿಲ್ಲ.

**ಸಭಾಪತಿಯವರು:-** ಮಾನ್ಯ ಅಡಗೂರ್ ಹೆಚ್.ವಿಶ್ವನಾಥ್‌ರವರೇ, ತಮ್ಮ ಪ್ರಶ್ನೆಗೆ ಉತ್ತರ ನೀಡಲು ಸರ್ಕಾರದವರು ಸಮಯ ಕೇಳಿದ್ದಾರೆ. ಶ್ರೀ ಸುನೀಲ್ ಸುಬ್ರಮಣಿಯವರು ಗೈರು ಹಾಜರಾಗಿರುತ್ತಾರೆ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಆ ಪ್ರಶ್ನೆಯನ್ನು ನಾನೂ ಕೂಡ ಕೇಳಿದ್ದೇನೆ. ಇದರಲ್ಲಿ ಎರಡು ಪ್ರಶ್ನೆಗಳಿವೆ.

**ಸಭಾಪತಿಯವರು:-** ಇವರು ಪ್ರಶ್ನೆ ಇದೆಯೊ, ಇಲ್ಲವೊ ಕೇಳಬೇಕಲ್ಲವೇ? ನೀವು ಪ್ರಶ್ನೆ ಕೇಳುವುದಕ್ಕೆ ನನಗೆ ಕೊಟ್ಟಿಲ್ಲವಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅದು ಜಂಟಿ ಪ್ರಶ್ನೆ; ಇವರ ಹೆಸರು ಕೂಡ ಇದೆ.

**ಸಭಾಪತಿಯವರು:-** ಓಕೆ. ಕ್ಷಮಿಸಬೇಕು.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

## 5. ಪ್ರಶ್ನೋತ್ತರಗಳು

### ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು (ಮುಂದುವರೆದದ್ದು)

**ಪ್ರಶ್ನೆ ಸಂಖ್ಯೆ.1729+1851**
**(ಉತ್ತರ ಲಗತ್ತಿಸಿದೆ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಜನರಲ್ ತಿಮ್ಮಯ್ಯ ಮ್ಯೂಸಿಯಂನ್ನು ಉದ್ಘಾಟನೆ ಮಾಡಲು ಕೂಡ ಮಾನ್ಯ ಸಚಿವರು ಬಂದಿದ್ದರು. ಆ ಸಂದರ್ಭದಲ್ಲಿ ಅವರು ಅಲ್ಲಿ ಅನೇಕ ನ್ಯೂನತೆಗಳನ್ನು ಮತ್ತು ಯಾವ್ಯಾವ ಕೆಲಸಗಳು ಆಗಬೇಕು ಎನ್ನುವುದನ್ನೂ ಕೂಡ ಪರಿಶೀಲನೆ ಮಾಡಿದ್ದಾರೆ. ಆದರೆ, ಅದಕ್ಕೆ ಸುಮಾರು ಹಣವನ್ನು ಕೂಡ ಬಿಡುಗಡೆ ಮಾಡಿದ್ದಾರೆ. ಬಾಕಿ 2.25 ಕೋಟಿ ರೂಪಾಯಿಗಳನ್ನು ಕೂಡ ಆದಷ್ಟು ಶೀಘ್ರದಲ್ಲಿ ಬಿಡುಗಡೆ ಮಾಡಬೇಕಾಗಿದೆ. ಅಲ್ಲಿ ಆಗಬೇಕಾಗಿರುವಂಥ ಕೆಲಸ ತುಂಬಾ ಇದೆ. ಆರ್ಮಿಯವರು ನಮಗೆ ಬೋಫೋರ್ಸ್ gun ಗಳನ್ನು ಕೊಟ್ಟಿದ್ದಾರೆ, ಆದರೆ ಅದನ್ನು ಇಡಲು ಶೆಡ್ ಇಲ್ಲ. ಬೋಫೋರ್ಸ್ ಟ್ಯಾಂಕರ್‌ನ್ನು ಕೂಡ ಕೊಟ್ಟಿದ್ದಾರೆ. ಏರೋಪ್ಲೇನ್ ವಿಂಗ್‌ನ್ನು ಕೂಡ ಕೊಟ್ಟಿದ್ದಾರೆ. ಇಂಥದ್ದೆಲ್ಲಾ ಮೆಟೀರಿಯಲ್ಸ್ ಇಟ್ಟುಕೊಳ್ಳಬೇಕಾದರೆ, ಅಲ್ಲಿ ಸುರಕ್ಷಿತವಾಗಿಲ್ಲ. ಸುತ್ತಲೂ ಕಾಂಪೌಂಡ್ ಗೋಡೆಗಳನ್ನು ಕೂಡ ಕಟ್ಟಬೇಕಾಗಿದೆ. ಎಲ್ಲದಕ್ಕಿಂತಲೂ ಮಿಗಿಲಾಗಿ ಇಂತಹ ಅಮೂಲ್ಯವಾದ ವಸ್ತುಗಳನ್ನು ನೋಡಿಕೊಳ್ಳುವುದಕ್ಕೆ ಒಂದು ಉತ್ತಮವಾದ ಏರ್‌ಪ್ಯಾಡ್‌ನ್ನು ಕೂಡ ಮಾಡಬೇಕಾಗಿದೆ. ಇದರ ಜೊತೆಗೆ ಅಲ್ಲಿ ನನಗೆ ತಿಳಿದಿರುವ ಹಾಗೆ, ಇದುವರೆಗೆ ಆರ್ಮಿ ಆಫೀಸರ್ಸ್ volunteer ಆಗಿ ದುಡಿಯುತ್ತಿದ್ದಾರೆ. ಅವರಲ್ಲಿ ಯಾರನ್ನಾದರೂ ಒಬ್ಬರನ್ನು ಪರ್ಮನೆಂಟ್ ಆಗಿ ನೇಮಿಸಬೇಕು. ಏಕೆಂದರೆ, ಈ ವೆಪನ್ಸ್‌ಗಳ ಬಗ್ಗೆ ತಿಳಿದಿರುವಂಥವರು ಅಲ್ಲಿಗೆ ಬೇಕಾಗುತ್ತಾರೆ. ಆ ಪಾಯಿಂಟ್‌ನಲ್ಲಿ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಅಲ್ಲಿಗೆ retired officers ನ್ನು ನಿಯೋಜನೆ ಮಾಡಬೇಕು. ಅದರ ಜೊತೆಗೆ ಇವತ್ತು ಅಲ್ಲಿ ಏನು ಅನುದಾನದ ಕೊರತೆ ಕಂಡುಬಂದಿದೆ ಅದನ್ನು ಆದಷ್ಟು ಶೀಘ್ರವಾಗಿ ಬಿಡುಗಡೆ ಮಾಡಬೇಕು. ಆ ಮ್ಯೂಸಿಯಂನಲ್ಲಿ ಅಮೂಲ್ಯವಾದ ವಸ್ತುಗಳು ಕೂಡ ಇವೆ. ಅದನ್ನು ರಕ್ಷಣೆ ಮಾಡಬೇಕಾದರೆ, ಸುತ್ತಲೂ ಕಾಂಪೌಂಡ್ ನಿರ್ಮಾಣವಾಗಬೇಕು. ವ್ಯವಸ್ಥಿತವಾಗಿ ಆ ಮ್ಯೂಸಿಯಂನ್ನು ರಕ್ಷಣೆ ಮಾಡಬೇಕೆಂದು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ಎಸ್.ಸುರೇಶ್‌ಕುಮಾರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) (ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಉತ್ತರವನ್ನು ವಿವರವಾಗಿ ನೀಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸದಸ್ಯರು ಇತ್ತೀಚೆಗೆ ಮಾನ್ಯ ಸಚಿವರು ಅಲ್ಲಿಗೆ ಭೇಟಿಕೊಟ್ಟಿದ್ದರು ಎಂದು ಹೇಳಿದರು. ಜನರಲ್ ತಿಮ್ಮಯ್ಯನವರ ಸ್ಮಾರಕವು ನಮ್ಮೆಲ್ಲರಿಗೂ ಪ್ರೇರಣೆ ಕೊಡುವಂಥ ಜಾಗ. ಆ ಸ್ಮಾರಕದ ಉಳಿದ ಏನು ಕಾಮಗಾರಿಗಳಿವೆ, ಆ ಕಾಮಗಾರಿಗಳನ್ನು ಬೇಗ ಪೂರೈಸುವುದು ನಮ್ಮ ಜವಾಬ್ದಾರಿಯಾಗಿದೆ. ಅದಕ್ಕೆ ಸುಮಾರು 2.25 ಕೋಟಿ ರೂಪಾಯಿಗಳಷ್ಟು ಅನುದಾನ ಬೇಕಾಗಿದೆ. ಅದನ್ನು ಬೇಗ ಬಿಡುಗಡೆಗೊಳಿಸಲು ಪ್ರಯತ್ನಪಟ್ಟು ಆ ಕಾಮಗಾರಿಯನ್ನು ಪೂರ್ಣಗೊಳಿಸುತ್ತೇವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಎರಡನೆಯದಾಗಿ, ಮಾನ್ಯ ಸದಸ್ಯರು ಬಹಳ ಮುಖ್ಯವಾದ ಸಲಹೆಯನ್ನು ಕೊಟ್ಟಿರುವುದೇನೆಂದರೆ, ಸದರಿ ಮ್ಯೂಸಿಯಂನ ನಿರ್ವಹಣೆಗೆ ನಿವೃತ್ತ ಸೇನಾಧಿಕಾರಿಗಳು ಯಾರು volunteers ಆಗಿ ಕೆಲಸ ಮಾಡುತ್ತಿದ್ದಾರೆ, ಅವರನ್ನೇ ತೆಗೆದುಕೊಂಡರೆ ಒಳ್ಳೆಯದೆಂದು ಹೇಳಿದ್ದಾರೆ. ಖಂಡಿತ ಅದು ಬಹಳ ಉತ್ತಮವಾದ ಒಂದು ಸಲಹೆ. ಏಕೆಂದರೆ, ಸೈನ್ಯದಲ್ಲಿ ಇದ್ದಂಥವರಿಗೆ ಒಂದು ಪ್ಯಾಷನ್ ಇರುತ್ತದೆ. ಮತ್ತೆ ಆ ಮ್ಯೂಸಿಯಂಗೆ ಭೇಟಿ ನೀಡಿದವರಿಗೆ ಚೆನ್ನಾಗಿ ವಿವರಿಸಬಹುದು. ಅದೂ ಉತ್ತಮವಾದ ಸಲಹೆ. ಅದನ್ನು ನಾವು ಖಂಡಿತವಾಗಿಯು ಪರಿಶೀಲಿಸುತ್ತೇವೆ. ಇನ್ನೊಂದು ಪ್ರಶ್ನೆ ಕೇಳಿದ್ದಾರೆ. "ಈ ಮ್ಯೂಸಿಯಂಗೆ ಭೇಟಿ ನೀಡುವ ಎಲ್ಲಾ ಮಕ್ಕಳಿಗೆ ಎಲ್ಲಾ ಕಾಲದಲ್ಲೂ ಉಚಿತ ಪ್ರವೇಶ ನೀಡಲು ಸರ್ಕಾರದ ನಿಲುವೇನು" ಎಂದು ಹೇಳಿದ್ದಾರೆ. ಇದು ಕೂಡ ಒಂದು ಉತ್ತಮವಾದ ಸಲಹೆ. ಏಕೆಂದರೆ, ನಮ್ಮ ಮಕ್ಕಳನ್ನು ಆ ಒಂದು ವಯಸ್ಸಿನಲ್ಲೇ ನಮ್ಮ ದೇಶದ ಮಹಾನ್ ವ್ಯಕ್ತಿಗಳ ಪರಿಚಯವಾಗುತ್ತದೆ. ಆ ಪರಿಚಯದಿಂದ ಜೀವನದಲ್ಲಿ ಅವರಿಗೆ ಪ್ರೇರಣೆ ಸಿಗಬೇಕು. ಎಲ್ಲೋ ಒಂದು ರೀತಿ ನಾವು ಕೂಡ ಈ ರೀತಿ ಆಗಬೇಕು ಎನ್ನುವುದು ಅವರ ಮನಸ್ಸಿನಲ್ಲಿ ಬರಬೇಕು. ಖಂಡಿತವಾಗಿಯೂ ಈ ಎರಡೂ ಸಲಹೆಗಳನ್ನು ಸರ್ಕಾರ ಪರಿಶೀಲಿಸುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ.1750**
**(ಉತ್ತರ ಲಗತ್ತಿಸಿದೆ)**

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ಮಾನ್ಯ ಸಚಿವರು ನಾನು ಕೇಳಿರತಕ್ಕಂಥ 3 ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ. ಕೈಗಾರಿಕೆಗಳು ಯಾವ್ಯಾವ ರೀತಿ ಇರಬೇಕೆಂದು ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಮೂರನೆಯ ಪ್ರಶ್ನೆಯಾದ "ಈ ಘಟಕದಿಂದ ಬಿಡುಗಡೆಯಾಗುತ್ತಿರುವ ತ್ಯಾಜ್ಯ ಮತ್ತು ಇತರೆ ರಾಸಾಯನಿಕಗಳನ್ನು ವೈಜ್ಞಾನಿಕವಾಗಿ ಸಂಸ್ಕರಣೆ ಮಾಡದೆ ಸಮೀಪದ ಹಳ್ಳ-ಕೊಳ್ಳ-ಕೆರೆಗಳಿಗೆ ಹರಿಸುತ್ತಿರುವುದರಿಂದ ಈ ಘಟಕದ ಸುತ್ತಮುತ್ತಲಿನ ಹಲವಾರು ಗ್ರಾಮಸ್ಥರು ಮತ್ತು ಪ್ರಾಣಿ ಪಕ್ಷಿಗಳು ಅಸ್ವಸ್ಥಗೊಳ್ಳುತ್ತಿರುವ ಪ್ರಕರಣಗಳು ಬೆಳಕಿಗೆ ಬಂದಿದ್ದು, ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಂಬಂಧ ಕೈಗೊಂಡಿರುವ ಕ್ರಮಗಳನ್ನು ತಿಳಿಸಬೇಕು" ಎಂದು ನಾನು ಮಾನ್ಯ ಸಚಿವರಿಗೆ ಪ್ರಶ್ನೆ ಕೇಳಿದ್ದೆನು. ಆದರೆ, ಮಾನ್ಯ ಸಚಿವರು ಸಮರ್ಪಕವಾದ ಉತ್ತರವನ್ನು ಕೊಟ್ಟಿಲ್ಲ. ಅಧಿಕಾರಿಗಳು ತಪ್ಪು ಮಾಹಿತಿಯನ್ನು ಮಾನ್ಯ ಸಚಿವರಿಗೆ ಒದಗಿಸಿದ್ದಾರೆಂದು ಹೇಳುತ್ತಿದ್ದೇನೆ. ಏಕೆಂದರೆ, ಅಲ್ಲಿ ಜನುವಾರ್ ಕೆರೆ ಎಂದು ಇದೆ, ಅಲ್ಲಿಗೆ ಕಲುಷಿತವಾಗಿರುವಂಥ ತ್ಯಾಜ್ಯ ನೀರನ್ನು ನೇರವಾಗಿ ಬಿಡತಕ್ಕಂಥ ಕೆಲಸ ಆಗುತ್ತಿದೆ. Pollution Control Board ನಿಂದ ಅದು ಸರಿ ಇದೆಯೆಂದು ದಾಖಲೆಯನ್ನು ಕೊಟ್ಟಿದ್ದಾರೆ. ಆದರೆ, ಅಲ್ಲಿ ಸಂಪೂರ್ಣವಾಗಿ ಏತ ನೀರಾವರಿ ಇದೆ. 10-15 ಕೆರೆಗಳಿಗೆ ನೀರು ಹೋಗುವುದರಿಂದ, ಅದು ಸಂಪೂರ್ಣವಾಗಿ ಕೆರೆ ನೀರನ್ನು ನೇರವಾಗಿ ಬಿಡುತ್ತಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಏನು ಉತ್ತರ ಕೊಡುತ್ತಾರೆ ಎಂದು ನಾನು ಕೇಳಬಯಸುತ್ತೇನೆ.

**ಸಿ.ಪಿ.ಯೋಗೇಶ್ವರ್:-** ಮಾನ್ಯ ಸಭಾಪತಿಯವರೇ, ನಮ್ಮ ಪ್ರಾದೇಶಿಕ ಮಂಡಳಿಗೆ ಯಾವುದೇ ರೀತಿಯ ಲಿಖಿತ ದೂರು ಬಂದಿಲ್ಲವೆಂದು ನಮಗೆ ಅಧಿಕಾರಿಗಳು ಮಾಹಿತಿ ಕೊಟ್ಟಿದ್ದಾರೆ. ಒಂದು ವೇಳೆ ದೂರು ಬಂದಿದ್ದರೆ, ಆ ಕಾಯ್ದೆ ಉಲ್ಲಂಘನೆಯಾಗಿದ್ದರೆ, ನಾವು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ಇದರ ಜೊತೆಗೆ ಹಾಸನ ಜಿಲ್ಲೆಗೆ ಮುಂದಿನ ತಿಂಗಳು ಪ್ರವಾಸಕ್ಕೆ ಬರುತ್ತಿದ್ದೇನೆ. ನಾನು ಗೌರವಾನ್ವಿತ ಸದಸ್ಯರ ಜೊತೆಯಲ್ಲಿ ಪ್ಲಾಂಟ್‌ಗೆ ಭೇಟಿ ನೀಡುತ್ತೇನೆ. ಆ ರೀತಿ ಯಾವುದಾದರೂ ಕಾನೂನು ಉಲ್ಲಂಘನೆಯಾಗಿದ್ದರೆ, ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳು. ಅವರು ನಮ್ಮ ಹಾಸನ ಜಿಲ್ಲೆಗೆ ಬರಬೇಕು. ಏಕೆಂದರೆ ನಮ್ಮ ಹಾಸನ ಜಿಲ್ಲೆಗೆ ಅವರು ಬರುವುದು ಅವಶ್ಯಕತೆ ಇದೆ. ಅಲ್ಲಿ ವಿಚಾರ ಇರುವುದೇನೆಂದರೆ, ಅಲ್ಲಿ ವಾಟರ್ ಬೋರ್ಡ್ ಇದೆ. ಏಕೆಂದರೆ, ತಾವು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿಪರಿಸ್ಥಿತಿ ಸಚಿವರು ಇದ್ದೀರಿ. ಅದರ ಜೊತೆಗೆ ಎರಡನ್ನೂ ಕೂಡ ಪರಿಶೀಲಿಸಬಹುದು.

**ಸಭಾಪತಿಯವರು:–** ಮಾನ್ಯ ಎಂ.ಎ.ಗೋಪಾಲಸ್ವಾಮಿಯವರೇ, ಮಾನ್ಯ ಸಚಿವರು ಅಲ್ಲಿಗೆ ಬರುತ್ತಾರೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಶ್ರವಣಬೆಳಗೊಳದ್ದು ಹಾಗೂ ಸಕ್ಕರೆ ಕಾರ್ಖಾನೆ ಇವೆರಡಕ್ಕೂ ಕೂಡ ಭೇಟಿ ಕೊಡಬೇಕು. ಅವರು ಅಲ್ಲಿಗೆ ಭೇಟಿ ನೀಡುವಾಗ ನನಗೂ ಕೂಡ ಮಾಹಿತಿ ನೀಡಿ. ನಾನು ತಮ್ಮ ಜೊತೆಯಲ್ಲಿಯೇ ಭೇಟಿ ಮಾಡುವಂಥದ್ದು ಆಗುತ್ತದೆ.

**ಸಭಾಪತಿಯವರು:–** ಮಾನ್ಯ ಎಂ.ಎ.ಗೋಪಾಲಸ್ವಾಮಿಯವರೇ, ನಿಮ್ಮನ್ನು ಮಾನ್ಯ ಸಚಿವರು ಕರೆದುಕೊಂಡು ಹೋಗುತ್ತಾರೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಖಂಡಿತ, ನನ್ನನ್ನು ಕರೆದುಕೊಂಡು ಹೋದರೆ, ಅಲ್ಲಿ ಇನ್ನೂ ಏನೇನು ಆಗಬೇಕೆಂಬುದು ಗೊತ್ತಾಗುತ್ತದೆ. ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋದರೆ ಅವರು ನನಗೆ ಉತ್ತರ ಕೊಡುವಂತಿಲ್ಲ. ಇಲ್ಲದಿದ್ದರೆ ಕೊಡಬೇಕಾಗುತ್ತದೆ. ನಾನು ಸಂಪೂರ್ಣವಾಗಿ preparation ಮಾಡಿಕೊಂಡಿದ್ದೆನು. ಹಾಗಾಗಿ, Water Board ಇರುವುದರಿಂದ, ಮಾನ್ಯ ಸಚಿವರೂ ಕೂಡ ಬರಲಿ. Pollution Control Board ಗೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ ಹಂತದ ಅಧಿಕಾರಿಗಳು ಬಂದರೆ ಒಳ್ಳೆಯದು.

**ಸಿ.ಪಿ.ಯೋಗೇಶ್ವರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಂ.ಎ.ಗೋಪಾಲಸ್ವಾಮಿಯವರ ಜೊತೆಗೂಡಿ ಎಲ್ಲಾ ಅಧಿಕಾರಿಗಳ ಜೊತೆಗೆ ನಾನು ಅಲ್ಲಿಗೆ ಭೇಟಿ ಕೊಡುತ್ತೇನೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಆಯಿತು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ.1813+1818**
**(ಉತ್ತರ ಲಗತ್ತಿಸಿದೆ)**

**ಸಭಾಪತಿಯರು:–** ಶ್ರೀ ಜಿ.ರಘು ಆಚಾರ್‌ರವರು ಗೈರು ಹಾಜರಿಯಾಗಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಅದು ಜಂಟಿ ಪ್ರಶ್ನೆಯಾಗಿದೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಈ ಹಿಂದೆಯೂ ಕೂಡ ಅವೊತ್ತಿನ ಸಚಿವರಿಗೆ ಈ ಪ್ರಶ್ನೆಯನ್ನು ಕೇಳಿದ್ದೆನು.

**(ಮುಂದು)**

**(532)22.03.2021/12.40/ಎಂ.ಎಂ–ಆರ್.ಎನ್**

**ಶ್ರೀ ಹೆಚ್.ಎಂ. ರಮೇಶಗೌಡ (ಮುಂದು):–**

ಅವತ್ತು ಸಹ ಇದೇ ಉತ್ತರವನ್ನು ಕೊಟ್ಟಿದ್ದರು. ಕಳೆದ 3 ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು ಎಂದರೆ, ಅವರು ಉತ್ತರ ಕೊಟ್ಟಿರುವುದು, ಯಾತ್ರಿನಿವಾಸ, ಡಾರ್ಮಿಟರಿ, ಪ್ರವಾಸಿ ತಾಣಗಳನ್ನು ಸಂಪರ್ಕಿಸುವ ಕೂಡು ರಸ್ತೆ, ಶುದ್ಧ ಕುಡಿಯುವ ನೀರಿನ ಸೌಲಭ್ಯ, ಶೌಚಾಲಯ ಮತ್ತು ಸ್ನಾನ ಗೃಹ, ಪಾರ್ಕಿಂಗ್ ಸೌಲಭ್ಯ, ಸೂಚನಾ ಫಲಕಗಳು, ಆಸನಗಳ ವ್ಯವಸ್ಥೆ, ಮೆಟ್ಟಿಲುಗಳು ಮತ್ತು ರೈಲಿಂಗ್ಸ್, ಪರಗೋಲ, ಪಾತ್–ವೇ ನಿರ್ಮಾಣ ಎಂದು ಇದೆ. ನಮ್ಮ ರಾಜ್ಯವು ಪ್ರವಾಸೋದ್ಯಮ ಇಲಾಖೆಗೆ ಅತ್ಯುತ್ತಮವಾದ ಒಂದು ರಾಜ್ಯವಾಗಿದೆ. ಚಿಕ್ಕಮಗಳೂರು, ಮಂಗಳೂರು, ಮೈಸೂರು ಹಾಗೂ ಇಲ್ಲಿಯೇ ಇರುವ ನಂದಿ ಬೆಟ್ಟ ಇರಬಹುದು, ಸಾಕಷ್ಟು ನಮ್ಮ ರಾಜ್ಯದಲ್ಲಿರುವಂತಹ; ಉದಾಹರಣೆಗೆ ನಂದಿ ಬೆಟ್ಟ, ಅದು ಎಂತಹ ಒಳ್ಳೆಯ ಜಾಗವಾಗಿದೆ ಎಂದರೆ ಇದುವರೆಗೂ ಅಲ್ಲಿಗೊಂದು ರೋಪ್–ವೇ ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಇಂತಹ ಅಭಿವೃದ್ಧಿ ಮಾಡಿದ್ದೇವೆ ಎಂದರೆ ನಾವೇನು ಕರ್ನಾಟಕ ರಾಜ್ಯದಲ್ಲಿದ್ದೇವೋ ಅಥವಾ ಅತ್ಯಂತ ಹಿಂದುಳಿದಂತಹ ಯಾವುದಾದರೂ ರಾಜ್ಯದಲ್ಲಿದ್ದೇವೋ ಎಂಬುದು ಗೊತ್ತಿಲ್ಲ. ಏಕೆಂದರೆ, ಅವರು ಕೊಟ್ಟಿರುವಂತಹ ಉತ್ತರ ಆ ರೀತಿ ಇದೆ. ಯಾತ್ರಿ ನಿವಾಸ, ಮೆಟ್ಟಿಲುಗಳಿಗೆ ಬಣ್ಣ ಬಳಿಯುವುದು; ನಮ್ಮ ಕರ್ನಾಟಕ ರಾಜ್ಯ ಸರ್ಕಾರದ ಪ್ರವಾಸೋದ್ಯಮ ಇಲಾಖೆ ಬದುಕಿದೆಯೋ ಅಥವಾ ಸತ್ತು ಹೋಗಿದೆಯೋ ಅಥವಾ ಬಜೆಟ್‌ನಲ್ಲಿ ಹಿಂದೆಯೂ ಸಹ ಹಣ ಇಟ್ಟಿದ್ದರು. ಆ ಹಣವೇನಾದರೂ ವಿನಿಯೋಗವಾಗುತ್ತಿದೆಯೇ ಅಥವಾ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿನಿಯೋಗವೇ ಆಗುತ್ತಿಲ್ಲವೇ? ಹಾಗಾಗಿ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುವುದು ಇಷ್ಟೇ. ನಮ್ಮ ರಾಜ್ಯವು ಪ್ರವಾಸೋದ್ಯಮ ಇಲಾಖೆಗೆ ಅತ್ಯುತ್ತಮವಾದಂತಹ ಒಂದು ರಾಜ್ಯ. ನಾವು ಯಾವುದಾದರೂ ಒಂದು ವಿಮಾನದಲ್ಲಿ ಹೋದರೆ, ಬೇರೆ ಬೇರೆ ರಾಜ್ಯಗಳ ವಿಮಾನಗಳಲ್ಲಿ ಅಲ್ಲಿ ಏನೇನಿದೆ ಎಂದು ಪ್ರತಿಯೊಂದು ಕಡೆಯೂ ಒಂದು hand bill ಸಿಗುತ್ತದೆ. ಆದರೆ ನಮ್ಮ ರಾಜ್ಯದಲ್ಲಿ ಇದುವರೆಗೂ ಸಹ ಅಂತಹ ಯಾವುದೇ ವ್ಯವಸ್ಥೆ ಮಾಡಿಲ್ಲ. ಇದನ್ನು ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಆಗ್ರಹ ಮಾಡುತ್ತೇನೆ.

**ಶ್ರೀ ಸಿ.ಪಿ. ಯೋಗೇಶ್ವರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ರಮೇಶಗೌಡರು ಪ್ರವಾಸೋದ್ಯಮದ ಬಗ್ಗೆ ಬಹಳ ವಿಚಾರವನ್ನಿಟ್ಟುಕೊಂಡು, ನಿರೀಕ್ಷೆಯನ್ನಿಟ್ಟುಕೊಂಡಿದ್ದಾರೆ. ಅವರ ನಿರೀಕ್ಷೆಗೆ ತಕ್ಕಂತೆ ಸರ್ಕಾರ ಕೆಲಸ ಮಾಡುತ್ತಿದೆ. ಪ್ರವಾಸಕ್ಕೆ ಸಂಬಂಧಪಟ್ಟಂತೆ ಅವರ ಎಲ್ಲಾ ಆಶೋತ್ತರಗಳನ್ನು ಈಡೇರಿಸುತ್ತೇವೆ. ಅವರು ನಂದಿಬೆಟ್ಟಕ್ಕೆ ರೋಪ್–ವೇ ವಿಚಾರವನ್ನು ಹೇಳಿದರು. ಈಗಾಗಲೇ ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಮುಂದಿನ ದಿನಗಳಲ್ಲಿ ಮಾನ್ಯ ರಮೇಶಗೌಡರನ್ನು ಕರೆದುಕೊಂಡು ಹೋಗಿ ಆ ರೋಪ್–ವೇನಲ್ಲಿ ಕೂರಿಸಿ ನಂದಿಬೆಟ್ಟವನ್ನು ಪ್ರದಕ್ಷಿಣೆ ಮಾಡುವಂತಹ ಕಾಲವೂ ಬರುತ್ತದೆ. ನಮ್ಮ ಇಲಾಖೆಯಲ್ಲಿ ಬಹಳ ವಿನೂತನವಾದಂತಹ ಹತ್ತು ಹಲವಾರು ಯೋಜನೆಗಳಿಗೆ ಕಾರ್ಯಕ್ರಮವನ್ನು ರೂಪಿಸುತ್ತಿದ್ದೇವೆ. ಅದಕ್ಕೆ ಸ್ವಲ್ಪ ಕಾಲಾವಕಾಶ ಕೊಡಬೇಕು. ಮುಂದಿನ ದಿನಗಳಲ್ಲಿ ಮಾನ್ಯ ರಮೇಶಗೌಡರ ಆಶಯದಂತೆ; ನಿಜ, ಅವರು ಹೇಳುವ ಪ್ರಕಾರ ಕರ್ನಾಟಕ ಪ್ರವಾಸೋದ್ಯಮಕ್ಕೆ ಹೇಳಿ ಮಾಡಿಸಿದಂತಹ ಹಲವಾರು ಪಾರಂಪರಿಕ ಕಟ್ಟಡಗಳು, 320 ಕಿ.ಮೀ., ಸಮುದ್ರದ ಕಿನಾರೆ, ಬಹಳ ಉತ್ಕೃಷ್ಟವಾದಂತಹ, ಪ್ರವಾಸಿಗರಿಗೆ ಹೇಳಿ ಮಾಡಿಸಿದ್ದಂತಹ ಜಾಗ ಕರ್ನಾಟಕ. ನಮ್ಮ ಇಲಾಖೆ ಬಹಳ ಕಷ್ಟದಿಂದ ಈಗ ಒಂದಷ್ಟು ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಕೂಡ ಈ ಸಲ ಬಜೆಟ್‌ನಲ್ಲಿ ಹೆಚ್ಚಿಗೆ ಹಣವನ್ನು ಒದಗಿಸಿದ್ದಾರೆ. ಮುಂದಿನ ದಿನಗಳಲ್ಲಿ ವಿನೂತನವಾದಂತಹ ಕಾರ್ಯಕ್ರಮಗಳನ್ನು ಮಾಡುತ್ತೇವೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ರಮೇಶಗೌಡರನ್ನು ಕರೆದುಕೊಂಡು ಹೋಗುವಾಗ ಸ್ವಲ್ಪ ಹುಷಾರಾಗಿ ಹೋಗಿ.

**ಶ್ರೀ ಹೆಚ್.ಎಂ. ರಮೇಶಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ವಿವರವಾಗಿ ಉತ್ತರ ಹೇಳಿದ್ದಾರೆ.

**ಶ್ರೀ ಎಸ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶಗೌಡರು ಆ ರೋಪ್-ವೇ ಇಂದ ಜಿಗಿದುಬಿಡುತ್ತಾರೆ.

**ಶ್ರೀ ಹೆಚ್.ಎಂ. ರಮೇಶಗೌಡ:-** ಮಾನ್ಯ ಸಭಾಪತಿಯವರೇ, ನಾನು ನಂದಿಬೆಟ್ಟವನ್ನು ಪ್ರಸ್ತಾಪ ಮಾಡಿದೆ. ಅವರ ಪಕ್ಕದಲ್ಲಿಯೇ ಕುಳಿತಿರುವಂತಹ ಮಂತ್ರಿಗಳು ಅದೇ ಜಿಲ್ಲೆಯಿಂದ ಬಂದಿರುವವರೆಂದು ಗೊತ್ತಿದೆ. ಏಕೆಂದರೆ, ಮಾನ್ಯ ಸಚಿವರು ಬಜೆಟ್‌ನಲ್ಲಿ ಈಗಾಗಲೇ ಹಣವನ್ನು ಇಟ್ಟಿದ್ದೇವೆ ಎಂದು ಹೇಳಿದರು. ಆದರೆ ನಮ್ಮ ರಾಜ್ಯದ ಬಜೆಟ್ ಅಂದಾಜು 2,46,207 ಕೋಟಿ ರೂಪಾಯಿಗಳು. ಇದರಲ್ಲಿ ಪ್ರವಾಸೋದ್ಯಮಕ್ಕೆ ಅಲ್ಪಸ್ವಲ್ಪ ಕೊಡುತ್ತಾರೆ. ಅದು ಸಹ ಅನುಷ್ಠಾನವಾಗುವುದಿಲ್ಲ. ಹಿಂದೆ ಕೂಡ ಬಜೆಟ್‌ನಲ್ಲಿ ಈ ಇಲಾಖೆಗೆ ವಿನಿಯೋಗ ಮಾಡಿದ ಹಣ ಅನುಷ್ಠಾನವಾಗಿಲ್ಲ. ಅದರ ಬಗ್ಗೆ ನಾನು ಕಳೆದ ವರ್ಷ ಸಹ ಕೇಳಿದ್ದೆ, ಈ ವರ್ಷವೂ ಸಹ ಅದೇ ಪರಿಸ್ಥಿತಿಯಾಗಿದೆ. ಏಕೆಂದರೆ, ಎಲ್ಲದಕ್ಕೂ 'ಕೋವಿಡ್-19' ಎಂದು ಹೇಳುತ್ತಾರೆ. ಆದರೆ ಎಷ್ಟು ಮಾತನಾಡಿದರೂ ಅಷ್ಟೇ. ನಮ್ಮ ರಾಜ್ಯವು ಪ್ರವಾಸೋದ್ಯಮಕ್ಕೆ ಬಹಳ ಅತ್ಯುತ್ತಮವಾದಂತಹ ಒಂದು ರಾಜ್ಯವಾಗಿದೆ. ನಮ್ಮಲ್ಲಿ ನಿರುದ್ಯೋಗದ ಸಮಸ್ಯೆ ಯಾವ ರೀತಿ ಇದೆಯೆಂದು ಎಲ್ಲರಿಗೂ ಸಹ ಗೊತ್ತಿದೆ. ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, ಪ್ರವಾಸೋದ್ಯಮಕ್ಕೆ ಸರಿಯಾದ ರೀತಿಯಲ್ಲಿ ಉತ್ತೇಜನ ಕೊಟ್ಟು, ನಮ್ಮ ರಾಜ್ಯವನ್ನು ಸರಿಯಾದ ರೀತಿಯಲ್ಲಿ ಅಭಿವೃದ್ಧಿಗೆ ತೆಗೆದುಕೊಂಡು ಹೋದರೆ, ಒಂದೊಂದು ಜಿಲ್ಲೆಯಲ್ಲಿ ಕನಿಷ್ಟ ಪಕ್ಷ 500 ರಿಂದ 1000 ಜನರಿಗೆ ಉದ್ಯೋಗವನ್ನು ಕೊಡಬಹುದು. ಹಾಗಾಗಿ ಇದರ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಆಗ್ರಹ ವ್ಯಕ್ತಪಡಿಸುತ್ತೇನೆ.

**ಶ್ರೀ ಸಿ.ಪಿ. ಯೋಗೇಶ್ವರ:-** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶಗೌಡರ ಕಳಕಳಿ ಅರ್ಥವಾಗುತ್ತದೆ. ನಮ್ಮ ಇಲಾಖೆ ಈಗಾಗಲೇ ಬಹಳ aggressive ಆಗಿ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಬಹಳ ಕ್ರಿಯಾಶೀಲವಾಗಿ ಕೆಲಸ ಮಾಡುತ್ತೇವೆ. ನಿಜ, ಪ್ರವಾಸೋದ್ಯಮಕ್ಕೆ ಹೆಚ್ಚಿಗೆ ಒತ್ತು ಕೊಡಬೇಕಾಗಿತ್ತು. ಹಿಂದೆ ಬಹಳಷ್ಟು ಸರ್ಕಾರಗಳು ಅದಕ್ಕೆ ಹೆಚ್ಚಿಗೆ ಒತ್ತು ಕೊಟ್ಟಿಲ್ಲ. ಹಣವನ್ನು ಕೂಡ ವಿನಿಯೋಗ ಮಾಡುವುದಕ್ಕೆ ಆಗಲಿಲ್ಲ. ಮುಂದಿನ ದಿನಗಳಲ್ಲಿ ನಾವು ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಶಾಂತಾರಾಮ್‌ರವರೇ, ತಮ್ಮ ಪ್ರಶ್ನೆ ಸಂಖ್ಯೆ:1762ಕ್ಕೆ ಉತ್ತರ ಬಂದಿಲ್ಲದಿರುವುದರಿಂದ ತಮ್ಮ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳಲಾಗುವುದು. ಈಗ ಶ್ರೀ ಆರ್.ಬಿ. ತಿಮ್ಮಾಪೂರ, ಪ್ರಶ್ನೆ ಸಂಖ್ಯೆ: 1725, ಅವರು ಬಂದಿಲ್ಲ. ಈಗ ಮಾನ್ಯ ನಸೀರ್ ಅಹಮ್ಮದ್‌ರವರ ಪ್ರಶ್ನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ನಸೀರ್ ಅಹಮ್ಮದ್:–** ಮಾನ್ಯ ಸಭಾಪತಿಯವರೇ, ನನ್ನ ಮುಂದಿರುವಂತಹ ಪ್ರಶ್ನೆ ಸಂಖ್ಯೆ:1843ಕ್ಕೆ ಆರೋಗ್ಯ ಸಚಿವರಾದಂತಹ ಡಾ॥ ಕೆ. ಸುಧಾಕರ್‌ರವರು ಉತ್ತರ ಕೊಡಬೇಕಾದುದು. ನಮ್ಮ ಶಾಸಕಾಂಗ ಪಕ್ಷದಲ್ಲಿ ಆರು ಜನ ಸಚಿವರಿಗೆ ಪ್ರಶ್ನೆಯನ್ನು ಕೇಳಬಾರದೆಂದು ತೀರ್ಮಾನ ಮಾಡಿದ್ದೇವೆ. ಆದ್ದರಿಂದ ಪ್ರಶ್ನೆ ಕೇಳುವುದಿಲ್ಲ.

**ಸಭಾಪತಿಯವರು:–** ಈಗ ಶ್ರೀ ಯು.ಬಿ. ವೆಂಕಟೇಶ್‌ರವರ ಪ್ರಶ್ನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಪ್ರಶ್ನೆ ಸಂಖ್ಯೆ: 1820**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಆನ್‌ಲೈನ್ ಶಿಕ್ಷಣದಿಂದ ಮಕ್ಕಳಿಗೆ ದೃಷ್ಟಿದೋಷವಾಗುತ್ತದೆ ಎಂದು ಒಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು 'ನಿಮ್ಹಾನ್ಸ್'ನಲ್ಲಿ ಚರ್ಚೆ ಮಾಡಿದ್ದೇವೆ, ಅದರ ಪ್ರಕಾರ ಮಾಡುತ್ತೇವೆ ಎಂದು ಉತ್ತರ ಕೊಟ್ಟಿದ್ದಾರೆ. ಆಮೇಲೆ ಯಾವ ಯಾವ ತರಗತಿಗೆ ಎಷ್ಟು ಸಮಯ ತೆಗೆದುಕೊಳ್ಳುತ್ತಾರೆ ಎಂದು ಪ್ರಶ್ನೆ ಕೇಳಿದ್ದೆ. ಈ ರಾಜ್ಯದಲ್ಲಿ ಆನ್‌ಲೈನ್ ತರಗತಿಗಳು ಪ್ರಾರಂಭವಾದ ಮೇಲೆ ಮಕ್ಕಳಲ್ಲಿ ಕಣ್ಣುಗುಡ್ಡೆಯ ಅನೇಕ ಪ್ರಕರಣಗಳ ಬಗ್ಗೆ ವರದಿ ಮಾಡುತ್ತಿದ್ದಾರೆ. ಪ್ರಕರಣಗಳು ಹೆಚ್ಚುತ್ತಿವೆ ಎಂದು NIMHANS ತಜ್ಞರೊಂದಿಗಿನ ಸಮಾಲೋಚನೆಯಿಂದಲೂ ಪತ್ತೆಯಾಗಿದೆ. ದೃಷ್ಟಿದೋಷ ಮಸುಕಾಗುವುದು, ಒಣಗಿದ ಕಣ್ಣುಗಳು ಈ ರೀತಿಯ ಪ್ರಕರಣಗಳು ವರದಿಯಾಗುತ್ತಿವೆ. 'ಮಿಂಟೋ' ಆಸ್ಪತ್ರೆ ಪ್ರಕಾರ 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಸಾವಿರಾರು ಮಕ್ಕಳು ವೈದ್ಯರನ್ನು ಸಂಪರ್ಕಿಸಿದ್ದಾರೆ. ಅವರಲ್ಲಿ ಪ್ರತಿಶತ 60ರಷ್ಟು ಒತ್ತಡವು ಕಣ್ಣಿನ ಶಕ್ತಿಯನ್ನು ಕಡಿಮೆ ಮಾಡಲು ಕಾರಣವಾಗಿವೆ. ಡಿಜಿಟಲ್ ಪರದೆಯ ಮೇಲೆ ಅಂಟಿಕೊಂಡಿರುವಾಗ ಕಣ್ಣುರೆಪ್ಪೆಯನ್ನು ಹೊಡೆಯುವುದಕ್ಕಾಗುವುದಿಲ್ಲ. ಅದನ್ನು ನೋಡುತ್ತಲೇ ಇರುತ್ತಾರೆ. ಅದರಿಂದ ತೇವಾಂಶ ಬರುವುದಿಲ್ಲ. ಇದರಿಂದ ಮಕ್ಕಳಿಗೆ ಬಹಳ ಕಷ್ಟವಾಗುತ್ತಿದೆ. ಆನ್‌ಲೈನ್ ಶಿಕ್ಷಣ ಬಂದ ಮೇಲೆ ವಿದ್ಯಾಭ್ಯಾಸದ consistency ಯೇ ಹೋಗಿಬಿಟ್ಟಿದೆ. ಮಾತೆತ್ತಿದರೆ 'ಕೋವಿಡ್'ಗೋಸ್ಕರ ಎನ್ನುತ್ತಾರೆ. ಆದರೆ ಕೆಲವು ಕಡೆ ಕೆಲವು ಸಮಯ ಇಂಟರ್‌ನೆಟ್ ಇರುವುದಿಲ್ಲ, ಅದು ಬಂದಾಗ ಮಾತ್ರ ನೋಡಬೇಕು, ಬಾಕಿ ವೇಳೆಯಲ್ಲಿ ಮುಚ್ಚಿರುತ್ತಾರೆ. ಇರುವ ಕಡೆ ನೋಡಿದರೆ ಕಣ್ಣು ಮುಚ್ಚುವುದಕ್ಕಾಗುವುದಿಲ್ಲ, ಕಣ್ಣನ್ನು ಮಿಟುಕಿಸದೇ ನೋಡಬೇಕು. ವೈದ್ಯರುಗಳ ಪ್ರಕಾರ ಕಣ್ಣಿನಲ್ಲಿ ತೇಂವಾಂಶ ಕಡಿಮೆಯಾಗುತ್ತದೆ. 'ಮಿಂಟೋ' ಆಸ್ಪತ್ರೆಗೆ ಸಾವಿರಾರು ಮಕ್ಕಳು ಹೋಗಿದ್ದಾರೆ. ಇಷ್ಟಕ್ಕೂ 01 ಕೋಟಿ 23 ಲಕ್ಷಕ್ಕೆ ಇರುವುದು ಒಂದೆರಡು ಆಸ್ಪತ್ರೆಗಳು.

**ಸಭಾಪತಿಯವರು:-** ಮಾನ್ಯ ವೆಂಕಟೇಶ್‌ರವರೇ, ಏನು ಮಾಡಬೇಕೆಂದು ಹೇಳಿ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅದನ್ನು ಸರ್ಕಾರ ಹೇಳಬೇಕು. ಮಕ್ಕಳಿಗೆ ತೊಂದರೆಯಾಗುತ್ತಿದೆ ಎಂದು ನಾನು ಅವರಿಗೆ ಪ್ರಶ್ನೆ ಕೇಳುತ್ತಿದ್ದೇನೆ. ಒಂದೋ ಎರಡೋ ಸರ್ಕಾರಿ ಆಸ್ಪತ್ರೆಗಳಿವೆ, ಎಲ್ಲರೂ ಪ್ರೈವೇಟ್ ಆಸ್ಪತ್ರೆಗೆ ಹೋಗುತ್ತಾರೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎಸ್. ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಆಸ್ಪತ್ರೆಗಳನ್ನು ಹೆಚ್ಚು ಮಾಡುವ ಕಾರ್ಯಕ್ಕೆ ಆರೋಗ್ಯ ಸಚಿವರಿಂದ ಉತ್ತರ ಕೊಡಿಸುತ್ತೇನೆ. ನಾನು ಕೇವಲ ಆನ್‌ಲೈನ್ ಶಿಕ್ಷಣ ಮತ್ತು ಮಕ್ಕಳ ಬಗ್ಗೆ ಮಾತ್ರ ಮಾತನಾಡುತ್ತೇನೆ.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಚಿವರೇ, ಆನ್‌ಲೈನ್ ಶಿಕ್ಷಣ ಮಾಡುವಾಗ ಮಕ್ಕಳಿಗೆ ತೊಂದರೆಯಾಗುತ್ತಿದೆ. ನೀವು ಆರೋಗ್ಯ ಸಚಿವರಲ್ಲಿ ಮಾತನಾಡಿ ಅದನ್ನೂ ಸರಿ ಮಾಡಿಕೊಡಬೇಕು.

**ಶ್ರೀ ಎಸ್. ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ನಾನು ಉತ್ತರ ಕೊಡುತ್ತೇನೆ.

**ಶ್ರೀ ಯು.ಬಿ. ವೆಂಕಟೇಶ್:–** ನಿಮ್ಮ ಇಲಾಖೆಗೆ ಬಂದು ನಮ್ಮ ಕಣ್ಣಿಗೆ ಹೋದರೆ ನಾವೇನು ಮಾಡಬೇಕು?

**ಶ್ರೀ ಎಸ್. ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಅದಕ್ಕೆ ನಾನೀಗ ಉತ್ತರ ಕೊಡುತ್ತೇನೆ. ಮಾನ್ಯ ಸದಸ್ಯರಾದ ಯು.ಬಿ. ವೆಂಕಟೇಶ್‌ರವರು ಕೇಳಿರುವುದು ಬಹಳ ಮಹತ್ವವಾದ ಪ್ರಶ್ನೆಯಾಗಿದೆ. ಕೋವಿಡ್ ಪ್ರಾರಂಭವಾದ ಮೇಲೆ ಆನ್‌ಲೈನ್ ಶಿಕ್ಷಣ ಎನ್ನುವುದು ಬಹಳ ದೊಡ್ಡ ಚರ್ಚೆಯಲ್ಲಿರುವ ಸುದ್ದಿಯಾಗಿದೆ. ಕಳೆದ ಜೂನ್ ತಿಂಗಳಿನಿಂದ ಆನ್‌ಲೈನ್ ಶಿಕ್ಷಣ ಎನ್ನುವುದು ಪ್ರಾರಂಭವಾಯಿತು. ಜೂನ್ ತಿಂಗಳ ಹೊತ್ತಿಗೆ ನನಗೆ ಬಹಳಷ್ಟು ಪೋಷಕರಿಂದ ಆನ್‌ಲೈನ್ ಶಿಕ್ಷಣದಿಂದ ತುಂಬಾ ತೊಂದರೆಯಾಗುತ್ತಿದೆ ಎಂಬ ದೂರು ಬಂತು. ಬಹಳ ದುಃಖದ ಸಮಾಚಾರವೇನೆಂದರೆ, ಎಲ್.ಕೆ.ಜಿ., ಯು.ಕೆ.ಜಿ., ಮಕ್ಕಳಿಗೂ ಆನ್‌ಲೈನ್ ಶಿಕ್ಷಣ ಇದೆ. ಎಲ್.ಕೆ.ಜಿ., ಯು.ಕೆ.ಜಿ., ಮಕ್ಕಳು ಆಟವಾಡುವಂತಹ ವಯಸ್ಸದು. ಅವರಿಗೆ ಆನ್‌ಲೈನ್ ಶಿಕ್ಷಣ ಎನ್ನುವುದು ನಿಜವಾಗಿಯೂ ನನಗೆ ಬೇಸರವಾಯಿತು. ಆಗ ಸರ್ಕಾರ ಒಂದು ನಿರ್ಧಾರ ತೆಗೆದುಕೊಂಡು, ದಯವಿಟ್ಟು ಎಲ್.ಕೆ.ಜಿ., ಇಂದ 5ನೇ ತರಗತಿಯವರೆಗೂ ಆನ್‌ಲೈನ್ ಶಿಕ್ಷಣ ಬೇಡ, ಏನಾದರೂ ಇದ್ದರೆ pre-recorded video ತರಿಸಿ ಅದನ್ನು ಯಾವಾಗಲಾದರೂ ಬಿಡುವಿದ್ದಾಗ ತಂದೆ-ತಾಯಿಯರಿದ್ದಾಗ ನೋಡಿಕೊಳ್ಳುತ್ತಾರೆ ಎಂದು ಒಂದು ನಿರ್ಣಯ ಮಾಡಿದೆವು.

**(ಮುಂದು)**

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(533) 22-03-2021/ 12-50/ ಕೆಹೆಚ್-ವಿಕೆ (ಎಂಡಿ)**

**ಶ್ರೀ ಎಸ್.ಸುರೇಶ್ ಕುಮಾರ್ (ಮುಂದು):-**

ಮಾನ್ಯ ಗೌರವಾನ್ವಿತ ಉಚ್ಚ ನ್ಯಾಯಾಲಯ ನಮ್ಮ ಆದೇಶಕ್ಕೆ ತಡೆಯಾಜ್ಞೆ ಕೊಟ್ಟು, online education is a fundamental right of a child of any level ಎಂದು ಕೊಟ್ಟಿದೆ. ಅಷ್ಟರ ಹೊತ್ತಿಗೆ ನಾವು ತಜ್ಞರ ಸಮಿತಿಯನ್ನು ರಚನೆ ಮಾಡಿದ್ದೆವು. ರಾಷ್ಟ್ರೀಯ ಶಿಕ್ಷಣ ನೀತಿಯ ಸಮಿತಿಯಲ್ಲಿ ಪ್ರೋಫೆಸರ್ ಎಂ.ಕೆ.ಶ್ರೀಧರ್ ಎನ್ನುವವರು ಇದ್ದು, ಇವರ ಅಧ್ಯಕ್ಷತೆಯಲ್ಲಿ ನಿಮ್ಹಾನ್ಸ್ ಆಸ್ಪತ್ರೆಯ Child Psychiatrist ರನ್ನು ಸೇರಿಸಿ ಈ ಸಮಿತಿಯನ್ನು ರಚನೆ ಮಾಡಿದ್ದೆವು. ಅವರ ಒಂದು ವರದಿಯ ಪ್ರಕಾರ ಯಾವ್ಯಾವ ತರಗತಿಗೆ ಎಷ್ಟೆಷ್ಟು screen time ಇರಬೇಕೆಂದು ಕೊಟ್ಟಿದ್ದಾರೆ. ದುರಾದೃಷ್ಟವಶಾತ್, ಇವತ್ತು ನಾವು ಮಕ್ಕಳನ್ನು ಕೇಳಿದರೆ 2 ರಿಂದ 3 ಗಂಟೆಗಳ ಕಾಲ ಆನ್‌ಲೈನ್ ಶಿಕ್ಷಣವನ್ನು ಕೊಡುತ್ತಿದ್ದಾರೆ ಎಂದು ಹೇಳುತ್ತಾರೆ. ನಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೋದಾಗ ಮತ್ತೊಮ್ಮೆ ಇವರು ಉಚ್ಚ ನ್ಯಾಯಾಲಯಕ್ಕೆ ಹೋಗಿ ನಮ್ಮ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ ಎಂದು ಹೇಳುತ್ತಾರೆ. ಈಗಲೂ ಇದು ನಡೆಯುತ್ತಿದೆ. ಮಾನ್ಯ ಯು.ಬಿ.ವೆಂಕಟೇಶ್‌ರವರು ಏನು ಪ್ರಶ್ನೆಯನ್ನು ಕೇಳಿದ್ದಾರೆ. ಇದಕ್ಕೆ ಇಡೀ ಸದನ ಮಾತ್ರವಲ್ಲ. ಇಡೀ ರಾಜ್ಯ ಇದರ ಬಗ್ಗೆ ಗಮನ ಕೊಡಬೇಕಾದಂತಹ ವಿಚಾರವಾಗಿದೆ. ಏಕೆಂದರೆ, ಆ ಮಕ್ಕಳ ಕಣ್ಣಿನ ಮೇಲೆ ನಾವು ಏನು ಮಾಡುವುದಕ್ಕೆ ಹೊರಟಿದ್ದೇವೆ. ತದನಂತರ ಬೇರೆ ಸಮಸ್ಯೆಗಳು ಯಾವ ರೀತಿ ಬರುತ್ತದೆ ಎಂದು ನಮಗೆ ಗೊತ್ತಿದೆ. ಆ ನಿಟ್ಟಿನಲ್ಲಿ ಸರ್ಕಾರ ಖಂಡಿತವಾಗಿಯೂ ಏನು ಆದೇಶ ಕೊಟ್ಟಿದೆಯೋ, ಅದನ್ನು ಪಾಲನೆ ಮಾಡುವುದಕ್ಕೆ ಕ್ರಮವಹಿಸುತ್ತೇವೆ. ಇದಕ್ಕೆ ಅರ್ಧ ಗಂಟೆ, 45 ನಿಮಿಷ ಎಂದು tried-tested ಸಮಯವನ್ನು ಕೊಟ್ಟಿದ್ದೇವೆ. 10 ನಿಮಿಷಗಳ ಕಾಲ ವಿರಾಮವನ್ನು ಕೊಡಬೇಕು. ಮಕ್ಕಳ ತಂದೆ-ತಾಯಿಗಳು ಇದ್ದಾಗ ಎಲ್.ಕೆ.ಜಿ., ಯಿಂದ 3ನೇ ತರಗತಿಯವರೆಗೂ ಈ ರೀತಿ ಕೊಡಬೇಕೆಂದು ಹೇಳಿದ್ದೇವೆ. ಆ ಬಗ್ಗೆ ಸರ್ಕಾರಕ್ಕೆ ಗಾಂಭೀರ್ಯತೆ ಇದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಸರಿ. ಆದರೆ, ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಕಣ್ಣಿನ ವೈದ್ಯರುಗಳು ಇಲ್ಲ. ಆ ಮಕ್ಕಳು ಏನು ಮಾಡಬೇಕು. ಆನ್‌ಲೈನ್ ಶಿಕ್ಷಣದಿಂದ ಮಕ್ಕಳಿಗೆ ದೃಷ್ಟಿದೋಷ ಉಂಟಾದರೆ ಏನು ಮಾಡಬೇಕು. ಈ ಮಕ್ಕಳಿಗೆ ಯಾವ ರೀತಿ ರಕ್ಷಣೆಯನ್ನು ಕೊಡುತ್ತಾರೆ. ಜಿಲ್ಲಾವಾರುಗಳಲ್ಲಿ ಆಪ್ತ ಸಮಾಲೋಚನೆ ಸಭೆಗಳನ್ನು ಮಾಡಿ, ಇದಕ್ಕೆ ಏನಾದರೂ ಕ್ರಮವನ್ನು ತೆಗೆದುಕೊಳ್ಳಬೇಕಲ್ಲವೇ?

**ಸಭಾಪತಿಯವರು:–** ಮಾನ್ಯ ಎಸ್.ಸುರೇಶ್ ಕುಮಾರ್‌ರವರೇ, ಇದಕ್ಕೆ ಏನಾದರೂ ವ್ಯವಸ್ಥೆಯನ್ನು ಮಾಡಿ.

**ಶ್ರೀ ಎಸ್.ಸುರೇಶ್ ಕುಮಾರ್:–** ಮಾನ್ಯ ಯು.ಬಿ.ವೆಂಕಟೇಶ್‌ರವರು ಹೇಳಿದ ಹಾಗೆ ಆಪ್ತ ಸಮಲೋಚನೆ ಸಭೆಗಳನ್ನು ಮಾಡಬೇಕು. ಮಾನ್ಯ ಆರೋಗ್ಯ ಸಚಿವರ ಜೊತೆ ಕುಳಿತುಕೊಂಡು ಚರ್ಚೆ ಮಾಡುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಚಿವರೇ, ಇದನ್ನು ಆದಷ್ಟು ಬೇಗ ಮಾಡಿಸಿಕೊಡಿ.

**ತಡೆ ಹಿಡಿಯಲಾದ ಪ್ರಶ್ನೆಗಳು**

**ಪ್ರಶ್ನೆ ಸಂಖ್ಯೆ: 476**

**ಶ್ರೀ ಎಸ್.ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಮುಂದಿನ ವಾರ ಉತ್ತರವನ್ನು ಒದಗಿಸುತ್ತೇನೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಆಯಿತು.

**ಸಭಾಪತಿಯವರು:–** ಮಾನ್ಯ ಸಚಿವರೇ, ಮುಂದಿನ ವಾರ ಉತ್ತರವನ್ನು ಕೊಡುತ್ತೀರಲ್ಲವೇ?

**ಶ್ರೀ ಎಸ್.ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಮುಂದಿನ ವಾರ ಉತ್ತರವನ್ನು ಕೊಡುತ್ತೇನೆ.

**ಪ್ರಶ್ನೆ ಸಂಖ್ಯೆ: 976**

**ಸಭಾಪತಿಯವರು:–** ಮಾನ್ಯ ತಳವಾರ ಸಾಬಣ್ಣನವರೇ, ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ, ಮುಂದಿನ ವಾರ ತಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಅರಣ್ಯ ಸಚಿವರು ಸದನದಲ್ಲಿ ಇಲ್ಲ.

**ಸಭಾಪತಿಯವರು:–** ಮಾನ್ಯ ಎನ್.ಅಪ್ಪಾಜಿಗೌಡರವರೇ, ತಾವು ಪ್ರಶ್ನೆಯನ್ನು ಕೇಳಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1286+1083**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದಂತಹ ಪ್ರಶ್ನೆಯಾಗಿದೆ. ಕಳೆದ 3 ಅಧಿವೇಶನದಲ್ಲಿಯೂ ಕೂಡ ಈ ಪ್ರಶ್ನೆಯನ್ನು ಕೇಳಿದ್ದೇನೆ. ಈ ಪ್ರಶ್ನೆ ದಿನಾಂಕ:07–12–2020 ರಲ್ಲಿಯೂ ಬಂದಿತ್ತು. ಇದರ ಜೊತೆಗೆ ಕಳೆದ ವಾರ ಕೂಡ ಕೇಳಿದ್ದೇನೆ. ಇದಕ್ಕೆ ಮಾನ್ಯ ಅರಣ್ಯ ಸಚಿವರು ಸಮಯವನ್ನು ತೆಗೆದುಕೊಂಡಿದ್ದರು. 'ಉಪ ವಲಯ ಅರಣ್ಯಾಧಿಕಾರಿಗಳ ರಾಜ್ಯ ಮಟ್ಟದ ಸಂಯೋಜಿತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಪಡೆದಿರುವ ಅಭಿಪ್ರಾಯದಂತೆ ಸಂಯೋಜಿತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ ಅಂತಿಮಗೊಳಿಸಲಾಗಿದೆಯೇ? ಇಲ್ಲದಿದ್ದಲ್ಲಿ ಕಾರಣಗಳೇನು; ಯಾವ ಕಾಲಮಿತಿಯೊಳಗೆ ಪರಿಷ್ಕೃತ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗುವುದು' ಎಂದು ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳಿದ್ದೇನೆ. ಇದಕ್ಕೆ ಮಾನ್ಯ ಸಚಿವರು 'ಉಪ ವಲಯ ಅರಣ್ಯಾಧಿಕಾರಿಗಳ ರಾಜ್ಯ ಮಟ್ಟದ ಸಂಯೋಜಿತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಪಡೆದಿದ್ದ ಅಭಿಪ್ರಾಯ ಕರ್ನಾಟಕ ಸಿವಿಲ್ ಸೇವಾ (ಜೇಷ್ಠತಾ) ನಿಯಮಗಳು, 1957ರ ನಿಯಮಗಳನ್ವಯ ಸ್ಪಷ್ಟತೆ ಇಲ್ಲದೇ ಸ್ಪಷ್ಟ ಮತ್ತು ನಿಖರ ಅಭಿಪ್ರಾಯ ನೀಡುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯನ್ನು ಕೋರಲಾಗಿದ್ದು, ಸದರಿ ಅಭಿಪ್ರಾಯ ಪಡೆದ ನಂತರ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು' ಎಂದು ಉತ್ತರವನ್ನು ಕೊಟ್ಟಿದ್ದಾರೆ. ಡಿ.ಪಿ.ಎ.ಆರ್., ಮತ್ತು ಕೆ.ಎ.ಟಿ., ಯಿಂದ ಇವರಿಗೆ ಯಾವುದೇ ಸ್ಪಷ್ಟ ಉತ್ತರ ಇಲ್ಲದೇ ಇದ್ದರೂ ಕೂಡ, ಇದರಲ್ಲಿ ನನ್ನ ಮೂಲಭೂತ ಪ್ರಶ್ನೆಯೇನೆಂದರೆ, ಇವರು ಪ್ರಮೋಷನ್ ಅನ್ನು ಏಕೆ ಕೊಟ್ಟಿದ್ದಾರೆ? ಇವರ ಅಧಿಕಾರಿಗಳಿಗೆ ತೊಂದರೆಯಾಗಿದೆ ಎನ್ನುವಂತಹ ಪ್ರಶ್ನೆ ಇದು. ನಾನು ತಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಬಹಳ ಹಿಂದೆ ಇದ್ದಂತಹ ಮಾನ್ಯ ಸಚಿವರ ಹತ್ತಿರ ಈ ಪ್ರಶ್ನೆಯನ್ನು ಕೇಳಿದಾಗ ಸುಮಾರು ವರ್ಷಗಳಿಂದ ಇದು ನೆನೆಗುದಿಗೆ ಬಿದ್ದಿತ್ತು. ಸುಮಾರು 3–4 ವರ್ಷಗಳಿಂದ ಮುಕ್ತಾಯಗೊಳ್ಳುತ್ತಲೇ ಇರಲಿಲ್ಲ. ಮಾನ್ಯ ಆನಂದ್‌ಸಿಂಗ್‌ರವರು ಮಂತ್ರಿಯಾಗಿದ್ದಾಗ ನಡೆದಿರುವುದು. ಹಿಂದೆ ಇದ್ದ ನನ್ನ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು amalgamation ಪ್ರಕಾರ ಏಕ ಪಟ್ಟಿ ಮಾಡಿ, ಅದನ್ನು ಘೋಷಣೆ ಮಾಡಿ ಎನ್ನುವುದು ತಮ್ಮ ಅಗ್ರಹವಾಗಿದೆ. ಇದಕ್ಕೆ ಸಮಯ ಕಡಿಮೆ ಇದ್ದು, ಇದರ ಬಗ್ಗೆ ಮಾಹಿತಿಯನ್ನು ತೆಗೆದುಕೊಂಡಿದ್ದೇನೆ. ತಾವು ಕೇಳಿರುವ ಪ್ರಶ್ನೆಗೆ ಇದರಲ್ಲಿ ಸರಿಯಾಗಿ ಉತ್ತರವನ್ನು ತೋರಿಸಿರುವುದಿಲ್ಲ. ಅಧಿಕಾರಿಗಳು ನಮ್ಮನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಪ್ಪು ದಾರಿಗೆ ಎಳೆಯುತ್ತಿದ್ದಾರೆ ಎಂದು ತಾವು ಹೇಳುತ್ತಿರುವ ಅಂಶವು ಖಂಡಿತವಾಗಿಯೂ ನನ್ನ ಗಮನದಲ್ಲಿ ಇದೆ. ಹಾಗಾಗಿ amalgamation ಸಲುವಾಗಿ ಏಕ ಪಟ್ಟಿಯನ್ನು ಮಾಡಿ, ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ ಎಂದು ಈ ಸಭೆಯಲ್ಲಿ ಹೇಳಿರುವ ಅಂಶವನ್ನು ಹೇಳಲಿಚ್ಛಿಸುತ್ತೇನೆ. ಮಾನ್ಯ ಸಚಿವರೇ, amalgamation ಆದ ನಂತರ ತಾವು ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ ಎಂದು ಅವರು ಹೇಳಿದ್ದರು. ಅದಕ್ಕೆ ಅವರು ಖಂಡಿತವಾಗಿಯೂ ತಮ್ಮ ಪ್ರಶ್ನೆ ಅರ್ಥವಾಯಿತು. ತಮ್ಮೊಂದಿಗೆ ಚರ್ಚೆ ಮಾಡಿ ನಾನು ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ. ಏಕೆಂದರೆ, what you are questioning is your right and genuine point ಎಂದು ಹಿಂದೆ ಇದ್ದಂತಹ ಮಾನ್ಯ ಅರಣ್ಯ ಸಚಿವರು ಉತ್ತರವನ್ನು ಕೊಟ್ಟಿದ್ದರು. ಇಷ್ಟೆಲ್ಲಾ ಬೆಳವಣಿಗೆಯಾದ ನಂತರ ಏಕಾಏಕಿ ಈ ಒಂದು ಇಲಾಖೆಯವರು promotion ಏಕೆ ಕೊಟ್ಟಿದ್ದಾರೆ? ಇದು ನನ್ನ ದೊಡ್ಡ ಪ್ರಶ್ನೆಯಾಗಿದೆ. ಹಾಗಾಗಿ ಇದರ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ವಿರೋಧ ಇದೆ. ಇದರ ಬಗ್ಗೆ ವಿರೋಧ ಇದ್ದರೂ ಕೂಡ ಆತುರವಾಗಿ promotion ಕೊಡುವಂತಹ ಪ್ರಮೇಯ ಏನಿತ್ತು? ಎನ್ನುವುದು ನನ್ನ ಮೂಲಭೂತ ಪ್ರಶ್ನೆಯಾಗಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಬಹಳ ಮುಖ್ಯವಾಗಿ ಹಿಂದಿನ ಅರಣ್ಯ ಸಚಿವರು ಈ ಉತ್ತರವನ್ನು ಒಪ್ಪಿಕೊಂಡು, ಈ ನ್ಯೂನತೆಯನ್ನು ಸರಿಮಾಡುತ್ತೇನೆ ಎಂದು ಕೂಡ ಹೇಳಿದ್ದಾರೆ. ವಲಯ ಮಟ್ಟದ ಜೇಷ್ಠತಾ ಪಟ್ಟಿ ತಯಾರು ಮಾಡಿದ್ದಾರೆ. ಅದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. 4 ವಲಯದಲ್ಲಿ ಜೇಷ್ಠತಾ ಪಟ್ಟಿ ತಯಾರಾದ ಮೇಲೆ ಆ 4 ವಲಯಗಳನ್ನು ಕ್ರೋಢೀಕರಿಸಿ, ಕಾನೂನು ಪ್ರಕಾರ ರಾಜ್ಯದ ಜೇಷ್ಠತಾ ಪಟ್ಟಿಯನ್ನು ಮಾಡಬೇಕಾದಂತಹ ಕರ್ತವ್ಯ ಇದೆಯಲ್ಲವೇ, ವಲಯ ಮಟ್ಟದಲ್ಲಿ ಒಂದು ಬಾರಿ ಜೇಷ್ಠತಾ ಪಟ್ಟಿಯನ್ನು ತಯಾರು ಮಾಡಿದರೆ, ಅದನ್ನು ರಾಜ್ಯ ಮಟ್ಟಕ್ಕೆ ತಂದು, ರಾಜ್ಯ ಮಟ್ಟದಲ್ಲಿ ಅರ್ಹತಾ ಪಟ್ಟಿಯನ್ನು ಪ್ರಕಟ ಮಾಡಬೇಕು. ಇದನ್ನು ಮಾಡಲಿಲ್ಲ. ಇದಕ್ಕೆ ಕಾರಣವೇನು? ಇದನ್ನು ಮಾಡದೇ ಇರುವುದರಿಂದ ಅವ್ಯವಹಾರವಾಗಿದೆ. ಇದರ ಜೊತೆಗೆ ಯಾರಿಗೆ ನೂರಕ್ಕೆ ನೂರು ಜೇಷ್ಠತಾ ಪಟ್ಟಿಯಲ್ಲಿ ಅರ್ಹತೆ ಇದ್ದು, ಆಗಬೇಕಾಗಿದೆ, ಅವರಿಗೆ ಇದು ಆಗಲಿಲ್ಲ. ಅದರಲ್ಲಿ ನ್ಯೂನತೆ ಅಂಶ ಕಾಣುತ್ತದೆ. ನಾನು ಹೆಚ್ಚು ಬೆಳೆಸುವುದಕ್ಕೆ ಹೋಗುವುದಿಲ್ಲ. ಈ ಹಿಂದೆ ಇವರೇ ಒಪ್ಪಿಕೊಂಡಿದ್ದಾರೆ. ಇದರ ಜೊತೆಗೆ ನೆನೆಗುದಿಗೆ ಬಿದ್ದಿದೆ ಎಂದು ರಾತ್ರೋರಾತ್ರಿ ಏನಾದರೂ ತೀರ್ಮಾನ ಮಾಡುವಂತಹದ್ದು ಸರಿ ಕಾಣುವುದಿಲ್ಲ. ಇದು ನೆನೆಗುದಿಗೆ ಬಿದ್ದಿದೆ ಎಂದು ನಾವು ಒಪ್ಪುತ್ತೇವೆ. ನೆನೆಗುದಿಗೆ ಬಿದ್ದಿದೆ ಎಂದ ಮೇಲೆ ಇದನ್ನು ಕಾನೂನು ಪ್ರಕಾರ ಮಾಡುವಂತಹ ಅವಶ್ಯಕತೆ ಇದ್ದರೂ ಕೂಡ ಇವರು ಏಕೆ ಮಾಡಲಿಲ್ಲ? ಇವರು ಇನ್ನೊಂದು ತಾತ್ಕಲಿಕ ಹಂಗಾಮಿ ಪಟ್ಟಿ ಎಂದು ಉತ್ತರವನ್ನು ಕೊಟ್ಟಿದ್ದಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರೊಬೇಷನರಿ ಅವಧಿ ಮುಗಿಯುವವರೆಗೆ ಯಾವುದೇ ಜೇಷ್ಠತಾ ಪಟ್ಟಿ ಮಾಡಿದರೂ ಕೂಡ ಅದು ತಾತ್ಕಲಿಕ ಪಟ್ಟಿಯಾಗಿರುತ್ತದೆ. ಆದರೆ, ಇದರಲ್ಲಿ revoke ಮಾಡಬಹುದು ಎನ್ನುವ ಕಾರಣವನ್ನು ಉಚ್ಚ ನ್ಯಾಯಾಲಯಕ್ಕೆ ಕೊಡುತ್ತಿದ್ದಾರೆ. ಇದನ್ನು ಏಕೆ ಮಾಡಬೇಕು, anytime revoke ಮಾಡುವಂತಹ ಪ್ರಮೇಯವನ್ನು ಏಕೆ ನಿರ್ಮಾಣ ಮಾಡಬೇಕು? ದಯಮಾಡಿ, ಮಾನ್ಯ ಸಚಿವರೇ, ಇದರಲ್ಲಿ ನೂರಕ್ಕೆ ನೂರರಷ್ಟು ಅವ್ಯವಹಾರವಾಗಿದೆ. ಜೇಷ್ಠತಾ ಪಟ್ಟಿಯಲ್ಲಿ ಅರ್ಹ ಅಭ್ಯರ್ಥಿಗಳಿಗೆ ಅನ್ಯಾಯ ಮಾಡಿದ್ದಾರೆ. ಈಗಾಗಲೇ ಶ್ರೀಮತಿ ಪವಿತ್ರಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟು ವರದಿಯನ್ನು ಕೊಟ್ಟ ಮೇಲೂ ಕೂಡ, ಇಂತಹ ಒಂದು ಸದನದಲ್ಲಿ ಇದನ್ನು ಖಂಡನೆ ಮಾಡದೇ, ಇದರ ಜೊತೆಗೆ ಇದನ್ನು ಪುನರಾವರ್ತನೆ ರೀತಿಯಲ್ಲಿ ಮಾಡಿದರೆ ನಾವು ಸಮಾಜಕ್ಕೆ ಏನು ಉತ್ತರವನ್ನು ಕೊಡಬೇಕು. ಅರ್ಹತಾ ಪಟ್ಟಿಯಲ್ಲಿ ನಿಜವಾಗಿ ಅನ್ಯಾಯವಾಗಿರುವಂತಹದ್ದನ್ನು ನಾವು ಯಾವ ಕಾಲಕ್ಕೆ ಸರಿ ಮಾಡಬೇಕು? Again, you have asked them to go to court. ಯಾರಿಗೆ ಅನ್ಯಾಯವಾಗಿದೆಯೋ ಅವರು ಮತ್ತೆ ನ್ಯಾಯಾಲಯಕ್ಕೆ ಹೋಗಬೇಕೇ, ನಮ್ಮಲ್ಲಿ ಅವಕಾಶ ಇದ್ದಾಗ ಈ ಕೆಲಸವನ್ನು ಏಕೆ ಮಾಡಿಲ್ಲ? ದಯಮಾಡಿ, ಇದನ್ನು ಕಾನೂನು ಪ್ರಕಾರ ನಿಯಮ 32 ರಡಿಯಲ್ಲಿ ಮಾಡಬಹುದಾಗಿದೆಯಲ್ಲವೇ, ಅದನ್ನು justification ಮಾಡಿಕೊಳ್ಳುವುದಕ್ಕೆ ಹೋಗಬೇಡಿ. It is not correct. ಜೇಷ್ಠತಾ ಪಟ್ಟಿಯನ್ನು ಪ್ರಕಟಣೆ ಮಾಡದೇ ಇರುವಂತಹದ್ದು, ಅದರಲ್ಲಿ ತಾವು objection ಕೇಳಬೇಕು. ಆ ಅಂತಿಮ ಪಟ್ಟಿಯಲ್ಲಿ ನಮ್ಮನ್ನು ಬಿಟ್ಟಿದ್ದಾರೋ, ಇಲ್ಲವೋ ಎಂದು objection ಯಾರು ಕೇಳಿದ್ದಾರೋ, ಅವರು ಹಾಕುತ್ತಿದ್ದರು. ಅದಕ್ಕೆ ತಾವು ಅವಕಾಶವನ್ನು ಕೊಟ್ಟಿಲ್ಲ. ಹಾಗಾಗಿ ರಾತ್ರೋರಾತ್ರಿ ಈ ರೀತಿಯ ಕೆಲಸವಾಗಿದೆ. ದಯಮಾಡಿ ಇದನ್ನು ಕೈಬಿಡಬೇಕು. ಮತ್ತೊಂದು ಪಟ್ಟಿ ತಯಾರು ಆಗುತ್ತಿದೆ ಎಂದು ಸುದ್ದಿ ಬಂದಿದೆ. ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)(ಅರಣ್ಯ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಎನ್.ಅಪ್ಪಾಜಿಗೌಡರವರು ಮತ್ತು ಮಾನ್ಯ ಎಸ್.ಎಲ್.ಭೋಜೇಗೌಡರವರು 'ಉಪ ವಲಯ ಅರಣ್ಯಾಧಿಕಾರಿಗಳ ರಾಜ್ಯ ಮಟ್ಟದ ಸಂಯೋಜಿತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ' ಪ್ರಶ್ನೆಯನ್ನು ಕೇಳಿದ್ದಾರೆ. ಇದಕ್ಕೆ ವಿವರವಾದಂತಹ ಉತ್ತರವನ್ನು ಕೊಟ್ಟಿದ್ದೇವೆ. ಕರ್ನಾಟಕ ರಾಜ್ಯ ಆಡಳಿತ ಮಂಡಳಿಯ ಮುಂದೆ ಒಂದು ಅರ್ಜಿ ಇದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದರಲ್ಲಿರುವಂತಹ ಆದೇಶ ಮತ್ತು ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿದ ನಂತರ ರಾಜ್ಯ ಮಟ್ಟದ ಸಂಯೋಜಿತ ಜೇಷ್ಠತಾ ಪಟ್ಟಿಯನ್ನು ತಯಾರಿಸಬೇಕೆಂದು ನಿರ್ದೇಶನ ನೀಡಿದೆ.

**(ಮುಂದು)**

**(534) 22/03/2021/ಎಸ್‌ಪಿಆರ್/ವಿಕೆ(ಎಂಡಿ)/1:00**

**ಶ್ರೀ ಜಗದೀಶ್ ಶೆಟ್ಟರ್(ಮುಂದು):–**

ಇದರಲ್ಲಿ ಕೆಲವೊಂದು ಕಾನೂನು ತೊಡಕುಗಳಿದ್ದರಿಂದ ಇದರ ಬಗ್ಗೆ ಸಮಾಲೋಚನೆಯು ನಡೆಯುತ್ತಿದೆ. ಶ್ರೀ ಅಪ್ಪಾಜಿಗೌಡರು ಇಲಾಖೆಯಲ್ಲಿ ಈಗ ಮುಂಬಡ್ತಿ ನೀಡಲಾಗಿದೆ ಎಂದು ಪ್ರಸ್ತಾಪಿಸಿದ್ದಾರೆ. ಇಲಾಖೆಯಲ್ಲಿ ಯಾವುದೇ ರೀತಿಯಾದ ಮುಂಬಡ್ತಿಯನ್ನು ಯಾರಿಗೂ ಸಹ ನೀಡಿಲ್ಲ. ಆದರೆ ಕರ್ನಾಟಕ ನಾಗರಿಕ ಸೇವಾ ನಿಯಮ 32 ರನ್ವಯ ಇವತ್ತಿನ ದಿವಸ ತಾತ್ಕಾಲಿಕವಾಗಿ ಮುಂಬಡ್ತಿಯನ್ನು ನೀಡಲಾಗಿದೆ. ಇಲಾಖೆಯಲ್ಲಿನ ಆಡಳಿತ ವ್ಯವಸ್ಥೆಯ ದೃಷ್ಟಿಯಿಂದ ಅದನ್ನು ಮುಂಬಡ್ತಿ ಎನ್ನುವುದರ ಬದಲಾಗಿ ನಿಯಮ–32 ರನ್ವಯ ಪ್ರಭಾರದಲ್ಲಿರಿಸಲಾಗಿದೆ. ಮಾನ್ಯ ಸದಸ್ಯರುಗಳು ವ್ಯಕ್ತಪಡಿಸಿರುವ ಅಭಿಪ್ರಾಯಗಳ ಬಗ್ಗೆ ಖಂಡಿತವಾಗಿಯೂ ಸಹ ಅರಣ್ಯ ಸಚಿವರಾದ ಶ್ರೀ ಅರವಿಂದ ಲಿಂಬಾವಳಿ ಮತ್ತು ಇಲಾಖಾಧಿಕಾರಿಗಳೊಂದಿಗೆ ಚರ್ಚಿಸಲಾಗುವುದು. ಪ್ರಸ್ತುತ ವಿಷಯವು ಈಗಾಗಲೇ ಎರಡು–ಮೂರು ಬಾರಿ ಸದನದಲ್ಲಿ ಚರ್ಚೆಯಾಗಿದೆ ಎನ್ನುವ ವಿಚಾರವನ್ನು ಸದಸ್ಯರು ಗಮನಕ್ಕೆ ತಂದಿದ್ದಾರೆ. ಸದಸ್ಯರು ಗಂಭೀರವಾಗಿ ಪ್ರಸ್ತಾಪಿಸಿದ ಅಭಿಪ್ರಾಯಗಳನ್ನು ಹಾಗೂ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿ ವಿಷಯವನ್ನು ಅರಣ್ಯ ಸಚಿವರ ಗಮನಕ್ಕೆ ತರಲಾಗುವುದು. ಈ ವಿಚಾರದಲ್ಲಿ ಯೋಗ್ಯ ಹಾಗೂ ಸರಿಯಾದ ನಿರ್ಧಾರವನ್ನು ತೆಗೆದುಕೊಳ್ಳುವ ಕ್ರಮವನ್ನು ವಹಿಸಲಾಗುವುದು.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಆಡಳಿತ ದೃಷ್ಟಿಯಿಂದ ಏಕಕಾಲದಲ್ಲಿ ನೂರಾರು ನೌಕರರಿಗೆ ನಿಯಮ – 32 ರನ್ವಯ ಪ್ರಭಾರದಲ್ಲಿರಿಸಲಾಗಿದೆ ಎಂದು ಸಚಿವರು ಹೇಳಿದ್ದಾರೆ. ಹಿಂದೆ ಈ ರೀತಿಯಾಗಿ ಯಾವ ಇತಿಹಾಸದಲ್ಲಿ ಎಲ್ಲಿಯೂ ಸಹ ಆಗಿಲ್ಲ. ಸರ್ಕಾರವು ದಯಮಾಡಿ ಇದರ ಬಗ್ಗೆ ಗಮನ ವಹಿಸಬೇಕು. ಈ ವಿಚಾರದಲ್ಲಿ ಸರ್ಕಾರವು ಸಮರ್ಥನೆ ನೀಡುವುದು ಬೇಡ. ಸರ್ಕಾರವು ಸಮರ್ಥನೆ ನೀಡಿದರೆ, ನಿಜವಾದ ಫಲಾನುಭವಿಗಳಿಗೆ ಎಲ್ಲಿಯೋ ಒಂದು ಕಡೆ ತುಂಬಾ ಅನ್ಯಾಯ ಮಾಡಿದಂತಾಗುತ್ತದೆ. ಸರ್ಕಾರವು ನೀಡಿರುವುದು 'ಸಮರ್ಥನೆ' ಅಲ್ಲವೇ ಅಲ್ಲ. ನೂರಾರು ನೌಕರರಿಗೆ

ಏಕಕಾಲದಲ್ಲಿ ನಿಯಮ – 32 ರನ್ವಯ ಪ್ರಭಾರದಲ್ಲಿ ಇರಿಸುವ ವ್ಯವಸ್ಥೆಯು ಏಕೆ ಬೇಕು? ಸರ್ಕಾರವು ದಯಮಾಡಿ ಕ್ಷಮಿಸಬೇಕು.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಈ ಹಿಂದೆ ಪ್ರಭಾರದಲ್ಲಿದ್ದ ಅರಣ್ಯ ಸಚಿವರು ಈ ವಿಚಾರದಲ್ಲಿ ತಪ್ಪಾಗಿದ್ದು, ಅದನ್ನು ಸರಿಪಡಿಸುವುದಾಗಿ ಇದೇ ಸದನದಲ್ಲಿ ಉತ್ತರಿಸಿದ್ದರು. ಇಲಾಖೆಯ ಸಚಿವರ ಖಾತೆಗಳು ಬದಲಾದ ಕಾಲಘಟ್ಟದಲ್ಲಿ, ಇಲಾಖೆಯ ಪ್ರಭಾರವನ್ನು ವಹಿಸಿಕೊಂಡ ಹೊಸ ಸಚಿವರು ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ, ಇಷ್ಟು ಆತುರವಾಗಿ ನೌಕರರನ್ನು ಯಾವ ಕಾರ್ಯಕ್ಕಾಗಿ ನಿಯಮ–32 ರನ್ವಯ ಸ್ವತಂತ್ರ ಪ್ರಭಾರದಲ್ಲಿರಿಸಿದ್ದಾರೆ? ಆಡಳಿತಾತ್ಮಕ ದೃಷ್ಟಿಯಿಂದ ಈ ರೀತಿಯಾಗಿ ಮಾಡಲಾಗಿದೆ ಎಂದು ಶ್ರೀ ಜಗದೀಶ ಶೆಟ್ಟರ್‌ರವರು ಅರಣ್ಯ ಇಲಾಖೆಯ ಮಂತ್ರಿಗಳ ಪರವಾಗಿ ಸದನಕ್ಕೆ ತಿಳಿಸಿದ್ದಾರೆ. ಈ ವಿಚಾರದಲ್ಲಿ ಅಷ್ಟೊಂದು ತರಾತುರಿ ಯಾಕೆ ಇತ್ತು? ಈ ಹಿಂದೆ ಸಚಿವರು ಪ್ರಶ್ನಿತ ವಿಚಾರಕ್ಕೆ ಸಂಬಂಧಪಟ್ಟಂತೆ ಪುನರ್ ಪರಿಶೀಲನೆ ಮಾಡಲಾಗುವುದು, ಮತ್ತು ಇಲಾಖೆಯ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಲಾಗುವುದು ಎಂಬುದಾಗಿ ತಿಳಿಸಿದ್ದರು. ಆದರೆ, ಹೊಸದಾಗಿ ಇಲಾಖೆಯ ಪ್ರಭಾರವನ್ನು ವಹಿಸಿಕೊಂಡಿರುವ ಸಚಿವರು ಯಾವ ಕಾರ್ಯಕ್ಕಾಗಿ ಇಷ್ಟು ಆತುರವಾಗಿ ಮುಂಬಡ್ತಿಗಳನ್ನು ನೀಡಿದ್ದಾರೆ; ಇದರ ಅಗತ್ಯವೇನಿತ್ತು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇದರಲ್ಲಿ ಎಲ್ಲಿಯೋ ಒಂದು ಕಡೆ ವ್ಯವಹಾರವಾಗಿದೆ ಮತ್ತು ಅರ್ಹರಿಗೆ ಮುಂಬಡ್ತಿ ದೊರೆತಿಲ್ಲ. ಹೀಗಾಗಿ ಇದನ್ನು ತಡೆಹಿಡಿಯಬೇಕು. ಇದಕ್ಕೆ ಕಾರಣಕರ್ತರಾದ ಅಧಿಕಾರಿಗಳು ಅಂದರೆ ಆಸಕ್ತಿವಹಿಸಿ ಮುಂಬಡ್ತಿ ನೀಡಿರುವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾವು ಆಗ್ರಹಿಸುತ್ತೇವೆ.

**ಶ್ರೀ ಜಗದೀಶ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆ ಸಚಿವರು)(ಅರಣ್ಯ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಪ್ರಸ್ತುತ ವಿಷಯದ ಗಾಂಭೀರ್ಯತೆಯನ್ನು ಅರ್ಥಮಾಡಿಕೊಂಡು ಇದರ ಬಗ್ಗೆ ಅರಣ್ಯ ಸಚಿವರಿಗೆ ಗಮನಕ್ಕೆ ಈಗಾಗಲೇ ತರಲಾಗಿದೆ. ಸದಸ್ಯರು ಪ್ರಸ್ತಾಪಿಸಿದ 'ಅವ್ಯವಹಾರ ಅಥವಾ ಮತ್ತೊಂದು' ಎನ್ನುವುದು ಬಹುಶಃ ಸತ್ಯಕ್ಕೆ ದೂರವಾದ ಸಂಗತಿಯಾಗಿದೆ. ಸದಸ್ಯರು ಪ್ರಸ್ತುತ ವಿಷಯವನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿರುವುದರಿಂದ ಖಂಡಿತವಾಗಿಯೂ ಸಹ ಸದರಿ ವಿಷಯದ ಬಗ್ಗೆ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು. ಪ್ರಸ್ತುತ ಇಲಾಖೆಯಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮ–32 ರನ್ವಯ ನೌಕರರನ್ನು ಪ್ರಭಾರ ಎಂದು ನೇಮಕ ಮಾಡಲಾಗಿದೆ. ಅರಣ್ಯ ಇಲಾಖೆಯ ಸಚಿವರು ಬಂದ ತಕ್ಷಣ ಇದರ ಬಗ್ಗೆ ತಿಳಿಸಿ, ತಕ್ಷಣವೇ ಕ್ರಮ ಕೈಗೊಳ್ಳಬೇಕೆಂದು ಅವರಿಗೆ ನಾನು ತಿಳಿಸುತ್ತೇನೆ.

**ಸಭಾಪತಿಯವರು:–** ಇಲ್ಲಿಗೆ ಪ್ರಶ್ನೋತ್ತರ ಅವಧಿಯು ಮುಕ್ತಾಯವಾಗಿದೆ.

## ಆ) ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ: 12ನೇ ಮಾರ್ಚ್ 2021, ಸಮೂಹ–5ರ ಸದನದಲ್ಲಿ ಉತ್ತರಿಸುವ ಒಟ್ಟು 15 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 96 ಪ್ರಶ್ನೆಗಳ ಪೈಕಿ 65 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

ದಿನಾಂಕ: 19ನೇ ಮಾರ್ಚ್ 2021, ಸಮೂಹ–5ರ ಸದನದಲ್ಲಿ ಉತ್ತರಿಸುವ ಒಟ್ಟು 15 ಪ್ರಶ್ನೆಗಳಿಗೆ ಮತ್ತು 06 ತಡೆಹಿಡಿಯಲಾದ ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 94 ಪ್ರಶ್ನೆಗಳ ಪೈಕಿ 74 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

ದಿನಾಂಕ: 22ನೇ ಮಾರ್ಚ್ 2021, ಸಮೂಹ–1ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 113 ಪ್ರಶ್ನೆಗಳ ಪೈಕಿ 51 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:–** ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 6. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ) ವಿಷಯ:– ವಿಜಯಪುರ ಜಿಲ್ಲೆಯ ವಂದಾಲ ಗ್ರಾಮವು ಆಲಮಟ್ಟಿ ಜಲಾಶಯದ 3ನೇ ಹಂತದ ಯೋಜನೆಗಾಗಿ ಮುಳುಗಡೆಯಾಗುತ್ತಿರುವ ಹಿನ್ನೆಲೆಯಲ್ಲಿ ಮೂಲ ಸೌಕರ್ಯ ಒದಗಿಸುವ ಬಗ್ಗೆ**

* * *

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ವಿಜಯಪುರ ಜಿಲ್ಲೆಯ ವಂದಾಲ ಗ್ರಾಮವು ಆಲಮಟ್ಟಿ ಜಲಾಶಯಕ್ಕೆ ಮೂರನೇ ಹಂತದ ಮುಳುಗಡೆ ಆಗುವ ಯೋಜನೆಯಲ್ಲಿರುವುದರಿಂದ ಸುಮಾರು ಹತ್ತು ವರ್ಷಗಳಿಂದ ಈ ಗ್ರಾಮಕ್ಕೆ ಮೂಲಭೂತ ಸೌಕರ್ಯಗಳನ್ನು ಸ್ಥಗಿತಗೊಳಿಸಿರುತ್ತಾರೆ. ಈ ಮುಳುಗಡೆಯಾಗಿರುವ ಪ್ರದೇಶದ ಕಷ್ಟಕ್ಕೊಳಗಾಗಿರುವ ಗ್ರಾಮಸ್ಥರು ಹೋರಾಟ ಹಮ್ಮಿಕೊಂಡಿರುವ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸಲು ಇಚ್ಛಿಸುತ್ತೇನೆ.

2012–13 ನೇ ಸಾಲಿನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಪುನರ್ವಸತಿ ಅಧಿಕಾರಿಗಳು ವಂದಾಲ ಗ್ರಾಮ ಪಂಚಾಯತ್‌ನ ಮೂಲ ದಾಖಲೆಗಳಾದ ನಮೂನೆ ನಂ.9 ರಿಜಿಸ್ಟರ್ ತಮ್ಮ ವಶಕ್ಕೆ ತೆಗೆದುಕೊಂಡಿರುತ್ತಾರೆ. ಈ ಕಾರಣದಿಂದ ಪಂಚಾಯತ್ ಅಭಿವೃದ್ಧಿ ಕಾರ್ಯವನ್ನು ಸ್ಥಗಿತಗೊಳಿಸಿದ್ದಾರೆ. ನಮೂನೆ ನಂ.9 ಗ್ರಾಮ ಪಂಚಾಯತ್ ಇಲ್ಲದ ಪ್ರಯುಕ್ತ ಮನೆಗಳನ್ನು ಖರೀದಿಸುವಲ್ಲಿ ವಾಟ್ನಿ/ವಾರಸಾ ಮಾಡುವುದನ್ನು ಸ್ಥಗಿತಗೊಳಿಸಿರುತ್ತಾರೆ. ಇದರಿಂದಾಗಿ ಗ್ರಾಮಸ್ಥರಿಗೆ ಬಹಳ ಅನಾನುಕೂಲವಾಗಿರುತ್ತದೆ. ಹೊಸದಾಗಿ ಮನೆಗಳನ್ನು ನಿರ್ಮಿಸುವುದಾಗಲಿ ಹಾಗೂ ಹಳೇ ಕಟ್ಟಡಗಳ ರಿಪೇರಿ ಮಾಡುವುದಕ್ಕೆ ಪಂಚಾಯತಿಯಿಂದ ಅನುಮತಿ ನೀಡಿರುವುದಿಲ್ಲ. ಇದರಿಂದಾಗಿ ಒಂದೇ ಮನೆಯಲ್ಲಿ ಹಲವಾರು ಕುಟುಂಬಗಳು ಜೀವನ ಮಾಡಲು ಕಷ್ಟಮಯವಾಗಿದೆ. ಗ್ರಾಮ ಪಂಚಾಯಿತಿಗೆ ಬರುವ ಸರ್ಕಾರದ ಎಲ್ಲಾ ಅನುದಾನಗಳನ್ನು ಗ್ರಾಮವಾರು ಹಂಚಿಕೆ ಮಾಡುವಲ್ಲಿ ವಂದಾಲ ಗ್ರಾಮವನ್ನು ಬಿಟ್ಟು ಇನ್ನುಳಿದ ಗ್ರಾಮಗಳಿಗೆ ಹಂಚಿಕೆ ಮಾಡುತ್ತಾ ಬಂದಿದ್ದಾರೆ. ಇದರಿಂದಾಗಿ ಈ ಗ್ರಾಮ ಅಭಿವೃದ್ಧಿ ಹೊಂದುವಲ್ಲಿ ಬಹಳವಾಗಿ ವಂಚಿತವಾಗಿದ್ದು ಅಭಿವೃದ್ಧಿ ಕಾರ್ಯ ಸಂಪೂರ್ಣ ಸ್ಥಗಿತಗೊಂಡಿದೆ.

ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ ಮೂಲ ದಾಖಲಾತಿಗಳ ನಮೂನೆ ನಂ.9 ರಿಜಿಸ್ಟರ್‌ನ್ನು ಗ್ರಾಮ ಪಂಚಾಯಿತಿಗೆ ವಾಪಸ್ಸು ನೀಡಿ, ಕುಂಠಿತಗೊಂಡಿರುವ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಮರು

“ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಚಾಲನೆ ಮಾಡಿ, ಹೊಸ ಸರ್ಕಾರಿ ಕಟ್ಟಡಗಳ ನಿರ್ಮಾಣಕ್ಕೆ ಇರುವ ನಿರ್ಬಂಧವನ್ನು ತೆರವುಗೊಳಿಸಿ, ಈ ಪ್ರದೇಶವನ್ನು ಸ್ವಾಧೀನ ಪಡಿಸಿಕೊಂಡು, ಸಂಬಂಧಿಸಿದ ಮನೆಗಳಿಗೆ ಯುದ್ಧೋಪಾದಿಯಲ್ಲಿ ಪರಿಹಾರವನ್ನು ಮಂಜೂರುಗೊಳಿಸಿ ಗ್ರಾಮದ ಜನರ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳುವ ಸಲುವಾಗಿ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ನಿನ್ನೆಯ ದಿನ ನಾನು ಆ ಗ್ರಾಮಕ್ಕೆ ಭೇಟಿ ನೀಡಿದ್ದೆನು. ಅಲ್ಲಿನ ಗ್ರಾಮಸ್ಥರು ಅಹೋರಾತ್ರಿ ಸತ್ಯಾಗ್ರಹವನ್ನು ಪ್ರಾರಂಭಿಸಿರುವುದರಿಂದ, ಅಹೋರಾತ್ರಿ ಸತ್ಯಾಗ್ರಹ ಬೇಡ, ಈಗಾಗಲೇ ನಡೆಸುತ್ತಿರುವ ಸತ್ಯಾಗ್ರಹವನ್ನು ಮುಂದುವರೆಸಿ ಎಂದು ನಾನು ಅವರಲ್ಲಿ ಮನವಿ ಮಾಡಿಕೊಂಡಿರುತ್ತೇನೆ. ಇದರ ಬಗ್ಗೆ ನಾನು ಚರ್ಚಿಸಿ ಸರ್ಕಾರದಿಂದ ಉತ್ತರವನ್ನು ಪಡೆಯಬೇಕೆಂಬ ಆಶಯದಿಂದ, ನಾನು ಇದನ್ನು ಈಗ ಪ್ರಸ್ತಾಪಿಸಿರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಹಿರಿಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಆ) ವಿಷಯ:– ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತಂಬ್ರಹಳ್ಳಿಯಲ್ಲಿ ಪ್ರಥಮ ದರ್ಜೆ ಕಾಲೇಜ್ ಪ್ರಾರಂಭಿಸುವ ಕುರಿತು**

* * *

**ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಪ್ರಸ್ತಾಪವನ್ನು ಮಂಡಿಸಲು ಅನುಮತಿ ನೀಡಿದ್ದಕ್ಕಾಗಿ ಧನ್ಯವಾದಗಳು.

ಹೊಸದಾಗಿ ಸ್ಥಾಪಿತವಾದ ವಿಜಯನಗರ ಜಿಲ್ಲೆ, ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತಂಬ್ರಹಳ್ಳಿ ಗ್ರಾಮವು ಕಂದಾಯ ಹೋಬಳಿ ಕೇಂದ್ರವಾಗಿದ್ದು, ಈ ಗ್ರಾಮದಲ್ಲಿ ಕಳೆದ 16 ವರ್ಷಗಳಿಂದ ಪದವಿಪೂರ್ವ ಕಾಲೇಜು ನಡೆಯುತ್ತಿದ್ದು, ಈ ಗ್ರಾಮದಲ್ಲಿ ನಾಡ ಕಛೇರಿ, ರಾಷ್ಟ್ರೀಕೃತ ಬ್ಯಾಂಕುಗಳು, ಎ.ಪಿ.ಎಂ.ಸಿ. ಮಾರುಕಟ್ಟೆ, ಪೊಲೀಸ್ ಠಾಣೆ, ರೈತ ಸಂಪರ್ಕ ಕೇಂದ್ರಗಳಿದ್ದು, ತಂಬ್ರಹಳ್ಳಿ ಗ್ರಾಮದ ಸುತ್ತಮುತ್ತಲು 10 ಕಿ.ಮೀ. ವ್ಯಾಪ್ತಿಯಲ್ಲಿ ಬಾಚಿಗೊಂಡನಹಳ್ಳಿ, ಹಂಪಸಾಗರ ಮತ್ತು ಮೋರಿಗೇರಿ ಗ್ರಾಮಗಳು ಬರುತ್ತವೆ. ಈ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗ್ರಾಮಗಳಲ್ಲಿ ಪದವಿಪೂರ್ವ ಕಾಲೇಜು ಹಾಗೂ ಮೂರು ಐ.ಟಿ.ಐ. ತರಬೇತಿ ಕಾಲೇಜುಗಳಿರುತ್ತವೆ. ತಂಬ್ರಹಳ್ಳಿ ಗ್ರಾಮದಲ್ಲಿರುವ ಖಾಸಗಿ ಪದವಿಪೂರ್ವ ಕಾಲೇಜಿನಲ್ಲಿ ಸುಮಾರು 400 ವಿದ್ಯಾರ್ಥಿಗಳು ದಾಖಲಾಗಿದ್ದಾರೆ.

ಸುತ್ತಮುತ್ತಲಿನ ಗ್ರಾಮಗಳಿಗೆ ತಂಬ್ರಹಳ್ಳಿ ಗ್ರಾಮವು ಕೇಂದ್ರ ಸ್ಥಾನವಾಗಿದ್ದು, ಈ ಗ್ರಾಮದಲ್ಲಿ ಪ್ರಥಮ ದರ್ಜೆ ಕಾಲೇಜು ಇಲ್ಲದೆ ಇರುವುದರಿಂದ ಈ ಭಾಗದ ಬಡ ವಿದ್ಯಾರ್ಥಿಗಳು ತಮ್ಮ ಪದವಿ ಶಿಕ್ಷಣ ವ್ಯಾಸಂಗಕ್ಕಾಗಿ ಹಗರಿಬೊಮ್ಮನಹಳ್ಳಿ, ಹೊಸಪೇಟೆ ಹಾಗೂ ಹರಪನಹಳ್ಳಿ ನಗರಗಳಿಗೆ ಹೋಗಬೇಕಾಗಿರುತ್ತದೆ. ಹಗರಿಬೊಮ್ಮನಹಳ್ಳಿಯಲ್ಲಿರುವ ಪ್ರಥಮ ದರ್ಜೆ ಕಾಲೇಜಿನಲ್ಲಿ ಈ ವರ್ಷ 3,000 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ. ಇದರಿಂದ ವಿದ್ಯಾರ್ಥಿಗಳು ಪರಿಪೂರ್ಣ ತರಗತಿಗಳಿಗೆ ಹಾಜರಾಗಲು ತೊಂದರೆಯಾಗಿರುತ್ತದೆ ಹಾಗೂ ಹಳ್ಳಿಗಳಿಂದ ನಗರಕ್ಕೆ ಹೋಗಲು ಸಮಯಕ್ಕೆ ಸರಿಯಾಗಿ ಬಸ್ ಸೌಕರ್ಯವಿರುವುದಿಲ್ಲ. ಈ ಎಲ್ಲಾ ತೊಂದರೆಗಳಿಂದ ಪದವಿಪೂರ್ಣ ಶಿಕ್ಷಣ ಪಡೆದ ಬಹಳಷ್ಟು ಬಡ, ರೈತಾಪಿ ವರ್ಗದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.

ಪ್ರಸ್ತುತ ತಂಬ್ರಹಳ್ಳಿ ಗ್ರಾಮದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸಲು ಸ್ಥಳವೂ ಸಹ ಲಭ್ಯವಿರುತ್ತದೆ. ಆದುದರಿಂದ ತಂಬ್ರಹಳ್ಳಿ ಗ್ರಾಮಕ್ಕೆ ಮುಂದಿನ ಶೈಕ್ಷಣಿಕ ವರ್ಷದಿಂದ ಹೊಸದಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡಬೇಕೆಂದು ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ.

**ಡಾ॥ ಅಶ್ವತ್ಥ್ ನಾರಾಯಣ(ಉಪ ಮುಖ್ಯಮಂತ್ರಿ, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೊಸ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಲು ಒತ್ತಾಯಿಸುತ್ತಿದ್ದಾರೆ. ಹಾಲಿ ಇರುವ 430 ಕಾಲೇಜುಗಳಿಗಿರುವ ಸಮಸ್ಯೆಗಳನ್ನು ಬಗೆಹರಿಸಬೇಕು ಮತ್ತು ಹೊಸ ಕಾಲೇಜುಗಳನ್ನು ಪ್ರಾರಂಭಿಸಬೇಕು. ದೇಶದ ಬೇರೆ ಬೇರೆ ರಾಜ್ಯಗಳನ್ನು ಹೋಲಿಸಿದಾಗ, ನಮ್ಮ ರಾಜ್ಯದಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿವೆ. ಹೀಗಾಗಿ ಹಾಲಿ ಇರುವ ಕಾಲೇಜುಗಳಿಗೆ ಹೆಚ್ಚಿನ ಅಭಿವೃದ್ಧಿಯನ್ನು ಮಾಡುವ ಸವಾಲು ನಮ್ಮ ಮುಂದಿದೆ. ಹೀಗಾಗಿ ಸದಸ್ಯರು ಪ್ರಸ್ತಾಪಿಸಿದಂತೆ, ಹೊಸ ಕಾಲೇಜನ್ನು ಪ್ರಾರಂಭಿಸುವುದು ಕಷ್ಟಕರವಾಗಿರುವುದರಿಂದ ಇದನ್ನು ಕೈಗೆತ್ತಿಕೊಳ್ಳುವುದಕ್ಕಾಗುವುದಿಲ್ಲ. 13 ವಿಧಾನ ಸಭಾ ಕ್ಷೇತ್ರಗಳಲ್ಲಿ ಪದವಿ ಪೂರ್ವ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾಲೇಜುಗಳಿರಲಿಲ್ಲ. ಆ ಪೈಕಿ 6 ಕ್ಷೇತ್ರಗಳಲ್ಲಿ ಪದವಿ ಪೂರ್ವ ಕಾಲೇಜುಗಳನ್ನು ಈಗಾಗಲೇ ಮಂಜೂರು ಮಾಡಲಾಗಿದೆ. ಇನ್ನುಳಿದ 7–8 ಕ್ಷೇತ್ರಗಳಿಗೆ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಿದ ನಂತರ ಅವಕಾಶವಿದ್ದಾಗ ಸದಸ್ಯರು ಪ್ರಸ್ತಾಪಿಸಿದಂತೆ, ಕಾಲೇಜು ಪ್ರಾರಂಭಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

**(ಮುಂದು)**

**(535)/22–3–2021/1–10/ಎಲ್‌ಎಂ/ಬಿಎನ್‌ಎಸ್**

**ಇ) ವಿಷಯ: ರಾಜ್ಯದ ಶಿಕ್ಷಕರು ಮತ್ತು ಉಪನ್ಯಾಸಕರಿಗೆ ಕೋವಿಡ್ ಲಸಿಕೆ ಹಾಕುವ ಬಗ್ಗೆ.**

---

**ಶ್ರೀ ಅರುಣ ಶಹಾಪೂರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ವಿದ್ಯಾರ್ಥಿಗಳ ಜೊತೆ ನಿತ್ಯ ಸಂಪರ್ಕ, ಶಿಕ್ಷಕರಿಗಿಲ್ಲ ಲಸಿಕೆ ಎಂಬ ಸುದ್ದಿಯು ಇಂದಿನ ದಿನಪತ್ರಿಕೆಗಳಲ್ಲಿ ವರದಿಯಾಗಿದೆ. ಕೋವಿಡ್–19ರ ಸಮಸ್ಯೆಯ ಹಿನ್ನಲೆಯಲ್ಲಿ ರಾಜ್ಯದ ಶಿಕ್ಷಕರು, ಉಪನ್ಯಾಸಕರುಗಳೂ ಸಹ ಕೊರೋನಾ ವಾರಿಯರ್ಸ್‌ಗಳಾಗಿ ಕಾರ್ಯ ನಿರ್ವಹಿಸಿರುವುದು ತಿಳಿದ ವಿಷಯವೇ ಆಗಿದೆ. ಅಂತಹ ಕಷ್ಟ ಸಂದರ್ಭದಲ್ಲಿಯೂ ದೇಶದಲ್ಲಿಯೇ ಪ್ರಥಮವಾಗಿ ಎಸ್.ಎಸ್.ಎಲ್.ಸಿ. ಹಾಗು ಪದವಿ ಪೂರ್ವ ಪರೀಕ್ಷೆಗಳನ್ನು ಸವಾಲಾಗಿ ತೆಗೆದುಕೊಂಡು ನಡೆಸಿ ಅತ್ಯಂತ ಯಶಸ್ವಿಯಾಗಿರುವುದಕ್ಕೆ ನೇರವಾಗಿ ಶಿಕ್ಷಕರು, ಉಪನ್ಯಾಸಕರಿಗೆ ಈ ಕೀರ್ತಿ ಸಲ್ಲುತ್ತದೆ. ಆದರೆ ಈ ಕೊರೋನಾ ವಾರಿಯರ್ಸ್ ಲಸಿಕೆ ಪಡೆಯುವುದು ಅವಶ್ಯಕವಿಲ್ಲವೆನ್ನುವುದು ನಿಜಕ್ಕೂ ಸರಿಯಾದ ಕ್ರಮವಲ್ಲ. ಶಿಕ್ಷಕರು ತಮ್ಮ ಜೀವ ಹಾಗೂ ಜೀವನವನ್ನೇ ಪಣಕ್ಕಿಟ್ಟು ಲಾಕ್‌ಡೌನ್ ಸಂದರ್ಭದಲ್ಲಿ ಕೊರೋನಾ ವಾರಿಯರ್ಸ್‌ಗಳಾಗಿ ಕಾರ್ಯ ನಿರ್ವಹಿಸಿದ್ದಾರೆ. ಈಗ ಕೊರೋನಾ ಎರಡನೇ ಅಲೆ ಪ್ರಾರಂಭವಾಗುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ ಹಾಗೂ ಮುಂಬರುವ ದಿನಗಳಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ಪದವಿ ಪೂರ್ವ ಪರೀಕ್ಷೆಗಳನ್ನು ನಡೆಸಬೇಕಾಗಿದ್ದು ನಂತರ ಮೌಲ್ಯಮಾಪನ ಕಾರ್ಯವನ್ನು ಸಹ ನಡೆಸಬೇಕಿದೆ. ಮಹಾರಾಷ್ಟ್ರದ ಗಡಿ ಭಾಗಗಳಲ್ಲಿರುವ ಸರ್ಕಾರಿ ಶಾಲೆಗಳಲ್ಲಿ ಮಹಾರಾಷ್ಟ್ರ ಭಾಗದ ವಿದ್ಯಾರ್ಥಿಗಳು ದಿನನಿತ್ಯ ಶಾಲಾ ಕಾಲೇಜುಗಳಿಗೆ ಆಗಮಿಸುತ್ತಿದ್ದಾರೆ. ಅವರೊಂದಿಗೆ ನಮ್ಮ ಶಿಕ್ಷಕರು ಪ್ರತಿನಿತ್ಯ ಸಮಯವನ್ನೂ ಸಹ ಕಳೆಯುತ್ತಿದ್ದಾರೆ. ಅಂತೆಯೇ ಸಮಾಜದ 4ನೇ ಸ್ಥಂಭವಾಗಿ ಕಾರ್ಯನಿರ್ವಹಿಸುತ್ತಿರುವ ಮಾಧ್ಯಮದ ಸಿಬ್ಬಂದಿ, ಪತ್ರಕರ್ತರು, ವರದಿಗಾರರೂ ಸಹ ಇದೇ ರೀತಿ ಕಾರ್ಯನಿರ್ವಹಿಸಿರುತ್ತಾರೆ. ಇವರಿಗೂ ಸಹ ಲಸಿಕೆ ನೀಡುವುದು ಅತ್ಯವಶ್ಯಕವಾಗಿದೆ.

ತಿದ್ದುಪಡಿಯಾಗದ ಪ್ರತಿ/ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇವೆಲ್ಲವನ್ನು ಗಮನಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಕೂಡಲೇ ಶಿಕ್ಷಕರಿಗೆ, ಉಪನ್ಯಾಸಕರಿಗೆ ಮತ್ತು ಪತ್ರಕರ್ತರಿಗೆ, ಮಾಧ್ಯಮದ ವಿಭಾಗದ ಎಲ್ಲ ಸಿಬ್ಬಂದಿಗಳಿಗೂ ಕೊರೋನಾ ಲಸಿಕೆಯನ್ನು ನೀಡುವ ನಿಟ್ಟಿನಲ್ಲಿ ಕ್ರಮ ವಹಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಕೇಳಿರುವ ಶೂನ್ಯವೇಳೆ ಪ್ರಸ್ತಾಪಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಈ) ವಿಷಯ: ಭಾರತೀಯ ಸೇನೆಗೆ ಸೇರಲು ರಾಜ್ಯದ ನಾನಾ ಕಡೆಗಳಿಂದ ಬರುವ ದೇಶ ಸೇವಾಕಾಂಕ್ಷಿಗಳಿಗೆ ಮೂಲ ಸೌಲಭ್ಯ ಒದಗಿಸುವ ಬಗ್ಗೆ.**

---

**ಶ್ರೀ ಮುನಿರಾಜು ಗೌಡ ಪಿ.ಎಂ.(ತುಳಸಿ)(ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಗಳೆ, ಇತ್ತೀಚಿನ ದಿನಗಳಲ್ಲಿ ರಾಜ್ಯಾದ್ಯಂತ ಸೇನಾ ನೇಮಕಾತಿ ಪ್ರಕ್ರಿಯೆಗಳು ನಡೆಯುತ್ತಿರುವುದು ನಮ್ಮ ರಾಜ್ಯದ ಬಿಸಿರಕ್ತದ ತರುಣರಿಗೆ ದೇಶ ಸೇವೆ ಮಾಡಬೇಕು, ಸೈನ್ಯದಲ್ಲಿ ಸೇವೆ ಸಲ್ಲಿಸಬೇಕು ಎಂದು ಕನಸಿರುವ ಅನೇಕ ನಿರುದ್ಯೋಗಿಗಳಿಗೆ, ಲಭ್ಯವಾದ ಸುವರ್ಣ ಅವಕಾಶವೇ ಸರಿ. ಈ ಕನಸಿನ ಸಾಕಾರಕ್ಕಾಗಿ ದೂರದ ಊರುಗಳಿಂದ ಸೇನಾ ನೇಮಕಾತಿ ನಡೆಯುವ ಸ್ಥಳಕ್ಕೆ ಒಂದು ದಿನ ಮುಂಚಿತವಾಗಿಯೇ ಹಾಜರಾಗಿ ತಂಗುವ ಸೇನಾ ಸೇವಾಕಾಂಕ್ಷಿಗಳು ಯಾವುದೇ ಮೂಲ ಸೌಲಭ್ಯಗಳು ದೊರೆಯದೆ ಕಷ್ಟಗಳನ್ನು ಎದುರಿಸುತ್ತಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಉಡುಪಿ ಜಿಲ್ಲೆಯ ಅಜ್ಜರ ಕಾಡು ಮೈದಾನದಲ್ಲಿ ನಡೆಯುತ್ತಿರುವ ಸೇನಾ ನೇಮಕಾತಿಯಲ್ಲಿ ಪಾಲ್ಗೊಳ್ಳಲು ಬಂದಿರುವ ಅನೇಕ ಅಭ್ಯರ್ಥಿಗಳು ರಸ್ತೆಯಲ್ಲೇ ಮಲಗಿರುವ ಕುರಿತು ಮಾಹಿತಿಯು ಪತ್ರಿಕೆಯಲ್ಲಿ ಚಿತ್ರ ಸಹಿತ ವರದಿಯಾಗಿದೆ. ನಮ್ಮ ರಾಜ್ಯವು ದಕ್ಷಿಣ ಭಾರತದಲ್ಲೇ ಹೆಚ್ಚಿನ ಸೈನಿಕರನ್ನು ದೇಶ ಸೇವೆಗೆ ನೀಡುತ್ತಿರುವ ರಾಜ್ಯಗಳಲ್ಲಿ ಒಂದಾಗಿದೆ. ಕೊಡಗಿನ ಪ್ರತಿಯೊಂದು ಮನೆಯಿಂದ ಒಬ್ಬ ವ್ಯಕ್ತಿ ದೇಶ ಸೇವೆಗೆ ಮೀಸಲು ಎಂದರೆ ತಪ್ಪಾಗಲಾರದು. ದೇಶದ ಮೊದಲ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ನಮ್ಮ ಕೊಡಗಿನವರು. ಇಂತಹಾ ವ್ಯಕ್ತಿಗಳನ್ನು ಆದರ್ಶವಾಗಿಟ್ಟುಕೊಂಡು ದೇಶ ಸೇವೆ ಮಾಡಲಿಚ್ಛಿಸುವ ನಮ್ಮ ರಾಜ್ಯದ ಯುವಕರು ಸೇನಾ ರ್‍ಯಾಲಿಯಲ್ಲಿ ಭಾಗವಹಿಸುವಾಗ ಸೇನಾ ರ್‍ಯಾಲಿ ನಡೆಯುವ ಸ್ಥಳದಲ್ಲಿ ಕನಿಷ್ಠ ವಸತಿ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ, ಊಟದ ವ್ಯವಸ್ಥೆಯನ್ನು ಕಲ್ಪಿಸಲು ಅಗತ್ಯ ಕ್ರಮ ಕೈಗೊಂಡು ‘ಜೈ ಜವಾನ್, ಜೈ ಕಿಸಾನ್’ ಘೋಷಣೆಗೆ

ಸರ್ಕಾರವು ಪ್ರೋತ್ಸಾಹ ಕೊಟ್ಟು ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ರಾಜ್ಯದ ಯುವಕರು ಸೈನ್ಯ ಸೇರಲು ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಸೇನಾ ಸೇವಾಕಾಂಕ್ಷಿಗಳಿಗೆ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ನೀಡುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಶೂನ್ಯವೇಳೆ ಪ್ರಸ್ತಾವದಲ್ಲಿ ತಂದಿರುವ ವಿಷಯಕ್ಕೆ ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

**ಉ) ವಿಷಯ: ಚಾರ್ಮಾಡಿ ಘಾಟ್ ರಸ್ತೆ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ಬಗ್ಗೆ.**

---

**ಶ್ರೀ ಕೆ.ಹರೀಶ್ ಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಗಳೆ, ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಿಂದ ಆರಂಭಗೊಳ್ಳುವ ಚಾರ್ಮಾಡಿ ಘಾಟ್ ರಸ್ತೆ ದುರಸ್ತಿ ಕಾರಣದಿಂದಾಗಿ ಬಸ್ಸು ಹಾಗೂ ಸರಕು ವಾಹನ ಸಂಚಾರಕ್ಕೆ ದಿನಾಂಕ:14–8–2019ರಿಂದ ನಿಷೇದ ಹೇರಲಾಗಿತ್ತು. ಪ್ರಸ್ತುತ ಮರು ಡಾಂಬರೀಕರಣ ಪೂರ್ಣಗೊಂಡಿದ್ದು, ಸಕಲ ಸುರಕ್ಷಾ ಫಲಕಗಳನ್ನು ಅನಾವರಣಗೊಳಿಸಲಾಗಿರುತ್ತದೆ. ಪ್ರಸ್ತುತ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಸರಕು ವಾಹನಗಳಿಗೆ ಸಂಚಾರಕ್ಕೆ ದಿನದ 24 ಗಂಟೆಯೂ ಅನುವು ಮಾಡಿಕೊಡಬುದಾಗಿದೆ ಎಂದು ಲೋಕೋಪಯೋಗಿ ಸಚಿವರು ದಿನಾಂಕ:17–3–3021ರಂದು ವಿಧಾನ ಪರಿಷತ್ತಿನಲ್ಲಿ ತಿಳಿಸಿರುತ್ತಾರೆ ಹಾಗೂ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಂದ ವರದಿ ತರಿಸಿ ದಿನಾಂಕ: 17–3–2021ರಿಂದಲೇ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟಿರುತ್ತಾರೆ. ಆದರೆ ಒಂದೇ ದಿನದಲ್ಲಿ ಮತ್ತೆ ಸಂಚಾರಕ್ಕೆ ತಡೆ ಒಡ್ಡಿದ್ದು ಅನೇಕ ಸರಕು ವಾಹನಗಳು ಗಡಿ ಭಾಗದಲ್ಲಿ ತಡೆಯಾಗಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಆದುದರಿಂದ ಸಾರ್ವಜನಿಕರಿಗೆ ಆಗುವ ತೊಂದರೆ ಗಮನಿಸಿ ಸರಕು ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಶೂನ್ಯವೇಳೆ ಪ್ರಸ್ತಾವದಲ್ಲಿ ತಂದಿರುವ ವಿಷಯಕ್ಕೆ ಮಾನ್ಯ ಲೋಕೋಪಯೋಗಿ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಊ) ವಿಷಯ: ಓ.ಎಫ್.ಸಿ. ಕೇಬಲ್ ಅಳವಡಿಕೆಯಲ್ಲಿ ಬಿಬಿಎಂಪಿ ಅಧಿಕಾರಿಗಳು ಮುಂಜಾಗ್ರತೆ ಕ್ರಮ ತೆಗೆದುಕೊಳ್ಳದೆ ಇರುವ ಬಗ್ಗೆ.**

----

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಗಳೆ, ರಾಜ್ಯದ ರಾಜಧಾನಿಯಾದ ಬೆಂಗಳೂರು ನಗರದಲ್ಲಿ ಪ್ರಪಂಚದಲ್ಲಿಯೇ "ಸಿಲಿಕಾನ್ ಸಿಟಿ" ಎಂದು ಹೆಸರುವಾಸಿಯಾಗಿದೆ. ಆದರೆ, ಈ ಬೆಂಗಳೂರಿನಲ್ಲಿಯ ರಸ್ತೆಗಳಲ್ಲಿ ಆಕಾಶದ ಸೌಂದರ್ಯವೇ ಕಾಣದಷ್ಟು ಅನಧಿಕೃತ ಆಪ್ಟಿಕಲ್ ಫೈಬರ್ ಕೇಬಲ್‌ಗಳಿಂದ ತುಂಬಿಹೋಗಿದೆ. ಈ ಅನಧಿಕೃತ ಕೇಬಲ್‌ಗಳಿಂದ ಸರ್ಕಾರದ ಬೊಕ್ಕಸಕ್ಕೆ ಧಕ್ಕೆಯಾಗಿರುವ ಈ ಸಂಗತಿಯನ್ನು ತಿಳಿಸಬಯಸುತ್ತೇನೆ.

ಬೆಂಗಳೂರಿನಲ್ಲಿ ಅದರಲ್ಲೂ ಪ್ರಮುಖವಾಗಿ ನನ್ನ ಮತಕ್ಷೇತ್ರವಾದ ಬೆಂಗಳೂರು ಪೂರ್ವ, ಮಹಾದೇವಪುರ ವಲಯ, ಕೆ.ಆರ್.ಪುರಂ, ಬೆಂಗಳೂರು ದಕ್ಷಿಣ ವಲಯ, ಬೊಮ್ಮನಹಳ್ಳಿ ವಿಧಾನ ಸಭಾ ಭಾಗದಲ್ಲಿ ಹೆಚ್ಚಾಗಿ ಆಪ್ಟಿಕಲ್ ಫೈಬರ್ ಕೇಬಲ್‌ನ್ನು ಅಳವಡಿಸಲು ವಿವಿಧ ಟೆಲಿಕಾಂ ಕಂಪನಿಗಳಿಗೆ ಸರ್ಕಾರದ ನಿಯಮಗಳಿಗೆ ಅನುಸಾರವಾಗಿ ಅನುಮತಿಯನ್ನು ನೀಡಿರುತ್ತದೆ. ಆದರೆ ಈ ಟೆಲಿಕಾಂ ಕಂಪನಿಗಳು ಓ.ಎಫ್.ಸಿ. ಕೇಬಲ್‌ಗಳನ್ನು ಕಾನೂನಿನ ರೀತಿಯಲ್ಲಿ ಸುರಕ್ಷತಾ ನಿಯಮಗಳಿಗೆ ಅನುಗುಣವಾಗಿ ಅಳವಡಿಸದೇ ಅನಧಿಕೃತವಾಗಿ ಪಾದಚಾರಿಮಾರ್ಗ, ವಿದ್ಯುತ್ ಕಂಬಗಳ ಮೇಲೆ ಹಾಗೂ ಕೇಬಲ್‌ಗಳನ್ನು ಮರಗಳಿಗೆ ಸುತ್ತು ಹಾಕಿ ಮರದ ಸೌಂದರ್ಯವನ್ನು ಹಾಳು ಮಾಡಿ, ಫುಟ್‌ಪಾತ್ ಹಾಗೂ ರಸ್ತೆಯಲ್ಲಿ ಸುಗಮವಾಗಿ ಸಂಚಾರ ಮಾಡಲಾಗದೇ, ಎಷ್ಟೋ ಸಾರ್ವಜನಿಕರು ಈ ರಸ್ತೆಗಳಲ್ಲಿರುವ ಕೇಬಲ್‌ಗಳಿಂದ ಎಡವಿ ಬಿದ್ದು ಹಾಗೂ ಅಪಘಾತಗಳು ಸಂಭವಿಸಿರುವುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ.

ಬಿಬಿಎಂಪಿ ಅಧಿಕಾರಿಗಳು ಬೇಜವಾಬ್ದಾರಿತನ ಹಾಗೂ ಖಾಸಗಿ ಸಂಸ್ಥೆಯವರೊಂದಿಗೆ ಶಾಮೀಲಾಗಿ, ಈ ಓ.ಎಫ್.ಸಿ. ಗಳನ್ನು ಅಳವಡಿಸುವಾಗ ಯಾವುದೇ ರೀತಿಯ ಮುಂಜಾಗ್ರತೆಯನ್ನು ವಹಿಸದೇ ಸಾರ್ವಜನಿಕರಿಗೆ ಸುರಕ್ಷತೆ, ನಗರ ಸೌಂದರ್ಯ ಹಾಗೂ ಸರ್ಕಾರದ ಬೊಕ್ಕಸಕ್ಕೆ ಧಕ್ಕೆಯನ್ನು ತಂದಿರುತ್ತಾರೆ. ಓ.ಎಫ್.ಸಿ. ಗಳನ್ನು ಮೇಲ್ಮಟ್ಟದಲ್ಲಿ ಅಳವಡಿಸಿದ ಸಂದರ್ಭದಲ್ಲಿ ಓ.ಎಫ್.ಸಿ. ಕೇಬಲ್‌ಗಳನ್ನು ಸುರಳಿ ಸುತ್ತಿ ಕಂಬಗಳು/ ಮರಗಳಿಗೆ ನೇತು ಹಾಕುವ ಪ್ರವೃತ್ತಿ ವ್ಯಾಪಕವಾಗಿದ್ದು, ಇದು ನಗರ ಸೌಂದರ್ಯಕ್ಕೆ ಧಕ್ಕೆ ತರುತ್ತದೆ.

ಪಾಲಿಕೆಯು ಮೇಲ್ಮಟ್ಟದ ಓ.ಎಫ್.ಸಿ. ಕೇಬಲ್‌ಗಳ ಅಳವಡಿಕೆ ಹಾಗೂ ಇತರೆ ಕೇಬಲ್ ಕಾಯಿಲ್‌ಗಳ ಅನುಮತಿಯನ್ನು ನೀಡದೇ ಇದ್ದರು. ಅಧಿಕಾರಿಗಳ ಭ್ರಷ್ಟ ವ್ಯವಸ್ಥೆಗೆ ಕುಮ್ಮಕ್ಕು ನೀಡಿ ಈ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ. ಈ ಕರಾಳ ದಂಧೆಯೂ ವ್ಯವಸ್ಥಿತವಾಗಿ ರಾತ್ರೋರಾತ್ರಿ ರಸ್ತೆಬದಿ ಗುಂಡಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೋಡಿ ಆಳವಾದ ನೆಲದಲ್ಲಿ ಕೇಬಲ್‌ಗಳನ್ನು ಹುದುಗಿಸಿಟ್ಟು ಖಾಸಗೀ ಸಂಸ್ಥೆಗಳು ಕೋಟ್ಯಾಂತರ ಹಣವನ್ನು ಸರ್ಕಾರಕ್ಕೆ ಮೋಸ ಮಾಡುತ್ತಿವೆ.

ಪಾಲಿಕೆ ವತಿಯಿಂದ ಅನುಮತಿಯನ್ನು ನೀಡಿದ ಟೆಲಿಕಾಂ ಸಂಸ್ಥೆಗಳಿಂದ ಓ.ಎಫ್.ಸಿ. ಅಳವಡಿಕೆ, ಡಕ್ಟ್ ಸರ್ವಿಸ್‌ಗಳಿಗೆ ಪ್ರತಿವರ್ಷ 300 ರಿಂದ 400 ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ಸಾಮರ್ಥ್ಯವಿದ್ದರೂ ಬಿಬಿಎಂಪಿ ಅಧಿಕಾರಿಗಳು ಈ ಟೆಲಿಕಾಂ ಸಂಸ್ಥೆಗಳೊಂದಿಗೆ ಶಾಮೀಲಾಗಿ ಕೇವಲ 60–70 ಕೋಟಿ ರೂ.ಗಳ ಶುಲ್ಕ ಸಂಗ್ರಹಿಸುತ್ತಿದ್ದಾರೆ. ಅಲ್ಲದೇ ನಿಗದಿತ ರಸ್ತೆಗಳಲ್ಲಿ ಕೇಬಲ್ ಅಳವಡಿಸುವಾಗ ಅಧಿಕೃತವಾಗಿ ಬಿಬಿಎಂಪಿ ಓ.ಎಫ್.ಸಿ. ವಿಭಾಗ ಸುರಕ್ಷತಾ ಕ್ರಮಗಳಿಗೆ ಅನುಸಾರವಾಗಿ ಅವಕಾಶವನ್ನು ನೀಡುತ್ತಾರೆ. ಆದರೆ ಈ ಸಂಸ್ಥೆಗಳು ಓ.ಎಫ್.ಸಿ. ಕೇಬಲ್ ಅಳವಡಿಸುವ ಸೇವಾ ಕಂಪನಿಗಳು ಅನುಮತಿ ಪಡೆದಕ್ಕಿಂತ ಹೆಚ್ಚಾಗಿ ಪಿಟ್ ತೋಡಿ ಹೆಚ್ಚುವರಿ ಕೇಬಲ್‌ಗಳನ್ನು ಹಾಕಿ ಬಿಬಿಎಂಪಿ ಗೆ ನೀಡುವ ನೆಲ ಬಾಡಿಗೆಯ ಶುಲ್ಕವನ್ನು ಪಾಲಿಕೆಗೆ ಕಟ್ಟಲು ತಪ್ಪಿಸಿಕೊಳ್ಳುತ್ತಿವೆ. ಈ ರೀತಿಯ ವಂಚನೆಗೆ ಸರ್ಕಾರದ ಅಧಿಕಾರಿಗಳು ಖಾಸಗೀ ಸಂಸ್ಥೆಗಳೊಂದಿಗೆ ಕೈಜೋಡಿಸಿದ್ದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನು ಉಂಟು ಮಾಡುತ್ತಿರುವುದರ ಜೊತೆಗೆ ಬೆಂಗಳೂರಿನ ಸೌಂದರ್ಯ ಮತ್ತು ನಿಸರ್ಗವನ್ನು ಮಲಿನಗೊಳಿಸಿ, ಜನರ ಸಂಚಾರಕ್ಕೆ ಕುಂದುಂಟು ಮಾಡುತ್ತಿರುವುದಕ್ಕೆ ಕಡಿವಾಣ ಹಾಕುವ ಸಂಬಂಧ ಖಾಸಗೀ ಸಂಸ್ಥೆಗಳ ಜೊತೆಗೆ ಶಾಮೀಲಾಗಿ ಭ್ರಷ್ಟಾಚಾರ ನಡೆಸಿ ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡಿರುವ ಅಧಿಕಾರಿಗಳ ಮೇಲೆ ಸೂಕ್ತ ತನಿಖೆ ನಡೆಸಿ, ಕಠಿಣ ಕ್ರಮಕೈಗೊಂಡು ಇನ್ನು ಮುಂದೆ ಈ ರೀತಿಯ ಕಾನೂನು ಬಾಹಿರ ಚಟುವಟಿಕೆಗಳು ನಡೆಯದಂತೆ ಕಡಿವಾಣ ಹಾಕುವ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಲು ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಶೂನ್ಯವೇಳೆ ಪ್ರಸ್ತಾವದಲ್ಲಿ ತಂದಿರುವ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸಿಕೊಡಲಾಗುತ್ತದೆ.

**(ಮುಂದು)**

**(536)/22–3–2021/1–20/ಎಲ್‌ಎಂ(ಬಿಎಸ್‌ಡಿ)/ಬಿಎನ್‌ಎಸ್**

**ಋ) ವಿಷಯ: ಉಡುಪಿ ಜಿಲ್ಲೆ ಬೈಂದೂರು ತಾಲ್ಲೂಕಿನ ಖಂಬದ ಕೋಣೆ ಗ್ರಾಮದ ಹಲಗೇರಿ ಸ.ನಂ.166ರಲ್ಲಿನ 30 ಎಕರೆ ಅರಣ್ಯ ಪ್ರದೇಶವನ್ನು ಕೈಗಾರಿಕೆ ವಲಯ ಪ್ರದೇಶವಾಗಿ ಗುರುತಿಸಿರುವ ಬಗ್ಗೆ.**

----

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಖಂಬದ ಕೋಣೆ ಗ್ರಾಮದ ಹಳಗೇರಿಯ ಸ.ನಂ 166 ರಲ್ಲಿನ ಪ್ರದೇಶವು ಸಂಪೂರ್ಣ ಅರಣ್ಯ ಪ್ರದೇಶವಾಗಿದ್ದು ಜಿಂಕೆ, ಕಾಡುಹಂದಿ, ಮೊಲ, ಕಾಡು ಕೋಳಿ, ನವಿಲು ಮೊದಲಾದ ಪ್ರಾಣಿ ಪಕ್ಷಿಗಳಿಗೆ ಆಶ್ರಯತಾಣವಾಗಿರುತ್ತದೆ. ಈ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡು ಸುಮಾರು 500 ಎಕರೆ ಕೃಷಿ ಭೂಮಿಯಿದ್ದು ಸುಮಾರು 150 ಕುಟುಂಬಗಳು ಸಾಂಪ್ರದಾಯಿಕ ಕೃಷಿಯ ಮೇಲೆ ಅವಲಂಬಿತರಾಗಿರುತ್ತಾರೆ. ರೈತರು ತಮ್ಮ ವ್ಯವಸಾಯಕ್ಕೆ ಜೈವಿಕ ಗೊಬ್ಬರಕ್ಕೆ ಅರಣ್ಯ ಉತ್ಪನ್ನಗಳಾದ ತರಗೆಲೆ ಮತ್ತು ಸೊಪ್ಪನ್ನು ಬಳಸುತ್ತಿದ್ದು, ತಮ್ಮ ಜಾನುವಾರುಗಳಿಗೆ ಈ ಅರಣ್ಯದ ತಪ್ಪಲಿನಲ್ಲಿ ಬೆಳೆಯುವ ಹುಲ್ಲನ್ನು ಬಳಸುತ್ತಿದ್ದಾರೆ.

ಭೌಗೋಳಿಕವಾಗಿ ಈ ಪ್ರದೇಶವು ಕಿರು ಪರ್ವತದ(ಗುಡ್ಡ)ದ ಇಳಿಜಾರಾಗಿದ್ದು ಕೈಗಾರಿಕೆಗೆ ಪ್ರಶಸ್ತವಾಗಿಲ್ಲ. ಕೈಗಾರಿಕೆಗಾಗಿ ಜಾಗವನ್ನು ಸಮತಟ್ಟು ಮಾಡಿದಲ್ಲಿ ಹಿಂಭಾಗದ ಪರ್ವತ ಭಾಗದಲ್ಲಿ ಭೂ ಕುಸಿತದಂತಹ ನೈಸರ್ಗಿಕ ವಿಕೋಪದ ಸಾಧ್ಯತೆಯಿರುತ್ತದೆ. ಅಲ್ಲದೇ ಹಳ್ಳ ದಿಣ್ಣೆಯಿಂದ ಮುಚ್ಚಬೇಕಾಗುವುದರಿಂದ ಅಂತರ್ಜಲ ಕುಸಿತವಾಗಿ ಕುಡಿಯುವ ನೀರಿಗೆ ಮತ್ತು ವ್ಯವಸಾಯಕ್ಕೆ ಜಲಕ್ಷಾಮ ಉಂಟಾಗುವ ಭೀತಿಯಿರುತ್ತದೆ. ಕೃಷಿ ಭೂಮಿ ಮತ್ತು ಜನವಸತಿಯ ಹತ್ತಿರವಿರುವ ಈ ಪ್ರದೇಶವನ್ನು ಕೈಗಾರಿಕಾ ವಲಯವಾಗಿ ಗುರುತಿಸುವುದರ ಬಗ್ಗೆ ಸ್ಥಳೀಯ ರೈತರು ಆತಂಕಿತರಾಗಿದ್ದು, ತಮ್ಮ ವಿರೋಧವನ್ನು ವ್ಯಕ್ತಪಡಿಸುತ್ತಿದ್ದಾರೆ.

ಅರಣ್ಯ ಪ್ರದೇಶವನ್ನು ಕೈಗಾರಿಕಾ ವಲಯ ಪ್ರದೇಶವನ್ನಾಗಿ ಆಯ್ಕೆ ಮಾಡಿರುವುದು ಅವೈಜ್ಞಾನಿಕ ಮತ್ತು ಅಪ್ರಸ್ತುತ ನಿರ್ಧಾರವಾಗಿದ್ದು, ಕೃಷಿಯನ್ನೇ ಮೂಲ ಉದ್ಯೋಗ ಮಾಡಿಕೊಂಡ ಎಲ್ಲಾ ಕುಟುಂಬಗಳು ತಮ್ಮ ಅಸ್ತಿತ್ವದ ಮತ್ತು ಭವಿಷ್ಯದ ಕುರಿತು ಆತಂಕಿತರಾಗಿದ್ದು, ಕೈಗಾರಿಕಾ ವಲಯವಾಗಿ ಅಭಿವೃದ್ಧಿಪಡಿಸುವ ಪ್ರಸ್ತಾವನೆಯನ್ನು ಕೈಬಿಡುವಂತೆ ಸರ್ಕಾರವನ್ನು ಆಗ್ರಹಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಮಂಡಿಸಿರುವ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಅರಣ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಎ) ವಿಷಯ: ಗದಗ ಜಿಲ್ಲೆ ಶಿರಹಟ್ಟಿ ಪಟ್ಟಣದಲ್ಲಿ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿನಿಯರ ವಸತಿ ನಿಲಯ 2017ರಲ್ಲಿ ಉದ್ಘಾಟನೆ ಆದರೂ ವಿದ್ಯಾರ್ಥಿನಿಯರಿಗೆ ಲಭ್ಯವಾಗದೇ ಇರುವ ಬಗ್ಗೆ.**

---

**ಶ್ರೀ ಎಸ್.ವಿ.ಸಂಕನೂರ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಗದಗ ಜಿಲ್ಲೆಯ ಶಿರಹಟ್ಟಿ ಪಟ್ಟಣದಲ್ಲಿ ಶ್ರೀ ಜಗದ್ಗುರು ಫಕೀರೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಹಿಂಭಾಗದಲ್ಲಿ ನಿರ್ಮಿಸಿದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಯರ ವಸತಿ ನಿಲಯವು 2017ರಲ್ಲಿಯೇ ಅಂದರೆ 4 ವರ್ಷಗಳ ಹಿಂದೆಯೇ ಉದ್ಘಾಟನೆ ಆಗಿದ್ದರೂ ಕೂಡಾ ವಿದ್ಯಾರ್ಥಿನಿಯರ ವಸತಿಗೆ ಲಭ್ಯವಾಗದೇ ಇರುವುದನ್ನು ಸ್ಥಳೀಯ ಜನಪ್ರತಿನಿಧಿಗಳು ಖಂಡಿಸಿ ಪತ್ರಿಕಾ ಹೇಳಿಕೆಯನ್ನು ನೀಡಿರುವರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಯರ ಉನ್ನತ ಶಿಕ್ಷಕಣಕ್ಕೆ ಒತ್ತು ನೀಡಿ ಕೋಟ್ಯಿಗಟ್ಟಲೆ ಸರ್ಕಾರದ ಹಣ ವೆಚ್ಚ ಮಾಡಿ ಸುಂದರವಾದ ವಸತಿ ನಿಲಯದ ಕಟ್ಟಡ ನಿರ್ಮಾಣವಾಗಿದ್ದರೂ ಇದರ ಬಳಕೆ ಆಗದೇ ಇರುವುದಕ್ಕೆ ಕಾಲೇಜು ಶಿಕ್ಷಣ ಇಲಾಖೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯತೆಯೇ ಕಾರಣವೆಂದು ಜನಪ್ರತಿನಿಧಿಗಳು ಆರೋಪಿಸಿದ್ದಾರೆ. ಸದ್ಯ ಈ ಕಟ್ಟಡವು ದುರ್ಬಳಕೆ ಆಗುತ್ತಿದ್ದು ಕಟ್ಟಡದಲ್ಲಿ ಸರಾಯಿ ಬಾಟ್ಲಿ ಮತ್ತು ಮಾಂಸದ ತುಂಡುಗಳು ಬಿದ್ದಿರುವುದು ಸಹಜವಾಗಿರುವುದು. ಈ ಕುರಿತು ಜನಪ್ರತಿನಿಧಿಗಳು ಸಂಬಂಧಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರನ್ನು ಪ್ರಶ್ನಿಸಿದಾಗ ವಿದ್ಯಾರ್ಥಿನಿಯರ ವಸತಿ ನಿಲಯವು ಕಾಲೇಜು ಶಿಕ್ಷಣ ಇಲಾಖೆಯಿಂದ ಸಮಾಜ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಿದ್ದು ಕಟ್ಟಡ ಕಾಮಾಗಾರಿ ಅಪೂರ್ಣವಾಗಿದೆ ಮತ್ತು ಕಟ್ಟಡದಲ್ಲಿ ಎಲ್ಲಾ ಸೌಲಭ್ಯಗಳಿಲ್ಲ ಹಾಗಾಗಿ ಇದು ಬಳಕೆ ಆಗದೇ ಉಳಿದಿದೆ ಎಂದು ಉತ್ತರ ನೀಡಿರುವುದಾಗಿ ಪತ್ರಿಕೆಯಲ್ಲಿ ವರದಿಯಾಗಿದೆ.

ಒಟ್ಟಾರೆ ಕಾಲೇಜು ಶಿಕ್ಷಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ ನಡುವೆ ಸಮನ್ವಯತೆ ಇಲ್ಲದಿರುವುದಕ್ಕಾಗಿ ವಿದ್ಯಾರ್ಥಿನಿಯರ ವಸತಿ ನಿಲಯ ಬಳಕೆ ಆಗದಿರುವುದರು ದುರ್ದೈವದ ಸಂಗತಿಯಾಗಿದೆ. ಆದ್ದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಯರ ಹಿತದೃಷ್ಟಿಯಿಂದ ಉನ್ನತ ಶಿಕ್ಷಣ ಸಚಿವರು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಈ ವಿಷಯದ ಕಡೆಗೆ ಗಮನ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹರಿಸಿ ವಿದ್ಯಾರ್ಥಿನಿಯರಿಗೆ ವಸತಿ ಸೌಲಭ್ಯ ದೊರಕುವಂತೆ ಕ್ರಮ ಕೈಗೊಳ್ಳಬೇಕೆಂದು ಇಬ್ಬರು ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಮಂಡಿಸಿರುವ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಮತ್ತು ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಎ) ವಿಷಯ: ವಿಜಯಪುರ ನಿವಾಸಿಗಳಿಗೆ ಕುಡಿಯುವ ನೀರನ್ನು 9–10 ದಿನಗಳಿಗೆ ಒಮ್ಮೆ ಸರಬರಾಜು ಮಾಡುತ್ತಿರುವ ಬಗ್ಗೆ.**

---

**ಶ್ರೀ ಪ್ರಕಾಶ್ ಕೆ.ರಾಠೋಡ್(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಗಳೆ, ವಿಜಯಪುರದ ನಿವಾಸಿಗಳ ಪಾಡು ಸಮುದ್ರದ ನಂಟು ಉಪ್ಪಿಗೆ ಬಡತನ ಎಂಬಂತೆ ಆಗಿದೆ. ವಿಜಯಪುರದ ಐತಿಹಾಸಿಕ ನಗರದಲ್ಲಿ, ಇದು ಒಂದು ಬರಗಾಲ ಪೀಡಿತ ಜಿಲ್ಲೆ ಎಂಬ ಹಣೆಪಟ್ಟಿಯೊಂದಿಗೆ ಬೇಸಿಗೆ ಆರಂಭದಲ್ಲಿಯೇ ಬಿಸಿಲಿನ ತಾಪ ಮೈ ಸುಡುತ್ತಿದೆ. ಕುಡಿಯುವ ನೀರಿಗಾಗಿ ಜನ ಪರಿತಪಿಸುತ್ತಿದ್ದಾರೆ. ಜಿಲ್ಲೆಗೆ ಹೊಂದಿಕೊಂಡಂತೆ ಆಲಮಟ್ಟಿ ಅಣೆಕಟ್ಟು ಇದ್ದರೂ ನಗರದ ಜನರಿಗೆ ಎಂಟತ್ತು ದಿನಗಳಿಗೊಮ್ಮೆ ಕುಡಿಯುವ ನೀರು ಪೂರೈಕೆ ಆಗುತ್ತಿದೆ. ಈ ಏಪ್ರಿಲ್–ಮೇ ತಿಂಗಳ ಕಡು ಬೇಸಿಗೆಯ ದಿನಗಳಲ್ಲಿ ಒಂದು ಹನಿ ನೀರಿಗೂ ಪರಿತಪಿಸುವಂತಾಗಿದೆ. ಶ್ರೀಮಂತರು ಬಾಟಲಿ ನೀರು ಖರೀದಿಸುತ್ತಾರೆ. ಆದರೆ ಬಡವರು ಹಾಗೂ ಮಧ್ಯಮವರ್ಗದವರ ಪರಿಸ್ಥಿತಿ ಮಾತ್ರ ಯಾರು ಕೇಳವಂತಿಲ್ಲ. ಎಂಟತ್ತು ದಿನಗಳಿಗೊಮ್ಮೆ ಕುಡಿಯುವ ನೀರು ಪೂರೈಕೆ ಆಗುತ್ತಿರುವುದರಿಂದ ಹನಿ ಹನಿ ನೀರಿಗೂ ಸಮಸ್ಯೆ ಎದುರಿಸಬೇಕು. ಬೇಸಿಗೆಯ ಆರಂಭದಲ್ಲಿಯೇ ನೀರಿನ ಸಮಸ್ಯೆ ಇಷ್ಟು ಉಲ್ಬಣವಾದರೆ, ಇನ್ನು ಬರುವ ಮುಂದಿನ ದಿನಗಳಲ್ಲಿ ಜನರ ಪಾಡೇನು?

ಏತನ್ಮಧ್ಯೆ ನಗರದ ಹೊರ ವಲಯದಲ್ಲಿರುವ ಯೋಗಾಪುರ ಕಾಲೋನಿಗೆ ಕಳೆದ ಒಂದೂವರೆ ತಿಂಗಳಿಂದ ನೀರು ಪೂರೈಕೆ ಮಾಡುವ ಪೈಪ್‌ಲೈನ್ ಅಳವಡಿಸುವ ನೆಪದಲ್ಲಿ ನೀರು ಪೂರೈಕೆ ಮಾಡದಿರುವುದರಿಂದ ಜನರು ಜಲ ಮಂಡಳಿಗೆ ಹಿಡಿ ಶಾಪ ಹಾಕುತ್ತಾ ನೀರಿಗಾಗಿ ಕೊಡಗಳನ್ನು ಹೊತ್ತುಕೊಂಡು ಅಲೆದಾಡುತ್ತಿರುವ ವಿಚಾರವು ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿರುವುದರಿಂದ ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಮಂಡಿಸಿರುವ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ನಗರಾಭಿವೃದ್ಧಿ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

**7. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರುಗಳಿಂದ ಉತ್ತರ**

**ಅ) ವಿಷಯ:– ಕೊಡಗು ಜಿಲ್ಲೆಯಲ್ಲಿ ಹುಲಿ ದಾಳಿಯಿಂದ ಉಂಟಾಗುತ್ತಿರುವ ಅಪಾಯಕಾರಿ ಮತ್ತು ಆಂತಕಕಾರಿ ಸಮಸ್ಯೆ ಬಗ್ಗೆ.**

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ವೀಣಾ ಅಚ್ಚಯ್ಯನವರು ದಿನಾಂಕ: 9–03–2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಶ್ರೀ ಅರವಿಂದ ಲಿಂಬಾವಳಿ, ಅರಣ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಪ್ರತಿಯನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಆ) ವಿಷಯ: ತ್ಯಾಜ್ಯ ಶಾಖವನ್ನು ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸಬಲ್ಲ ಪರಿಸರ ಸ್ನೇಹಿಯಾಗಿ ಅಭಿವೃದ್ಧಿಪಡಿಸಿರುವ “ಥರ್ಮೋ ಎಲೆಕ್ಟ್ರಿಕ್ ತಂತ್ರಾಂಶ”ವನ್ನು ಜನತೆಯ ತನಕ ತರಲು ಅಗತ್ಯ ಪ್ರೋತ್ಸಾಹ ನೀಡುವ ಬಗ್ಗೆ.**

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ದಿನಾಂಕ: 10-03-2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಉಪ ಮುಖ್ಯಮಂತ್ರಿಗಳು ಹಾಗೂ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಇಲಾಖೆಯ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಇ) ವಿಷಯ: ಉಡುಪಿ ಜಿಲ್ಲೆಯ ಪಡುಬಿದ್ರೆಯಲ್ಲಿರುವ 2 x 600 ಮೆಗಾ ವ್ಯಾಟ್ ಸಾಮರ್ಥ್ಯದ ಯು.ಪಿ.ಎಸ್.ಎಲ್ ಉಷ್ಣ ವಿದ್ಯುತ್ ಸ್ಥಾವರದ ಮಾಲಿನ್ಯದಿಂದ ಉಂಟಾಗುವ ಅನಾಹುತದ ಬಗ್ಗೆ.**

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರು ದಿನಾಂಕ: 10-03-2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿ ಪರಿಸ್ಥಿತಿ ಇಲಾಖೆಯ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಈ) ವಿಷಯ: ಬೇರೆ ರಾಜ್ಯಗಳಲ್ಲಿ ಕನ್ನಡ ಪ್ರತಿಕೋದ್ಯಮದಲ್ಲಿ ತೊಡಗಿಕೊಂಡಿರುವ ಮಾಧ್ಯಮ ಪ್ರತಿನಿಧಿಗಳ ಬಗ್ಗೆ.**

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಹರೀಶ್ ಕುಮಾರ್‌ರವರು ದಿನಾಂಕ: 16-03-2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉ) ವಿಷಯ: ಬಾಲ್ಯವಿವಾಹ ನಿಷೇಧ ಕಾಯ್ದೆ-2006ರ ಬಗ್ಗೆ.**

---------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್‌ರವರು ದಿನಾಂಕ: 16-03-2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ, ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಊ) ವಿಷಯ:– ಗ್ರಾಮೀಣ ಪ್ರದೇಶದಲ್ಲಿ ಸಾಲ ನೀಡುತ್ತಿರುವ ಮೈಕ್ರೋ ಫೈನಾನ್ಸ್‌ಗಳನ್ನು ನಿಯಮಗಳಡಿಯಲ್ಲಿ ತರುವ ಬಗ್ಗೆ.**

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿರವರು ದಿನಾಂಕ: 16–03–2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**೩) ವಿಷಯ:– ಕಾವೇರಿ ನದಿ ನೀರಿಗೆ ಕಾರ್ಖಾನೆಗಳ ಕೆಮಿಕಲ್ ಮಿಶ್ರಿತ ಹಾಗೂ ಒಳಚರಂಡಿ ಕಲ್ಮಶ ನೀರು ಮಿಶ್ರಣವಾಗುತ್ತಿರುವ ಬಗ್ಗೆ.**

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ದಿನಾಂಕ: 17–03–2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿ ಪರಿಸ್ಥಿತಿ ಇಲಾಖೆಯ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಎ) ವಿಷಯ:- ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸುತ್ತಿರುವ ಬಗ್ಗೆ**

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಸಿ.ಕೊಂಡಯ್ಯನವರು ದಿನಾಂಕ: 18-03-2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ, ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಏ) ವಿಷಯ:- ಕೇಂದ್ರ ಸರ್ಕಾರದ ಜಲ ಜೀವನ್ ಮಿಷನ್ ಯೋಜನೆ ಗ್ರಾಮೀಣ ಪ್ರದೇಶಗಳ ಮನೆ ಮನೆಗೂ ನೀರು ಪೂರೈಕೆಯಲ್ಲಿ ರಾಜ್ಯ ಹಿಂದುಳಿದಿರುವ ಬಗ್ಗೆ.**

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್‌ರವರು ದಿನಾಂಕ: 18-03-2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಐ) ವಿಷಯ: **ಉದಯರವಿ ಮನೆಯನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಪರಿವರ್ತಿಸುವ ಬಗ್ಗೆ**

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ನಾಗರಾಜು(ಸಂದೇಶ್ ನಾಗರಾಜು)ರವರು ದಿನಾಂಕ: 18-03-2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಅರಣ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸದನದಲ್ಲಿ ಹಾಜರಿರಬೇಕಾದ ಮಾನ್ಯ ಸಚಿವರುಗಳು ಹಾಗೂ ಅಧಿಕಾರಿಗಳು:**

**ಸಭಾಪತಿಯವರು:–** ದಿನಾಂಕ:22–3–2021ರ ಸೋಮವಾರದಂದು ಕಡ್ಡಾಯವಾಗಿ ಸದನದಲ್ಲಿ ಹಾಜರಿರಬೇಕಾದ ಮಾನ್ಯ ಸಚಿವರುಗಳು.

1. ಶ್ರೀ ಲಕ್ಷಣ ಸವದಿ
2. ಶ್ರೀ ಮುರಗೇಶ್.ಎಸ್.ನಿರಾಣಿ
3. ಶ್ರೀ ಕೆ.ಸಿ.ನಾರಾಯಣಗೌಡ
4. ಶ್ರೀ ಜೆ.ಸಿ.ಮಾಧುಸ್ವಾಮಿ
5. ಶ್ರೀ ಆರ್.ಶಂಕರ್
6. ಶ್ರೀ ಬಿ.ಸಿ.ಪಾಟೀಲ್

**22–3–2021ರಂದು ಬೆಳಗ್ಗೆ ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಅಧಿಕಾರಿಗಳು**

1. ಶ್ರೀ ಎಂ.ವಿ.ವೆಂಕಟೇಶ್, ಆಯುಕ್ತರು ಜಲಾನಯನ ಅಭಿವೃದ್ಧಿ ಇಲಾಖೆ
2. ಶ್ರೀ ರಾಜಾ ಕಿಶೋರ ಸಿಂಗ್, ಪ್ರಧಾನ ಕಾರ್ಯದರ್ಶಿ, ಅರಣ್ಯ ಸಂರಕ್ಷಣಾ ಇಲಾಖೆ
3. ಶ್ರೀಮತಿ ಅನ್ನಪೂರ್ಣ, ಸರ್ಕಾರದ ಉಪ ಕಾರ್ಯದರ್ಶಿಗಳು
4. ಶ್ರೀ ಟಿ.ವಿ.ಜಾನ್ಸನ್ ಅಥೋನಿ, ಸರ್ಕಾರದ ಅಧೀನ ಕಾರ್ಯದರ್ಶಿ

**22–3–2021ರಂದು ಮಧ್ಯಾಹ್ನ ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಅಧಿಕಾರಿಗಳು**

1. ಶ್ರೀ ಪ್ರದೀಪ್, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
2. ಶ್ರೀ ಪಂಕಜಕುಮಾರ್ ಪಾಂಡೆ, ಪ್ರಧಾನ ಕಾರ್ಯದರ್ಶಿಳು, ಪ್ರವಾಸೋದ್ಯಮ ಇಲಾಖೆ
3. ಶ್ರೀಮತಿ ಭಾಗ್ಯ, ಆಂತರಿಕ ಆರ್ಥಿಕ ಸಲಹೆಗಾರರು, ಸರ್ಕಾರದ ಉಪ ಕಾರ್ಯದರ್ಶಿಯವರು
4. ಶ್ರೀ ಆರ್.ಸೋಮಶೇಖರ್, ಸರ್ಕಾರದ ಅಪರ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಗಳೆ, ನಾವು ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡುತ್ತೇವೆ. ಅದಕ್ಕೆ ಸಚಿವರು ಉತ್ತರ ಕೊಡಬೇಕು. ಒಂದು ವೇಳೆ ಅಧಿವೇಶನ ಮುಗಿಯುವುದರೊಳಗೆ ಬರುವುದಕ್ಕೆ ಆಗದಿದ್ದರೆ, ಅಧಿವೇಶನದ ಕೊನೆ ದಿನ ಉತ್ತರಗಳು ಬಂದರೆ ಅವುಗಳನ್ನು lay

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬಹುದು. ಆದರೆ ಒಂದೆರಡು ದಿನಗಳಲ್ಲಿ ಬರುವ ಉತ್ತರವನ್ನು ಸಚಿವರು ಸದನದಲ್ಲಿ ಓದಲು ಸಮಯವಿಲ್ಲವೇ? ನಾವು ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ ವಿಷಯಕ್ಕೆ ಕನಿಷ್ಠ ಸಚಿವರು ಸದನದಲ್ಲಿ ಬಂದು ಉತ್ತರವನ್ನು ಓದಿ ಹೇಳಬೇಕು. ಮುಂಚೆ ಸಚಿವರು ಉತ್ತರಗಳನ್ನು ಓದುತ್ತಿದರು.

**ಸಭಾಪತಿಯವರು:–** ತಾವು ಹೇಳುವುದು ಈಗ lay ಮಾಡಿದ ಶೂನ್ಯವೇಳೆಯ ಉತ್ತರಗಳನ್ನು ಸಂಬಂಧಪಟ್ಟ ಸಚಿವರು ಬಂದು ಓದಬೇಕು ಎಂದು ಹೇಳುತ್ತಿದ್ದೀರಿ ಅಲ್ಲವೆ.

**ಶ್ರೀ ಅರುಣ ಶಹಾಪೂರ:–** ಹಿಂದೆ ಈ ವಿಚಾರವನ್ನು ಹೇಳಿದ್ದರೆ ಚೆನ್ನಾಗಿತ್ತು.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಈಗ ನನ್ನ ಹಕ್ಕು ಇರುವುದು ಈ ಸ್ಥಾನದಲ್ಲಿ.

**ಸಭಾಪತಿಯವರು:–** ಶೂನ್ಯವೇಳೆಗೆ ಕೊಡುವ ಉತ್ತರಗಳನ್ನು ಸಚಿವರು ಓದಿ ಹೇಳಬೇಕು. ಮುಂದಿನ ಬಾರಿ ಉತ್ತರಗಳನ್ನು ಸಚಿವರು ಸದನದಲ್ಲಿ ಓದಿ ಹೇಳುವಂತಹ ಪ್ರವೃತ್ತಿಯನ್ನು ಬೆಳೆಸಿಕೊಳ್ಳಿ. ಸದಸ್ಯರು ಹೇಳುವುದರಲ್ಲಿ ಏನು ತಪ್ಪು ಇಲ್ಲ. ಸಚಿವರು ಬಂದು ಉತ್ತರವನ್ನು ಓದಿ ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಇನ್ನು ಮುಂದೆ ತಾವು ಹೇಳಿದಂತೆ ಮಾಡುತ್ತೇವೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಗಳೆ, ತಾವು ಹೇಳಿರುವುದು ಸರಿ ಇದೆ. ಎರಡು ದಿನಗಳಲ್ಲಿ ಉತ್ತರ ಕೊಡಬೇಕೆಂದು ನಿಯಮವಿದೆ. ಆದರೆ ಆ ರೀತಿಯಾಗುತ್ತಿಲ್ಲ.

**ಸಭಾಪತಿಯವರು:–** ನಾವು ಪದೇ–ಪದೇ ಹೇಳುತ್ತಿದ್ದೇವೆ. ಸಭಾನಾಯಕರೆ, ಅಧಿಕಾರಿಗಳಿಂದ ಆದಷ್ಟು ಬೇಗನೆ ಉತ್ತರವನ್ನು ಕಳುಹಿಸಿಕೊಳ್ಳಿ.

**ಶ್ರೀ ಕೆ.ಹರೀಶ್‌ಕುಮಾರ್:–** ಮೊದಲನೆಯ ವಾರದಲ್ಲಿ ನಾನು ಕೇಳಿದ ಶೂನ್ಯವೇಳೆಗೆ ಇನ್ನು ಉತ್ತರ ಬಂದಿರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಶೂನ್ಯವೇಳೆಯ ಪ್ರಸ್ತಾಪಕ್ಕೆ ಉತ್ತರ ಕೊಟ್ಟಿಲ್ಲ ಎಂದು ಇನ್ನೊಂದು ಶೂನ್ಯವೇಳೆಯನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಮಾನ್ಯ ಪಿ.ಆರ್.ರಮೇಶ್‌ರವರಿಗೆ ಉತ್ತರವನ್ನು ಕೊಡುವುದು ತಡವಾಗಿದೆ. ಆದಷ್ಟು ಬೇಗ ಉತ್ತರವನ್ನು ಕೊಡಿಸುತ್ತೇವೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಗಳೆ, ನಾನು ಅಪರೂಪಕ್ಕೆ ಒಂದು ಶೂನ್ಯವೇಳೆಯ ಪ್ರಸ್ತಾಪಕ್ಕೆ ನೋಟಿಸ್ ಕೊಟ್ಟಿದ್ದೇನೆ ಅದು ಇದುವರೆಗೂ ಬರಲಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ತಮ್ಮ ಶೂನ್ಯವೇಳೆ ಪ್ರಸ್ತಾಪ ಬಂದಿದೆ. ಅದು ಸ್ವಲ್ಪ ವೈಯಕ್ತಿಕವಾಗಿದೆ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಇಂದು ಹತ್ತು ಶ್ಯೂನವೇಳೆ ಪ್ರಸ್ತಾಪಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಗಳೆ, 10 ಶೂನ್ಯವೇಳೆ ಪ್ರಸ್ತಾಪಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. 11ನೇದಾಗಿ ನನ್ನ ಶೂನ್ಯವೇಳೆಗೆ ಅವಕಾಶವನ್ನು ಕೊಡಬಹುದಾಗಿತ್ತು. ಹಿಂದೆ ಎಷ್ಟೇ ಶೂನ್ಯವೇಳೆ ಬಂದರೂ ವಿಷಯದ ಪ್ರಾಮುಖ್ಯತೆಯನ್ನು ನೋಡಿ ಮೂರು ಶೂನ್ಯವೇಳೆಗೆ ಮಾತ್ರ ಅವಕಾಶವನ್ನು ಕೊಡಲಾಗುತ್ತದೆ ಎಂದು ಹೇಳಿದರು. ನಂತರ ಐದು ಶೂನ್ಯವೇಳಗೆ ಅವಕಾಶವನ್ನು ಕೊಡಲಾಗುವುದು ಎಂದು ತೀರ್ಮಾನವಾಯಿತು. ಈಗ ಅದನ್ನು ತಾವು 10ಕ್ಕೆ ನಿಗದಿ ಮಾಡಿದ್ದೀರಿ. ದಯಮಾಡಿ ನನ್ನ ಶೂನ್ಯವೇಳೆ ಪ್ರಸ್ತಾಪಕ್ಕೆ ಅವಕಾಶವನ್ನು ಕೊಡಬೇಕು.

**ಸಭಾಪತಿಯವರು:–** 11ನೇ ಶೂನ್ಯವೇಳೆಗೆ ಅವಕಾಶ ಕೊಡಿ ಎಂದು ತಾವು ಕೇಳುತ್ತಿದ್ದೀರಿ. ಇದು ವೈಯಕ್ತಿಕವಾಗಿದೆ.

**ಶ್ರೀ ಮರಿತಿಬ್ಬೇಗೌಡ:–** ಅದು ವೈಯಕ್ತಿಕವಾಗಿಲ್ಲ.

**ಸಭಾಪತಿಯವರು:–** ಈಗ ವಾದ ಬೇಡ. ಅದನ್ನು ಪರಿಶೀಲನೆ ಮಾಡಿ ನಾನು ತಿಳಿಸುತ್ತೇನೆ. ನಂತರ ನಾನು ತಮ್ಮ ಜೊತೆ ಮಾತನಾಡುತ್ತೇನೆ.

**(ಮುಂದು)**

**(537)/22.03.2021/1.30/ಹೆಚ್‌ವಿಜಿ/ಎಸ್**

**ಶ್ರೀ ಮರಿತಿಬ್ಬೇಗೌಡ:–** ಸನ್ಮಾನ್ಯ ಸಭಾಪತಿಯವರೇ, ನಾನು ಕೊಟ್ಟಿರುವ ನೋಟೀಸ್‌ನಲ್ಲಿ ಉಲ್ಲೇಖ ಮಾಡಿರುವ ವಿಚಾರ ವೈಯಕ್ತಿಕವಾದುದ್ದಲ್ಲ. ನಾನು ಈ ಸದನದಲ್ಲಿ ಪ್ರಪ್ರಥಮವಾಗಿ ನಿಯಮ 59ರಡಿಯಲ್ಲಿ ಕೊಟ್ಟಿರುವಂತಹ ನೋಟೀಸ್ ಆಗಿದೆ. ಅದಕ್ಕೂ ತಾವು ಅವಕಾಶವನ್ನು ಕೊಡದಿದ್ದರೆ ಹೇಗೆ? ತಾವು ವೈಯಕ್ತಿಕವಾದ ವಿಚಾರವೆಂದು ಹೇಳುತ್ತಿದ್ದೀರಿ, ಅದು ದೇಶಕ್ಕೆ ಗೊತ್ತಾಗಲಿ ಬಿಡಿ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ, ಪ್ರತಿಯೊಂದಕ್ಕೂ ವಾದ ಮಾಡುವುದನ್ನು ಬಿಡಿ. ಚರ್ಚೆ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ. ನಾನು ಸರ್ಕಾರದ ಜೊತೆಗೆ ಚರ್ಚೆ ಮಾಡಿ ತಮಗೆ ತಿಳಿಸುತ್ತೇನೆ. ಕುಳಿತುಕೊಳ್ಳಿ.

**ಶ್ರೀ ಎಸ್.ವ್ಹಿ.ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಹಿರಿಯ ಸದಸ್ಯರಾಗಿದ್ದಾರೆ, ಅವರೇ ಈ ರೀತಿ ಪ್ರಶ್ನೆ ಮಾಡಿದರೆ ಹೇಗೆ?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ,. . . . .

**ಶ್ರೀ ಮರಿತಿಬ್ಬೇಗೌಡ:–** ಸನ್ಮಾನ್ಯ ಸಭಾಪತಿಯವರೇ, ದಯವಿಟ್ಟು ತಾವು ನನಗೆ ಅವಕಾಶ ಮಾಡಿಕೊಡಬೇಕು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ನಾನು ನಿಮಯ 59ರಡಿಯಲ್ಲಿ ಒಂದು ಪ್ರಸ್ತಾವವನ್ನು ಕೊಟ್ಟಿದ್ದೆ.

**ಸಭಾಪತಿಯವರು:–** ಒಂದು ನಿರಸನಗೊಳಿಸುವ ವಿಧೇಯಕವಿದೆ. ಎರಡು ನಿಮಿಷಗಳಲ್ಲಿ ಮುಕ್ತಾಯಗೊಳ್ಳುತ್ತದೆ. ಅನಂತರ ನೋಡೋಣ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಸದನದ ಸಂಪ್ರದಾಯದ ಪ್ರಕಾರ ಬಹಳ ಮಹತ್ವದ ವಿಚಾರವಿದ್ದಾಗ, ಎಲ್ಲ ವಿಷಯಗಳನ್ನು ಬದಿಗೊತ್ತಿ ನಿಲುವಳಿ ಸೂಚನೆಯ ಪ್ರಸ್ತಾಪಕ್ಕೆ ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ.

**ಸಭಾಪತಿಯವರು:–** ಒಂದು ನಿರಸನಗೊಳಿಸುವ ವಿಧೇಯಕವಿದೆ. ಎರಡು ನಿಮಿಷಗಳಲ್ಲಿ ಮುಕ್ತಾಯಗೊಳ್ಳುತ್ತದೆ. ಆಮೇಲೆ ತಮ್ಮ ವಿಚಾರವನ್ನು ತೆಗೆದುಕೊಳ್ಳಲಾಗುವುದು.

**ಶ್ರೀ ಮರಿತಿಬ್ಬೇಗೌಡ:–** ಸನ್ಮಾನ್ಯ ಸಭಾಪತಿಯವರೇ, ...........

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ, ಒಂದು ಸಾರಿ ಹೇಳಿದರೆ ತಾವು ತಿಳಿದುಕೊಳ್ಳಬೇಕಾಗುತ್ತದೆ. ಪದೇ ಪದೇ ಹೇಳಬೇಡಿ. ನಿಮ್ಮ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಈಗಾಗಲೇ ಹೇಳಿದ್ದೇನೆ. ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ನೀಡಬೇಕಾಗುತ್ತದೆ. ಎ.ಸಿ.ಬಿ., ಗೆ ಸಂಬಂಧಪಟ್ಟ ವಿಚಾರವನ್ನು ತಾವು ಪ್ರಸ್ತಾಪ ಮಾಡಲು ನೋಟೀಸ್ ಕಳುಹಿಸಿಕೊಟ್ಟಿದ್ದೀರಿ, ಅದನ್ನು ಯಾವ ನಿಯಮದಡಿಯಲ್ಲಿ ತೆಗೆದುಕೊಳ್ಳಬೇಕೆನ್ನುವುದನ್ನು ನೋಡಬೇಕಾಗಿದೆ.

**ಶ್ರೀ ಮರಿತಿಬ್ಬೇಗೌಡ:–** ಸನ್ಮಾನ್ಯ ಸಭಾಪತಿಯವರೇ, ತಾವೇ ಉತ್ತರ ಕೊಡುವುದಾದರೆ ಅದನ್ನು ಇಟ್ಟುಕೊಳ್ಳಿ, ಈ ವಿಚಾರಕ್ಕೆ ಸರ್ಕಾರದ ಮಂತ್ರಿಗಳು ಉತ್ತರವನ್ನು ಕೊಡಬೇಕಾಗಿದೆ. ಆದರೂ ಸಹ ತಾವು 'ಇದರ ಬಗ್ಗೆ ಸರ್ಕಾರದ ಜೊತೆಗೆ ಚರ್ಚೆ ಮಾಡಬೇಕು, ಪರಿಶೀಲಿಸಬೇಕು' ಎಂದು ಹೇಳಿದರೆ ಹೇಗೆ? ಸರ್ಕಾರಕ್ಕೆ ಇಷ್ಟೊಂದು ಅವಕಾಶವನ್ನು ನೀಡಿದರೆ ಹೇಗೆ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ವಿಚಾರ ಮಾಡುವುದಕ್ಕೂ ತಾವು ಬಿಡದಿದ್ದರೆ ಹೇಗೆ?

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಎಂತೆಂಥ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶವನ್ನು ನೀಡಿದ್ದೀರಿ, ನಾನು ಈ ಸದನದಲ್ಲಿ ಪ್ರಸ್ತಾಪ ಮಾಡಬಾರದಂತಹ ವಿಚಾರವನ್ನು ತಂದಿದ್ದೇನೆಯೇ?

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ತಮ್ಮದು ಅತಿ ಆಯಿತು. ತಾವು ಕೊಟ್ಟಿರುವ ವಿಚಾರವನ್ನು ನಾನು ಇವತ್ತು ಚರ್ಚೆಗೆ ತೆಗೆದುಕೊಳ್ಳುವುದಿಲ್ಲ, ಕುಳಿತುಕೊಳ್ಳಿ.

**8.ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ(ಕ.ವಿ.ಪ):-** ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಕೃಷ್ಣ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ನಿರಸನಗೊಳಿಸುವ) ವಿಧೇಯಕ, 2021ನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**9. ಶಾಸನ ರಚನೆ**

**ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ಕೃಷ್ಣ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ನಿರಸನಗೊಳಿಸುವ) ವಿಧೇಯಕ, 2021**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಕೃಷ್ಣ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ(ನಿರಸನಗೊಳಿಸುವ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):–** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಕೃಷ್ಣ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ 1992ನ್ನು ನಿರಸನಗೊಳಿಸುವ ಉದ್ದೇಶದಿಂದ ಈ ವಿಧೇಯಕವನ್ನು ತರಲಾಗಿದೆ. ಕೃಷ್ಣ ಜಲಾನಯನ ಪ್ರದೇಶದಲ್ಲಿರುವ ಎಲ್ಲಾ ನೀರಾವರಿ ಯೋಜನೆಗಳ ಯೋಜನೆ, ವಿಚಾರಣೆ, ಅಂದಾಜು ಕಾರ್ಯಗತಗೊಳಿಸುವಿಕೆ, ಕಾರ್ಯಾಚರಣೆ ಮತ್ತು ನಿರ್ವಹಣೆಗಳನ್ನು ಪ್ರಸ್ತುತ ಕೃಷ್ಣ ಭಾಗ್ಯ ಜಲ ನೀರಾವರಿ ನಿಗಮದಡಿಯ್ಯಲ್ಲಿ ತೆಗೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ 1992ರಲ್ಲಿ ತರಲಾಗಿರುವ ಕರ್ನಾಟಕ ಕೃಷ್ಣ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧಿನಿಯಮವನ್ನು ನಿರಸನಗೊಳಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. 1992ರ ಅಧಿನಿಯಮದ ಉದ್ದೇಶ ಮತ್ತು ಈ ನಿಗಮದ ಉದ್ದೇಶ ಎರಡೂ ಒಂದೇ ಆಗಿರುವುದರಿಂದ ಈಗ ತಂದಿರುವಂತಹ ತಿದ್ದುಪಡಿಯ ಮೂಲಕ 1992ರಲ್ಲಿ ತರಲಾಗಿರುವ ಅಧಿನಿಯಮವನ್ನು ನಿರಸನಗೊಳಿಸುವುದು ಈ ವಿಧೇಯಕದ ಉದ್ದೇಶವಾಗಿದೆಯೇ ಹೊರತು ಬೇರೆ ಯಾವುದೇ ಹೊಸ ಉದ್ದೇಶವಿಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮ ನಿರ್ದೇಶನ ಹೊಂದಿದ್ದವರು):–** ಸನ್ಮಾನ್ಯ ಸಭಾಪತಿಯವರೇ, 1992ರ ವಿಧೇಯಕವನ್ನು ನಿರಸನಗೊಳಿಸಲು ಹೊರಟಿರುವ ವಿಧೇಯಕವು ಜಲಾನಯನ ಪ್ರದೇಶಕ್ಕೆ ಸಂಬಂಧಪಟ್ಟಿಲ್ಲವೆಂದು ನಾನು ಭಾವಿಸುತ್ತೇನೆ. ಏಕೆಂದರೆ, ಕೇಂದ್ರ ಸರ್ಕಾರದ ಜಲಸಂಪನ್ಮೂಲ ಇಲಾಖೆಯಿಂದ ಜಲಾನಯನ ಪ್ರದೇಶ ಅಭಿವೃದ್ಧಿಗಾಗಿ ಸಾಕಷ್ಟು ಹಣ ಬರುತ್ತಿದೆ. ಅದರಲ್ಲಿ ಸದ್ಯದಲ್ಲಿ ಚಾಲ್ತಿ ಇರುವಂತಹ ಶಿವಮೊಗ್ಗದಲ್ಲಿರುವ ತುಂಗಾ ಮೇಲ್ದಂಡೆ, ಬೆಳಗಾವಿಯಲ್ಲಿರುವ ಶ್ರೀ ರಾಮೇಶ್ವರಂ, ಬೀದರ್ ಜಿಲ್ಲೆಯಲ್ಲಿರುವ ಕಾರಂಜ ಏತ ನೀರಾವರಿ ಯೋಜನೆ, ಕಲಬುರ್ಗಿಯಲ್ಲಿರುವ ಭೀಮಾ ಏತ ನೀರಾವರಿ ಯೋಜನೆಗಳಿಗೆ ಬರುತ್ತಿರುವಂತಹ ಹಣ ಈ ವಿಧೇಯಕದ ಮೂಲಕ ಕರ್ನಾಟಕ ಕೃಷ್ಣ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರವನ್ನು ನಿರಸನಗೊಳಿಸುವುದರ ಮೂಲಕ ನಿಂತು ಹೋಗಬಹುದು. ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡಿದೆಯೇ ಎನ್ನುವುದರ ಬಗ್ಗೆ ಸ್ಪಷ್ಟನೆಯನ್ನು ನೀಡಬೇಕಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಕೃಷ್ಣ ಜಲಾನಯನ ಯೋಜನೆಗಳನ್ನು ಕೃಷ್ಣ ಭಾಗ್ಯ ಜಲ ನೀರಾವರಿ ಅಭಿವೃದ್ಧಿ ನಿಗಮದಡಿಯಲ್ಲಿ ಮಾಡಲಾಗುತ್ತಿದೆ. 1992ನೇ ಇಸವಿಯಲ್ಲಿ ತಂದಿರುವಂತಹ ಕರ್ನಾಟಕ ಕೃಷ್ಣ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರದಲ್ಲಿನ ಎಲ್ಲ ಅಭಿವೃದ್ಧಿ ಕೆಲಸಗಳನ್ನು ಈ ನಿಗಮದಡಿಯಲ್ಲಿಯೇ ತೆಗೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸದರಿ ಪ್ರಾಧಿಕಾರವನ್ನು ನಿರಸನಗೊಳಿಸುವ ತೀರ್ಮಾನವನ್ನು

ತೆಗೆದುಕೊಳ್ಳಲಾಗಿದೆ. ಅನುದಾನದಲ್ಲಿ ಯಾವುದೇ ರೀತಿಯ ವ್ಯತ್ಯಯವಾಗುವುದಿಲ್ಲ. 1992ನೇ ಇಸವಿಯಲ್ಲಿ ತಂದಿರುವ ಪ್ರಾಧಿಕಾರದ ಅಧಿನಿಯಮವನ್ನು ನಿರಸನಗೊಳಿಸುವ ಮೂಲ ಉದ್ದೇಶವನ್ನು ಇದರಲ್ಲಿ ಅಳವಡಿಸಿಕೊಳ್ಳಲಾಗಿದೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

> "ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಕೃಷ್ಣ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ನಿರಸನಗೊಳಿಸುವ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):–** ಸನ್ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಕೃಷ್ಣ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ(ನಿರಸನಗೊಳಿಸುವ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

> "ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಕರ್ನಾಟಕ ಕೃಷ್ಣ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ನಿರಸನಗೊಳಿಸುವ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ವಿಧೇಯಕವನ್ನು ನಿರಸನಗೊಳಿಸಲು ಸದನದ ಅನುಮೋದನೆ ದೊರೆಯಿತು**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**10. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯ: ಮಾಜಿ ಸಚಿವರೊಬ್ಬರದ್ದೆನ್ನಲ್ಲಾದ ಲೈಂಗಿಕ ಸಿ.ಡಿ., ಬಿಡುಗಡೆ ಪ್ರಕರಣ ಹಾಗೂ ಮಾಧ್ಯಮಗಳು ತಮ್ಮ ಬಗ್ಗೆ ಕಲ್ಪಿತ ವಿಷಯಗಳನ್ನು ಬಿತ್ತರಿಸದಂತೆ ಹಾಲಿ 06 ಜನ ಸಚಿವರು ನ್ಯಾಯಾಲಯದ ಮೊರೆ ಹೋಗಿರುವ ಕುರಿತು.**

---

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ನಿಯಮ 59ರ ಮೇರೆಗೆ ಮೇಲ್ಕಂಡ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ಮಂಡಿಸಲು ಅನುಮತಿ ಕೋರಿ ಪ್ರಾಸ್ತಾವಿಕವಾಗಿ ಕೆಲವು ವಿಚಾರಗಳನ್ನು ತಮ್ಮ ಮೂಲಕ ಸದನದ ಗಮನಕ್ಕೆ ತರಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಲೈಂಗಿಕ ಸಿ.ಡಿ. ಬಿಡುಗಡೆ ಮತ್ತು ರಾಜ್ಯದ 6 ಜನ ಹಾಲಿ ಸಚಿವರುಗಳು ಮಾಧ್ಯಮಗಳ ಮೂಲಕ ತಮ್ಮ ಕುರಿತಾದ ಸಿ.ಡಿ. ಬಿಡುಗಡೆ ಮಾಡಬಹುದು, ಆ ಮೂಲಕ ತಮ್ಮ ತೇಜೋವಧೆ ಆಗಬಹುದೆಂದು ನ್ಯಾಯಾಲಯದ ಮೊರೆ ಹೋಗಿ 67 ಮಾಧ್ಯಮಗಳು ಹಾಗೂ ಇತರರ ವಿರುದ್ಧ ನಿರ್ಬಂಧಕ ಆಜ್ಞೆಯನ್ನು ತಂದಿರುತ್ತಾರೆ. ಈ ಕಾರಣದಿಂದ ರಾಜ್ಯದ ಮರ್ಯಾದೆ ಮೂರು ಕಾಸಿಗೆ ಹರಾಜಾಗಿರುತ್ತದೆ. ಈ ವಿಚಾರವಾಗಿ ಪತ್ರಿಕೆಗಳಲ್ಲಿ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ವರ್ಣರಂಜಿತ ಸುದ್ದಿಗಳು ಪ್ರಸಾರವಾಗುತ್ತಿವೆ. ಈ ವಿದ್ಯಮಾನಗಳಿಂದ ಮಹಿಳೆಯರು, ಮಕ್ಕಳು ಮತ್ತು ಯುವಕ–ಯುವತಿಯರ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಲೈಂಗಿಕ ಸಿ.ಡಿ.ಯ ವಿಚಾರವಾಗಿ ಎಫ್.ಐ.ಆರ್. ದಾಖಲಾಗುವುದಕ್ಕೂ ಮೊದಲೇ ಎಸ್.ಐ.ಟಿ. ರಚಿಸಿ ಲೈಂಗಿಕ ಹಗರಣದ ತನಿಖೆಗೆ ಆದೇಶಿಸಲಾಗಿದೆ. ಅನಂತರ ಮಾಜಿ ಸಚಿವರೊಬ್ಬರು ವ್ಯಕ್ತಿಯೊಬ್ಬರ ಮೂಲಕ ಕಳುಹಿಸಿದ ದೂರನ್ನು ಆಧರಿಸಿ ಎಫ್.ಐ.ಆರ್. ದಾಖಲಿಸಲಾಗಿರುತ್ತದೆ. ಆದರೆ, ಸಾಮಾಜಿಕ ಕಾರ್ಯಕರ್ತರ ಹೆಸರಿನಲ್ಲಿ ವ್ಯಕ್ತಿಯೊಬ್ಬರು ನೀಡಿದ ದೂರಾಗಲೀ, ಸಂತ್ರಸ್ತೆಯೆಂದು ಹೇಳಿ ಗೃಹ ಸಚಿವರಿಗೆ ಸಾಮಾಜಿಕ ಮಾಧ್ಯಮಗಳ ಮೂಲಕ ಮಾಡಿಕೊಂಡಂತಹ ಮನವಿಗಳನ್ನು ಆಧರಿಸಿ ಯಾವುದೇ ಎಫ್.ಐ.ಆರ್.ಗಳು ದಾಖಲಾಗಿರುವುದಿಲ್ಲ. ಸಂತ್ರಸ್ತೆಯ ಪೋಷಕರು ಬೆಳಗಾವಿ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ. ಮಹಿಳಾ ಆಯೋಗವು ಸಂತ್ರಸ್ತೆಯ ನೆರವಿಗೆ ಬಂದು ರಕ್ಷಣೆ ನೀಡಲು ಆದೇಶಿಸಿದ್ದರೂ ಸಂತ್ರಸ್ತೆಯನ್ನು ಹುಡುಕಿ ರಕ್ಷಣೆ ನೀಡಿದಂತೆ ಕಾಣುತ್ತಿಲ್ಲ. ಎಸ್.ಐ.ಟಿ.ಯ ಇದುವರೆವಿಗಿನ ತನಿಖೆಯನ್ನು ನೋಡಿದರೆ, ಸಿ.ಡಿ. ಪ್ರಚಾರವಾಗಲು ಕಾರಣಕರ್ತರು ಯಾರು ಎನ್ನುವುದನ್ನು ಹುಡುಕುವುದರ ಕಡೆಗೆ ತನಿಖೆ ಸಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಮಹಿಳೆಯರ ರಕ್ಷಣೆಯ ವಿಚಾರದಲ್ಲಿ ಗಂಭೀರ ಲೋಪಗಳನ್ನು ಎಸಗುತ್ತಿದೆ. ಸರ್ಕಾರದ ವರ್ತನೆ ಪಾರದರ್ಶಕವಾಗಿಲ್ಲ ಮತ್ತು ನ್ಯಾಯಸಮ್ಮತವಾಗಿಲ್ಲ. ರಾಜ್ಯದ ಘನತೆಗೆ ಕುಂದು ತರುತ್ತಿರುವ ಸರ್ಕಾರದ ಈ ನಿಲುವಿನ ವಿಚಾರ ಸಾರ್ವಜನಿಕ ಮಹತ್ವದ ವಿಚಾರವಾಗಿರುವುದರಿಂದ ನಿಯಮ 59ರಡಿಯಲ್ಲಿ ಸದನದಲ್ಲಿ ಚರ್ಚೆ ಮಾಡಲು ತಾವು ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಕೆ.ಸಿ.ನಾರಾಯಣಗೌಡ(ಯುವಜನ ಸಬಲೀಕರಣ ಮತ್ತು ಕ್ರೀಡೆ ಹಾಗೂ ಯೋಜನಾ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಇವರು ಯಾರೂ ಕೋರ್ಟಿನ ಮೊರೆ ಹೋಗಿಲ್ಲವೇ? ತಮ್ಮ ಗೌರವಕ್ಕೆ ಚ್ಯುತಿ ಬರುತ್ತದೆಂದು ಅವರುಗಳು ಕೋರ್ಟಿಗೆ ಹೋಗಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ನಾರಾಯಣಗೌಡರೇ, ತಾವು ಕುಳಿತುಕೊಳ್ಳಿ, ನಾನು ಮಾತನಾಡುವುದಕ್ಕೆ ಬಿಡಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನಿಯಮ 59ರಡಿಯಲ್ಲಿ ನಾನು ಹಾಗೂ ನನ್ನ ಅನೇಕ ಜನ ಸ್ನೇಹಿತರು ಸಹಿ ಮಾಡಿ ನೋಟೀಸ್ ಕೊಟ್ಟಿದ್ದೇವೆ. ಇದನ್ನು ಚರ್ಚೆಗೆ ತೆಗೆದುಕೊಳ್ಳುವ ಅವಶ್ಯಕತೆ ಏನಿದೆ ಎನ್ನುವುದನ್ನೂ ಸಹ ನಾನು ಹೇಳಿದ್ದೇನೆ. ಈ ವಿಚಾರದ ಬಗ್ಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಚರ್ಚೆಯಾಗಿದೆ.

**(ಮುಂದು)**

**(538) 22.03.2021 1.40 ಪಿಕೆ:ಜಿಆರ್**

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಿಯಮ 59ರ ಅಡಿಯಲ್ಲಿ ನಾನು ಮತ್ತು ನಮ್ಮ ಸ್ನೇಹಿತರು ಸಹಿ ಮಾಡಿರುವ ಸೂಚನಾ ಪತ್ರವನ್ನು ಕೊಟ್ಟಿದ್ದೇವೆ; ಅದನ್ನು ನಾನು ಓದಿ ಹೇಳಿದ್ದೇನೆ. ಇದರ ಬಗೆಗಿನ ವಿಚಾರ ಏಕೆ ಪ್ರಸ್ತಾಪ ಮಾಡಬೇಕು ಎಂದರೆ, ಇದು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಚರ್ಚೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ನೀವೇನು ಸೂಚನೆ ಕೊಟ್ಟಿದ್ದೀರೋ ಅದನ್ನು ನಿಯಮ 68 ಕ್ಕೆ ಕನ್ವರ್ಟ್ ಮಾಡುತ್ತೇನೆ ಮತ್ತು ಅದರ ಚರ್ಚೆಗೆ ಸಮಯ ನಿಗದಿ ಮಾಡಿ ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಿಮ್ಮ ಆದೇಶವನ್ನು ನಾವು ಪ್ರಶ್ನೆ ಮಾಡುವುದಿಲ್ಲ. ಆದರೆ ಈ ವಿಚಾರ ನಿಯಮ 59ರ ಅಡಿ ಹೇಗೆ ಬರುವುದಕ್ಕೆ ಆಗುತ್ತದೆ? (ಗೊಂದಲ) ತಾವು ಪೀಠದಿಂದ ಆದೇಶ ಕೊಟ್ಟಮೇಲೆ ಅದನ್ನು ಪ್ರಶ್ನೆ ಮಾಡುವ ಅಧಿಕಾರ ನಮಗಿಲ್ಲ. ಆದರೆ ಕೆಲವು ವಿಚಾರಗಳನ್ನು ತಮಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡುವುದು ತಪ್ಪಲ್ಲ. ಮಾನ್ಯ ಸಭಾಪತಿಯವರೇ, ಈ ವಿಚಾರ ಯಾವುದೇ ರೀತಿಯಲ್ಲೂ ನಿಯಮ 59ರ ಅಡಿ ಬರುವುದಕ್ಕೆ ಸಾಧ್ಯವಿಲ್ಲ. ನಮ್ಮ ನಿಯಮಗಳಲ್ಲಿ ಇದು ಸ್ಪಷ್ಟವಾಗಿ ಹೇಳಿದೆ. ನಿಯಮ 59 ರಲ್ಲಿ " ಸಾರ್ವಜನಿಕವಾಗಿ ಅತ್ಯಂತ ಮಹತ್ವವುಳ್ಳ ಸಂವಿಧಾನ ಮತ್ತು ಕಾನೂನಿನಲ್ಲಿ ನಿರ್ದೇಶಿಸಲಾಗಿರುವ ಕರ್ತವ್ಯಗಳನ್ನು ಜಾರಿಗೊಳಿಸಲು ಸರ್ಕಾರದ ವೈಫಲ್ಯತೆ ಕಂಡು ಬಂದಲ್ಲಿ..." ಎಂದಿದೆ. ಮತ್ತೆ ಮುಂದುವರೆದು "ನ್ಯಾಯಾಧಿಕಾರಣಗಳಲ್ಲಾಗಲಿ ಅಥವಾ ವಿಚಾರಣೆಗಳಲ್ಲಾಗಲಿ, ವಿಚಾರಣೆಗೆ ಮತ್ತು ಪ್ರಸ್ತಾಪನೆಗೆ ಬಾಕಿ ಇರುವಂತಹ ವಿಚಾರಗಳನ್ನು ಕೈಗೆತ್ತಿಕೊಳ್ಳತಕ್ಕದ್ದಲ್ಲ" ಎಂದಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ರಾಜಕೀಯ ಕಾರಣಗಳಿಗೆ ಈ ವಿಷಯವನ್ನು ಪ್ರಸ್ತಾಪ ಮಾಡಿರಬಹುದು. ಆದರೆ, ಪೀಠ ಏನು ಈಗ ಅನುಮತಿ ಕೊಟ್ಟಿದೆಯೋ ಅದನ್ನು ಪುನಃ ಪರಿಶೀಲಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:–** ನಾನು ಎಲ್ಲಾ ವಿಚಾರಗಳನ್ನು ತಿಳಿದುಕೊಂಡೇ ಹೇಳಿದ್ದೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ನಿಯಮ 68ರ ಅಡಿ ಚರ್ಚೆಗೆ ಯಾವಾಗ ಅವಕಾಶ ಮಾಡಿಕೊಡುತ್ತೀರಿ ಎಂದು ಹೇಳಲಿಲ್ಲ.

**ಸಭಾಪತಿಯವರು:–** ಅದನ್ನು ನೋಡಿ ಹೇಳುತ್ತೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಯಾವಾಗ ಸಮಯ ಕೊಡುತ್ತೀರಿ ಎಂದು ಹೇಳಬೇಕಾಗುತ್ತದೆ. ನಾಳೆ ಕೊಡುತ್ತೀರಾ? ನಾಳಿದ್ದು ಕೊಡುತ್ತೀರಾ? ಯಾವಾಗ ಕೊಡುತ್ತೀರಿ ಎನ್ನುವುದನ್ನು ಹೇಳಬೇಕು.

**ಸಭಾಪತಿಯವರು:–** ನೀವು ದಯವಿಟ್ಟು ಅದನ್ನು ಹೇಳಬೇಡಿ. ಯಾವಾಗ ಚರ್ಚೆಗೆ ಅವಕಾಶ ಕೊಡಬೇಕು ಎನ್ನುವುದು ನನಗೆ ಗೊತ್ತಿದೆ. ಸಮಯ ನಿಗದಿ ಮಾಡುವುದು ನನ್ನ ಜವಾಬ್ದಾರಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅಧಿವೇಶನವನ್ನು ನಿಗದಿತ ಅವಧಿಯ ಮೊದಲೇ ಮೊಟಕುಗೊಳಿಸಲಾಗುತ್ತದೆ ಎಂಬ ಸುದ್ದಿ ಇರುವುದರಿಂದ ಈ ಕುರಿತು ಚರ್ಚೆ ಮಾಡಲು ಯಾವಾಗ ಸಮಯ ಕೊಡುತ್ತೀರಿ ಎಂದು ಕೇಳುತ್ತಿದ್ದೇವೆ ಅಷ್ಟೆ.

**(ಗೊಂದಲ)**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಸರ್ಕಾರ ಈ ವಿಷಯವಾಗಿ ಸ್ವಯಂ ಪ್ರೇರಿತ ಹೇಳಿಕೆಯನ್ನು ಕೊಡಬೇಕಾಗಿತ್ತು. ಇಷ್ಟು ದಿವಸಗಳಿಂದ ಸದನ ನಡೆಯುತ್ತಿದ್ದರೂ ಸರ್ಕಾರ ಇದರ ಬಗ್ಗೆ ಪ್ರಸ್ತಾಪ ಮಾಡಲೇ ಇಲ್ಲ. ಆದ್ದರಿಂದ ನಾವು ವಿಚಾರವನ್ನು ಎತ್ತಿದ್ದೇವೆ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಸರ್ಕಾರ ಈ ಅಧಿವೇಶನದ ಅವಧಿಯನ್ನು ಮೊಟಕುಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತಿದೆ. ಈ ವಿಷಯ ಸಾರ್ವಜನಿಕ ಮಹತ್ವದ ವಿಷಯವಾಗಿರುವುದರಿಂದ ನಮಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇವೆ. ಇತರ ಎಲ್ಲಾ ಚರ್ಚೆಗಳನ್ನು ಬದಿಗಿಟ್ಟು ಆದಷ್ಟು ಬೇಗ ಈ ಕುರಿತು ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇವೆ.

**11. ವಿತ್ತೀಯ ಕಾರ್ಯಕಲಾಪ**

**2021-22ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

**ಶ್ರೀ ಲಹರ್ ಸಿಂಗ್ ಸಿರೋಯಾ(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, 2021–22ರ ಬಜೆಟ್ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಬಜೆಟ್ ಎನ್ನುವುದು ಜನರಿಗೆ ಮತ್ತು ನಾಡಿಗೆ ಬಹಳ ಮಹತ್ವದ್ದಾಗಿರುತ್ತದೆ. ಇದರ ಬಗ್ಗೆ ಆದಷ್ಟು ಚರ್ಚೆಗಳಾಗಬೇಕು. ತಾವು ಸಭಾಪತಿಯವರಾದ ಮೇಲೆ ಒಳ್ಳೆಯ ರೀತಿಯಲ್ಲಿ ಚರ್ಚೆ ನಡೆಯುತ್ತಿದೆ. ಬಜೆಟ್ ಮೇಲೆ ಈಗಾಗಲೇ ನಮ್ಮ ಕೆಲವು ಸ್ನೇಹಿತರು ಮಾತನಾಡಿದ್ದಾರೆ. ಮಾನ್ಯ ಸಭಾಪತಿಯವರೇ, ಇವತ್ತು "ವಿಶ್ವ ಜಲದಿನ" ಆಗಿದೆ. ಮಾನ್ಯ ಪ್ರಧಾನ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂತ್ರಿಗಳು ಇವತ್ತು ಬೆಳಿಗ್ಗೆ ಈ ಕುರಿತು "ಕ್ಯಾಚ್ ದಿ ರೈನ್" ಎನ್ನುವ ಒಂದು ಕ್ಯಾಂಪೇನಿಂಗ್ ಲಾಂಚ್ ಮಾಡಿದ್ದಾರೆ. ಇಡೀ ಪ್ರಪಂಚದ ಎಲ್ಲಾ ಕಡೆ ಹವಾಮಾನಕ್ಕೆ ಸಂಬಂಧಪಟ್ಟಂತೆ ಆತಂಕವನ್ನು ವ್ಯಕ್ತಪಡಿಸುತ್ತಿದ್ದಾರೆ. ನಾನು 1965ರಲ್ಲಿ ಮೊದಲು ಬೆಂಗಳೂರಿಗೆ ಬಂದಿದ್ದಾಗ ಹವಾಮಾನ ಬಹಳ ಚೆನ್ನಾಗಿತ್ತು.

1800ನೇ ಇಸವಿಯ ಗೆಜೆಟ್ ನೋಡಿದಾಗ ಮೇ ತಿಂಗಳಲ್ಲಿ ಅತಿ ಹೆಚ್ಚು ಉಷ್ಣಾಂಶ ಎಂದರೆ 16 ಡಿಗ್ರಿ ಸೆಲ್ಸಿಯಸ್ ಇರುತ್ತಿತ್ತು. ಆದರೆ ಈಗ ಮಾರ್ಚ್‌ನಲ್ಲಿ 34-35 ಡಿಗ್ರಿ ತನಕ ಮತ್ತು ಏಪ್ರಿಲ್‌ನಲ್ಲಿ 38 ಡಿಗ್ರಿ ತನಕ ಹೋಗುತ್ತದೆ. ಮಾನ್ಯ ಸಭಾಪತಿಯವರೇ, "ಜಲವೇ ಜೀವನ" ಎಂದು ಹೇಳುತ್ತಾರೆ. ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕೊರತೆ ಆಗುತ್ತಿರುವುದು ನಮಗೆಲ್ಲಾ ಗೊತ್ತಿದೆ. ಬೆಂಗಳೂರಿನಲ್ಲಿ ಮೊದಲು 250 ಕೆರೆಗಳಿತ್ತು. ಈಗಲೂ 20 ಕೆರೆಗಳಲ್ಲಿ ಕುಡಿಯಲು ಬಳಸಬಹುದಾದ ನೀರಿನ ಲಭ್ಯತೆ ಇದೆ. ಈ ಕರೆಗೆಳನ್ನು ಕಾಪಾಡುವುದು ನಮ್ಮ ಕರ್ತವ್ಯವಾಗಿದೆ. ಬಜೆಟ್ ಮೇಲೆ ಮಾತನಾಡುವಾಗ ಕೆರೆಗಳನ್ನು ಉಳಿಸುವ ನಿಟ್ಟಿನಲ್ಲಿ ಏನೇನು ಮಾಡಬೇಕು ಎನ್ನುವುದರ ಬಗ್ಗೆ ಹೇಳುವ ಅಗತ್ಯ ಇದೆ. 1965 ರಲ್ಲಿ ನಾನು ಬೆಂಗಳೂರಿಗೆ ಬಂದಾಗ ಅನೇಕ ಕೆರೆಗಳಿತ್ತು. ಈಗ ಈ ಕೆರೆಗಳನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ. ರಿಯಲ್ ಎಸ್ಟೇಟ್‌ನವರ ಜೊತೆ ಬೇರೆಯವರು ಕೈಜೋಡಿಸಿ ಇದ್ದಂಥ ಕೆರೆಗಳನ್ನು ನಾಶ ಮಾಡುವ ಕೆಲಸ ಮಾಡುತ್ತಿದ್ದಾರೆ. ಇಂತಹ ಕೆರೆಗಳನ್ನು ಸರ್ಕಾರ ಉಳಿಸುವ ಪ್ರಯತ್ನ ಮಾಡಬೇಕು. ಸದನಲ್ಲೂ ಈ ಕುರಿತು ಚರ್ಚೆ ಮಾಡುವ ಅವಶ್ಯಕತೆ ಇದೆ. ಜಲ ಇಲ್ಲದೇ ಇದ್ದರೆ ನಾವು ಬದುಕುವುದಕ್ಕೆ ಆಗುವುದಿಲ್ಲ. ನಮ್ಮ ಭವಿಷ್ಯದ ಜನಾಂಗಕ್ಕೆ ಇಂತಹ ಸಂಪನ್ಮೂಲಗಳನ್ನು ಬಿಟ್ಟು ಹೋಗುವುದು ನಮ್ಮ ಕರ್ತವ್ಯವಾಗಿದೆ. ನಮ್ಮ ಹಿರಿಯರು ಏನು ಹಿಂದೆ ಕೆರೆಗಳನ್ನು ಕಟ್ಟಿದ್ದರೋ ಅದನ್ನು ನಾವು ಮುಚ್ಚಿಕೊಂಡು ಹೋದರೆ ಬರುವ ಜನಾಂಗದವರು ಬದುಕುವುದಕ್ಕೆ ಕಷ್ಟವಾಗುತ್ತದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ವಿಶ್ವನಾಥ್‌ರವರು ಬಜೆಟ್ ಮೇಲೆ ಮಾತನಾಡುವಾಗ ಅವರು ಬಜೆಟ್‌ನ ಪರವಾಗಿ ಮಾತನಾಡುತ್ತಿದ್ದಾರೋ ಅಥವಾ ವಿರುದ್ಧವಾಗಿ ಮಾತನಾಡುತ್ತಿದ್ದಾರೋ ಎಂದು ಗೊಂದಲವಾಗುತ್ತಿತ್ತು. ಆ ಭಾಗದ ಸದಸ್ಯರು ಮಾತನಾಡುವಾಗಲೂ ಕೂಡ ಈ ರೀತಿಯ ಗೊಂದಲಗಳಿರುವುದು ಕಂಡುಬಂತು. ಮಾನ್ಯ ಎಸ್.ಆರ್.ಪಾಟೀಲ್, ಮಾನ್ಯ ಇಬ್ರಾಹಿಂ ಮತ್ತು ಮಾನ್ಯ ಹರಿಪ್ರಸಾದ್ ಅವರುಗಳು ಬಜೆಟ್‌ನ ಪರವಾಗಿ ಮಾತನಾಡಬೇಕೋ ಅಥವಾ ವಿರೋಧವಾಗಿ ಮಾತನಾಡಬೇಕೋ ಎನ್ನುವ ಗೊಂದಲದಲ್ಲಿದ್ದರು. ಸದ್ಯ ಮಾನ್ಯ ಹರಿಪ್ರಸಾದ್‌ರವರು ಮತ್ತು ಮಾನ್ಯ ಇಬ್ರಾಹಿಂರವರು ಸದನದಲ್ಲಿ ಇಲ್ಲ. ಆ ಕಡೆಯ ಕೆಲವು ಸ್ನೇಹಿತರು ನಮ್ಮ ಕಡೆ ಇದ್ದಾರೆ.

ನಮ್ಮ ಕಡೆಯ ಕೆಲವು ಸ್ನೇಹಿತರು ಆ ಕಡೆ ಇದ್ದಾರೆ. ಇವರೆಲ್ಲರಿಗೂ, ನಾವೇನು ಮಾತನಾಡಬೇಕು, ಬಜೆಟ್‌ನಲ್ಲಿರುವ ಕೊರತೆ ಬಗ್ಗೆ ಮಾತನಾಡಬೇಕೋ ಬೇಡವೋ ಎನ್ನುವುದರ ಬಗ್ಗೆ ಗೊಂದಲ ಇತ್ತು. ಇದು crisis of opposition ಎಂದು ಕಾಣಿಸುತ್ತಿದೆ. ಬಜೆಟ್ ಮೇಲೆ ಒಳ್ಳೆಯ ಚರ್ಚೆ ಮಾಡಿ, ಏನು ಸಲಹೆ ಕೊಡಬಹುದು ಅಥವಾ ಏನು ಕೊರತೆ ಇದೆಯೋ ಅದರ ಮೇಲೆ ಬೆಳಕು ಚೆಲ್ಲಬೇಕು ಎನ್ನುವುದರ ಬಗ್ಗೆ ಯಾರಿಗೂ ಕಳಕಳಿ ಇಲ್ಲ ಎಂದು ಕಾಣಿಸುತ್ತಿದೆ. ಸದನದಲ್ಲಿ ಬಜೆಟ್‌ನ ಮೇಲೆ ಚರ್ಚೆ ಆಗಬಾರದದು ಮತ್ತು ಸಣ್ಣ-ಪುಟ್ಟ ವಿಚಾರಗಳನ್ನು ಮುಂದೆ ಮಾಡಿ ಸದನ ನಡೆಯುವುದಕ್ಕೆ ಬಿಡಬಾರದು ಎನ್ನುವಂಥದ್ದು ಆಗಬಾರದು. ಸದನ ನಡೆಯದ ಹಾಗೆ ಮಾಡಿದರೆ ಅದು ಸರ್ಕಾರಕ್ಕೆ ಅನುಕೂಲವಾಗುತ್ತದೆ. ವಿರೋಧ ಪಕ್ಷದವರು ಏನು ಒಳ ಒಪ್ಪಂದ ಮಾಡಿಕೊಂಡಿದ್ದಾರೋ ಗೊತ್ತಿಲ್ಲ. ಸದನ ನಡೆದರೆ ಮಾತ್ರ ಬೇರೆ ಬೇರೆ ಇಲಾಖೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ಒಳ್ಳೆಯ ಸಲಹೆ ಸೂಚನೆಗಳು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಸಭಾಪತಿಯವರೇ, ತಾವು ಸದನವನ್ನು ಒಳ್ಳೆಯ ತರಹದಲ್ಲಿ ನಡೆಸುತ್ತಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ, ತಾವು ಯಾವ ವಿಚಾರದ ಬಗ್ಗೆಯಾದರೂ ಮಾತನಾಡಿ; ಆದರೆ ಸದನ ಮುಂದೂಡುವಂತೆ ಮಾಡಬಾರದು ಎಂದು ಮನವಿ ಮಾಡಿಕೊಳ್ಳುತ್ತೇನೆ. ಎಲ್ಲಾ ವಿಚಾರಗಳ ಬಗ್ಗೆಯೂ ಚರ್ಚೆಯಾಗಲಿ. ಬಜೆಟ್‌ಗೆ ಸಂಬಂಧಪಟ್ಟಂತೆ ನಾನು ನಮ್ಮ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ. 1972ರಲ್ಲಿ ಬರಗಾಲ ಬಂದಿತ್ತು. ಆ ಸಮಯದ ಬಜೆಟ್‌ನಲ್ಲಿ 16 ಪರ್ಸೆಂಟ್ deficit ಆಗಿತ್ತು. ಆಗ ತುಂಬಾ ಬರಗಾಲ ಇತ್ತು. ಅಂದರೆ there was a deep drought. ಯಾವುದೇ ಭಾಗದಲ್ಲಿ ಮಳೆ ಬಾರದೇ ಎಲ್ಲಾ ಕಡೆ ಹಾಹಾಕಾರ ಇತ್ತು ಎನ್ನುವುದು ತಮಗೂ ಗೊತ್ತಿದೆ. 100 ವರ್ಷಕ್ಕೊಂದು ಸಲ pandemic ಆಗುತ್ತದೆ, ಆಗ ಪ್ರವಾಹ ಕೂಡ ಆಗಿತ್ತು. ಬಜೆಟ್ಟಿನಿದೆ ಇದು 3.5 ಪರ್ಸೆಂಟ್ ಜಾಸ್ತಿಯಾಗಿತ್ತು. ಮಾನ್ಯ ಸಭಾಪತಿಯವರೇ, ಈ ಬಜೆಟ್ ಬಗ್ಗೆ ನಮ್ಮೆಲ್ಲ ಸ್ನೇಹಿತರು, Treasury Bench ನವರು ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ನಾನು, ಬಜೆಟ್‌ನಲ್ಲಿ ಏನು ಇರಬೇಕಾಗಿತ್ತು ಎನ್ನುವುದರ ಬಗ್ಗೆ, ಕೆಲವು ಕೊರತೆಗಳ ಬಗ್ಗೆ ಹೇಳುತ್ತೇನೆ. ನಾನು ಮೊದಲು ಶಿಕ್ಷಣದ ಬಗ್ಗೆ ಮಾತನಾಡುತ್ತೇನೆ. ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಬಜೆಟ್‌ನಲ್ಲಿ ಕಡಿಮೆ ಹಣವನ್ನು ಮೀಸಲಿಡಲಾಗಿದೆ. 1960-70ರ ಅವಧಿಯಲ್ಲಿ ಆರೋಗ್ಯ ಮತ್ತು ಶಿಕ್ಷಣಕ್ಕೆ ಸಂಬಂಧಪಟ್ಟಂತೆ 42 ಪರ್ಸೆಂಟ್ ಬಜೆಟ್‌ನಲ್ಲಿ ಮೀಸಲಿಟ್ಟಿರುವುದು ಕಂಡುಬರುತ್ತದೆ. **(ಮುಂದು)**

"ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(539) 22–03–2021 1.50 ಡಿಎಸ್–ಎಂಡಿ**

**ಶ್ರೀ ಲಹರ್ ಸಿಂಗ್ ಸಿರೋಯಾ(ಮುಂದು):–**

ಶಿಕ್ಷಣದ ಬಗ್ಗೆ ಹೇಳುವುದಾದರೆ, ಬಜೆಟ್‌ನಲ್ಲಿ ಶಿಕ್ಷಣಕ್ಕೆ ಕಡಿಮೆ ಅನುದಾನವನ್ನು ಕೊಟ್ಟಿದ್ದಾರೆ. ಈಗ ನಮಗೆ ಏನಾಗಿದೆ ಎಂದರೆ, ಶಿಕ್ಷಣ ಮತ್ತು ಆರೋಗ್ಯಕ್ಕೆ ಸೇರಿ ಕೇವಲ 16.89 ಪರ್ಸೆಂಟ್ ಕೊಟ್ಟಿದ್ದಾರೆ. ಹಿಂದೆ 2016–17 ರಲ್ಲಿ ಶಿಕ್ಷಣ ಮತ್ತು ಆರೋಗ್ಯಕ್ಕೆ ಸೇರಿ 42 ಪರ್ಸೆಂಟ್ ಕೊಟ್ಟಿದ್ದಾರೆ. ಶಿಕ್ಷಣಕ್ಕೆ ಸುಮ್ಮಾರು 25,000 ಕೋಟಿ ರೂ. ಇಟ್ಟಿದ್ದಾರೆ. ಇದರಲ್ಲಿ ಸುಮಾರು 20,000 ಕೋಟಿ ರೂ. committed expenditure ಗೆ ಹೋಗಿಬಿಡುತ್ತದೆ. ಎಲ್ಲಿ ಉದ್ಧಾರ ಆಗುತ್ತದೆ?

**Sri S.R.PATIL:-** Committed expenditure ಎಷ್ಟಿದೆ?

**ಶ್ರೀ ಲಹರ್ ಸಿಂಗ್ ಸಿರೋಯಾ:–** ಸುಮಾರು 20,000 ಕೋಟಿ ರೂ. ಇದೆ. ಕೇವಲ 5,000 ಕೋಟಿ ರೂಪಾಯಿಗಳನ್ನು ಬೇರೆ ಬೇರೆ ಅಭಿವೃದ್ಧಿಗಾಗಿ ಉಪಯೋಗಿಸಬಹುದು.

**ಶ್ರೀ ಎಸ್.ಆರ್.ಪಾಟೀಲ್:–** ಈ ಸಲ 102 percent committed expenditure ಆಗಿದೆ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಎಲ್ಲರೂ ಬೇರೆ ಬೇರೆ ಕಾರಣಕ್ಕಾಗಿ ನೋವನ್ನು ವ್ಯಕ್ತಪಡಿಸಿದರು. ನಾನು ಒಂದು ನೋವಿನ ಸಂಗತಿಯನ್ನು ವ್ಯಕ್ತಪಡಿಸುತ್ತೇನೆ. ನಮ್ಮ ತಂದೆಯವರು ಸರ್ಕಾರಿ ನೌಕರಿಯಲ್ಲಿದ್ದರು. ಅವರು UDC (Upper Division Clerk) ಆಗಿದ್ದರು. ಅವರಿಗೆ ಬೇರೆ ಬೇರೆ ಕಡೆ ವರ್ಗಾವಣೆಯಾಗುತ್ತಿತ್ತು. ಆಗ ನಾನು ಪ್ರಾಥಮಿಕ, ಪ್ರೌಢಶಾಲೆ, ಕಾಲೇಜು ವಿದ್ಯಾಭ್ಯಾಸವೆಲ್ಲಾ ಹಾಸ್ಟೆಲ್‌ನಲ್ಲಿದ್ದುಕೊಂಡೇ ಮಾಡಬೇಕಾಗಿತ್ತು. ಆಗ ಸರ್ಕಾರಿ ಹಾಸ್ಟೆಲ್ ಎಲ್ಲರಿಗೂ ಜನರಲ್ ಆಗಿ ಇತ್ತು. ಎಸ್.ಸಿ., ಮುಸ್ಲಿಮ್, ಹಿಂದೂ, ಬ್ರಾಹ್ಮಣರು, ಎಲ್ಲರೂ ಒಟ್ಟಿಗೆ ಇರುತ್ತಿದ್ದೆವು. ಇದರಲ್ಲಿ ಎಸ್.ಸಿ. ಯಾರು, ಓ.ಬಿ.ಸಿ. ಯಾರು ಎಂಬ ವ್ಯತ್ಯಾಸವೇ ಗೊತ್ತಾಗುತ್ತಿರಲಿಲ್ಲ. Because I was first class in High School, ನಮಗೆ 25 ರೂಪಾಯಿ ವಿದ್ಯಾರ್ಥಿ ವೇತನ ಇರುತಿತ್ತು. ನಾವು ತಿಂಗಳಿಗೆ 34 ರೂಪಾಯಿ ಮೆಸ್‌ಗೆ and Rs. 3 bed charges ಕೊಡುತ್ತಿದ್ದೆವು. ಒಟ್ಟು ಶಿಕ್ಷಣಕ್ಕಾಗಿ 37 ರೂಪಾಯಿ ತಿಂಗಳಿಗೆ ಖರ್ಚಾಗುತಿತ್ತು. Then we all were living altogether. It was one of the good livable hostel and good food was

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

also supplied. ಈಗ ಹಾಸ್ಟೆಲ್‌ಗಾಗಿ ಕೋಟ್ಯಾಂತರ ರೂಪಾಯಿಗಳನ್ನು ಮೀಸಲಿಡುತ್ತಿದ್ದೇವೆ. ಮೊರಾರ್ಜಿ ದೇಸಾಯಿ ವಸತಿ ಶಾಲೆ, ಇನ್ನಿತರ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಿದ್ದೇವೆ. ಆದರೆ ಅಲ್ಲಿ ಪರಿಸ್ಥಿತಿ ಏನಿದೆ? ಅಲ್ಲಿ ಊಟದ ವ್ಯವಸ್ಥೆ ಸರಿಯಾಗಿರುವುದಿಲ್ಲ, ಸರಿಯಾಗಿ ಹಾಸಿಗೆಗಳು ಇರುವುದಿಲ್ಲ, ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ, ಶೌಚಾಲಯದ ವ್ಯವಸ್ಥೆ ಸರಿಯಾಗಿರುವುದಿಲ್ಲ. ಹಾಸ್ಟೆಲ್‌ಗಳು ಒಟ್ಟಿಗೆ ಇರಬೇಕೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಹಾಸ್ಟೆಲ್‌ನಲ್ಲಿ ಎಸ್.ಸಿ. ಯವರಿಗೆ ಎಲ್ಲಾ ಉಚಿತವಾಗಿರುತ್ತದೆ. ಓ.ಬಿ.ಸಿ. ಜನಾಂಗದವರಿಗೆ ಅರ್ಧ ಚಾರ್ಜ್ ಮಾಡಬಹುದು. ಮೇಲ್ವರ್ಗದ ಜನಾಂಗದವರಿಗೆ ಪೂರ್ತಿ ಚಾರ್ಜ್ ಮಾಡಬಹುದು. From childhood you have divided us. ಎಸ್.ಸಿ.-ಎಸ್.ಟಿ. ಜನಾಂಗದವರ ಹಾಸ್ಟೆಲ್‌ನ್ನು ನೋಡಿದ್ದೀರಾ, ಆ ಹಾಸ್ಟೆಲ್ ಅಭಿವೃದ್ಧಿ ಎಲ್ಲಿ ಆಗಿದೆ? ಹಾಸ್ಟೆಲ್ ಗತಿ ಏನಾಗಿದೆ ಎಂಬುದನ್ನು ನಾವು ಇಲ್ಲಿ ಬೇಕಾದಷ್ಟು ಸಲ ಚರ್ಚೆ ಮಾಡಿದ್ದೇವೆ. ಬಡವರು ಚೆನ್ನಾಗಿ ಬದುಕಬೇಕಾಗಿದೆ. ಅದೇ ಜನರಲ್ ಹಾಸ್ಟೆಲ್ ಇದ್ದಿದ್ದರೆ ಅನಿವಾರ್ಯವಾಗಿ quality ಸುಧಾರಣೆಯಾಗುತ್ತಿತ್ತು. ಹಾಸ್ಟೆಲ್‌ನಲ್ಲಿ ಬೇಕಾದಷ್ಟು ಹಗರಣಗಳಾಗುತ್ತಿವೆ. ನಾವು ವಿರೋಧ ಪಕ್ಷದಲ್ಲಿದ್ದಾಗ ಪ್ರತಿಭಟನೆ ಮಾಡಿದ್ದೇವೆ. ಮಾನ್ಯ ಶರವಣ ರವರು ಅವರೂ ದಿಂಬು ತಲೆ ಮೇಲೆ ಇಟ್ಟುಕೊಂಡು ಓಡಾಡಿ ಪ್ರತಿಭಟನೆ ಮಾಡಿದ್ದರು. ನಾವು ವಿರೋಧ ಪಕ್ಷದಲ್ಲಿದ್ದಾಗ ಹಾಗೆ ನಡೆದುಕೊಂಡಿದ್ದೇವೆ. ಯಾವುದನ್ನು logical end ಗೆ ತೆಗೆದುಕೊಂಡು ಹೋಗಿಲ್ಲ. ನಾವು ಕೂಡ ಕಳೆದ ವರ್ಷ ಪೂರ್ತಿ ಸದನ ನಡೆಸುವುದಕ್ಕೆ ಬಿಟ್ಟಿಲ್ಲ. ಕಾಂಗ್ರೆಸ್ ಪಕ್ಷ ಅಥವಾ ಬೇರೆ ಪಕ್ಷ ಎಂದು ಇಲ್ಲ. ನಾವೂ ಸಹ ವಿರೋಧ ಪಕ್ಷದಲ್ಲಿದ್ದಾಗ ನಾವು ಸಹ ಶಾಮೀಲಾಗಿ ಸದನ ನಡೆಸಲು ಬಿಡುವುದಿಲ್ಲ. ನಾವು ಚರ್ಚೆ ಮಾಡಬೇಕೆಂದರೆ ಸಿದ್ಧತೆ ಮಾಡಿಕೊಂಡು ಬರಬೇಕು. ಸರ್ಕಾರದ ತಪ್ಪು ಎಲ್ಲೆಲ್ಲಿದೆ ಎಂಬುದನ್ನು ಹುಡುಕಬೇಕು. ಸರ್ಕಾರವನ್ನು attack ಮಾಡಿ rectify ಮಾಡಬೇಕು. ನ್ಯಾಯ ದೊರಕಿಸಿಕೊಳ್ಳುವುದಕ್ಕೆ ಬಲವಂತ ಮಾಡಬೇಕು. ಈಗ ಮಾನ್ಯ ರವಿಕುಮಾರ್‌ರವರ ಪ್ರಶ್ನೆ ಮೇಲೆ ಜೆಡಿ(ಎಸ್) ಪಕ್ಷದವರು ಹೇಗೆ ಒತ್ತಾಯ ಮಾಡಿ ಸದನ ಸಮಿತಿಯನ್ನು ಮಾಡಿದ್ದರೋ ಹಾಗೆಯೇ ಎಲ್ಲದ್ದಕ್ಕೂ ಒತ್ತಾಯ ಮಾಡಬೇಕಾಗುತ್ತದೆ. 1972-73 ರಲ್ಲಿ ನಾನು ಬೆಂಗಳೂರಿಗೆ ಬಂದೆ. ನಮಗೆ ರಾಜಕೀಯ ಚಟುವಟಿಕೆಯಲ್ಲಿರಬೇಕೆಂದು ನನಗೆ ಮೊದಲಿನಿಂದಲೂ ಛಲ ಇತ್ತು. ಆಗ Indian Express and Deccan Herald ಮಾತ್ರ ಇತ್ತು, ಬೇರೆ ಪತ್ರಿಕೆಗಳು ಇರಲಿಲ್ಲ. ಆಗ 39 ವರ್ಷದ ಹುಡುಗ, ಅವರು ನಮ್ಮ ತಂದೆಯ ಸಮಾನ. ಅವರು ವಿರೋಧ ಪಕ್ಷದ ನಾಯಕರಾಗಿದ್ದರು. Hon'ble Leader of Opposition must have remembering him because you were in politics at that time. At that time, you

were MLC or not I do not know. 39 years old young boy was Leader of Opposition at that time. And he use to comment about the faults of the then Government of Karnataka. Everyday we use to read the newspaper verbatim. ಆಗ ಪತ್ರಿಕೆಯ ಪ್ರತಿ ಪುಟವನ್ನು ಓದುತ್ತಿದ್ದೆವು. Collectively we use to read the newspaper. ಅವರು ಯಾರೆಂದರೆ, ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀಮಾನ್ ದೇವೇಗೌಡರವರು. In all the sessions, he used to hit the Government and bring out the lacuna of the then Government. ಆ ಸಮಯದಲ್ಲಿ ಎಂ.ಡಿ.ನಟರಾಜ್‌ರವರ ಬಗ್ಗೆ ಹೇಳಿದ್ದರು. ಇದರ ಬಗ್ಗೆ ಅವರು ಕಠಿಣವಾದ ಕ್ರಮವನ್ನು ತೆಗೆದುಕೊಂಡಿದ್ದರು. He was then 39 years young boy. ಆಗ ವಿರೋಧ ಪಕ್ಷವೆಂದರೆ ಆ ರೀತಿ ಇರುತ್ತಿತ್ತು. ನಾವು ಇದ್ದಾಗ ಹಾಗೆ ನಡೆದುಕೊಳ್ಳುತ್ತಿದ್ದೆವು. ಅವರು ಇದ್ದಾಗ ಹಾಗೆಯೇ ನಡೆದುಕೊಳ್ಳುತ್ತಿದ್ದರು. ಸದನದಲ್ಲಿ ಸೂಕ್ತವಾಗಿ ಚರ್ಚೆಯಾಗಬೇಕು, ರಾಜ್ಯದ ಜನತೆಗೆ ಒಳ್ಳೆಯದಾಗಬೇಕೆನ್ನುವ ಕಳಕಳಿ ಯಾರಿಗೂ ಇಲ್ಲವೆಂದು ಕಾಣುತ್ತದೆ. ಈ ಬಜೆಟ್ ಮೇಲೆ ನಾವೇನು ಚರ್ಚೆ ಮಾಡುವುದಿದೆ? ನನಗಂತೂ ಬಹಳ ನೋವಾಗುತ್ತಿದೆ. ಏಕೆಂದರೆ, ಜಾತಿ ಆಧಾರದ ಮೇಲೆ ಹಣ ಹಂಚುವುದು, ನಿಗಮ-ಮಂಡಳಿ ಮಾಡುವುದು. ಈಗಾಗಲೇ 50-60 ಜಾತಿಯಾಗಿದೆ. ಬೇರೆ ಬೇರೆ ಉಪ ಜಾತಿಗಳಿವೆ. ಎಷ್ಟು ಜಾತಿಗಳೆಂದು ಮಾಡಿಕೊಂಡು ಹೋಗುತ್ತಾರೆ? ಇದಕ್ಕೊಂದು ಕಡಿವಾಣ ಹಾಕಬೇಕಲ್ಲವೇ? ಶಾಸಕರಿಗೆ ಮಂತ್ರಿ ಸ್ಥಾನ ಸಿಗದಿದ್ದರೆ ನಿಗಮ-ಮಂಡಳಿಯ ಅಧ್ಯಕ್ಷರಾಗಿ ಮಾಡಿಬಿಡುತ್ತಾರೆ. ಒಂದೊಂದು ಉಪ ಚುನಾವಣೆಗೂ ಅದೇ ರೀತಿ ನಡೆದುಕೊಳ್ಳುತ್ತೇವೆ. ಒಂದು ಉಪ ಚುನಾವಣೆ ಗೆಲ್ಲಬೇಕೆಂದರೆ ಯಾವುದೋ ಜಾತಿಯ ಆಧಾರದ ಮೇಲೆ ನಿಗಮ-ಮಂಡಳಿಯಲ್ಲಿ ಅಧ್ಯಕ್ಷರಾಗಿ ಮಾಡುತ್ತೇವೆಂದು ಒಪ್ಪಿಕೊಂಡುಬಿಡುತ್ತೇವೆ. ಆ ತರಹ ಮಂಡಳಿ ಮಾಡುತ್ತಾ ಹೋದರೆ this money will go the Boards and Corporation. ಎಲ್ಲಿಯೂ accountability ಇರುವುದಿಲ್ಲ. Committee on Papers Laid ಯಲ್ಲಿದ್ದಾಗ ಪ್ರತಿಯೊಂದು ಲೆಕ್ಕಾಚಾರವೆಲ್ಲಾ ಬರುತ್ತಿತ್ತು. ಆಗ ಹಗರಣ ನಡೆದಿರುವುದನ್ನು ನೋಡಿದರೆ, ತಾವು ಆ ಸಮಿತಿಯಲ್ಲಿದ್ದೀರಿ. ಪ್ರತಿಯೊಂದರಲ್ಲೂ ಹಗರಣ ನಡೆದಿರುತ್ತದೆ. 15 ವರ್ಷದವರೆಗೆ ತನಿಖೆಯಾಗಿಲ್ಲ, ಮಾನ್ಯ ಅರುಣಶಹಾಪುರ ರವರು ನಮ್ಮ ಜೊತೆಯಲ್ಲಿದ್ದಾರೆ. ಅವರದ್ದೇ ಪ್ರಶ್ನೆ 15 ವರ್ಷದಿಂದ ಭರವಸೆ ಸಮಿತಿಯಲ್ಲಿದೆ. ಇದುವರೆವಿಗೂ ಯಾವುದೇ ತೀರ್ಮಾನವಾಗಿರುವುದಿಲ್ಲ. ಶೇಕಡ 50 ರಷ್ಟು ಬಜೆಟ್ ಹಗರಣ, ಭ್ರಷ್ಟಾಚಾರದಿಂದಲೇ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೂಡಿರುತ್ತದೆ. ಆ ಸರ್ಕಾರ, ಈ ಸರ್ಕಾರ ಎಂದೇನೂ ಇಲ್ಲ. ಮಂತ್ರಿ ಸ್ಥಾನ ಪಡೆದವರು ಈ ಕರ್ನಾಟಕ ರಾಜ್ಯ ನಮ್ಮದು ಎಂದು ತಿಳಿದುಕೊಂಡು ಬಿಟ್ಟಿದ್ದಾರೆ. Political game ಗೋಸ್ಕರ ಇದರ ಬಗ್ಗೆ ಗಮನ ಕೊಡುವುದಿಲ್ಲ. ವಿರೋಧ ಮಾಡುವುದಕ್ಕೂ ಆಗುವುದಿಲ್ಲ. ನಾನು ಆ ಕಡೆ ಇದ್ದಾಗ ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ನೋವನ್ನು ಅನುಭವಿಸಿದ್ದರು. ಮಾನ್ಯ ಕಾಗೋಡು ತಿಮ್ಮಪ್ಪನವರು ಒಬ್ಬ ಅಧಿಕಾರಿಯ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದರು. ಅದು ದಾಖಲೆಯಾಗಿದೆ. ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಂಡರೆ ಜಾತಿ ಆಧಾರದ ಮೇಲೆ, ಸಂಬಂಧದ ಆಧಾರದ ಮೇಲೆ ಫೋನ್ ಮಾಡುತ್ತಾರೆ. ಬೆಳಗಾವಿ ಅಧಿವೇಶನದಲ್ಲಿ ನಾನೇ ಸ್ವತಃ ನೋಡಿದ್ದೇನೆ.

**(ಮುಂದು)**

**(540)22–03–2021/2–00/ಬಿಕೆಪಿ–ಎಂಡಿ**

**ಶ್ರೀ ಲಹರ್ ಸಿಂಗ್ ಸಿರೋಯಾ(ಮುಂದು):–**

ಅದು ಏನಿದೆ ಸ್ವಾಮಿ? ಹಾಗಾಗಿ, ಬಜೆಟ್ ಕೇವಲ ಎರಡೂವರೆ ಲಕ್ಷ ಕೋಟಿಗಳನ್ನು ಮಾಡಿಬಿಟ್ಟರೆ ಉಪಯೋಗವೇನು? ಆಮೇಲೆ ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯ ಬಹಳ resourceful state ಆಗಿದೆ. ನಮಗೆ ಪದೇ ಪದೇ ಕೇಂದ್ರ ಸರ್ಕಾರ ದುಡ್ಡು ಕೊಡುವುದಿಲ್ಲವೆಂದು ಹೇಳುತ್ತೇವೆ. ಆ ರೀತಿ ಯಾವುದೂ ನಮಗೆ ಆ ರೀತಿ ಬೇಕಾಗಿಲ್ಲ. ನಾವು ಸರಿಯಾಗಿ fund manage ಮಾಡಿದರೆ, ಸರಿಯಾದಂತಹ ಕಳಕಳಿಯಿರುವಂತಹ ಆರ್ಥಿಕ ಇಲಾಖೆಯ ಸಚಿವರು ಬಂದರೆ ಅದರ ಜೊತೆಗೆ ನಾವೆಲ್ಲರೂ ಸಹಕಾರ ಕೊಟ್ಟರೆ, ಅಂದರೆ ನಾವೆಲ್ಲರೂ ಒಳ್ಳೆಯ ಚರ್ಚೆ ಮಾಡಿದರೆ ಅಂದರೆ ವಿರೋಧ ಪಕ್ಷದವರು ನಾವೆಲ್ಲರೂ ಸೇರಿ ಚರ್ಚೆ ಮಾಡಿ ಜಾರಿಗೆ ತಂದರೆ we have a lot of potential. ನಮ್ಮಲ್ಲಿ mineral sources iron ore ನಿಂದ gold ವರೆಗೆ ಇದೆ. ಅದನ್ನು ನಾವು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡರೆ, ಜನಪರವಾದಂತಹ ಸರಿಯಾದ ಪಾಲಿಸಿ ಮಾಡಿದರೆ ಇದರಲ್ಲಿ ನಮ್ಮದೇ ಬೇಕಾದಷ್ಟು ದುಡ್ಡು ಸಿಗುತ್ತದೆ. ನಾವು ಸಾಲ ತೆಗೆದುಕೊಳ್ಳುವ ಪರಿಸ್ಥಿತಿ ಬರುವುದಿಲ್ಲ ಹಾಗೂ ಯಾರನ್ನೂ ಕೇಳಬೇಕಾಗಿಲ್ಲ. ಅದೇ ರೀತಿ ನಮಗೆ tourism ನಲ್ಲಿ potential ಇದೆ. ನಮ್ಮ ಮಾನ್ಯ ಸದಸ್ಯರಾದ ಶ್ರೀ ಪ್ರತಾಪ್ ಸಿಂಗ್ ನಾಯಕ್‌ರವರು ಮಾತನಾಡಿದಾಗ ಇದರ ಬಗ್ಗೆ ಅಂದರೆ, coastal ಬಗ್ಗೆ ಮಾತನಾಡಬಹುದು ಎಂದುಕೊಂಡೆ. ಅದರ ಬಗ್ಗೆ ಯಾರೂ ಗಮನ ಕೊಡುತ್ತಿಲ್ಲ. We have 300 Kms of the coastal line. ಇದರ ಬಗ್ಗೆ ಯೋಚನೆ ಮಾಡಿದರೆ ಸಾವಿರಾರು ಕೋಟಿಗಳಲ್ಲಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

investment ಬರಬಹುದು. ಇದರ ಬಗ್ಗೆ ಯಾವುದೇ ಸರ್ಕಾರ ಬಂದರೂ ಗಮನ ಕೊಟ್ಟಿಲ್ಲ. Tourism ನಲ್ಲಿ coastal belt ಅನ್ನು improve ಮಾಡಬೇಕೆಂದು nobody is giving attention to that sir. ಅದೇ ರೀತಿ tourism ನಲ್ಲಿ Hampi has been declared as a World Heritage by UNESCO (United Nations Educational, Scientific and Cultural Organization). ಇದರ ಬಗ್ಗೆ ಏನಾದರೂ ಮಾಡಿದ್ದೇವೆಯೇ? ಅದರ ಬಗ್ಗೆ ಎಲ್ಲಾ ಕಡೆಯೂ ಹಗರಣವಾಗಿದೆ. ಯಾರಿಗೋ ಹೋಟೆಲ್ ಕೊಡುವುದು, ನಮ್ಮವರೇ ಎಂ.ಎಲ್.ಎ., ಎಂ.ಎಲ್.ಸಿ.ಯವರು ಇರುತ್ತಾರೆ. ಅಲ್ಲಿ ರಿಯಲ್ ಎಸ್ಟೇಸ್ ಮಾಡುವುದು, ಏನೇನೋ ಮಾಡಿ ಅಲ್ಲಿ unfriendly ವಾತಾವರಣ ಸೃಷ್ಟಿ ಮಾಡಿ ಅಲ್ಲಿ ಯಾರೂ ಸಹ ಬರುವುದಿಲ್ಲ. ಅದೇ ರೀತಿ we have Wildlife Sanctuaries. ಮಾನ್ಯ ಸಭಾಪತಿಗಳೇ, ನಮ್ಮಲ್ಲಿ ಎಷ್ಟೊಂದು Wildlife Sanctuaries ಇದೆ. ನಾವು ಜಂಗಲ್ ಲಾಡ್ಜಸ್‌ಗಳನ್ನು ಕಟ್ಟಿದ್ದೇವೆ. 30 ವರ್ಷಗಳಿಗೆ ಮುಂಚಿತವಾಗಿ ನಾನೂ ಕೂಡ Kabini River Lodge ಗೆ ದುಡ್ಡು ಕೊಟ್ಟು ಹೋಗಿದ್ದೇನೆ, ಆ ಸಮಯದಲ್ಲಿ ನಾನು ಎಂ.ಎಲ್.ಸಿ ಆಗಿರಲಿಲ್ಲ. ನಾನು ಆಗ ಜಂಗಲ್ ಲಾಡ್ಜ್‌ಗೆ ಹೋದಾಗ Kabini River Lodge was wonderfully managed. Mr. Malhothra was MD at that time. ಈಗ ಜಂಗಲ್ ಲಾಡ್ಜ್‌ಗಳ ವ್ಯವಸ್ಥೆ ನೋಡಿದರೆ you cannot stay there. Jungle Lodges are the best places and most prime locations ಇದೆ. Everything is going to the crux, ನಿಗಮಗಳನ್ನು ಮಾಡಿ ಇವರನ್ನು ಯಾರನ್ನಾದರೂ ಛೇರ್ಮನ್ ಮಾಡುವುದು, ಅವರು ಮೊದಲು ಹೋದ ತಕ್ಷಣ ಒಂದು ಹೊಸ ಕಾರ್ ತೆಗೆದುಕೊಂಡು ಬಾ ಎನ್ನುತ್ತಾರೆ. He never wanted to improve. ಮಾನ್ಯ ಸಭಾಪತಿಯವರೇ, ಇದನ್ನು ನಾನು ಬಹಳ ನೋವಿನಿಂದ ಹೇಳುತ್ತೇನೆ. ಯಾರು ಬೋರ್ಡ್, ಕಾರ್ಪೊರೇಷನ್‌ಗಳಲ್ಲಿ ಛೇರ್ಮನ್‌ಗಳಾಗಿದ್ದಾರೆ ಅವರು ಅದಕ್ಕೆ ತಕ್ಕಂತಹ ಸರ್ಕಾರ, ಅದಕ್ಕೆ ತಕ್ಕಂತಹ ಶಿಷ್ಯಂದಿರುಗಳನ್ನೇ ಮಾಡುತ್ತಾರೆ. They have never cared for those Boards. ಅವರು ದುಡ್ಡು ಮಾಡಬೇಕು, ಅವರಿಗೆ ಕಾರ್‌ಗಳು ಸಿಗಬೇಕು, ಅವರು ಮೀಟಿಂಗ್‌ಗಳನ್ನು ತೆಗೆದುಕೊಳ್ಳಬೇಕು, ಅವರುಗಳು ಟೂರ್‌ಗೆ ಹೋಗುವುದನ್ನು ಬಿಟ್ಟರೆ, irrespective of the party, whether it is Congress, JD(S) or BJP, the system is

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

diluted. ನೀವು ನಾಳೆ ದಿನ ಮಾನ್ಯ ಮುಖ್ಯಮಂತ್ರಿಗಳು ಆದರೆ ಏನು ಮಾಡುತ್ತೀರಿ? You have to go with the system. ನೀವು ಕುರ್ಚಿಯನ್ನು ಕಾಪಾಡಬೇಕು. you have to listen to your officers, to your MLA's. ಏನು ಮಾಡುತ್ತೀರಿ, ಎಲ್ಲಿಗೆ ಹೋಗುತ್ತೀರಿ? instead of improving that, earning the revenues... ಮಧ್ಯ ಪ್ರದೇಶದ Kanha Wildlife Sanctuary ನಲ್ಲಿ ಎಷ್ಟೊಂದು development ಮಾಡಿದ್ದಾರೆ. ನಮ್ಮ ರಣತಂಬೂರಿನಲ್ಲಿ ನೋಡಿ. ಅಲ್ಲಿ they have developed it very well. Karnataka has the second largest tiger population and the highest elephant population. ಇಂತಹ ರಾಜ್ಯದಲ್ಲಿ ನಾವಿದ್ದೇವೆ. ಇದನ್ನು ನಾವು tourism ಸರಿಯಾಗಿ manage ಮಾಡಿದರೆ ಮತ್ತು ಅದರ ಜೊತೆಗೆ ನಮ್ಮಲ್ಲಿ coastal belt and world heritage places ಸಹ ಬರುತ್ತದೆ.

ಮಾನ್ಯ ಸಭಾಪತಿಯವರೆ, ನಮ್ಮ IT Sector ನಲ್ಲಿ 20 ಲಕ್ಷ ಜನರು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಕೇವಲ 11% ಕನ್ನಡಿಗರಿದ್ದಾರೆ. IT sector is the biggest benefit to our Karnataka State. ಏನಾಗಿದೆ ಎಂದರೆ, ಏಕೆ 11% ಮಾತ್ರ ನಮ್ಮ ಕರ್ನಾಟಕದವರು ಇದ್ದಾರೆ ಎಂದರೆ ಅರ್ಥ ಮಾಡಿಕೊಳ್ಳಿ. ಈಗ ಏನಾಗುತ್ತಿದೆ ಎಂದರೆ, ನಮ್ಮ ಸರ್ಕಾರಿ ಶಾಲೆಗಳಲ್ಲಿ ಸರಿಯಾದ ಶಿಕ್ಷಣವಿಲ್ಲ. ಇದಕ್ಕೆ ಇಲ್ಲಿಂದ they are not going to the higher education. ಅವರು ಉನ್ನತ ಶಿಕ್ಷಣಕ್ಕೆ ಹೋಗುವುದಕ್ಕಾಗುತ್ತಿಲ್ಲ. ಆಗ ಏನಾಗುತ್ತದೆ ಎಂದರೆ, ಬೇರೆ ಬೇರೆ ರಾಜ್ಯಗಳಿಂದ ಇಲ್ಲಿಗೆ ಬಂದು ಕೆಲಸ ಮಾಡುತ್ತಾರೆ. I will give some interested figures.

**ಸಭಾಪತಿಯವರು:** ಒಂದು ಕೆಲಸ ಮಾಡೋಣ. ಇಲ್ಲಿ ಒಂದು ನಿಮಿಷ ಕೇಳಿ. ಈಗ ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸಭೆಯನ್ನು ಮುಂದೂಡುತ್ತಿದ್ದೇನೆ. ಮಧ್ಯಾಹ್ನ ಸದನ ಸೇರಿದ ತಕ್ಷಣ ನೀವು continue ಮಾಡಿ. ಭೋಜನವಿರಾಮದ ನಂತರ ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸೇರುವಂತೆ ಸಭೆಯನ್ನು ಮುಂದೂಡಲಾಗುವುದು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(541) 22.03.2021, 3 .30 KG.AK**

**(ಮಧ್ಯಾಹ್ನ 2 ಗಂಟೆ 5 ನಿಮಿಷಕ್ಕೆ ಭೋಜನ ವಿರಾಮಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 32 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

## 2021–22 ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ನಾನು ಬಜೆಟ್ ಮೇಲೆ ಮಾತನಾಡುವಾಗ, ನನ್ನ ಗೆಳೆಯರಾದ ಕೆಲವು ಮಾನ್ಯ ಸದಸ್ಯರುಗಳು ನಾನು ಸರ್ಕಾರದ ಮತ್ತು ಬಜೆಟ್ ವಿರುದ್ಧ ಮಾತನಾಡುತ್ತೇನೆಂದು ಭಾವಿಸಿದ್ದರು. ಆ ತರಹ ಖಂಡಿತವಾಗಿ ಇಲ್ಲ. ಏಕೆಂದರೆ, ಮಾನ್ಯ ಮುಖ್ಯ ಮಂತ್ರಿಯವರು ಮಂಡಿಸಿರುವಂತಹ ಬಜೆಟ್ ಬಹಳ ಚೆನ್ನಾಗಿದೆ. ಈ ಬಜೆಟ್‌ನಲ್ಲಿ ಏನೇನು plus points ಇವೆ ಎಂಬುದರ ಬಗ್ಗೆಯೂ ಸಹ highlight ಮಾಡುತ್ತೇನೆ. ಈಗ pandemic, flood ಇದ್ದರೂ ಸಹ, ಬಜೆಟ್ 3.5% increase ಆಗಿದೆ. Welfare schemes ಗೂ ಸಹ ಮಾನ್ಯ ಮುಖ್ಯ ಮಂತ್ರಿಯವರು additional tax ಹಾಕದೆ 37 ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. It is set aside especially for welfare of women because the budget was presented on the Women's Day. ಮಹಿಳಾ ಶಕ್ತಿಯನ್ನು empower ಮಾಡುವುದಕ್ಕಾಗಿ 37 ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ಅದೇರೀತಿ organic farming ಬಹಳ ಅವಶ್ಯಕತೆ ಇದೆ, ಅದಕ್ಕಾಗಿ 500 ಕೋಟಿ ರೂಗಳನ್ನು ಮೀಸಲಿಟ್ಟಿದ್ದಾರೆ. The Karnataka Prevention of Slaughter and Preservation of Cattle Bill ಬಂದ ಮೇಲೆ ಜಾನುವಾರುಗಳನ್ನು ಕಾಪಾಡುವಂತಹ ನಿಟ್ಟಿನಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದು ಗೋ–ಶಾಲೆಯನ್ನು ಮಾಡಬೇಕೆಂದು ಬಜೆಟ್‌ನಲ್ಲಿ provision ಮಾಡಿದ್ದಾರೆ.

ಮಾನ್ಯ ಸಭಾಪತಿಯವರೇ, ಬಜೆಟ್‌ನಲ್ಲಿ ರೈತರ ಬಗ್ಗೆಯೂ ಸಹ ಸಾಕಷ್ಟು ಹೇಳಿದ್ದಾರೆ. ಮುಂದೆ farmer-centric budget ಇದೆ. ರೈತರಿಗೆ ಒಳ್ಳೆಯದು ಆಗುತ್ತದೆ. ಬೇರೆ ಬೇರೆ ಕಾರಣಕ್ಕೆ I will not go into those details. ಕಳೆದ ಸರ್ಕಾರ ಏನೇನು ಮಾಡಿದೆ ಎಂಬುದನ್ನು ಸಹ ಹೇಳುತ್ತೇನೆ.

ನಾನು ಒಂದು ದಿನಪತ್ರಿಕೆಯನ್ನು ಸದನಕ್ಕೆ ತೋರಿಸುತ್ತೇನೆ. ಇದನ್ನು ತಮಗೂ ಕಳುಹಿಸಿಕೊಡುತ್ತೇನೆ. One of the headlines of the Deccan Chronicle dated December 02, 2018 reads, "250 farmers end life after Congress-JD(S) government takes over". ಆರು ತಿಂಗಳಿನಲ್ಲಿ 250 farmers suicide ಮಾಡಿಕೊಂಡಿದ್ದಾರೆ. ಇದು ಸಮ್ಮಿಶ್ರ ಸರ್ಕಾರ ಬಂದ ಮೇಲೆ ಆಗಿದ್ದು. ಬೇರೆ ಬೇರೆ ಕಾರಣಕ್ಕಾಗಿ ಆ ಸರ್ಕಾರ ಅಧಿಕಾರಕ್ಕೆ ಬಂತು. ಇಲ್ಲವೆಂದ್ದರೆ, ಖಂಡಿತವಾಗಿ ಬರುತ್ತಿರಲಿಲ್ಲ. ಆ ಸರ್ಕಾರ ಎಷ್ಟು ಅನಾಹುತ ಮಾಡಿತ್ತು ಎಂದರೆ, ಐದು ವರ್ಷದಲ್ಲಿ 3500 farmers have committed suicide. ಇದಕ್ಕೆ ದಾಖಲೆ ಇದೆ. ಅದನ್ನು ತಮಗೂ ಕೊಡುತ್ತೇನೆ. ಆಮೇಲೆ ಇದರ ಮೇಲೆ ಚರ್ಚೆ ಮಾಡಬೇಕು. ಏಕೆಂದರೆ, I do not want to rub. ಏಕೆಂದರೆ, ಇದು debate ಆಗಬೇಕು. ನಾನು ಕಾಂಗ್ರೆಸ್ ಪಕ್ಷದ ಬಗ್ಗೆ ಹೆಚ್ಚು criticize ಮಾಡುತ್ತಿಲ್ಲ. ನಮ್ಮ ಬಜೆಟ್ ಬಹಳ plus point ಆಗಿದೆ ಮತ್ತು ಎಲ್ಲೆಲ್ಲಿ ಸಮಸ್ಯೆಯಾಗಿದೆ, it is because of this system. Not because ಈ ಸರ್ಕಾರ, ಆ ಸರ್ಕಾರವೆಂದು ಕಾಣುವುದಿಲ್ಲ. ಇದು ನಮ್ಮ ಸಮಸ್ಯೆಯಾಗಿರುವುದರಿಂದ....

ಮಾನ್ಯ ಸಭಾಪತಿಯವರೇ, ಇನ್ನು education ಗೆ ಸಂಬಂಧಪಟ್ಟಂತೆ, ಹೇಳುವುದಾದರೆ, ನಾವು ಸರ್ಕಾರಿ ಶಾಲೆಗಳ ಗುಣಮಟ್ಟವನ್ನು ಸುಧಾರಿಸಬೇಕಾಗಿದೆ. ಇದರ ಬಗ್ಗೆ ಮಾನ್ಯ ಶ್ರೀಕಂಠೇಗೌಡರು ಗಮನಕೊಡಬೇಕಾಗಿದೆ. ಕಳೆದ 10-15 ವರ್ಷಗಳಿಂದ ಶಿಕ್ಷಕರ ಸಮಸ್ಯೆ ಬಗ್ಗೆ ಬಹಳ debate ನಡೆದಿದೆ. ಏಕೆಂದರೆ, ಮಾನ್ಯ ಸದಸ್ಯರು ಅದೇ ಕ್ಷೇತ್ರದಿಂದ ಬಂದಿರುವುದರಿಂದ ಒಳ್ಳೆಯ articulation ಮಾಡಿ ಶಿಕ್ಷಕರ ಸಮಸ್ಯೆಗಳ ಬಗ್ಗೆ ವಿವರವಾಗಿ ಮಾತನಾಡುತ್ತಾರೆ. Quality of education ಬಗ್ಗೆ ಯಾರು ಮಾತನಾಡುವುದಿಲ್ಲ. ಸರ್ಕಾರಿ ಶಾಲೆಗಳಲ್ಲಿ quality of education improve ಆಗದಿದ್ದರೆ, ಬಡವರ ಮಕ್ಕಳು ಎಲ್ಲಿಗೆ ಹೋಗುತ್ತಾರೆ? ನಮ್ಮಂತಹ ರಾಜಕಾರಣಿಯವರ ಮಕ್ಕಳು, ಅಧಿಕಾರಿಗಳ ಮಕ್ಕಳು ಹಾಗೂ ಶ್ರೀಮಂತರ ಮಕ್ಕಳು ಸರ್ಕಾರಿ ಶಾಲೆಗಳಿಗೆ ಹೋಗುವುದಿಲ್ಲ. ಆಟೋರಿಕ್ಷಾ ಚಾಲಕರು ಮತ್ತು ಇತರೆ ಸಣ್ಣ ಪುಟ್ಟ ಕೆಲಸಗಳನ್ನು ಮಾಡುವಂತಹವರು ಸಹ ಗುಣಮಟ್ಟದ ಶಿಕ್ಷಣ ಸಿಗುತ್ತದೆಂದು ಅವರ ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸುತ್ತಿದ್ದಾರೆ. ದೆಹಲಿಯಲ್ಲಿ ಶ್ರೀ ಅರವಿಂದ ಕೇಜ್ರಿವಾಲ್‌ರವರು., ಅವರು ಏನಾದರೂ ಇರಲಿ, ನಾನು ಅವರ ಮಾಧ್ಯಮದ ಬಗ್ಗೆ ಮಾತನಾಡುವುದಿಲ್ಲ. ದೆಹಲಿಯಲ್ಲಿ ಸರ್ಕಾರಿ ಶಾಲೆಗಳು ಯಾವ ಮಟ್ಟಕ್ಕೆ ಬೆಳವಣಿಗೆಯಾಗಿದೆ ಎಂಬುದನ್ನು ನಾವು ಸದನ ಸಮಿತಿ ಮೂಲಕ ಇಲ್ಲವೇ

ಒಂದು delegation ಹೋಗಿ ನೋಡಿಕೊಂಡು ಬರಬೇಕು. ಕೇರಳದಲ್ಲಿಯೂ ಸಹ ಅದೇ ತರಹ ಆಗಿದೆ. ಆದರೆ, ನಾವು ಕರ್ನಾಟಕದಲ್ಲಿ ಏಕೆ ಮಾಡುತ್ತಿಲ್ಲ? ನಾವು ಕೇವಲ ಕನ್ನಡಿಗ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಆದರೆ, ಸರ್ಕಾರಿ ಶಾಲೆಗಳಲ್ಲಿ quality of education improve ಮಾಡಲಿಲ್ಲ. ಈ ರೀತಿಯಾದರೆ, ಬಡವರು ಮಕ್ಕಳು ಎಲ್ಲಿಗೆ ಹೋಗುತ್ತಾರೆ? ಇದೇ ಕಾರಣಕ್ಕಾಗಿ ಕೇವಲ IT sector ನಲ್ಲಿ 11% ಕೆಲಸ ಮಾಡುವವರು ಇದ್ದಾರೆ. ಏಕೆಂದರೆ, ಯಾರು ಸಹ ಕಂಪನಿಯವರು they want to employ local people only. ಏಕೆಂದರೆ, ಬೇರೆ ಊರಿನಿಂದ employ ಕರೆಸಿದ್ದರೆ, ಅವರಿಗೆ lodging and boarding ಮಾಡಬೇಕಾಗಿ ಬರುತ್ತದೆ. It will be expensive either this way or that way. ಸ್ಥಳೀಯವಾಗಿ employ ಸಿಕ್ಕಿದರೆ, ಅವರಿಗೆ ಕೆಲವೊಂದು ಸೌಕರ್ಯಗಳು ಕೊಡಬೇಕಾಗಿಲ್ಲ. ಏಕೆ ಇದು ಆಗುವುದಿಲ್ಲವೆಂದರೆ, ಇದು ಮೊದಲು Infosys ನಲ್ಲಿ ಏಕೆ ಆಗಿತ್ತು? Because there was ಒಳ್ಳೆಯ ಗುಣಮಟ್ಟದ ಶಿಕ್ಷಣ ಇತ್ತು. ಹಾಗಾಗಿ, ಒಳ್ಳೆಯ ಅಭ್ಯರ್ಥಿಗಳು ಸಿಗುತ್ತಿದ್ದರು. ಅದಕ್ಕೆ Infosys, IT sector ಎಲ್ಲವೂ improve ಆಗಿದೆ. ಅದಕ್ಕೆ ನಾವೆಲ್ಲರೂ ರಾಜಕಾರಣವನ್ನು ಬಿಟ್ಟು ಸರ್ಕಾರಿ ಶಾಲೆಗಳ ಗುಣಮಟ್ಟವನ್ನು education improve ಮಾಡಿಲ್ಲವೆಂದರೆ, ಬಡವರ ಮಕ್ಕಳು ಉದ್ಧಾರ ಆಗುವುದಿಲ್ಲ. ಅದಕ್ಕೆ ಇದನ್ನು ಸದನದಲ್ಲಿ ಯಾವ ರೀತಿ ಮಾಡಬೇಕೆಂದು ಚರ್ಚೆ ಮಾಡಬೇಕು. ಇದು ಕೇವಲ ನನ್ನಿಂದಲೇ ಆಗುವುದಿಲ್ಲ. I am not a very educated person and I am not well-qualified. ಇದಕ್ಕೆ ಕೇವಲ ಬಜೆಟ್‌ನ್ನು ಹೆಚ್ಚಿಗೆ ಕೊಟ್ಟರೂ ಸಹ, education improve ಆಗುವುದಿಲ್ಲ. ಇದರ ಬಗ್ಗೆ ನನ್ನ ಬಳಿ ಸಾಕಷ್ಟು newspaper cuttings ಗಳನ್ನು ಇಟ್ಟುಕೊಂಡಿದ್ದೇನೆ.

ಮಾನ್ಯ ಸಭಾಪತಿಯವರೇ, ಶಾಲೆಗಳಲ್ಲಿ ಪುಸ್ತಕ, ಸಮವಸ್ತ್ರ ಮತ್ತು ಶೂಗಳನ್ನು ಹಂಚಿಕೆ ಮಾಡುವುದರಲ್ಲಿಯೂ ಹಣವನ್ನು ಹೊಡೆಯುತ್ತಾರೆ. ಇದನ್ನು ಜಿಲ್ಲೆಯವರಿಗೆ ಕೊಡಬೇಕು, taluk level ನವರಿಗೆ ಕೊಡಬೇಕೆಂದು ಹಾಗೂ centralize ಮಾಡಬೇಕೆಂದು ಚರ್ಚೆ ಆಗುತ್ತದೆ. Accessories ಹಂಚುವುದರಲ್ಲಿ ಎಷ್ಟು ಆಗುತ್ತದೆ? ಇದರಲ್ಲಿ corruption ಕಾರಣಕ್ಕೆ ಈ lobby, ಆ lobby, local lobby, outside lobby ಎಷ್ಟೊಂದು ನಡೆಯುತ್ತದೆ. ಈ ರೀತಿಯಾದರೆ ಗುಣಮಟ್ಟದ ಶಿಕ್ಷಣ ಹೇಗೆ improve ಆಗುತ್ತದೆ? ಅದಕ್ಕೆ ತಾವೆಲ್ಲರೂ ಇದಕ್ಕೆ ಸಹಕಾರ ಕೊಡಬೇಕು.

ನಾನು ಏಕೆ frank ಆಗಿ ಮಾತನಾಡುತ್ತೇನೆಂದರೆ, ನಾವು ಕೆಲವು ಸಂಗತಿಗಳನ್ನು ಸ್ಪಷ್ಟವಾಗಿ ಮಾತನಾಡಲೇಬೇಕು. ನಾವು ಬೇರೆ ಬೇರೆ ಕಾರಣಕ್ಕೆ ಎಂ.ಎಲ್.ಎ., ಎಂ.ಎಲ್.ಸಿ., ಆಗಿದ್ದರೂ ಸಹ, ನಮ್ಮನ್ನು ಕಾಪಾಡುವವರು ಜನರು. Exchequer ನಿಂದ fund ಅನ್ನು ಡ್ರಾ ಮಾಡುತ್ತೇವೆ. ನಮಗೆ ಏನೇನು privilege ಸಿಗುತ್ತದೆ, ಏನೇನು ಗೌರವ ಸಿಗುತ್ತದೆ, ನಾವು ಎಲ್ಲಿಗೆ ಹೋದರೂ ಸಹ, ನಮಗೆ ಜನರು ಕೈಮುಗಿಯುತ್ತಾರೆ. ಏಕೆಂದರೆ, ನಮಗೆ ಒಂದು ಗೌರವ ಇದೆ. ಅದಕ್ಕೆ ನಾವು ಆ ಗೌರವಕ್ಕೆ ತಕ್ಕಂತೆ ನಡೆದುಕೊಳ್ಳಬೇಕಲ್ಲವೇ; ಅದಕ್ಕೆ ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. Are we concerned with the quality of education? Are we debating for that? We are fighting over the funds. Centralize ಮಾಡಬೇಕು, ನಾವು ಮತ್ತು IAS officer ರವರುಗಳು ಇದೆಲ್ಲವನ್ನು ಸರಿಯಾದ ರೀತಿಯಲ್ಲಿ ತಡೆಗಟ್ಟಿ ಕೆಲಸ ಮಾಡಿಬಿಟ್ಟರೆ, quality of education ಆಗುತ್ತದೆ.

**(ಮುಂದು)**

**(542) 22–03–2021(3–40)ಎಂವಿ–ಆರ್‌ಎನ್**

**ಶ್ರೀ ಲಹರ್ ಸಿಂಗ್ ಸಿರೋಯಾ(ಮುಂದು):-**

ಮಾನ್ಯ ಸಭಾಪತಿಯವರೇ, what were the quality of schools when surprise to see? ಶಿಕ್ಷಣದ ಗುಣಮಟ್ಟವನ್ನು ಸರಿಪಡಿಸದಿದ್ದರೆ ಯಾವುದೂ ಸಹ ಉದ್ಧಾರವಾಗುವುದಿಲ್ಲ. ಶಿಕ್ಷಣಕ್ಕೆ ಹೂಡಿಕೆ ಮಾಡುವುದು, ಭವಿಷ್ಯಕ್ಕೆ ಹೂಡಿಕೆ ಮಾಡಿದಂತೆ ಆಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಚರ್ಚೆ ಮಾಡಿ, ಜಗಳ ಮಾಡಿಯೇ ಸರ್ಕಾರದ ಬಳಿ ಫಂಡ್ ತೆಗೆದುಕೊಳ್ಳಬೇಕು ಅಲ್ಲವೇ? Unless we go in that and at least we need to know the need. ರಿಸರ್ಚ್ ಆಗದೇ ಇದ್ದರೆ, ಶಿಕ್ಷಣದ ಅಭಿವೃದ್ಧಿ ಹೇಗೆ ಆಗುತ್ತದೆ?

ಆಮೇಲೆ ಡಿಜಿಟಲ್‌ಗೆ ಸಂಬಂಧಿಸಿದಂತೆ, ಈ pandemic ಬಂದ ಮೇಲೆ digital divide ಆಗಿದೆ. ಡಿಜಿಟಲ್ ವ್ಯವಸ್ಥೆ ಇರುವಂತಹವರಿಗೆ ಅದು ಸಿಗುತ್ತದೆ. ಆದರೆ, ಬಡವರ ಮಕ್ಕಳು ಓದುವಂತಹ ಶಾಲೆಗಳಲ್ಲಿ ಆ ತರಹದ ವ್ಯವಸ್ಥೆ ಇಲ್ಲ. ಈಗ ಕಾನ್ವೆಂಟ್ ಮತ್ತು ಖಾಸಗಿ ಶಾಲೆಗಳಲ್ಲಿ ಡಿಜಿಟಲ್ ವ್ಯವಸ್ಥೆ ಇದೆ. Digital India ಎಂದು ಪ್ರಧಾನ ಮಂತ್ರಿಗಳು ಕರೆ ಕೊಟ್ಟಾಗ, ಅವರ ಕರೆಯಂತೆ ನಾವು

ನಡೆದುಕೊಳ್ಳಬೇಕಲ್ಲವೇ? ಶಾಲೆಗಳಿಗೆ ಟ್ಯಾಬ್ಲೆಟ್‌ಗಳನ್ನು ಸರಬರಾಜು ಮಾಡಬೇಕು ಅಲ್ಲವೇ? ಮಾನ್ಯ ಶ್ರೀಕಂಠೇಗೌಡರೆ ಆ ರೀತಿ ಅವರು ಮನೆಯಲ್ಲಿ ಕುಳಿತುಕೊಂಡು ಮಾಡುವಂತೆ ಅಭಿವೃದ್ಧಿಪಡಿಸಬೇಕಲ್ಲವೇ? ಇದಕ್ಕೆ ಸಂಬಂಧಪಟ್ಟಂತೆ ಚರ್ಚೆ ಮಾಡಬೇಕಲ್ಲವೇ? ಇಲ್ಲವಾದರೆ ಅದು ಹೇಗೆ ಆಗುತ್ತದೆ? ಪ್ರತಿಯೊಂದು ಸರ್ಕಾರಿ ಶಾಲೆಗಳಿಗೂ ಸಹ ಇದರ ವ್ಯವಸ್ಥೆಯನ್ನು ಮಾಡಬೇಕಲ್ಲವೇ? ಖಾಸಗಿ ಶಾಲೆಯವರು ತಾವೇ ಮಾಡಿಕೊಳ್ಳುತ್ತಾರೆ. ಏಕೆಂದರೆ, ಅಲ್ಲಿ ಶ್ರೀಮಂತರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುತ್ತಾರೆ. ಅವರು ಶಾಲಾ ಶುಲ್ಕಕ್ಕೆ ಸಂಬಂಧಪಟ್ಟಂತೆ ಜಗಳ ಮಾಡುತ್ತಾರೆ. ಸರ್ಕಾರ ಶಾಲಾ ಶುಲ್ಕಕ್ಕೆ ಸಂಬಂಧಪಟ್ಟಂತೆ ಕಡಿವಾಣ ಹಾಕಿದರೆ, ಖಾಸಗಿ ಶಾಲೆಯವರಿಗೆ ಶಾಲಾ ಶುಲ್ಕಕ್ಕೆ ಏನೂ ಸಂಬಂಧವಿಲ್ಲ. ಏಕೆಂದರೆ, ಅಲ್ಲಿಗೆ ಶ್ರೀಮಂತರ ಮಕ್ಕಳು ಹೋಗುತ್ತಾರೆ. ಅವರು ಎಷ್ಟು ಬೇಕಾದರೂ ಸಹ ಶಾಲಾ ಶುಲ್ಕವನ್ನು ಕಟ್ಟುತ್ತಾರೆ. What about the poor people? ಆದರೆ, ಬಡವರು ಶಾಲಾ ಶುಲ್ಕವನ್ನು ಕಟ್ಟುವುದಕ್ಕೆ ಎಲ್ಲಿಂದ ಆಗುತ್ತದೆ? ನಮಗೆ ಬಡವರ ಬಗ್ಗೆ ಕಳಕಳಿ ಇರುವುದರಿಂದ ಅವರ ಬಗ್ಗೆ ಮಾತನಾಡಬೇಕಲ್ಲವೇ? ಯಾವ ಜಾತಿಯ ಬಡವರು ಇದ್ದಾರೆ, ಆ ಎಲ್ಲ ಬಡವರು ಬಡವರೇ? ಈಗ ಸದಸ್ಯರಾದ ಮಾನ್ಯ ಸಿ.ಎಂ.ಇಬ್ರಾಹಿಂ ಸಾಹೇಬರು ಸದನದಲ್ಲಿ ಇಲ್ಲ. ಅವರು ಪದೇ-ಪದೇ ಹೇಳುತ್ತಿರುತ್ತಾರೆ. ನಾವುಗಳು ಏನು ಮುಸ್ಲೀಮರಾಗಿ ಹುಟ್ಟುವುದಕ್ಕೆ ಅರ್ಜಿ ಹಾಕಿಕೊಂಡಿದ್ದೇವೆಯೆ ಎಂದು. ಆದರೆ, ನಾವು ಹುಟ್ಟಿದ್ದೇವೆ. ಈಗ ಜೈನರು ಅರ್ಜಿ ಹಾಕಿಕೊಂಡು ಹುಟ್ಟುತ್ತಾರೆಯೇ? ಈಗ ಬ್ರಾಹ್ಮಣರಾಗಿ ಹುಟ್ಟಿದ್ದಾರೆ, ಲಿಂಗಾಯಿತರಾಗಿ ಹುಟ್ಟಿದ್ದಾರೆ, ಒಕ್ಕಲಿಗರಾಗಿ ಹುಟ್ಟಿದ್ದಾರೆ, ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳಲ್ಲಿ ಹುಟ್ಟಿದ್ದಾರೆ. ಆದರೆ, ಬಡವರು ಬಡವರೇ ಅಲ್ಲವೇ? ಮೊನ್ನೆ ದಿವಸ ಮಾನ್ಯ ಪಿ.ಆರ್.ರಮೇಶ್‌ರವರು ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ದೇವರಾಜ ಅರಸುರವರ ಬಗ್ಗೆ ಮಾತನಾಡಿದರು. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಯಾವೊತ್ತು ಸಹ ಬಜೆಟ್ ಬಡವರ ಪರವಾಗಿ ಇರಬೇಕು. ಅದು ಜಾತಿಯ ಪರವಾಗಿ ಇರಬಾರದು. ಈಗ ನಾನು ಬಜೆಟ್ ಬಗ್ಗೆ ಮಾತನಾಡುವುದಿಲ್ಲ. ಕಳೆದ ಇಪ್ಪತ್ತು ವರ್ಷಗಳಿಂದ ಜಾತಿಗಳಿಗೆ ಸಂತೋಷಪಡಿಸಬೇಕು ಎನ್ನುವಂತಹ ಪರಿಸ್ಥಿತಿ ಇದೆ. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ದೇವರಾಜ ಅರಸುರವರ ಪ್ರಕಾರ ಪ್ರಪಂಚದಲ್ಲಿ ಬಡವರು ಮತ್ತು ಶ್ರೀಮಂತರು ಎಂದು ಕೇವಲ ಎರಡೇ ಜಾತಿಗಳಿವೆ; Haves and the Have nots. ಅವರು ನಲವತ್ತು ವರ್ಷದ ಹಿಂದೆಯೇ ಈ ರೀತಿ ಕರೆ ಕೊಟ್ಟಿದ್ದಾರೆ. ದಿವಂಗತ ದೇವರಾಜು ಅರಸು ಎನ್ನುವಂತಹ ಪುಣ್ಯಾತ್ಮನಿಗೆ ಪ್ರತಿ ವರ್ಷ ಅವರ ಫೋಟೋ ಇಟ್ಟು ಅದಕ್ಕೆ ಹೂವಿನ ಮಾಲೆ ಹಾಕುತ್ತೇವೆ. ಆದರೆ ಅವರ ಪಾಲಿಸಿ ಮತ್ತು ಕಳಕಳಿಯ ಬಗ್ಗೆ ಏನು ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ? ಬಡವರ ಬಗ್ಗೆ ಕಳಕಳಿ ಇರಬೇಕು. ಮಾನ್ಯ ವಿರೋಧ ಪಕ್ಷದ ನಾಯಕರೆ ಇದರ ಬಗ್ಗೆ

ನನಗೆ ಬಹಳ ನೋವಾಗುತ್ತದೆ. ಹತ್ತು ವರ್ಷ ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದ ಮತ್ತು ಆರ್ಥಿಕ ತಜ್ಞರಾಗಿದ್ದಂತಹ ಮಾನ್ಯ ಮನಮೋಹನ್ ಸಿಂಗ್‌ರವರು ಏನು ಹೇಳಿದ್ದರೆಂದರೆ; Minorities must have first claim on resources. ಇದು ನಾಚಿಕೆ ಬರುವಂಥದ್ದು. We need to give priority to poor of all the communities. It is the right of poor to claim resources. ಇದಕ್ಕೆಲ್ಲಾ ಸುಮ್ಮನಿದ್ದರೆ ಹೇಗೆ? ಯಾರೂ ಸಹ ಮಾತನಾಡುವುದಿಲ್ಲ. It is right of the poor claim the national resources. ಯಾವುದೂ ಸಹ ಜಾತಿಯ ಆಧಾರದ ಮೇಲೆ ಆಗಬಾರದು. ಇದರ ಬಗ್ಗೆ ಯಾರೂ ಸಹ ಮಾತನಾಡುವುದಿಲ್ಲ. ಎಲ್ಲಿಯ ತನಕ ನಾವು ಬಡವರ ಪರವಾದ ಬಜೆಟ್ ಅನ್ನು ಮಂಡನೆ ಮಾಡದೇ ಇದ್ದರೆ, ಇದಕ್ಕೆ ಎಲ್ಲಾ ಸರ್ಕಾರಗಳು ಸಹ ಜವಾಬ್ದಾರಿಯಾಗಿದೆ. ಈಗ ಗುಣಮಟ್ಟದ ಶಿಕ್ಷಣ ಸಿಗಬೇಕು ಎನ್ನುವುದಾದರೆ, ಬಡ ಕುಟುಂಬಗಳ ಮಕ್ಕಳು ಕಲಿಯುವ ಶಾಲೆಗಳಿಗೆ ಗಮನಕೊಟ್ಟು, ಆ ಶಾಲೆಗಳಿಗೆ ಅನುದಾನ ಕೊಡಬೇಕು. ಇದನ್ನು ನಾವು ಯೋಚನೆ ಮಾಡಬೇಕು. ಆಮೇಲೆ GER ಬಹಳ ಕಡಿಮೆ ಇದೆ. GER ಎಂದರೆ, Gross Enrolment Ratio. ಇದಕ್ಕೆ ಅಧಿಕಾರಿಗಳು ಗಮನಕೊಡಬೇಕು. ಈಗ ತಮಿಳುನಾಡು ರಾಜ್ಯದಲ್ಲಿ Gross Enrolment Ratio ಶೇಕಡಾ 49ರಷ್ಟು ಇದೆ. ಆದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಶೇಕಡಾ 30ರಷ್ಟು ಇದೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್ ಸಿಂಗ್ ಸಿರೋಯಾರವರು ಒಂದು ನಿಮಿಷ ಅವಕಾಶ ನೀಡದರೆ, ನಾನು ಒಂದು ಪಾಯಿಂಟ್ ಹೇಳುತ್ತೇನೆ. ಮಾನ್ಯ ಲಹರ್ ಸಿಂಗ್ ಸಿರೋಯಾರವರು ತುಂಬಾ ಚೆನ್ನಾಗಿ ಮಾತನಾಡುತ್ತಿದ್ದಾರೆ. ಆದುದರಿಂದ ಅವರಿಗೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಈ ಶಿಕ್ಷಣದ ಗುಣಮಟ್ಟದ ವಿಷಯ ಬಂದಂತಹ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಅನುದಾನ ಕೊಟ್ಟಿಲ್ಲವೆಂಬ ವಿಷಯವನ್ನು ಬಹಳಷ್ಟು ಬಾರಿ ಪ್ರಸ್ತಾಪ ಮಾಡುತ್ತೇವೆ. ಶಿಕ್ಷಣಕ್ಕೆ ಹೆಚ್ಚು ಹಣವನ್ನು ಕೊಡಬೇಕು. ಹಾಗಾದರೆ, ಹೆಚ್ಚು ಹಣವನ್ನು ಕೊಟ್ಟರೆ ಗುಣಮಟ್ಟದ ಶಿಕ್ಷಣ ಸಿಗುತ್ತದೆಯೆ ಎಂಬ ವಿಷಯದ ಬಗ್ಗೆ ಬಹಳ ಗಂಭೀರವಾಗಿ ಚರ್ಚೆ ಮಾಡಬೇಕಾಗಿದೆ. ಈಗ ಒಂದು ಒಳ್ಳೆಯ ಕಟ್ಟಡವನ್ನು ಕಟ್ಟಿದರೆ ಅದು ಶಿಕ್ಷಣವೇ? ಒಳ್ಳೆಯ ಕಟ್ಟಡವನ್ನು ಕಟ್ಟಿ ಅದರಲ್ಲಿ ಉತ್ತಮ ಶಿಕ್ಷಕರು ಇಲ್ಲವೆಂದರೆ, ಅದು ಒಂದು ಒಳ್ಳೆಯ ಶಿಕ್ಷಣವೇ? ಹಾಗಾಗಿ ನನಗೆ ಅನಿಸಿರುವುದು ಏನೆಂದರೆ, ಕಟ್ಟಡಗಳನ್ನು ಕಟ್ಟುವುದಕ್ಕೆ less priority ಕೊಟ್ಟು, ಕಟ್ಟಡದ ಒಳಗಡೆ

ಇರುವಂತಹ ಶಿಕ್ಷಕರ ಕೊರತೆಯನ್ನು ನಿವಾರಿಸಬೇಕು. ಅದರಲ್ಲೂ ಕೂಡ ಶಿಕ್ಷಕರು ಎಂದರೆ, ಗುಣಮಟ್ಟದ ಶಿಕ್ಷಕರು. ಉದಾಹರಣೆಗೆ; ಮಾನ್ಯ ಸದಸ್ಯರು ನವದೆಹಲಿಯ ಸರ್ಕಾರಿ ಶಾಲೆಗಳ ಉದಾಹರಣೆಯನ್ನು ತೆಗೆದುಕೊಂಡು ಹೇಳಿದರು. ಆ ರೀತಿ ಕರ್ನಾಟಕದಲ್ಲೂ ಸಹ ಮಾಡಬಹುದು. ಈಗ ಆರು ಸಾವಿರ ಗ್ರಾಮಪಂಚಾಯಿತಿಗಳನ್ನು ತೆಗೆದುಕೊಂಡು, ಅದರಲ್ಲಿ ಮೊದಲ ಮೂರು ಸಾವಿರ ಪಂಚಾಯಿತಿಯ ಶಾಲೆಗಳಿಗೆ ಒಳ್ಳೆಯ ಶಿಕ್ಷಕರನ್ನು ನೀಡೋಣ. ಪೋಷಕರು ಆ ಶಾಲೆಗಳಿಗೆ ಮಕ್ಕಳನ್ನು ದಾಖಲಾತಿ ಮಾಡಬೇಕು ಎನ್ನುವಂತಹ ವಾತಾವರಣವನ್ನು ಸಹ ನಿರ್ಮಾಣ ಮಾಡಬೇಕು. ನನ್ನ ಪ್ರಕಾರ ಶಿಕ್ಷಣ ಎಂದರೆ, ಕಲಿಕೆಯ ವಾತಾವರಣವನ್ನು ತರಬೇಕು. ಆದರೆ, ಸರ್ಕಾರಿ ಶಾಲೆಗಳಲ್ಲಿ ಆ ತರಹದ ವಾತಾವರಣ ಮರೆಯಾಗುತ್ತಿದೆ. ಇದಕ್ಕೆ ಮೊದಲು ಶಿಕ್ಷಕರನ್ನು ನೇಮಕಾತಿ ಮಾಡಬೇಕು. ನನ್ನ ಪ್ರಕಾರ ಒಂದು ಶಾಲೆಯಲ್ಲಿ ಐದು ಜನ ವಿದ್ಯಾರ್ಥಿಗಳಿದ್ದರೆ, ಆ ಐದು ಜನ ವಿದ್ಯಾರ್ಥಿಗಳನ್ನು ಬೇರೆ ಶಾಲೆಗಳಿಗೆ ದಾಖಲು ಮಾಡಿ, ಆ ಐದು ಜನ ಇದ್ದಂತಹ ಶಾಲೆಯನ್ನು ಮುಚ್ಚಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಲಹರ್ ಸಿಂಗ್ ಸಿರೋಯಾರವರು ಪ್ರಸ್ತಾಪ ಮಾಡಿರುವಂತಹ ಈ ವಿಷಯಕ್ಕೆ ನಾವು ಬೆಂಬಲ ನೀಡುತ್ತೇವೆ.

**ಉಪ ಸಭಾಪತಿಯವರು:–** ಮಾನ್ಯ ಲಹರ್ ಸಿಂಗ್ ಸಿರೋಯಾರವರೆ ನೀವು yield ಆದುದರಿಂದ ಮಾನ್ಯ ಸದಸ್ಯರು ತಮ್ಮನ್ನು ಕೇಳಿ ಮಾತನಾಡಿದ್ದರು. ನೀವು yield ಆಗಿಲ್ಲವೆಂದರೆ, ನಿಮಗೆ ಅವಕಾಶವಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್ ಸಿಂಗ್ ಸಿರೋಯಾರವರು ಮಾತನಾಡುವುದರಿಂದ ಏನು ತೊಂದರೆ ಇಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್ ಸಿಂಗ್ ಸಿರೋಯಾರವರ ಮಾತಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಮಾನ್ಯ ಎನ್.ರವಿಕುಮಾರ್‌ರವರು quality of teachers ಎಂದು ಎತ್ತಿದರು. ಅದರ ಬಗ್ಗೆ ಸಹ ಸರ್ಕಾರ ಸ್ವಲ್ಪ ಗಮನ ಕೊಡಬೇಕಾಗುತ್ತದೆ.

**ಉಪ ಸಭಾಪತಿಯವರು:–** ಮಾನ್ಯ ಎನ್.ರವಿಕುಮಾರ್‌ರವರು ಹೇಳಿರುವುದರಲ್ಲಿ ಮೂಲಭೂತ ಸೌಕರ್ಯವನ್ನು ಕಲ್ಪಿಸಬೇಕು ಎಂಬುದನ್ನು ಕೂಡ ಸೇರಿಸಿಕೊಳ್ಳಬೇಕಾಗುತ್ತದೆ.

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾನ್ಯ ಭೋಜೇಗೌಡರು ನಾನು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುವಂತೆ ತಿಳಿಸಿ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸರ್ಕಾರಿ ಶಾಲೆಯಲ್ಲಿ ಯಾವೊತ್ತು ಸಹ ಸರ್ಕಾರ merit ಇಲ್ಲದೆ ಕೆಲಸವನ್ನು ಕೊಡುವುದಿಲ್ಲ. ಸರ್ಕಾರಿ ಶಾಲೆಯಲ್ಲಿ ಕೆಲಸ ಮಾಡುವವರು ಎಲ್ಲರೂ ಸಹ ಮೆರಿಟ್ ಇರುವಂತಹವರು. Quality of selection ಆಗಲಿಲ್ಲವೇ? Infrastructure is more important. ಅದಕ್ಕೋಸ್ಕರ ನಾವು ಶಿಕ್ಷಣಕ್ಕೆ ಹೆಚ್ಚಿನ ಅನುದಾನ ಕೊಡಬೇಕೆಂದು ಹೇಳುತ್ತಿದ್ದೇವೆ. ಶಾಲೆಗಳಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವುದರಿಂದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಶಿಕ್ಷಣಕ್ಕೆ ಹಣವನ್ನು ಕೊಡಲೇಬೇಕು.

**ಉಪ ಸಭಾಪತಿಯವರು:–** ಹೌದು, ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳು ಬೇಕು. ಈಗ ಮಾನ್ಯ ಲಹರ್ ಸಿಂಗ್ ಸಿರೋಯಾರವರು ಮಾತನಾಡಲಿ ಬಿಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್ ಸಿಂಗ್ ಸಿರೋಯಾರವರು ಬಹಳ ಮಹತ್ವದ ವಿಚಾರದ ಬಗ್ಗೆ ತಮ್ಮ ಗಮನ ಸೆಳೆದಿದ್ದಾರೆ. ಅವರು ಇದು ಚರ್ಚೆಯಾಗಬೇಕೆಂದು ಸಹ ಹೇಳಿದ್ದಾರೆ. ಏಕೆಂದರೆ, Education is foundation for every human being. ಶಿಕ್ಷಣ ಎಂಬುದು ಪ್ರತಿಯೊಬ್ಬ ಮನುಷ್ಯನ ಬದುಕಿನ ತಳಪಾಯ. ಶಿಕ್ಷಣ ಚೆನ್ನಾಗಿದ್ದರೆ, ಅವನ ವ್ಯಕ್ತಿತ್ವ ಮತ್ತು ಇಡೀ ಜೀವನ ಚೆನ್ನಾಗಿರುತ್ತದೆ. ಈ ವಿಷಯದ ಬಗ್ಗೆ ಚರ್ಚೆಯಾಗಬೇಕು. ಮಾನ್ಯ ಲಹರ್ ಸಿಂಗ್ ಸಿರೋಯಾರವರು ಗಾಬರಿಯಾಗುವುದು ಬೇಡ. ಇನ್ನು ಸಮಯವಿದೆ, ಅವರು ಶಾಂತವಾಗಿ ಮಾತನಾಡಲಿ. ಆದರೆ, ಮಾನ್ಯ ಎನ್.ರವಿಕುಮಾರ್ ರವರು ಹೇಳಿದ ಹಾಗೆ...

**ಉಪ ಸಭಾಪತಿಯವರು:–** ಮಾನ್ಯ ಕೆ.ಟಿ.ಶ್ರೀಕಂಠೇಗೌಡರೆ ಒಂದು ನಿಮಿಷ. ಮಾನ್ಯ ಲಹರ್ ಸಿಂಗ್ ಸಿರೋಯಾರವರು ಹೇಳಿರುವುದು, ಯಾರು ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾಗಿ ಬಂದಿದ್ದಾರೆ, ಅಂತಹವರು ಇದಕ್ಕೆ ಹೆಚ್ಚಿನ ಒತ್ತು ಕೊಡುವಂತಹ ಪ್ರಯತ್ನಗಳಾಗಬೇಕೆಂದು ಮಾತನಾಡಿರುವುದು ಅಷ್ಟೆ. ಅದು ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾಗಿ ಬಂದಿರುವಂತಹವರ ಜವಾಬ್ದಾರಿಯೆಂದು ಸ್ವಲ್ಪ ಒತ್ತಿ ಹೇಳಿದರು.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಅದೇ ನಮ್ಮ ಅಪೇಕ್ಷೆ ಎಂದು ಹೇಳಿದ್ದೇನೆ. ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿ Gross Enrolment Ratio ಶೇಕಡಾ 30ರಷ್ಟು ಇದೆ. ಪಕ್ಕದ ತಮಿಳುನಾಡು ರಾಜ್ಯದಲ್ಲಿ ಶೇಕಡಾ 49ರಷ್ಟು ಇದೆ. ಆದರೆ, ಉತ್ತರ ಕರ್ನಾಟಕದಲ್ಲಿ ಎಷ್ಟು ಇದೆ ಎಂದು ಹೇಳಿದರೆ, ತಾವು ಆಶ್ಚರ್ಯಪಡುತ್ತೀರಿ. ಅದು ಇರುವುದು ಕೇವಲ ಶೇಕಡಾ 20ರಷ್ಟು ಮಾತ್ರ. ಇದಕ್ಕೆ ಉತ್ತರ ಕರ್ನಾಟಕದ ಎಂ.ಎಲ್.ಸಿ.ಗಳು ಗಮನ ಕೊಡಬೇಕು. ಇದರ ಬಗ್ಗೆ ಯಾರಾದ್ದರೂ ಮಾತನಾಡಿದ್ದಾರೆಯೇ? ಅವರು ಮಾತನಾಡಿದ್ದರೆ ಒಳ್ಳೆಯದು. ಮಾತನಾಡಿಲ್ಲವೆಂದರೆ ಅವರು ಮುಂದೆ ಮಾತನಾಡಬೇಕು. ಏಕೆಂದರೆ, ನಾವು ಪಾಲಿಸಿ ಮಾಡುವುದರಲ್ಲಿ ಮುಂದೆ ಇರುತ್ತೇವೆ. ಅದಕ್ಕೆ ಏನು ಮಾಡಬೇಕು ಎಂದರೆ, ಉತ್ತರ ಕರ್ನಾಟಕದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡಬೇಕು. Gross Enrolment Ratio is poor in North Karnataka. ಆದುದರಿಂದ, ವರ್ಷಕ್ಕೆ ಕನಿಷ್ಠಪಕ್ಷ ಎರಡು ಲಕ್ಷ ವಿದ್ಯಾರ್ಥಿವೇತನ ಕೊಡಬೇಕೆಂದು ಉತ್ತರ ಕರ್ನಾಟಕದ ವಿದ್ಯಾರ್ಥಿಗಳ ಪರವಾಗಿ ಸರ್ಕಾರಕ್ಕೆ ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ. ಇನ್ನೊಂದು ವಿಷಯಕ್ಕೆ ಸಂಬಂಧಪಟ್ಟಂತೆ ಗಮನಕೊಡಬೇಕು. There is a sharp decrease in the number of students admitted in the first standard. The data of admission will support this. There is no improvement in quality education. ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಗೆ ದಾಖಲಾತಿ ಕಡಿಮೆಯಾಗುತ್ತಿದೆ; ಕಾರಣವೇನೆಂದರೆ, ವಿದ್ಯಾರ್ಥಿಗಳ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳುಹಿಸುವುದಕ್ಕೆ ಪ್ರಯತ್ನ ಪಡುತ್ತಾರೆ. ಅದಕ್ಕೆ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಕಡಿಮೆಯಾಗುತ್ತಿದೆ. ಆದುದರಿಂದ, ನಾವು ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸುವ ಕಡೆಗೆ ಗಮನ ಕೊಡಬೇಕು.

**(ಮುಂದು)**

**(543) 03.50 22.03.2021 ಎಲ್‌ಎಲ್/ಆರ್‌ಎನ್**

**ಶ್ರೀ ಲಹರ್ ಸಿಂಗ್ ಸಿರೋಯಾ(ಮುಂದು):–**

And also, when we look at Karnataka Government schools pass out in 10th standard, it is a poorest in the South India compared with the Orissa and Bihar. Hence there should be action against the Headmaster for below average performance in the State. ಅದು

ಆಗಬೇಕು. ಇದಕ್ಕೆ ಬೇರೆ ಬೇರೆ ಕಾರಣ ಇರುತ್ತದೆ. ಏಕೆಂದರೆ, ಹೆಡ್ ಮಾಸ್ಟರ್ ಅವರು ಒತ್ತಡದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ವರ್ಗಾವಣೆ ಸಮಸ್ಯೆ ಅಂದರೆ, ಅವರ ಹೆಂಡತಿ ಒಂದು ಕಡೆ ಕೆಲಸ ಮಾಡುತ್ತಿದ್ದರೆ ಅವರು ಮತ್ತೊಂದು ಕಡೆ ಕೆಲಸ ಮಾಡುತ್ತಿರುತ್ತಾರೆ. ಅವರ ಸಮಸ್ಯೆಯನ್ನು ಕೂಡ ನಾವು ಬಗೆಹರಿಸಬೇಕಾಗಿರುತ್ತದೆ. ಅದು ಕೂಡ ಸರ್ಕಾರದ ಕರ್ತವ್ಯವಾಗಿರುತ್ತದೆ. ಅಲ್ಲದೇ, ಮಾನ್ಯ ಶ್ರೀಕಂಠೇಗೌಡರವರು, ಮಾನ್ಯ ಕೆ.ಸಿ. ಕೊಂಡಯ್ಯನವರು ಹಾಗೂ ನಾವೆಲ್ಲರೂ ಓದುವಂತಹ ಸಂದರ್ಭದಲ್ಲಿ ಶಿಕ್ಷಕರು ನಮ್ಮನ್ನು ಮಕ್ಕಳ ರೀತಿ ನೋಡಿಕೊಳ್ಳುತ್ತಿದ್ದರು. ಆದರೆ, ಈಗಿನ ವಿದ್ಯಾರ್ಥಿಗಳಿಗೆ ನಮ್ಮ ಕಾಲದಲ್ಲಿ ಯಾವ ರೀತಿ ಶಿಕ್ಷಣ ನೀಡುತ್ತಿದ್ದರು ಎಂಬ ಬಗ್ಗೆ ಗೊತ್ತಿರುವುದಿಲ್ಲ. ಆಗ ಶಿಕ್ಷಕರು ಹೆಚ್ಚು ಕಾಳಜಿಯಿಂದ ಪಾಠ ಹೇಳಿಕೊಡುತ್ತಿದ್ದರು. ಆ ಸಮಯದಲ್ಲಿ ಒಂದು ವೇಳೆ ನಾವು ತಪ್ಪು ಮಾಡಿದರೆ ನಮಗೆ ಹೊಡೆಯುತ್ತಿದ್ದರು. ಆದರೆ, ಈಗ ಶಿಕ್ಷಕರು ಮಕ್ಕಳಿಗೆ ಬೈದರೆ ಸಾಕು ಅವರನ್ನು ಸಸ್ಪೆಂಡ್ ಮಾಡುತ್ತಾರೆ. ಆಗ ಅವರು ಎಲ್ಲಿಗೆ ಹೋಗಬೇಕು? Future of Karnataka lies in the Higher Education. ಈ ಕ್ಷೇತ್ರಕ್ಕೆ ಬಜೆಟ್ ಅಲೋಕೇಷನ್ ಅಗತ್ಯದಷ್ಟು ಇಲ್ಲವೆಂದು ನಮಗೆ ಕಾಣಿಸುತ್ತದೆ. ಏಕೆಂದರೆ, ಇದುವರೆವಿಗೂ ಯಾವುದೇ ಸರ್ಕಾರ ಕೂಡ ಇದರ ಬಗ್ಗೆ ಬಜೆಟ್‌ನಲ್ಲಿ ಉಲ್ಲೇಖ ಮಾಡುತ್ತಿಲ್ಲ. ಅದು ಯಾವ್ಯಾವ ಕಾರಣಕ್ಕೆ ಮತ್ತು ಯಾವುದಕ್ಕಾಗಿ ಎಂಬ ಬಗ್ಗೆ ಕೇವಲ ತಮಗೆ ಬೇಕಾದ ಕ್ಷೇತ್ರಗಳಿಗೆ ಸಂಬಂಧಪಟ್ಟ ಇಲಾಖೆಗಳಿಗೆ ಮಾತ್ರ ಬಜೆಟ್‌ನಲ್ಲಿ ನಿರೀಕ್ಷೆ ಮಾಡುತ್ತಾರೆ. ಆದರೆ ಉನ್ನತ ಶಿಕ್ಷಣಕ್ಕೆ ಬಜೆಟ್‌ನಲ್ಲಿ ಅನುದಾನ ಇಡಬೇಕೆಂಬ ಬಗ್ಗೆ ಯಾರೂ ಸಹ ಮಾತನಾಡುವುದೇ ಇಲ್ಲ. The State should invest in Higher Education Sector to make it a Knowledge State. We were proud of Karnataka. Even I am not in Karnataka then also you are proud of Bengaluru and Karnataka. I am indebted to Karnataka State. ಅದಕ್ಕಾಗಿ ನಾನು ಇಲ್ಲಿ ಬಂದಿದ್ದೇನೆ ನಾನು 6 ಕೋಟಿ ಜನರಿಗೆ ಧನ್ಯವಾದ ಹೇಳುತ್ತೇನೆ. ಇದರಲ್ಲಿ ಇನ್ನೂ ಬಹಳಷ್ಟು ವಿಚಾರಗಳು ನಾನು ಮಾತನಾಡುವುದಿದೆ. ಆದ್ದರಿಂದ ಅದೆಲ್ಲವನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ಆರೋಗ್ಯದ ಬಗ್ಗೆ ಹೇಳುವುದಾದರೆ, Health is indeed a Wealth. ಅದೇ ರೀತಿ ಕನ್ನಡದಲ್ಲಿ 'ಆರೋಗ್ಯವೇ ಭಾಗ್ಯ' ಎಂದು ಹೇಳುತ್ತಾರೆ. ಈಗ ನಮ್ಮ ಆಸ್ಪತ್ರೆಗಳು ಯಾವ ಸ್ಥಿತಿಗೆ ಬಂದಿವೆಯೆಂದರೆ, I am honestly telling here. Whenever health issues in my family or myself we used to go to the Victoria Hospital or

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Bowring Hospital. We never go to the private Hospitals. ಏಕೆಂದರೆ, ಖಾಸಗಿ ಆಸ್ಪತ್ರೆಗಳಲ್ಲಿ five-star rates. I cannot offer. ಅಲ್ಲದೇ, ನಾವು ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ಕ್ಯೂನಲ್ಲಿ ನಿಂತುಕೊಳ್ಳಬೇಕಾಗಿರುವುದಿಲ್ಲ. Of course, we have a privilege. ಈ ಬಗ್ಗೆ ನಾನು ಹೇಳುವುದಕ್ಕೆ ಬಯಸುವುದೇನೆಂದರೆ, ಈ ವಿಷಯದಲ್ಲಿ ಐದು ಜನ ಸದಸ್ಯರನ್ನೊಳಗೊಂಡ ಒಂದು ಸದನ ಸಮಿತಿ ರಚನೆ ಮಾಡಿ, ವಿಕ್ಟೋರಿಯಾ ಆಸ್ಪತ್ರೆಗಳಿಗೆ ಅಥವಾ ಬೌರಿಂಗ್ ಆಸ್ಪತ್ರೆಗೆ ಭೇಟಿ ನೀಡೋಣ. ಅಲ್ಲಿ ಒಂದೊಂದು ಟೇಬಲ್‌ನಲ್ಲಿ 3–3 ಜನ ಡಾಕ್ಟರ್‌ಗಳು ಕುಳಿತುಕೊಂಡು ಕೆಲಸ ಮಾಡುತ್ತಾರೆ. ಅಷ್ಟು ಹಿಂಸೆಯಲ್ಲಿ ಅವರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ನರಕ ನೋಡಬೇಕೆಂದರೆ ನಾವು ಈ ಆಸ್ಪತ್ರೆಗಳಿಗೆ ಹೋಗಬೇಕು. ಆದರೆ, ಇವೊತ್ತಿನ ದಿವಸ ನಮ್ಮ ಕಣ್ಣು ಮುಂದೆ ಬೆಂಗಳೂರಿನಲ್ಲಿರುವ ವಿಕ್ಟೋರಿಯ ಆಸ್ಪತ್ರೆ ಅಥವಾ ಬೌರಿಂಗ್ ಆಸ್ಪತ್ರೆಗಳಲ್ಲಿ ಈ ಗತಿ ಇರಬೇಕೇ? ಈ ರೀತಿಯಾದರೆ, ಬಡವರು ಎಲ್ಲಿಗೆ ಹೋಗುತ್ತಾರೆ? ಒಂದು ವೇಳೆ ಅವರು ಖಾಸಗಿ ಆಸ್ಪತ್ರೆಗಳಿಗೆ ಹೋದರೆ, ಅಲ್ಲಿನ ಚಿಕಿತ್ಸಾ ವೆಚ್ಚ ಎಷ್ಟಿದೆ? ಆದರೆ, ಈ ಹಿಂದೆ ಚಿಕಿತ್ಸಾ ವೆಚ್ಚವನ್ನು ರೆಗ್ಯುಲೇಟ್ ಮಾಡಿದ್ದು, ಪುನಃ ಈಗ ರೆಗ್ಯುಲೇಟ್ ಮಾಡುವುದಕ್ಕೆ ಪ್ರಯತ್ನ ಮಾಡಿ, ನಂತರ ಖಾಸಗಿ ಆಸ್ಪತ್ರೆಗಳವರಿಂದ ಹಣ ಪಡೆದು ಅದನ್ನು settle ಮಾಡುತ್ತೇವೆ. ಈ ವಿಷಯದಲ್ಲಿ ಯಾವುದೇ ಸರ್ಕಾರ ಅಧಿಕಾರದಲ್ಲಿದ್ದರೂ ಏನು ಉಪಯೋಗ ಆಗಿರುವುದಿಲ್ಲ.

ಇದೇ ಸದನದಲ್ಲಿ 'ಹುಕ್ಕಾ ಬಾರ್' ಬಗ್ಗೆ ಮಾನ್ಯ ಗೃಹ ಮಂತ್ರಿಗಳು ಮಾತನಾಡುತ್ತಾ, ಹುಕ್ಕಾ ಬಾರ್ ಬಿಡುವುದೇ ಇಲ್ಲವೆಂದು ಹೇಳಿದರು. ಆದರೆ, ನಾವು 'ಹುಕ್ಕಾ ಬಾರ್' ಮೇಲಿನ ದಾಳಿಯನ್ನು ನಾವು ನೋಡಿದ್ದೇವೆ. 1750 ಹುಕ್ಕಾ ಬಾರ್‌ಗಳಿಗೆ ಪೊಲಿಟಿಕಲ್ ಸಿಸ್ಟಂ ಇರುವ ಬಗ್ಗೆ ಯಾರಿಗೂ ಗೊತ್ತಿರುವುದಿಲ್ಲ. Somebody has assigned for.. ಇಂತಹ ಪ್ರತಿ ಹುಕ್ಕಾ ಬಾರ್‌ನಿಂದ 3 ಲಕ್ಷ ರೂಪಾಯಿಯಂತೆ ತಿಂಗಳಿಗೆ ಸುಮಾರು 50 ಕೋಟಿ ರೂಪಾಯಿ ಸಂಗ್ರಹ ಮಾಡುತ್ತಾರೆ. ನಮ್ಮ ರಾಜ್ಯದಲ್ಲಿ ಒಂದೊಂದು ಅವಧಿಯಲ್ಲಿ ಒಬ್ಬೊಬ್ಬರು ಗೃಹ ಮಂತ್ರಿಗಳು ಅಧಿಕಾರಕ್ಕೆ ಬರುತ್ತಾರೆ. ಅದರಂತೆ, ಈ ಹಿಂದೆ ಮಾನ್ಯ ಗೃಹ ಮಂತ್ರಿಗಳಾಗಿದ್ದಂತಹ ಶ್ರೀ ಜಿ. ಪರಮೇಶ್ವರ್‌ರವರು 'ಉಡ್ತಾ ಪಂಜಾಬ್'ಗೆ ಅವಕಾಶ ಕೊಡುವುದೇ ಇಲ್ಲವೆಂದು ಹೇಳಿದರು. ಸದನದಲ್ಲಿ ಕೇಳಲಾದ ನಮ್ಮ ಪ್ರಶ್ನೆಯಿಂದ ದಿನ ಪತ್ರಿಕೆಗಳ ಹೆಡ್‌ಲೈನ್‌ನಲ್ಲಿ ಅವರು ಪ್ರಚಾರ ತೆಗೆದುಕೊಂಡರು. ಅದರಲ್ಲಿ ನಮ್ಮ ಹೆಸರು ಸಹ ಇರುವುದಿಲ್ಲ. ಆದರೆ, ಇದರಲ್ಲಿ ಶ್ರೀ ಜಿ. ಪರಮೇಶ್ವರ್‌ರವರು 'ಉಡ್ತಾ ಪಂಜಾಬ್' ಮಾಡುವುದಕ್ಕೆ ಬಿಡುವುದೇ ಇಲ್ಲ. ಆದರೆ, ಆ ಸಂದರ್ಭದಲ್ಲಿ ಏನು ಗತಿ ಆಗಿತ್ತು? ಈ ಬಗ್ಗೆಯೂ ಸಹ ನಮಗೆ ಆತಂಕ ಇದೆ. ಇದರಲ್ಲಿ ಪೊಲೀಸ್ nexus ಅಥವಾ

ಯಾವ nexus ಇದೆಯೋ ಅಥವಾ ಈ ವಿಷಯ ಮುಂದೆ ಯಾವ ಟರ್ನ್ ತೆಗೆದುಕೊಳ್ಳುತ್ತದೆಯೋ ಅದರ ಬಗ್ಗೆ ನಾವು ಎಚ್ಚರವಾಗಿರಬೇಕಲ್ಲವೇ? ಆರೋಗ್ಯದ ವಿಷಯದಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಇರುವಂತಹ ಚಿಕಿತ್ಸಾ ವೆಚ್ಚ ನಿಯಂತ್ರಣ ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡಬೇಕು. ಇದು ಆಗುವವರೆಗೂ ಬಡವರು ಚಿಕಿತ್ಸೆಗಾಗಿ ಎಲ್ಲಿಗೆ ಹೋಗುತ್ತಾರೆ? ಈ ಬಗ್ಗೆ ನಾನು ಹೇಳುವುದೇನೆಂದರೆ, ಇದರ ಬಗ್ಗೆ ನಾವು ಚರ್ಚೆ ಮಾಡಬೇಕು. ವೈದ್ಯಕೀಯ ವೆಚ್ಚಗಳಿಗೆ ಸರ್ಕಾರದಿಂದ ಹಣ ಮರುಪಾವತಿ ಆಗಬೇಕಾದರೆ ಅವರು IAS, MLA or MP ಯಾರೇ ಆಗಿರಲಿ ಪ್ರತಿಯೊಬ್ಬರು ಸರ್ಕಾರಿ ಆಸ್ಪತ್ರೆಗಳಿಗೆ ಹೋಗಲೇಬೇಕು. Then the system will automatically improve. ಅಂದರೆ, ಪ್ರತಿಯೊಂದಕ್ಕೂ ಸರ್ಕಾರದಿಂದ ಗ್ರಾಂಟ್ ನೀಡಿದೆ ಎಂದು ಹೇಳುತ್ತಾರೆ. ಆದರೆ, ಆ ಗ್ರಾಂಟ್ ಎಲ್ಲಿಗೆ ಹೋಗುತ್ತದೆ ಅದು ನಮಗೆ ಗೊತ್ತಿರುವುದಿಲ್ಲ. ಆ ನಂತರ ಮೆಡಿಕಲ್ ಎಜುಕೇಷನ್ ಮಿನಿಸ್ಟ್ರಿ ಮತ್ತು ಹೆಲ್ತ್ ಮಿನಿಸ್ಟ್ರಿ ಶ್ರೀ ಎಸ್.ಎಂ. ಕೃಷ್ಣರವರ ಅವಧಿಯಲ್ಲಿ ಎರಡು ಭಾಗ ಮಾಡಿದ್ದಾರೆ. ಅದನ್ನು ಬೇರೆ ಬೇರೆ ಕಾರಣಗಳಿಂದ ಮಾಡಿದ್ದರು. ಬದಲಾಗಿ, ಎಲ್ಲರನ್ನೂ ಮಿನಿಸ್ಟರ್‌ಗಳಾಗಿ ಮಾಡಬೇಕೆಂದು ಎರಡು ಭಾಗ ಮಾಡಿರುವುದಿಲ್ಲ. ಆದರೆ, ನಮ್ಮ ಮುಖ್ಯಮಂತ್ರಿಗಳು Ministry unify ಮಾಡದೆ ಒಬ್ಬರಿಗೆ ಕೊಟ್ಟಿದ್ದಾರೆ. ಆದರೆ, ನಾನು ಹೇಳುವುದೇನೆಂದರೆ ಮೆಡಿಕಲ್ ಎಜುಕೇಷನ್ ಮಿನಿಸ್ಟ್ರಿಗೆ how they are fighting for the portfolio, ಮೊದಲು ಅಂದರೆ, 10-15 ವರ್ಷಗಳ ಅವಧಿಯಲ್ಲಿ ಬೇರೆ ಬೇರೆ ಸರ್ಕಾರದ ಅವಧಿಯಲ್ಲಿ ಮೆಡಿಕಲ್ ಎಜುಕೇಷನ್ ಮಿನಿಸ್ಟ್ರಿಗೆ ಮತ್ತು ಹೆಲ್ತ್ ಮಿನಿಸ್ಟ್ರಿಗೆ ಪರಸ್ಪರ ಗೊಂದಲ ಆಗಿರುವುದನ್ನು ನಾವು ನೋಡಿರುತ್ತೇವೆ. ಇದು ಏತಕ್ಕೆ ಆಗುತ್ತದೆಯೆಂದರೆ, not for improvement of hospitals. ಅದು ಬೇರೆ ಬೇರೆ ಕಾರಣಕ್ಕೆ ಆಗುತ್ತಿರುತ್ತದೆ.

ಇದರಲ್ಲಿ ನನ್ನ ಸಲಹೆ ಏನೆಂದರೆ, ನಮ್ಮ ರಾಜ್ಯದಲ್ಲಿ 48 ಮೆಡಿಕಲ್ ಕಾಲೇಜುಗಳು ಇರುತ್ತವೆ. ಆ 48 ಕಾಲೇಜುಗಳಲ್ಲಿ ಒಂದೊಂದು ಮೆಡಿಕಲ್ ಕಾಲೇಜಿಗೆ ಒಂದೊಂದು ಜಿಲ್ಲೆ ಜವಾಬ್ದಾರಿ ಕೊಡಬೇಕು. ಆಗ ಏನಾಗುತ್ತದೆಯೆಂದರೆ, ಆಯಾ ಜಿಲ್ಲೆಯ ಸಮಸ್ಯೆಯನ್ನು ಆ ಮೆಡಿಕಲ್ ಕಾಲೇಜಿನವರು ನೋಡಿಕೊಳ್ಳಬೇಕು. ಅದಕ್ಕೆ ಸರ್ಕಾರದಿಂದ ಗ್ರಾಂಟ್ ಕೊಡಬಹುದಾಗಿರುತ್ತದೆ. ಅದರ ಬದಲಾಗಿ, ಜಿಲ್ಲಾ ಆಸ್ಪತ್ರೆಗಳಿಗೆ ಡಾಕ್ಟರ್‌ಗಳು ಹೋಗಬೇಕು ಎಂದು ಹೇಳಿದರೆ ಅದು ಹೇಗೆ ಸಾಧ್ಯವಾಗುತ್ತದೆ? ಇದರ ಜೊತೆಗೆ, ನಾವು ಡಾಕ್ಟರ್‌ಗಳಿಗೆ ಸೂಕ್ತವಾದಂತಹ ವೇತನ ಕೊಡದೇ ಇದ್ದರೆ ಗುಲ್ಬರ್ಗಾ, ಬೀದರ್, ರಾಯಚೂರು, ಚಾಮರಾಜನಗರ ಅಥವಾ ಇತರೆ ಜಿಲ್ಲೆಗಳಿಗೆ ಹೋಗದೇ ಬೆಂಗಳೂರು ಸುತ್ತಮುತ್ತಲಿರುವ ಆಸ್ಪತ್ರೆಗಳಲ್ಲಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರಬೇಕೆಂದು ಕೇಳುತ್ತಾರೆ. ಹಾಗಾಗಿ, ಈ ವಿಷಯದ ಬಗ್ಗೆ ಹೆಚ್ಚು ಚರ್ಚೆ ಆಗಬೇಕು ಮತ್ತು ಬಜೆಟ್‌ನಲ್ಲಿ ಹೆಚ್ಚು ಅನುದಾನ ನೀಡಬೇಕು. ಈಗಾಗಲೇ ನಾನು ಹೇಳಿದ ಹಾಗೆ, ಒಂದೊಂದು ಮೆಡಿಕಲ್ ಕಾಲೇಜಿಗೆ ಒಂದೊಂದು ಜಿಲ್ಲೆಯ ಜವಾಬ್ದಾರಿ ಕೊಟ್ಟರೆ ಬಹಳಷ್ಟು ಸಮಸ್ಯೆ ಪರಿಹಾರವಾಗುತ್ತದೆ. That medical college will be responsible for maintenance that district's Government Health Centre. Let them charge for the same. ಅದರ ಜೊತೆಗೆ, ಪ್ರತಿ ಜಿಲ್ಲೆಯಲ್ಲಿಯೂ ಸಹ 108 ಅಂಬ್ಯುಲೆನ್ಸ್‌ಗಳ ಸೌಲಭ್ಯ ಇರಬೇಕು. Within one hour they should reach to the hospitals. ಆ ಬಗ್ಗೆ ನಾನು ತಮ್ಮ ಮೂಲಕ ಮಾನ್ಯ ಆರೋಗ್ಯ ಸಚಿವರಿಗೆ ಮನವಿ ಮಾಡುತ್ತೇನೆ. ಅಷ್ಟೇ ಅಲ್ಲದೇ, ಬಹಳಷ್ಟು ಜನರಿಗೆ ಡಯಾಲಿಸೀಸ್ ಸಮಸ್ಯೆ ಬೇರೆ ಬೇರೆ ಕಾರಣದಿಂದ ಬರುತ್ತಿದೆ. ಅದಕ್ಕಾಗಿ, ಪ್ರತಿ ಜಿಲ್ಲೆಯಲ್ಲಿ ಕಿಡ್ನಿ ಸಮಸ್ಯೆಗೆ ಯಾವುದೇ ವ್ಯವಸ್ಥೆ ಇರುವುದಿಲ್ಲ. ಹಾಗಾಗಿ, ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಡಯಾಲಿಸೀಸ್ ಯುನಿಟ್ ವ್ಯವಸ್ಥೆ ಆಗಲೇಬೇಕು ಹಾಗೂ ಇದರ ಬಗ್ಗೆ ಸರ್ಕಾರ ಇನ್ನೂ ಹೆಚ್ಚಿನ ಗಮನ ಕೊಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ನಾನು ಬೆಂಗಳೂರಿನಲ್ಲಿರುವುದರಿಂದ ಬೆಂಗಳೂರಿನ ಸಮಸ್ಯೆ ಬಗ್ಗೆ ಸ್ವಲ್ಪ ಮಾತನಾಡುತ್ತೇನೆ. ಬೆಂಗಳೂರು ಬಗ್ಗೆ ನಾನು ಹೇಳುವುದಾದರೆ, ಮೊದಲಿಗೆ ಟ್ರಾಫಿಕ್ ಸಮಸ್ಯೆ ಬಗ್ಗೆ ಹೇಳಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟ ಕೆಲವೊಂದು ಫೋಟೋಗಳಿದ್ದು ಅವುಗಳನ್ನು ನಾನು ಈಗ ತಮಗೆ ತೋರಿಸುವುದಕ್ಕೆ ಆಗುವುದಿಲ್ಲ. ಆ ಫೋಟೋಗಳಲ್ಲಿ ಈ ರೀತಿ ಇದೆ; Bangalore is Now Officially The World's Most Traffic Congested City. Karnataka: Class 10 boy misses exam, father blames bad road.

**ಉಪಸಭಾಪತಿಯವರು:–** ಮಾನ್ಯ ಲಹರ್ ಸಿಂಗ್ ಸಿರೋಯಾರವರೇ, Congested City ಎಂದು ತಾವು ಹೇಳಿದ್ದೀರಿ. ಅದು ಸರ್ವೆ ಪ್ರಕಾರ ಹೇಳುತ್ತಿದ್ದೀರಾ ಅಥವಾ ತಮ್ಮ ಆಲೋಚನೆ ಪ್ರಕಾರ ಹೇಳುತ್ತಿದ್ದೀರಾ?

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ನನ್ನ ಬಳಿ ದಾಖಲೆ ಇದೆ. 'IN BENGALURU, ALL roads lead to jams!' ಪ್ರತಿದಿನ ನಾವು ಅನುಭವಿಸುತ್ತಿರುವ ನೋವಿನ ಬಗ್ಗೆ ಹೇಳುತ್ತಿದ್ದೇನೆ. ಬದಲಾಗಿ, ನಾನು ಯಾವುದೇ ಹೊಸ ಸಂಗತಿ ಬಗ್ಗೆ ಹೇಳುತ್ತಿಲ್ಲ.

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬೆಂಗಳೂರು ಅಭಿವೃದ್ಧಿಗಾಗಿ ನಾವು ಬಜೆಟ್‌ನಲ್ಲಿ ಬಹಳಷ್ಟು ಹಣ ಮೀಸಲಿಡುತ್ತಿದ್ದೇವೆ. ಆದರೆ, ಆ ಹಣ ಎಲ್ಲಿಗೆ ಹೋಗುತ್ತಿದೆ? ವೈಟ್ ಟಾಪಿಂಗ್ ಹೆಸರಿನಲ್ಲಿ ಸರ್ಕಾರದ ಉನ್ನತ ಅಧಿಕಾರಿಗಳು ಎಲ್ಲರೂ ಸೇರಿ ಮಾನ್ಯ ಮುಖ್ಯಮಂತ್ರಿಗಳಿಗೆ ಅಥವಾ ಸರ್ಕಾರದ ಹಣಕ್ಕೆ ಟೋಪಿ ಹಾಕಿ ವೈಟ್ ಟಾಪಿಂಗ್ ಕಾಮಗಾರಿ ಪ್ರಾರಂಭ ಮಾಡಿದ್ದಾರೆಯೇ? ಇವೊತ್ತಿನ ದಿವಸ ಈ ಕಾಮಗಾರಿಗಳಿಂದ ಪ್ರತಿದಿನ ನಾವು ಕಣ್ಣೀರು ಹಾಕುವಂತಹ ಪರಿಸ್ಥಿತಿ ಇರುತ್ತದೆ. ಬೆಂಗಳೂರು ನಗರದ ಯಾವುದೇ ರಸ್ತೆಗೆ ಹೋದರು ಸಹ ಆ ರಸ್ತೆಯ್ಯಲ್ಲಿ ವೈಟ್ ಟಾಪಿಂಗ್ ಅಥವಾ ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯವರಿಗೆ ಪರಸ್ಪರ ಜಗಳ ಇರುತ್ತದೆ. ಇದರಲ್ಲಿ ಒಬ್ಬರು ರಸ್ತೆ ಅಗೆದರೆ, ಇನ್ನೊಂದು ಇಲಾಖೆಯವರು ಅದನ್ನು ದುರಸ್ತಿ ಮಾಡಬೇಕು. ಇದರಿಂದಾಗಿ ಬಹಳಷ್ಟು ಸಮಸ್ಯೆ ಆಗಿರುತ್ತದೆ. ಇದು ಸರಿ ಹೋಗದೇ ಹೋದರೆ, ನಮ್ಮ ಬೆಂಗಳೂರು ನಗರ ಐ.ಟಿ. ಸಿಟಿ., 'World's most livable City Award' ಸಿಕ್ಕಿದೆ ಅದಕ್ಕೆ ಬಹಳ ಸಂತೋಷ ಇದೆ. ಆದರೆ, ಇವೊತ್ತಿನ ದಿವಸ ಬೆಂಗಳೂರಿನಲ್ಲಿ ನಿಜವಾದ ಸಮಸ್ಯೆ ಏನಿದೆ? ಅಂದರೆ ಬೆಂಗಳೂರಿನಲ್ಲಿ ಕುಡಿಯುವ ನೀರಿಗೆ ಎಷ್ಟು ಸಮಸ್ಯೆ ಇದೆ?

**(ಮುಂದು)**

**(544) 22.03.2021 4.00 ವೈಎಲ್-ಜಿಆರ್**

**ಶ್ರೀ ಲಹರ್ ಸಿಂಗ್ ಸಿರೋಯಾ(ಮುಂದು)**

ಪ್ಯಾಲೆಸ್ ರಸ್ತೆಯಲ್ಲಿ 2 ಕಡೆಗಳಲ್ಲಿ ರಸ್ತೆ ಅಗಲೀಕರಣ ಇದ್ದು, ಅವರು 10 ವರ್ಷಗಳ ಹಿಂದೆ 40 ರಿಂದ 50 ಅಡಿಗಳಷ್ಟು ಜಾಗ ಬಿಟ್ಟು ಗೋಡೆ ನಿರ್ಮಿಸಿ, ಜಾಗವನ್ನು ಹಾಗೆಯೇ ಬಿಟ್ಟಿದ್ದಾರೆ. ಆ ರಸ್ತೆ ಅಗಲೀಕರಣ ಕೆಲಸ ಇವತ್ತು ಅಥವಾ ನಾಳೆ ಶುರುವಾಗಬಹುದೆಂದು ನಾನು ಸಹ ಸುಮಾರು 10-11 ವರ್ಷಗಳಿಂದ ನೋಡುತ್ತಿದ್ದೇನೆ. ಈ ಬಗ್ಗೆ ಅಧಿಕಾರಿಗಳನ್ನು ಕೇಳಿದರೆ ಟೆಂಡರ್ ಕರೆಯಲಾಗಿದೆ ಅಥವಾ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇದೆ ಎಂದು ಹೇಳುತ್ತಾರೆ. ಈ ರಾಜ್ಯದ ಆರೂವರೆ ಕೋಟಿ ಜನರು ಈ ಸರ್ಕಾರವನ್ನು ನಂಬಿಕೊಂಡಿದ್ದಾರೆ. ಈ ರೀತಿಯಾದರೆ ಹೇಗೆ? I am talking about all the Governments from the last 10 to 12 years. ಈ ರಸ್ತೆಗಳ ಅಗಲೀಕರಣ ಕೆಲಸವನ್ನು ಸರ್ಕಾರಕ್ಕೆ ಮಾಡಿಸುವುದಕ್ಕೆ ಆಗುತ್ತಿಲ್ಲ? ಜೊತೆಗೆ ಅಂಗಡಿಗಳವರು, ಹೋಟೆಲ್‌ನವರು footpath ನ ಜಾಗವನ್ನೆಲ್ಲಾ ಅತಿಕ್ರಮಣ ಮಾಡಿಕೊಂಡಿರುವುದರಿಂದ footpath ಮೇಲೆ ಓಡಾಡುವುದಕ್ಕೆ ಜಾಗವಿಲ್ಲದ

ಕಾರಣ ರಸ್ತೆಯಲ್ಲಿಯೇ ಓಡಾಡುವಂತಹ ವಾತಾವರಣ ನಿರ್ಮಾಣವಾಗಿ ಈಗಾಗಲೇ 3 ಜನರು ಮರಣ ಹೊಂದಿದ್ದಾರೆ. ಇದರಿಂದಾಗಿ ಪ್ರತಿ ದಿನ ಜನರು ಸಾಯುತ್ತಿದ್ದಾರೆ. I don't want to rub more. ಇನ್ನು ಕೆಲವು ರಸ್ತೆಗಳಲ್ಲಿ ಎಂ.ಎಲ್.ಎ., ಅಥವಾ ಅವರ ಶಿಷ್ಯಂದಿರ ಸಹಾಯದ ಮೇರೆಗೆ footpath ರಸ್ತೆಗಳನ್ನೆಲ್ಲಾ ಅತಿಕ್ರಮಣ ಮಾಡಿಕೊಂಡಿರುತ್ತಾರೆ. ಇದಕ್ಕಾಗಿ ಅವರು ಸಂಬಂಧಪಟ್ಟವರಿಗೆ ಹಫ್ತಾ ಕೂಡ ನೀಡುತ್ತಾರೆ. ಇದರ ಕಡೆ ಯಾರು ಗಮನಹರಿಸುತ್ತಿಲ್ಲ. I don't want to go into details. Because, it will become politics. ಕೆಲವು ಜಿಲ್ಲೆಗಳಿಗೆ ಭೇಟಿ ನೀಡಿದಂತಹ ಸಂದರ್ಭದಲ್ಲಿ delegation ಹೋಗಿ ನೋಡಿದರೂ ಕೂಡ we can find that the entire footpath has been encroached because of blessings of either the Corporators or M.L.As., ರಾಜಕಾರಣಿಗಳ ಅನುಮತಿ ಇಲ್ಲದೇ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಇದರ ಕಡೆ ಗಮನ ನೀಡಲಿಲ್ಲವೆಂದರೆ, ಬಹಳ ಸಮಸ್ಯೆಯಾಗುತ್ತದೆ. We are the first to start Ola, Ather in Bengaluru. ಅದಕ್ಕಾಗಿ ಅವರು ಹೊಸೂರು ಮತ್ತು ಕೃಷ್ಣಗಿರಿಯಲ್ಲಿ ಕಾರ್ಖಾನೆ ತೆರೆದಿದ್ದಾರೆ, not in Karnataka. It is happening because of the fault in our policies and lack of will power of our bureaucrats. Since they are not cooperating, Ola and Ather are going elsewhere. ಅದಕ್ಕೆ ಸಂಬಂಧಿಸಿದಂತೆ ಕೆಲವು ದಾಖಲೆಯು ಸಹ ಇದೆ. Karnataka brought out the first electric vehicle policy in the country. But, sadly both Ola and Ather electric companies in Bengaluru have set up manufacturing units in Krishnagiri and Hosur in Tamil Nadu. Ola is building the world's largest two-wheeler electric vehicle manufacturing unit. Why the Industries Department has failed to have them invest in Karnataka? They are investing elsewhere. In Maharashtra, Rs.7,500 crores are allocated to create EVE charging station across Maharashtra. Where is the budget for the same in Karnataka? ಏತಕ್ಕಾಗಿ ಬೆಂಗಳೂರಿನ ಬಗ್ಗೆ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ, pollution is the biggest problem here. ಯಾವಾಗ ಈ ಮಾಲಿನ್ಯ ನಿಯಂತ್ರಣವಾಗುತ್ತದೆ ಎಂದರೆ, ನಾವು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಲೆಕ್ಟ್ರಿಕ್ ವಾಹನದ ಕಡೆ ಹೋದರೆ ಮಾತ್ರ ಈ ಮಾಲಿನ್ಯ ನಿಯಂತ್ರಣವಾಗುವುದು. ಹಾಗಾಗಿ ಎಲೆಕ್ಟ್ರಿಕ್ ವೆಹಿಕಲ್ಸ್, ಎಲೆಕ್ಟ್ರಿಕ್ ಬಸ್ ಖರೀದಿಸುವುದರ ಕಡೆಗೆ ಸರ್ಕಾರ ಗಮನಹರಿಸಬೇಕು ಮತ್ತು ಇದಕ್ಕಾಗಿ ಬಜೆಟ್ ಅಲೋಕೇಷನ್ ಮಾಡಬೇಕು. ಜೊತೆಗೆ ಈ ಎಲೆಕ್ಟ್ರಿಕ್ ವಾಹನಗಳಿಗೆ ಚಾರ್ಜಿಂಗ್ ಸ್ಟೇಷನ್ ಸಹ ಮಾಡಬೇಕು. ಇಲ್ಲದಿದ್ದಲ್ಲಿ, they can’t operate. ಇದಕ್ಕೆ ಸೂಕ್ತ ಜಾಗವನ್ನು ಮಾಡಿ, ಬಜೆಟ್ ಅಲೋಕೇಷನ್ ಮಾಡಬೇಕು. Private ಜನರು ಮುಂದೆ ಬರುತ್ತಿದ್ದಾರೆ. ಸುಮಾರು 25–50 ಕಡೆಗಳಲ್ಲಿ ಚಾರ್ಜಿಂಗ್ ಸ್ಟೇಷನ್ ತೆರೆಯಬೇಕು. ಆಗ ಈ ರಾಜ್ಯ ಉದ್ದಾರವಾಗುತ್ತದೆ. ಇಲ್ಲದಿದ್ದರೆ ಮಾಲಿನ್ಯದಿಂದಾಗಿ ಆರೋಗ್ಯ ಸಮಸ್ಯೆಗಳಾಗುತ್ತದೆ. Many such things are being affected. ಬೆಂಗಳೂರು ನಗರ ಸ್ವಲ್ಪ decongest ಆಗಬೇಕಾದರೆ, IT hub ಅನ್ನು ಮಂಗಳೂರು, ಹಾಸನ, ಹುಬ್ಬಳ್ಳಿ–ಧಾರವಾಡ, ಶಿವಮೊಗ್ಗ ಜಿಲ್ಲೆಗಳಿಗೆ ವರ್ಗಾವಣೆ ಮಾಡಲಿಲ್ಲವೆಂದರೆ, ಬಜೆಟ್ ಅಲೋಕೇಷನ್ ಮಾಡಬೇಕು. PPP model ನಲ್ಲಿ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಬೇರೆ ಬೇರೆ ಕಾರಣದಿಂದಾಗಿ ಬೆಂಗಳೂರಿನ ಸಮಸ್ಯೆ ಹೆಚ್ಚಾಗುತ್ತದೆ. ಏಕೆಂದರೆ ಈಗಾಗಲೇ ಬೆಂಗಳೂರಿನಲ್ಲಿ ನೀರು, ವಿದ್ಯುತ್ ಇನ್ನಿತರೆ ಸಮಸ್ಯೆಯು ಉದ್ಭವಿಸಿ ಬಹಳ ದೊಡ್ಡ ಸಮಸ್ಯೆಯಾಗಿ ತುಂಬಾ ಕಷ್ಟವಾಗುತ್ತಿದೆ. ಹಾಗಾಗಿ ಸರ್ಕಾರ ಇದರ ಕಡೆ ಗಮನಹರಿಸಬೇಕು. ಮಾನ್ಯ ಐ.ಟಿ–ಬಿ.ಟಿ. ಸಚಿವರಾದ ಮಾನ್ಯ ಅಶ್ವತ್ ನಾರಾಯಣರವರು ಇದರ ಕಡೆ ಕಾಳಜಿ ತೋರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕು. ಅದಲ್ಲದೇ ಬಿ.ಎಂ.ಟಿ.ಸಿ., ಬಸ್‌ಗಳನ್ನು ಎಲೆಕ್ಟ್ರಿಕ್ ಬಸ್‌ಗಳನ್ನಾಗಿ ಪರಿವರ್ತಿಸುವ ಕಡೆಗೆ ಆದಷ್ಟು ಮಟ್ಟಕ್ಕೆ ಗಮನ ನೀಡಬೇಕು. Government Cars should be converted into electric cars.

ಮತ್ತೊಂದು ಸಂಗತಿಯೇನೆಂದರೆ, Apple from U.S., came to India and set up its first plant in Bengaluru. But, now we see that all other Apple plants are being set up in Tamil Nadu with huge investment. Why the industry failed to provide investment to such projects in our State? ಏತಕ್ಕಾಗಿ ಆ ರೀತಿಯಾಗಿದೆ? ನಮ್ಮಲ್ಲಿರುವಂತಹ ಇಂಡಸ್ಟ್ರೀಸ್ ಮಾರ್ಕೆಟಿಂಗ್‌ರವರು ಏನು ಮಾಡುತ್ತಿದ್ದಾರೆ? ತಮಿಳುನಾಡಿನ ಕಡೆ ಇಂಡಸ್ಟ್ರೀಸ್‌ಗಳು ಹೇಗೆ ಹೋಗುತ್ತಾರೆಯೋ, ಅದೇ ರೀತಿ ನಮ್ಮ ಕರ್ನಾಟಕ ರಾಜ್ಯಕ್ಕೆ ಇಂಡಸ್ಟ್ರೀಸ್‌ಗಳು ಏತಕ್ಕೆ ಬರುತ್ತಿಲ್ಲ? Karnataka is the second highest in per capita income in the country and amongst top five

States in high GDP. ಈ ರೀತಿಯ ಅನುಕೂಲತೆಯನ್ನು ಏತಕ್ಕೆ ನಮ್ಮ ರಾಜ್ಯ ತೆಗೆದುಕೊಳ್ಳಬಾರದು. You can see that the Karnataka is in a very advantageous position. ಆ advantage ಅನ್ನು ಕರ್ನಾಟಕದ ಅಭಿವೃದ್ಧಿಗೆ ಏತಕ್ಕೆ ಉಪಯೋಗಿಸಿಕೊಳ್ಳಬಾರದು? We are the first in framing the policy, not on the implementation. ನಮಗೆ ಬುದ್ಧಿ ಇದ್ದರೂ, ಕೆಲಸದ ಕಡೆ ಹೆಚ್ಚು ಆಸಕ್ತಿವಹಿಸದೇ ಇರುವುದರಿಂದ ಇಂತಹ ಸಮಸ್ಯೆಯಾಗುತ್ತಿದೆ.

ಇವೊತ್ತಿನ ದಿವಸ ಪ್ರತಿಯೊಂದು ಸಮಸ್ಯೆ ಬಗ್ಗೆ ಜನರು ನ್ಯಾಯಾಲಯದ ಮೊರೆ ಹೋಗಬೇಕಾಗಿದೆ. Some people say that courts are overreaching. There are various reports in newspapers, namely, 'HC summons Principal Secretary over midday meal' ( Deccan Herald – December 1, 2020); 'HC puts a rider on any further gov. decision on creation of boards and corporations' ( The Hindu – February 23,2021); 'Karnataka HC slams State Government over SMS goof-up, says the move could be an exercise to exclude migrants' (Times News – May 29, 2020); 'Karnataka HC slams govt for delay in appointing Covid-19 expert panels' (Deccan Herald – Jul 31, 2020); 'HC orders removal of all hoardings by Thursday; BBMP swings into action warns of six month jail to violators' ( Bangalore Mirror – August 2, 2018); 'NGT fines govt, Palike for failing city's two big lakes' (Bangalore Mirror – December 7, 2018) ಇದಕ್ಕೆ ಸಂಬಂಧಿಸಿದಂತೆ ನಮ್ಮ ರಾಜಕಾರಣಿಗಳು, bureaucrats ಇವರು ಏನು ಮಾಡುತ್ತಿದ್ದಾರೆ? ಅವರೆಲ್ಲರೂ ಸರ್ಕಾರದ exchequer money ಉಪಯೋಗಿಸುತ್ತಾರೆ. ಇಂತಹ ವಿಷಯಗಳಿಗಾಗಿ ಉಚ್ಚ ನ್ಯಾಯಾಲಯದ ಮೊರೆ ಹೋಗಬೇಕೇ? ನಾನು ಗಮನಿಸಿರುವುದೇನೆಂದರೆ ಕೆಲವು ಸಂದರ್ಭಗಳಲ್ಲಿ ರಾಜಕೀಯ ವ್ಯಕ್ತಿಗಳು ಬೇರೆ ಬೇರೆ ಕಾರಣದಿಂದಾಗಿ ವಾದ ಮಾಡುವಾಗ reservation ಮುಂತಾದವುಗಳ ಬಗ್ಗೆ ಏನೋ ಹೇಳಿಬಿಡುತ್ತೇವೆ. Even the Courts too stand with us. ನಾವು ಸಹ ಅದನ್ನು ಬಿಟ್ಟುಬಿಡುತ್ತೇವೆ. ಪ್ರತಿಯೊಂದಕ್ಕೂ ಉಚ್ಚ

ನ್ಯಾಯಾಲಯದ ಮೊರೆ ಹೋಗುವುದರಿಂದ High Court intervene ಮಾಡುವುದಕ್ಕೆ ಅವಕಾಶ ಸಿಗುವುದರ ಬಗ್ಗೆ ನಾವು ಯೋಚನೆ ಮಾಡಲಿಲ್ಲವೆಂದರೆ, Courts will run the Government. ನ್ಯಾಯಾಲಯದ ಮೊರೆ ಹೋದಾಗ ಸಹ ಏನೇನು ನಡೆಯುತ್ತಿದೆ ಎಂಬುದರ ಬಗ್ಗೆ ನಾನು ಮಾತನಾಡುವುದಕ್ಕೆ ಬರುವುದಿಲ್ಲ, ಮಾತನಾಡುವುದೂ ಇಲ್ಲ. ನಮ್ಮ ಕೆಲಸವನ್ನು ಜವಾಬ್ದಾರಿಯುತವಾಗಿ ಮಾಡಿದರೆ, why people will go to Courts? ನ್ಯಾಯಾಲಯ ಬಡವರಿಗೋಸ್ಕರ, litigants ಗೋಸ್ಕರ ಇರುವುದು.

**(ಮುಂದು)**

**(545) 22.03.2021 ಎಸ್‌ಕೆ:ಜಿಆರ್ 4.10**

**ಶ್ರೀ ಸಿ.ಎಂ. ಲಿಂಗಪ್ಪ (ನಾಮನಿರ್ದೇಶನ ಹೊಂದಿದವರು):–** ಈ ಸದನದಲ್ಲಿ ಒಬ್ಬರೇ ಒಬ್ಬರು ಮಂತ್ರಿಗಳು ಸಹ ಇಲ್ಲ. ಅಧಿಕಾರಿಗಳ ಗ್ಯಾಲರಿಯಲ್ಲಿ ಅಧಿಕಾರಿಗಳು ಯಾರಿದ್ದಾರೆ ಎಂಬುದು ಗೊತ್ತಿಲ್ಲ.

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಯಾರು ಎಷ್ಟು ಸಮಯದವರೆಗೆ ಮಾತನಾಡುತ್ತಾರೆಂಬುದು ಗೊತ್ತಿಲ್ಲ. ಮಾನ್ಯ ಸದಸ್ಯರು ವಿಷಯವನ್ನು ತಯಾರಿ ಮಾಡಿಕೊಂಡು ಬಂದು ಈ ಸದನದಲ್ಲಿ ಹೇಳುತ್ತಿದ್ದಾರೆ. ಒಬ್ಬರೇ ಒಬ್ಬರು ಸಚಿವರು ಮಾತ್ರ ಈ ಸದನದಲ್ಲಿದ್ದಾರೆ. ಅಧಿಕಾರಿಗಳ ಗ್ಯಾಲರಿಯಲ್ಲಿ ಯಾವೊಬ್ಬ ಅಧಿಕಾರಿಗಳು ಇಲ್ಲ. ನಾವು ಯಾರಿಗೆ ಹೇಳುವುದು?

**ಶ್ರೀ ಸಿ.ಎಂ. ಲಿಂಗಪ್ಪ:–** ಮಾನ್ಯ ಸಭಾಪತಿಯವರೇ, ಯಾರು ನೋಟ್ ಮಾಡಿಕೊಳ್ಳುತ್ತಾರೆಂಬುದು ಸಹ ಗೊತ್ತಿಲ್ಲ. ನಮಗೊಂದೂ ಅರ್ಥವಾಗುತ್ತಿಲ್ಲ.

**ಉಪ ಸಭಾಪತಿಯವರು:–** ತಾವು ಮಾತನಾಡಿ.

**ಶ್ರೀ ಲಹರ್ ಸಿಂಗ್ ಸಿರೋಯಾ(ವಿಧಾನಸಭೆಯಿಂದ ಚುನಾಯಿತರಾದವರು):–** ನಮ್ಮ ಅನೇಕ ಸ್ನೇಹಿತರು ಹೇಳಿದರು. ನಾವು ಮಾತನಾಡುತ್ತಿರುವ ವಿಚಾರಗಳು ಸರ್ಕಾರಕ್ಕೆ ಖಂಡಿತವಾಗಿಯೂ ತಲುಪುತ್ತವೆ. Don't worry.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸದಸ್ಯರು ಮಾತನಾಡಿದ್ದು ಯಾವ ರೀತಿ ಸರ್ಕಾರಕ್ಕೆ ಹೋಗುತ್ತದೆಂಬುದನ್ನು ತಾವೇ ಹೇಳಿಬಿಡಿ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸದಸ್ಯರು ಮಾತನಾಡಿದ್ದು, ಸರ್ಕಾರಕ್ಕೆ ತಲುಪಲೇ ಬೇಕಲ್ಲವೇ? ಅದು ಹೇಗೆ ಎಂಬುದು ನಮ್ಮ ಪ್ರಶ್ನೆ.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಭಾಷಾ expression ನಲ್ಲಿ ಸ್ವಲ್ಪ ತಪ್ಪಿರಬಹುದು. ಅವರು ಬಹಳ ಚೆನ್ನಾಗಿ ಮಾತನಾಡುತ್ತಾರೆ. He is highlighting where the Government has failed. For such small things High Court's directions ಬೇಕಾ ಎಂದು ಕೇಳುತ್ತಿದ್ದಾರೆ. He is talking in a very good way. He is narrating how the Executive is failing. ಅವರು ತುಂಬಾ ಸೊಗಸಾಗಿ ಹೇಳುತ್ತಿದ್ದಾರೆ. ದಯವಿಟ್ಟು, ಅವರು ಮುಂದುವರೆಸಲಿ. Mr.Chairman, sir, kindly give him the time.

**ಉಪ ಸಭಾಪತಿಯವರು:–** ಆಯಿತು.

**(ಈ ಹಂತದಲ್ಲಿ ಮಾನ್ಯ ಸಭಾನಾಯಕರು ಸದನಕ್ಕೆ ಆಗಮಿಸಿದರು)**

**ಶ್ರೀ ಸಿ.ಎಂ. ಲಿಂಗಪ್ಪ:–** ಮಾನ್ಯ ಸದಸ್ಯರು ತುಂಬಾ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರ ಮಾತನ್ನು ಕೇಳುವುದಕ್ಕೆ ಒಬ್ಬ ಸಚಿವರೂ ಇಲ್ಲ. ಮಾನ್ಯ ಸಭಾನಾಯಕರು ಸಹ ಈಗಷ್ಟೆ ಸದನಕ್ಕೆ ಬಂದರು.

**ಉಪ ಸಭಾಪತಿಯವರು:–** ಮಾನ್ಯ ಲಹರ್ ಸಿಂಗ್ ಸಿರೋಯಾರವರೇ ತಾವು ಮಾತನಾಡಿ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ನಾನು . . .

**ಶ್ರೀ ಎಸ್. ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಯಡಿಯೂರಪ್ಪನವರು ಇವರನ್ನೆಲ್ಲಾ ಮಂತ್ರಿಯನ್ನಾಗಿ ಏಕೆ ಮಾಡಿದ್ದಾರೆಂಬುದು ನನಗೆ ಅರ್ಥವಾಗುತ್ತಿಲ್ಲ. ಈ ಸದನದಲ್ಲಿ ಕನಿಷ್ಠ ಪಕ್ಷ ಮೂರು ಜನ ಸಚಿವರು ಇರಬೇಕು. ಇವತ್ತು ಬೆಳಗ್ಗೆ ಮಾನ್ಯ ಸಭಾಪತಿಯವರು ಎಷ್ಟು ಜನ ಮಂತ್ರಿಗಳು ಇರಬೇಕೆಂಬುದರ ಬಗ್ಗೆ ಓದಿ ಹೇಳಿದರು. ಮಂತ್ರಿಗಳು ಎಲ್ಲಿಗೆ ಹೋಗಿದ್ದಾರೆ? ಇವರ ಕೆಲಸ ಏನಿದೆ? ಇವರ ಉದ್ಯೋಗ ಏನಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಅನಂತರ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧಿಕಾರಿಗಳ ಹೆಸರನ್ನು ಸಹ ಹೇಳಿದರು. ಆದರೆ ಅಧಿಕಾರಿಗಳ ಗ್ಯಾಲರಿಯಲ್ಲಿ ಅಧಿಕಾರಿಗಳೇ ಇಲ್ಲ. ಇವರಿಗೆ ಏಕೆ ನಿರ್ಲಕ್ಷ್ಯ ಭಾವನೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮನ್ನೇ ಗಮನಿಸುತ್ತಿದ್ದಾರೆಂದು ಅನಿಸುತ್ತದೆ.

**(ಈ ಹಂತದಲ್ಲಿ ಉಪ ಮುಖ್ಯಮಂತ್ರಿಗಳಾದ ಶ್ರೀ ಲಕ್ಷ್ಮಣ ಸಂಗಪ್ಪ ಸವದಿಯವರು ಮತ್ತು ಶ್ರೀ ಮುರುಗೇಶ್ ಆರ್ ನಿರಾಣಿ, ಗಣಿ ಮತ್ತು ಭೂ ವಿಜ್ಞಾನ ಸಚಿವರು ಸದನಕ್ಕೆ ಆಗಮಿಸಿದರು)**

**ಶ್ರೀ ಎಸ್. ಆರ್. ಪಾಟೀಲ್:–** ಇಲ್ಲ. ನಾನು wait ಮಾಡಿಯೇ ಮಾಡಿದ್ದೆ. ಇಲ್ಲಿ ತಾವೊಬ್ಬರೇ ಇದ್ದೀರಿ. ಮೊದಲು ಇಬ್ಬರು ಸಚಿವರಿದ್ದರು. ಮಂತ್ರಿಗಳ ಕೆಲಸವೇನು? ಈ ಸದನ ನಡೆಯುವಾಗ, ಸಚಿವರು ಇರಲೇಬೇಕೆಂದು, ಅವರ ಹೆಸರುಗಳನ್ನು ನಿರ್ದಿಷ್ಟವಾಗಿ ಹೇಳಿದ್ದಾರೆ. ಹಾಗಾದರೆ ಮಂತ್ರಿಗಳು ಎಲ್ಲಿಗೆ ಹೋಗಿದ್ದಾರೆ? ಇವರ ಉದ್ಯೋಗವಾದರೂ ಏನು?

**ಉಪ ಸಬಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಉಪ ಮುಖ್ಯಮಂತ್ರಿಗಳು ಸದನಕ್ಕೆ ಬಂದರು. ಮಾನ್ಯ ಲಹರ್ ಸಿಂಗ್ ಸಿರೋಯಾರವರೇ ತಾವು ಮಾತನಾಡಿ.

**ಶ್ರೀ ಎಸ್. ಆರ್. ಪಾಟೀಲ್:–** ಮಾನ್ಯ ಸದಸ್ಯರು ತುಂಬಾ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರು ಮಾತನಾಡುವುದನ್ನು ಮುಂದುವರೆಸಲಿ.

**ಉಪ ಸಬಾಪತಿಯವರು:–** ಈಗಾಗಲೇ, ಈ ಸದನದಲ್ಲಿ ನಾಲ್ಕು ಜನ ಸಚಿವರಿದ್ದಾರೆ. ಮಾನ್ಯ ಲಹರ್ ಸಿಂಗ್ ಸಿರೋಯಾರವರೇ ತಾವು ಮಾತನಾಡುವುದನ್ನು ಮುಂದುವರೆಸಿ.

**ಶ್ರೀ ಎಸ್. ಆರ್. ಪಾಟೀಲ್:–** ಮಾನ್ಯ ಸಚಿವರೆಲ್ಲರೂ ಸದನದಲ್ಲಿ ಬಂದು ಕುಳಿತುಕೊಳ್ಳುವುದಕ್ಕಾಗುವುದಿಲ್ಲವೆಂದರೆ ಹೇಗೆ? ಇಷ್ಟೊಂದು ಬೇಜವಾಬ್ದಾರಿಯೇ?

**ಉಪ ಸಬಾಪತಿಯವರು:–** ಈಗಾಗಲೇ ನಾಲ್ಕು ಜನ ಸಚಿವರು ಇದ್ದಾರೆ. ಮಾನ್ಯ ಸದಸ್ಯರೇ ತಾವು ಮಾತನಾಡಿ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಸಿ.ಎಂ. ಲಿಂಗಪ್ಪ:–** ಮಾನ್ಯ ಸಭಾಪತಿಯವರೇ, ನಾವು ಮಾನ್ಯ ಸಭಾನಾಯಕರಲ್ಲಿ ವಿನಂತಿ ಮಾಡುವುದೇನೆಂದರೆ, ಈ ಸದನದಲ್ಲಿ ಮಂತ್ರಿಗಳು ಇರುವಾಗ, ಅಧಿಕಾರಿಗಳ ಗ್ಯಾಲರಿಯಲ್ಲಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧಿಕಾರಿಗಳೆಲ್ಲರೂ ಇರಬೇಕು; ತಾವೂ ಸಹ ಇಲ್ಲಿ ಇರಲಿಲ್ಲ, ಅನಿವಾರ್ಯ ಕಾರಣಗಳಿಂದ ತಾವು ಹೊರಗಡೆ ಹೋಗಿದ್ದೀರಬಹುದು. ಆದರೆ ಸದನದಲ್ಲಿ ಅಧಿಕಾರಿಗಳ ಗ್ಯಾಲರಿಯಲ್ಲಿ ಯಾರಿದ್ದಾರೆ, ಯಾರಿಲ್ಲ ಎಂಬುದು ಸಹ ಗೊತ್ತಾಗುವುದಿಲ್ಲ.

**ಉಪ ಸಭಾಪತಿಯವರು:–** ಮಾನ್ಯ ಲಹರ್ ಸಿಂಗ್ ಸಿರೋಯಾರವರೇ ತಾವು ಮಾತನಾಡುವುದನ್ನು ಮುಂದುವರೆಸಿ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ನಾನು ಒಂದು sensitive issue ಬಗ್ಗೆ touch ಮಾಡುತ್ತೇನೆ. ಇನ್ನೂ quality education ಬಗ್ಗೆ ನನ್ನ ಮಾತು ಮುಗಿದಿಲ್ಲ.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ ತಾವು ಇನ್ನೂ ಎಷ್ಟು ಸಮಯದವರೆಗೆ ಮಾತನಾಡುತ್ತೀರಿ?

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ತಾವು ಯಾವಾಗ ಮುಗಿಸಿ ಎಂದು ಹೇಳುತ್ತೀರೋ, ಆಗ ನಾನು ಮಾತನಾಡುವುದನ್ನು ನಿಲ್ಲಿಸುತ್ತೇನೆ.

**ಉಪ ಸಭಾಪತಿಯವರು:–** ಆಯಿತು, ತಕ್ಷಣ ಮಾತನಾಡಿ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ನಾವು ಪ್ರೈಮರಿ ಶಾಲೆಗೆ ಹೋಗಬೇಕಾದರೆ, ನಮ್ಮ ಗುರುಗಳು ನಮಗೆ ದೇವರ ಸಮಾನರಾಗಿದ್ದರು. ಗುರುಗಳು ನಮ್ಮ ಎದುರಿಗೆ ಏನಾದರೂ ಬಂದರೆ ನಾವು ಭಯ–ಭಕ್ತಿಯಿಂದ ಅವರ ಎದುರಿಗೆ ನಿಲ್ಲದೆ ಓಡಿ ಹೋಗುತ್ತಿದ್ದೆವು. ಒಂದು ವೇಳೆ ಗುರುಗಳು ನಮಗೆ ಅಕಸ್ಮಾತ್ ಏನಾದರೂ ಸಿಕ್ಕಿದರೆ, ಅವರಿಗೆ ನಾವು 'ಪ್ರಣಾಮ್ ಗುರೂಜಿ' ಎಂದು ಹೇಳುತ್ತಿದ್ದೆವು. ನಾವು ನಿಜವಾಗಲೂ ಗುರುಗಳನ್ನು ತಂದೆ–ತಾಯಿ ಎಂದು ಭಾವಿಸುತ್ತಿದ್ದೆವು. ಈಗ ಏನಾಗಿದೆ ಎಂದರೆ ಕುಲಪತಿಗಳ ನೇಮಕಾತಿ ಸಂದರ್ಭದಲ್ಲಿ ಲಾಬಿ ಮಾಡುವುದಕ್ಕಾಗಿ, uneducated ಕೈಕಾಲು ಹಿಡಿದುಕೊಂಡು, recommendation ಮಾಡಿಸಿರುವುದನ್ನು ನಾನು ನನ್ನ ಕಣ್ಣಾರೆ ನೋಡಿದ್ದೇನೆ. ಕುಲಪತಿಯನ್ನು ನೇಮಕ ಮಾಡುವುದು ಯಾವ Selection Team, ಯಾವ Selection Committee, ಯಾವ ಹಗರಣ ಮತ್ತು ಸನ್ಮಾನ್ಯ ರಾಜ್ಯಪಾಲರವರ ಹತ್ತಿರ ಏತಕ್ಕೆ ಕಡತ ವಾಪಸ್ಸು ಹೋಗಿ ಬರುತ್ತದೆ ಎಂಬುದರ ಬಗ್ಗೆ ನಾನು ನೋಡಿದ್ದೇನೆ. ಇದು ಏತಕ್ಕೆ ಆಗುತ್ತದೆ? ಅದು ನಾಚಿಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಡುವಂತಹ ವ್ಯವಹಾರವಾಗಿದೆ. ನನ್ನ ಮೇಲೆ ಕ್ರಮ ತೆಗೆದುಕೊಂಡರೂ ಸಹ I am not afraid. ಕುಲಪತಿಯನ್ನು ಆಯ್ಕೆ ಮಾಡುವುದರಲ್ಲಿ ಆ ರೀತಿ ಮಾಡಿದರೆ, ಎಲ್ಲಿಂದ ಶಿಕ್ಷಣ improve ಆಗುತ್ತದೆ? ಅನಂತರ ಇದರ ಮೇಲೆ ಕುಲಪತಿಯವರು ಮಾನ್ಯ ನ್ಯಾಯಾಲಯದ ಮೊರೆ ಹೋಗುತ್ತಾರೆ. ನಾವು ಯಾವ ಸ್ಥಿತಿಗೆ ಬಂದಿದ್ದೇವೆ; ಯಾವ ಕಾರಣಕ್ಕಾಗಿ Senate Members ಅನ್ನು ಮಾಡುತ್ತೇವೆ? ಆದರೆ ಅವರಿಗೆ ಶಿಕ್ಷಣದ ಬಗ್ಗೆ ಅವರಿಗೆ ಕಳಕಳಿಯಿಲ್ಲ. Health and education ನಲ್ಲಿ ಭ್ರಷ್ಟಾಚಾರ ಮಾಡಿದರೆ, future generation ಗೆ ನಾವು ಬಹಳ ದ್ರೋಹ ಮಾಡಿದಂತಾಗುತ್ತದೆ. ನಮ್ಮ ಭವಿಷ್ಯದ ಮೇಲೆ ಅದು ಪರಿಣಾಮ ಬೀರುತ್ತದೆ. ಕುಲಪತಿಗಳ ಆಯ್ಕೆಯ ಬಗ್ಗೆ ಸರ್ಕಾರ ಬಹಳ ಚಿಂತನೆ ಮಾಡಬೇಕಾಗಿದೆ. ಯಾವ್ಯಾವ ಆಧಾರದ ಮೇಲೆ ಕುಲಪತಿಗಳನ್ನು ಆಯ್ಕೆ ಮಾಡುತ್ತೇವೆಂಬ ಬಗ್ಗೆ ಎಲ್ಲರಿಗೂ ಗೊತ್ತಿದೆ. ಸನ್ಮಾನ್ಯ ರಾಜ್ಯಪಾಲರ ಕಛೇರಿ ಬಗ್ಗೆ ನಾವು ಗೌರವದಿಂದ ಮಾತನಾಡುತ್ತೇವೆ. ಸನ್ಮಾನ್ಯ ರಾಜ್ಯಪಾಲರು ಬಂದರೆ ಮಾನ್ಯ ಮುಖ್ಯಮಂತ್ರಿಗಳಿಂದ ಹಿಡಿದು ಎಲ್ಲರೂ ಎದ್ದು ನಿಲ್ಲುತ್ತೇವೆ. ಆದರೆ ರಾಜ್ಯಪಾಲರ ಕಛೇರಿಯಲ್ಲಿ ಏನು ವ್ಯವಹಾರ ನಡೆಯುತ್ತಿದೆ ಎಂಬುದು ಸನ್ಮಾನ್ಯ ರಾಜ್ಯಪಾಲರಿಗೆ ಗೊತ್ತಾಗುವುದಿಲ್ಲ. ಹಾಗಾಗಿ ಸನ್ಮಾನ್ಯ ರಾಜ್ಯಪಾಲರನ್ನು ನಾವು blame ಮಾಡುವುದಕ್ಕೆ ಹೋಗುತ್ತಿಲ್ಲ. But, why files are coming back and returning? ಇದಕ್ಕೆ ಏನಾದರೂ ಕಾರಣ ಇದೆಯಾ, ಏನೂ ಇಲ್ಲ. ಅವರ ಪರಮಾಧಿಕಾರ. ಇದೇ ಕಾರಣಕ್ಕೆ ಶಿಕ್ಷಣ ಹಾಳಾಗುತ್ತಿದೆ ಇದು ಒಂದು ಕಾರಣವಾದರೆ, ಶಿಕ್ಷಣದ ವಿಷಯವಾಗಿ ಕೋರ್ಟ್‌ಗೆ ಹೋಗುತ್ತಾರೆ. ಅನಂತರ ಕೋರ್ಟ್ intervene ಮಾಡುತ್ತದೆ. ಇದಕ್ಕೆ 2–3 ಸಂಗತಿಗಳನ್ನು ಹೇಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ಗೌರವವನ್ನು ನಾವು ಕಾಪಾಡದೇ ಹೋದರೆ, ನಮ್ಮ ಗೌರವ ಹರಾಜು ಆಗುತ್ತದೆ. ಪ್ರತಿಯೊಂದಕ್ಕೂ ಕೋರ್ಟ್‌ಗೆ ಹೋಗುತ್ತೇವೆ. ನಮ್ಮ ನಡೆವಳಿಕೆ ಸರಿಯಿದ್ದರೆ ನಾವು ಏತಕ್ಕೆ ಕೋರ್ಟ್‌ಗೆ ಹೋಗಬೇಕು; ನಮ್ಮ ನಿರ್ಧಾರ ಸರಿ ಇತ್ತು ಎಂದರೆ, ನಾವು ಏತಕ್ಕೆ ಕೋರ್ಟ್‌ಗೆ ಹೋಗಬೇಕು? ನಾನು ಸದನದದಲ್ಲಿ ಮಾತನಾಡಿದೆ. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ, ಒಬ್ಬರು D.G.P., ಅವರನ್ನು ನೇಮಕ ಮಾಡಿದಾಗ, ಇನ್ನೊಬ್ಬ D.G.P.,ಅವರು ಕೋರ್ಟ್‌ಗೆ stay ತೆಗೆದುಕೊಳ್ಳುವುದಕ್ಕೆ ಹೋಗಿದ್ದರು. ಆಗ ನಾನು ಸದನದಲ್ಲಿ ಮಾತನಾಡಿದ್ದೇನೆ. ಆರೂವರೆ ಕೋಟಿ ಜನರಿಂದ ಆಯ್ಕೆಯಾಗಿರುವಂತಹ ಮುಖ್ಯಮಂತ್ರಿ ಯಾರನ್ನು D.G.P., ಮಾಡಬೇಕು ಮತ್ತು ಯಾರನ್ನು ಮಾಡಬಾರದು ಎಂಬುದು ಅವರ ಪರಿಮಾಧಿಕಾರ. ಇದರಿಂದ ಕೋರ್ಟ್‌ಗೆ ಹೋಗಬೇಕೆಂಬ ಬಗ್ಗೆ ಧೈರ್ಯ ಎಲ್ಲಿಂದ ಬರಬೇಕು ಸ್ವಾಮಿ?

**ಶ್ರೀ ಎಸ್. ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವಂತಹದ್ದು ಬಹಳ ಸತ್ಯವಿದೆ. ಅವರು ಸತ್ಯ ತಲೆ ಮೇಲೆ ಹೊಡೆದಂತೆ ಮಾತನಾಡುತ್ತಾರೆ. ಈಗ ಎಲ್ಲರೂ ಕೋರ್ಟ್‌ಗೆ ಹೊರಟುಬಿಟ್ಟಿದ್ದಾರೆ. ಈಗಾಗಲೇ ಮಂತ್ರಿಗಳು ಸಹಿತ ಕೋರ್ಟ್‌ಗೆ ಹೊಗಿಬಿಟ್ಟಿದ್ದಾರೆ. ಕೋರ್ಟ್‌ಗೆ ಹೋಗಿರುವ ಬಗ್ಗೆ ತಾವು comment ಮಾಡುತ್ತೀರಲ್ಲ; ಆದರೆ ಕಾನೂನಿನ ಚೌಕಟ್ಟಿನೊಳಗೆ ಎಲ್ಲವೂ ಸರಿಯಿದ್ದರೆ, ಕೋರ್ಟ್‌ಗೆ ಹೋಗುವ ಪ್ರಶ್ನೆಯೇ ಬರುವುದಿಲ್ಲ. ನಾವು ನಮ್ಮ ಜವಾಬ್ದಾರಿಯನ್ನು ನಿರ್ವಹಿಸಿದರೆ ಮತ್ತು ನಾವು ನ್ಯಾಯ, ಧರ್ಮ ಮತ್ತು ನೀತಿಯಿಂದ ನಡೆದರೆ, ಕೋರ್ಟ್‌ಗೆ ಹೋಗುವ ಪ್ರಶ್ನೆಯೇ ಬರುವುದಿಲ್ಲ. ಈಗಾಗಲೇ ಕೋರ್ಟ್‌ಗೆ ಹೋಗಿರುವ ಬಗ್ಗೆ ತಾವು ಹೇಳಿದ್ದೀರಾ; ಈಗ ಆರು ಜನ ಸಚಿವರು ಕೋರ್ಟ್‌ಗೆ ಹೋಗಿರುವ ಬಗ್ಗೆ ಸಹ ಸ್ವಲ್ಪ ಹೇಳಿ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ನಾನು ತುಂಬಾ ಸಣ್ಣವನು. ಅವರ ಬಗ್ಗೆ comment ಮಾಡುವುದಿಲ್ಲ. I am a very small person.

**ಶ್ರೀ ಎಸ್. ಆರ್. ಪಾಟೀಲ್:-** ಇದು ಅವರೇ ಹೇಳಿದ್ದು.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಆರು ಜನ ಸಚಿವರು ಹೈಕೋರ್ಟ್‌ಗೆ ಹೋಗಿ ತಡೆಯಾಜ್ಞೆ ಏಕೆ ತೆಗೆದುಕೊಂಡರು ಎಂಬ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಬೇಕು. ಬಹುಶಃ ಅವರಿಗೆ ನೆನಪಿದೆ ಎಂದು ನಾನು ತಿಳಿದುಕೊಂಡಿದ್ದೆ. ಆರು ಜನ ಸಚಿವರನ್ನು ಉಲ್ಲೇಖ ಮಾಡಿದ್ದಾರಲ್ಲ. . . .

**ಶ್ರೀ ಎಸ್. ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಎಲ್ಲರೂ ಕೋರ್ಟ್‌ಗೆ ಏಕೆ ಹೋಗುತ್ತಾರೆಂದು ನಾನೇ ಮಾನ್ಯ ಸದಸ್ಯರು ಕೇಳಿದೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಆರು ಜನ ಸಚಿವರು ಕೋರ್ಟ್‌ಗೆ ಹೋಗಿ ತಡೆಯಾಜ್ಞೆಯನ್ನು . . . .

**ಶ್ರೀ ಎಸ್. ಆರ್. ಪಾಟೀಲ್:-** ಇವರ ಬಗ್ಗೆ ಸಹ ಸ್ವಲ್ಪ ಹೇಳಿ ಎಂದು ನಾನು ಮಾನ್ಯ ಸದಸ್ಯರಿಗೆ ಹೇಳಿದೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಅದರ ಬಗ್ಗೆ ಹೇಳುತ್ತೇನೆ. ಮಾನ್ಯ ಸಿದ್ದರಾಮಯ್ಯನವರ ಸರ್ಕಾರವಿದ್ದಂತಹ ಸಂದರ್ಭದಲ್ಲಿ ಇಂತಹದೇ ಒಂದು ಪ್ರಕರಣವಾಗಿತ್ತು. ನಾನು ಹೆಸರನ್ನು ಹೇಳುವುದಕ್ಕೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗುವುದಿಲ್ಲ. ಆಗ ಮಂತ್ರಿಯವರ ಕಡೆಯಿಂದ ರಾಜೀನಾಮೆಯನ್ನು ತೆಗೆದುಕೊಂಡರು. ಅದೇ ಸಂದರ್ಭದಲ್ಲಿ ಒಬ್ಬ ಶಾಸಕರು ಮತ್ತು ಅವರ ಸ್ನೇಹಿತರು, ಅವರು ಕೂಡ ಕೋರ್ಟ್‌ಗೆ ಹೋಗಿ anticipator bail ತೆಗೆದುಕೊಂಡರು. ಅವರು ಏಕೆ ತೆಗೆದುಕೊಂಡರು? ಅವರೇನಾದರೂ ತಪ್ಪು ಮಾಡಿದ್ದಾರೆಯೇ? ತಪ್ಪು ಮಾಡದೆ ಇರತಕ್ಕಂತಹ ವ್ಯಕ್ತಿ ಏಕೆ ತಡೆಯಾಜ್ಞೆ ತೆಗೆದುಕೊಂಡರು? ನನ್ನ ಪ್ರಶ್ನೆಯನ್ನು ತಮಗೆ ಕೇಳುತ್ತಿದ್ದೇನೆ.

**ಶ್ರೀ ಎಸ್. ಆರ್. ಪಾಟೀಲ್:–** ಹಾಗಾದರೆ, ತಡೆಯಾಜ್ಞೆ ತೆಗೆದುಕೊಂಡವರೆಲ್ಲರೂ ತಪ್ಪು ಮಾಡಿದ್ದಾರೆ ಎಂದಾಯಿತು.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, it is going to a political level.

**ಶ್ರೀ ಎಸ್. ಆರ್. ಪಾಟೀಲ್:–** ಮಾನ್ಯ ಲಹರ್ ಸಿಂಗ್ ಸಿರೋಯಾರವರೇ, ಈಗ ಸಚಿವರು ಹೇಳಿದರು. ಒಬ್ಬರು ಶಾಸಕರು ಮತ್ತು ಇನ್ನೊಬ್ಬ ಸಚಿವರು ತಡೆಯಾಜ್ಞೆಯನ್ನು ತೆಗೆದುಕೊಂಡರು ಎಂದು. ಈಗ ಆರು ಜನ ಶಾಸಕರು ತಡೆಯಾಜ್ಞೆಯನ್ನು ತೆಗೆದುಕೊಂಡಿದ್ದಾರೆಲ್ಲವೇ?

**ಉಪ ಸಭಾಪತಿಯವರು:–** ಈ ವಿಷಯದ ಬಗ್ಗೆ ಈಗ ಚರ್ಚೆ ಮಾಡುವುದು ಬೇಡ. ಆದರೆ ಬೇರೆ ದಿನ ಬೇಕಾದರೆ ಚರ್ಚೆಯಾಗಲಿ, ಆದರೆ ಈಗ ಬಜೆಟ್ ಬಗ್ಗೆ ಚರ್ಚೆಯಾಗಲಿ.

**ಶ್ರೀ ಎಸ್. ಆರ್. ಪಾಟೀಲ್:–** ಮಾನ್ಯ ಸದಸ್ಯರು ಚೆನ್ನಾಗಿ ಮಾತನಾಡುತ್ತಿದ್ದಾರೆ.

**ಉಪ ಸಭಾಪತಿಯವರು:–** ಮಾನ್ಯ ಲಹರ್ ಸಿಂಗ್ ಸಿರೋಯಾರವರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರಿಗೆ disturb ಮಾಡುವುದು ಬೇಡ.

**ಶ್ರೀ ಎಸ್. ಆರ್. ಪಾಟೀಲ್:–** ಮಾನ್ಯ ಸದಸ್ಯರು ಸನ್ಮಾನ್ಯ ರಾಜ್ಯಪಾಲರ ಕಛೇರಿಯ ಕಾರ್ಯವೈಖರಿ ಬಗ್ಗೆ ಕೇಳುತ್ತಿದ್ದರಲ್ಲ, . . .

**ಉಪ ಸಭಾಪತಿಯವರು:–** ಬೇರೆ ರೀತಿಯಲ್ಲಿ ಹೇಳಿರುವ ಅವರ ಉದ್ದೇಶದ ಬಗ್ಗೆ ತಾವು ಅದನ್ನು 'U' turn ತೆಗೆದುಕೊಳ್ಳುವುದು ಬೇಡ. ಮಾನ್ಯ ಲಹರ್ ಸಿಂಗ್ ಸಿರೋಯಾರವರೇ ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, I am speaking for the good of everybody. I don't want to score a political point. ಅದರ ಬಗ್ಗೆ ಮಾತನಾಡುತ್ತಿಲ್ಲ. ನಾವು ವ್ಯಕ್ತಿಗತವಾಗಿ ತೆಗೆದುಕೊಳ್ಳಬಾರದು. It is a general trend. ನಮ್ಮ ನಡೆವಳಿಕೆ ಸರಿಯಿದ್ದರೆ ಪ್ರಶ್ನೆ ಇರುವುದಿಲ್ಲ. I am not talking about the personal behavior. As a Minister or M.L.A., or M.L.C., or bureaucrat, ನಮ್ಮ ಡ್ಯೂಟಿಯನ್ನು ನಾವು ಸರಿಯಾಗಿ ಮಾಡಿದರೆ, ತಮ್ಮ ಮೂಲಕ ಐ.ಎ.ಎಸ್ ಅಫೀಸರ್ ಬಗ್ಗೆಯೂ ಸಹ ಹೇಳುತ್ತೇನೆ; ಏಕೆಂದರೆ, ಈಗ ಐ.ಎ.ಎಸ್., ಅಫೀಸರ್ ಬಗ್ಗೆ ಮಹಾರಾಷ್ಟ್ರದಲ್ಲಿ ಏನು ನಡೆದಿದೆ ಎಂಬ ಬಗ್ಗೆ ನೋಡಿದ್ದೇವೆ. the entire Police Department has been reduced to the extortion. ಇದಕ್ಕಾಗಿಯೇ ಆಗಾಗ ನಮಗೆ ಆತಂಕವಾಗುತ್ತದೆ. Roll call ಮಾಡುವುದಕ್ಕೆ ಮತ್ತೊಮ್ಮೆ ಪ್ರಾರಂಭವಾಗುತ್ತದೆ. Sometimes, it may be on the level of police, sometimes it may be on the level of politician, we don't know. But, such things are happening in Maharashtra. It is wide open. ಆ ರೀತಿ ನಮ್ಮ ರಾಜ್ಯದಲ್ಲಿ ಆಗಬಾರದು. ಅದು ನಾವು ಕೋರ್ಟ್‌ಗೆ ಹೋಗುವುದಕ್ಕೆ ಕಾರಣವಾಗಬಹುದು. I request everybody that we should conduct ourselves properly in our duties properly.

**(ಮುಂದು)**

**(546)22.03.2021, 4.20, ಟಿಸಿಹೆಚ್-ಎಂಡಿ**

**ಶ್ರೀ ಲಹರ್ ಸಿಂಗ್ ಸಿರೋಯಾ (ಮುಂದು):-**

ಆ footpath ನ್ನು ಸರಿಯಾಗಿ maintain ಮಾಡುವುದು ನಮ್ಮ ಇಂಜಿನಿಯರ್‌ಗಳ ಕರ್ತವ್ಯ ಅಲ್ಲವೇ? ಆ ಹಿನ್ನೆಲೆಯಲ್ಲಿ ಎಂ.ಎಲ್.ಎಗಳ ಕರ್ತವ್ಯ ಅಲ್ಲವೇ? If the MLA's say that, the footpath will not be encroached, ಆಗ ಯಾರಿಗೂ ಧೈರ್ಯ ಬರುವುದಿಲ್ಲ. ಎಂ.ಎಲ್.ಎ.,ಗೆ ಅಷ್ಟು ಸಾಮರ್ಥ್ಯ ಇದೆ. ಇಂಜಿನಿಯರ್‌ಗೂ ಕೂಡ ಸಾಮರ್ಥ್ಯ ಇದೆ. ಆದರೆ ಎಲ್ಲರೂ ಕಣ್ಣುಮುಚ್ಚಿಕೊಂಡು ಕುಳಿತಿರುವುದನ್ನು ನಾವೆಲ್ಲಾ ನೋಡುತ್ತಿದ್ದೇವೆ. ಎಂತೆಂಥ ಜಾಗಗಳನ್ನು footpath

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗಳ ಮೇಲೆ ಒತ್ತುವರಿ ಮಾಡಿಕೊಂಡಿರುವುದನ್ನು ನಾವು ಪ್ರತಿ ದಿನವೂ ನೋಡುತ್ತಿರುತ್ತೇವೆ. ಒಮ್ಮೆ ಸದಾಶಿವ ನಗರದ ಲೆಫ್ಟ್‌ನಲ್ಲಿ ಹೋಗಿ ನೋಡಿ. When we come out of Sadashivanagar and move towards Mekhri Circle, left side there is a Bar and Restaurant which has encroached the road. ಅದು ಯಾರೋ ಶ್ರೀಮಂತರದ್ದು ಇರಬಹುದು, ಅದು ಯಾರದೆಂದು ನಾವ್ಯಾರೂ ಮಾತನಾಡುವುದಕ್ಕೆ ಆಗುವುದಿಲ್ಲ. ತಮಗೆಲ್ಲರಿಗೂ ನನ್ನ ಮನವಿ ಏನೆಂದರೆ, ಇದಕ್ಕೆಲ್ಲಾ ಕಡಿವಾವಣ ಹಾಕಬೇಕು. ಇದರ ಬಗ್ಗೆ ನೀವು ಗಂಭೀರವಾಗಿ ಯೋಚನೆ ಮಾಡದಿದ್ದರೆ ನಾವು ಖೊಟಾ ಸರ್ಕಾರ ಮಾಡಬೇಕಾಗುತ್ತದೆ. ಆದಕಾರಣ ನಾನು ತಮ್ಮಲ್ಲಿ ಮನವಿ ಮಾಡುವುದೇನೆಂದರೆ, ಜಾತಿ ಆಧಾರದ ಮೇಲೆ ಬಜೆಟ್ ಮಂಡನೆ ಮಾಡುವುದು ಕೊನೆಯಾಗಬೇಕು. ಬಜೆಟ್ ಬಡವರ ಪರವಾಗಿ ಇರಬೇಕು, Education ಪರವಾಗಿರಬೇಕು, Health Care and Farmers ಪರವಾಗಿ ಇರಬೇಕು, ರೈತರ ಪರವಾಗಿ ಇರಬೇಕು; ಆದರೆ ಜಾತಿ ಆಧಾರದ ಮೇಲೆ ಇರಬಾರದು. ಇವತ್ತು ನಾನು ಎಲ್ಲರನ್ನೂ ಮನವಿ ಮಾಡುತ್ತೇನೆ. ಮುಂದೆ ಬರುವಂಥ ಸರ್ಕಾರವೂ ಕೂಡ ಆ ರೀತಿ ಮಾಡಬಾರದು. ಈ ಹಿಂದಿನ ಸರ್ಕಾರದಲ್ಲೂ ಕೂಡ ಈ ರೀತಿ ಮಾಡಿಕೊಂಡು ಬಂದಿದ್ದಾರೆ. ನಿಜವಾಗಿಯೂ ಬಜೆಟ್‌ನಿಂದ ರಾಜ್ಯ improve ಆಗಬೇಕು. ಆಮೇಲೆ ಶಿಕ್ಷಣದ ಗುಣಮಟ್ಟ ಹೆಚ್ಚಾಗಬೇಕು. Vice Chancellor ನಿಂದ ಪ್ರಾರಂಭವಾಗದಿದ್ದರೆ, ಶಿಕ್ಷಣದ ಗುಣಮಟ್ಟ ಹಾಳಾಗುತ್ತದೆ. ಇದರಿಂದ ಬಡವರ ಮಕ್ಕಳಿಗೆ ನಷ್ಟವಾಗುತ್ತದೆ. ಬಡವರ ಮಕ್ಕಳ ಬಗ್ಗೆಯೂ ಯೋಚನೆ ಮಾಡುವುದು ನಮ್ಮೆಲ್ಲರ ಕರ್ತವ್ಯ ಅಲ್ಲವೇ? ಅವರ ಬದುಕನ್ನೂ ನಾವು ಯೋಚನೆ ಮಾಡುವುದು ನಮ್ಮೆಲ್ಲರ ಕರ್ತವ್ಯ ಅಲ್ಲವೇ? ನಾವು ಕೇವಲ ಜಾತಿ ನೋಡುವುದು, ಶಿಷ್ಯರನ್ನು ನೋಡುವುದು, ಅವರಿವರನ್ನು ನೋಡುವುದು ಈ ರೀತಿ ನೋಡುವುದಲ್ಲ. ಅದಕ್ಕಾಗಿ ಶಿಕ್ಷಣ ಗುಣಮಟ್ಟವನ್ನು ಕಾಪಾಡುವುದು ನಮ್ಮೆಲ್ಲರ ಕಳಕಳಿಯಾಗಿದೆ. ನಾನು ಈ ಪಕ್ಷ, ಆ ಪಕ್ಷವೆಂದು ಹೇಳುವುದಿಲ್ಲ. ಏಕೆಂದರೆ, ನಾನು ಎಲ್ಲಾ ಮಿಕ್ಸ್ ಆಗಿ ಹೇಳುತ್ತೇನೆ. ನೀವು ಎಲ್ಲಿದ್ದೀರಪ್ಪಾ ನನಗೆ ಗೊತ್ತಿಲ್ಲವೆಂದು ಹೇಳುವುದು ಆಗಬಾರದು. ಇತ್ತೀಚೆಗೆ ಕಾಂಗ್ರೆಸ್ ಪಕ್ಷ ಅಥವಾ ಜೆ.ಡಿ(ಎಸ್) ಪಕ್ಷದ ಕೆಲವು ಸದಸ್ಯರು ಮಾತನಾಡುತ್ತಾ ಸ್ವಲ್ಪ ಹೇಳಿದರು. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಪತಿಯವರಿಗೆ ಧನ್ಯವಾದಗಳನ್ನು ಹೇಳುತ್ತಿದ್ದೇನೆ. ನನಗೆ ಸ್ವಲ್ಪ ಕನ್ನಡ ಭಾಷೆ ಸಮಸ್ಯೆ ಇದೆ. ನಾನು ಇಂಗ್ಲೀಷ್‌ನಲ್ಲಿ ತಯಾರು ಮಾಡುವುದು. ಆಮೇಲೆ ಅದನ್ನು ಕನ್ನಡಕ್ಕೆ ಅರ್ಥ ಬರುವಂತೆ ರೆಡಿ ಮಾಡಿಕೊಂಡು ಬಂದು ಮಾತನಾಡುತ್ತಿದ್ದೇನೆ.

**ಉಪ ಸಭಾಪತಿಯವರು:–** ಮಾನ್ಯ ಲಹರ್‌ಸಿಂಗ್ ಸಿರೋಯಾ ರವರೇ, ತಾವು ಕನ್ನಡದಲ್ಲಿ ಬಹಳ ಚೆನ್ನಾಗಿ ಮಾತನಾಡಿದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, He has improved his kannada.

**ಶ್ರೀ ಲಹರ್‌ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ನಾನು ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಯನ್ನು ಹೇಳುತ್ತೇನೆ. ಏಕೆಂದರೆ, ನಮ್ಮ ಕೆಲವು ಮಾನ್ಯ ಸ್ನೇಹಿತರು ಸನ್ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಬೇಸರ ಮಾಡಿಕೊಳ್ಳಬಹುದು ಎಂದು ಹೇಳಿದರು. ನನಗೆ ಅವರ ಮೇಲೆ ಅಪಾರವಾದ ಗೌರವ ಇದೆ. ನಾನು ಅವರಿಗೆ ಬಹಳ ಹತ್ತಿರದಲ್ಲಿದ್ದೇನೆ. ತಪ್ಪು ಹುಡುಕಿಕೊಂಡರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಏಕೆಂದರೆ, system has become rotten. Unless we think of improving the system ಆಗುವುದಿಲ್ಲ. ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮತ್ತೊಮ್ಮೆ ತಮಗೆ ಧನ್ಯವಾದಗಳನ್ನು ಹೇಳುತ್ತಾ, ಸರ್ಕಾರ ಮಂಡಿಸಿರುವ ಬಜೆಟ್‌ನ್ನು ಸಂಪೂರ್ಣವಾಗಿ ಸಮರ್ಥನೆ ಮಾಡುತ್ತಾ, ನಿಮಗೂ ಹಾಗೂ ತಮಗೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಶ್ರೀ ಹೆಚ್.ಎಂ.ರಮೇಶಗೌಡ(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಈ ಬಾರಿ 2021–22ನೇ ಆಯವ್ಯಯವನ್ನು ಮಂಡನೆ ಮಾಡಿದ್ದಾರೆ, ಅದರ ಬಗ್ಗೆ ಸಾಕಷ್ಟು ಸದಸ್ಯರು ಈಗಾಗಲೇ ಅವರದೇ ಆದಂತಹ ದಾಟಿಯಲ್ಲಿ ಅವರದೇ ಅದಂಥ ಕಲ್ಪನೆಗಳನ್ನು ಈ ರಾಜ್ಯದ ಅಭಿವೃದ್ಧಿ ಬಗ್ಗೆ ಸಾಕಷ್ಟು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಬಾರಿ ನಮ್ಮ ರಾಜ್ಯದ ಬಜೆಟ್ ಗಾತ್ರ ಸುಮಾರು ಎರಡು ಲಕ್ಷದ ಐವತ್ತು ಸಾವಿರ ಕೋಟಿ ರೂಪಾಯಿಗಳು ಇದೆ. ಇಂತಹ ಒಂದು ಬಜೆಟ್ ಗಾತ್ರವನ್ನು ನೋಡಿದಂಥ ಸಂದರ್ಭದಲ್ಲಿ, ನಮ್ಮ ರಾಜ್ಯದಲ್ಲಿ ಈ ಒಂದು ಆಯವ್ಯಯವನ್ನು ಮಂಡನೆ ಮಾಡಬೇಕಾದರೆ, ನಮಗೆ ಬರತಕ್ಕಂಥ source of income ಎರಡು ಲಕ್ಷದ ಐವತ್ತು ಸಾವಿರ ಕೋಟಿ ರೂಪಾಯಿಗಳಿಗೆ ಸರಿದೂಗಿಸುವಂಥ ಕೆಲಸವನ್ನು ಅವರದೇ ಆದಂಥ ದಾಟಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯದ ಜನತೆಯನ್ನುದ್ದೇಶಿಸಿ ನಾನು 8ನೇ ಆಯವ್ಯಯವನ್ನು ಮಂಡನೆ ಮಾಡುತ್ತಿದ್ದೇನೆ, ಇಂತಹ ಒಂದು ಅವಕಾಶ ನನಗೆ ಸಿಕ್ಕಿದೆ ಎಂದು ಈ ರಾಜ್ಯದ ಜನತೆ ಬಗ್ಗೆಯೂ ಕೂಡ ಒಂದಷ್ಟು ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ;

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಳ್ಳೆಯದು. ಮಾನ್ಯ ಮುಖ್ಯಮಂತ್ರಿಗಳು 8ನೇ ಆಯವ್ಯಯವನ್ನು ಮಂಡನೆ ಮಾಡಿದ್ದಾರೆ, ಮಂಡನೆ ಮಾಡಲಿ. ಆದರೆ ಈ ರಾಜ್ಯದಲ್ಲಿ ಈ ಹಿಂದೆಯೂ ಸಹ ಬಜೆಟ್‌ನ್ನು ಮಂಡನೆ ಮಾಡಿದ್ದರು, ಹಿಂದಿನ ಆಯವ್ಯಯಕ್ಕೂ ಇವತ್ತಿನ ಆಯವ್ಯಯಕ್ಕೂ ಬಹಳ ಅಜಗಜಾಂತರ ವ್ಯತ್ಯಾಸವಿದೆ. ಯಾವುದೇ ಸರ್ಕಾರ ಬಂದರೂ ಕೂಡ ಯಾರೇ ಮಾನ್ಯ ಮುಖ್ಯಮಂತಿಗಳಾದರೂ ಕೂಡ ಬಜೆಟ್‌ನ್ನು ಮಂಡನೆ ಮಾಡುತ್ತಾರೆ. ಆದರೆ, ಇದುವರೆಗೂ ಕೂಡ ಆ ಬಜೆಟ್ ಮಂಡನೆಯಾದಂಥ ಸಂದರ್ಭದಲ್ಲಿ ಅದೇನು implement ಮಾಡಬೇಕಾಗುತ್ತದೆ. ಅದನ್ನು ಇಂಪ್ಲೀಮೆಂಟ್ ಮಾಡುವುದಿಲ್ಲ. ಸಾಕಷ್ಟು ಬಜೆಟ್‌ಗಳನ್ನು ತಾವೂ ಕೂಡ ನೋಡಿದ್ದೀರಿ, ಈಗ ನಾವು ಕೂಡ ನೋಡುತ್ತಿದ್ದೇವೆ. ಆದರೆ ಈಗ ಅದರ ಬಗ್ಗೆ ಸ್ವಲ್ಪ deep and depth ನಲ್ಲಿ ಒಳಗಡೆ ಹೋಗಿ ನೋಡಿದಾಗ, ಅಭಿವೃದ್ಧಿ ಶೂನ್ಯ; ಅಭಿವೃದ್ಧಿ ಆಗುತ್ತಿಲ್ಲ. ಬಜೆಟ್ ಗಾತ್ರ ಮಾತ್ರ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಈಗ ನೋಡಿ ನನಗೆ ಇರತಕ್ಕಂಥ ಮಾಹಿತಿ ಪ್ರಕಾರ, ಈ ಬಜೆಟ್ ಗಾತ್ರ ಇಷ್ಟು ದೊಡ್ಡದಿದ್ದರೂ ಕೂಡ ಸಾಲ ಮಾಡಿರುವಂಥದ್ದು ನಾಲ್ಕು ಲಕ್ಷದ ಹತ್ತು ಸಾವಿರ ಕೋಟಿ ರೂಪಾಯಿಗಳು ನಮ್ಮ ರಾಜ್ಯದ್ದು ಇದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಆರೂವರೆಯಿಂದ ಏಳು ಕೋಟಿ ಜನರು ವಾಸಮಾಡುತ್ತಿದ್ದಾರೆ. ಇವತ್ತಿನ ದಿವಸ ಒಬ್ಬರ ತಲೆ ಮೇಲೆ ಸಾಲ 1500/– ರೂಪಾಯಿಗಳಿಗಿಂತಲೂ ಹೆಚ್ಚು ಸಾಲ ಇದೆ. ಆದರೆ, ಮಾನ್ಯ ಸಭಾಪತಿಯವರೇ, ಬಜೆಟ್‌ನ ಗಾತ್ರ ನಾವೇನು ಸಾಲ ಮಾಡುತ್ತೇವೆ; ಆ ಸಾಲ ಮಾಡತಕ್ಕಂಥದ್ದು ವರ್ಡ್ ಬ್ಯಾಂಕ್ ಅಥವಾ ಇನ್ನಿತರೆ ಬ್ಯಾಂಕ್‌ಗಳಿಂದ ಏನು ಸಾಲವನ್ನು ಮಾಡುತ್ತಾರೆ, ಆ ಸಾಲ ಶೇ.3 ಗಿಂತಲೂ ಮೀರಬಾರದು ಎಂದು ನಿಯಮ ಇದೆ. ಆದರೆ, ಈಗಷ್ಟೇ ನಾನು ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರಿಗೆ ಕೇಳುತ್ತಿದ್ದೆನು. ಇತ್ತೀಚೆಗೆ ನಾನು ಒಬ್ಬರು ತಜ್ಞರನ್ನು ಕೇಳಿಕೊಂಡು, ಒಂದಿಷ್ಟು ಬರೆದುಕೊಂಡು ಬಂದಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಒಟ್ಟು ಸಾಲ GSDP (Gross State Domestic Product) ಯ ಶೇ.25 ಗಿಂತ ಮೀರಬಾರದು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿರು):–** ಮಾನ್ಯ ಸಭಾಪತಿಯವರೇ, Borrowing should not exceed 3 percent.

**Sri S.R.PATIL:-** Fiscal deficit limitation is 3 percent.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಹೌದು ಅಷ್ಟು ಇರಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:-** ಆಮೇಲೆ revenue surplus ಇರಬೇಕು. Karnataka Fiscal Deficit Act 2002 ರ ಪ್ರಕಾರ ಸಾಲ GSDP ಯ ಶೇ.25ಕ್ಕಿಂತ ಮೀರಬಾರದೆಂದು ನಾವೇ ಮಾಡಿಕೊಂಡಿರುವಂಥ ನಿಯಮ. ಈಗ ಕೇಂದ್ರ ಸರ್ಕಾರದವರು relaxation ಮಾಡಿ, ಶೇ.25ರ ಮೇಲೆ ಶೇ.2ರಷ್ಟು ಜಾಸ್ತಿ ಮಾಡಿದ್ದಾರೆ. ಅದಕ್ಕಾಗಿ ಈಗ ಅದು 26.9 ಆಗಿದೆ.

**ಶ್ರೀ ಹೆಚ್.ಎಂ.ರಮೇಶಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿರುವುದು ನಿಜ. ನಾನು ಇದು ಹೇಗೆ ಎಂದು ಮಾನ್ಯ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿಯವರನ್ನು ಕೂಡ ಕೇಳಿಕೊಳ್ಳುತ್ತಿದ್ದೆ. ಈಗ ಸಾಲ ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ Covid-19 ಬಂದಿದೆ. ಈಗ ಎಲ್ಲದಕ್ಕೂ ಕೂಡ ಕೋವಿಡ್-19 ನಿಯಮವನ್ನು ಹೇಳುತ್ತಾರೆ. ಈ Covid-19 ಬಂದಂಥ ಸಂದರ್ಭದಲ್ಲಿ ಈ ಬಾರಿ 71,322 ಕೋಟಿ ರೂಪಾಯಿಗಳ ಸಾಲವನ್ನು ಈ ವರ್ಷ ಮಾಡಿದ್ದಾರೆ. ಆಯಿತು Covid-19 ಬಂತು, ನಮ್ಮ ಆದಾಯ ಕಡಿಮೆ ಆಗಿದೆ. ಈ ರಾಜ್ಯದಲ್ಲಿ ನಮಗೇನು ತೆರಿಗೆಯಿಂದ ಹಣ ಬರಬೇಕಾಗಿತ್ತು, ಅದೆಲ್ಲಾ ಕಡಿಮೆಯಾಗಿದೆ ಎಂದು ಈ ವರ್ಷ ಅತಿ ಹೆಚ್ಚು ಸಾಲವನ್ನು ಮಾಡಿದ್ದಾರೆ. ಆದರೆ, ಮಾನ್ಯ ಸಭಾಪತಿಯವರೇ, ಈ ವರ್ಷ ಮಾನ್ಯ ಶಾಸಕರಿಗೆ ಅನುದಾನವನ್ನೂ ಸಹ ಕೊಡಲಿಲ್ಲ. ಅಲ್ಲದೇ ಈಗಾಗಲೇ ನಮ್ಮ ಸಂಬಳನ್ನು ಕೂಡ ಕಡಿತ ಮಾಡಿದ್ದಾರೆ. ಘೋಷ ಮಾಡಲಿ. We will agree. ಈ ರಾಜ್ಯದ ಅಭಿವೃದ್ಧಿಗೋಸ್ಕರ ಇವರೇನು ಕ್ರಮ ತೆಗೆದುಕೊಂಡಿದ್ದಾರೆ, ಅದನ್ನು ನಾವು ಶ್ಲಾಘನೆ ಮಾಡುತ್ತೇನೆ. ಆದರೆ, 71,322 ಕೋಟಿ ರೂಪಾಯಿಗಳನ್ನು ಈ ವರ್ಷ ಸಾಲವನ್ನು ಮಾಡಿದ್ದಾರಲ್ಲ, ನೀವು ಇಡೀ ಬೆಂಗಳೂರು ಅಥವಾ ಇಡೀ ರಾಜ್ಯದಲ್ಲಿ ನೀವು ಯಾವುದಾದರೂ ಜಿಲ್ಲೆಗೆ ಹೋಗಿ ಯಾರನ್ನಾದರೂ ಕೇಳಿ. ಪ್ರತಿದಿವಸ ನಾವು ಬೆಳಗ್ಗೆ ಎದ್ದ ಕೂಡಲೇ ಪ್ರಿಂಟ್ ಮೀಡಿಯಾ ಇರಬಹುದು ಅಥವಾ ಎಲೆಕ್ಟ್ರಾನಿಕ್ ಮೀಡಿಯಾವನ್ನು ನೋಡುತ್ತೇವೆ. ಸಾಮಾನ್ಯವಾಗಿ ಈ ವರ್ಷ ರಾಜ್ಯದಲ್ಲಿ ಎಲ್ಲಿಯೂ ಸಹ ಅಭಿವೃದ್ಧಿ ಆಗಿಲ್ಲ ಎನ್ನುವುದು ಎಲ್ಲರಿಗೂ ತಿಳಿದಿರುವಂತಹ ವಿಷಯವಾಗಿದೆ. ಒಂದೇ ಒಂದು slogan ಏನೆಂದರೆ, "ಈ ಬಾರಿ Covid-19 ಇದೆ, ನಮ್ಮಲ್ಲಿ ಹಣ ಇಲ್ಲ; ರಾಜ್ಯ ಸರ್ಕಾರದ ಬೊಕ್ಕಸದಲ್ಲಿ ಹಣವಿಲ್ಲ" ಎಂದು ಹೇಳುತ್ತಾರೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ನಮ್ಮ ಸದನದಲ್ಲೂ ಕೂಡ ಹಲವಾರು ಬಾರಿ ಹೇಳಿದ್ದಾರೆ. ಈ ವಿಷಯ ನಿಮಗೂ ಗೊತ್ತಿದೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೂ ತಿಳಿದಿದೆ; ಆಡಳಿತ ಪಕ್ಷದ ಹಿರಿಯ ಸದಸ್ಯರಾದ ಮಾನ್ಯ ಆಯನೂರು ಮಂಜುನಾಥ್‌ರವರು ಕುಳಿತುಕೊಂಡಿದ್ದಾರೆ. ಅವರು ಸಹ ಇದರ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಆದರೆ, ಮಾನ್ಯ ಮುಖ್ಯಮಂತ್ರಿಯವರು ನಮ್ಮಲ್ಲಿ ಹಣ ಇಲ್ಲವೆಂದು ಹೇಳುತ್ತಾರೆ. ಆದರೆ,

71,322 ಕೋಟಿ ರೂಪಾಯಿಗಳು ಸಾಲವನ್ನು ತೆಗೆದುಕೊಂಡಿದ್ದೀರಲ್ಲ, ಈ ಹಣ ಎಲ್ಲಿಗೆ ಹೋಯಿತು? ಎಲ್ಲಿಗೆ ವಿನಿಯೋಗ ಮಾಡಿದರು? ಆ ವಿಷಯದ ಬಗ್ಗೆ ಈ ಬಜೆಟ್‌ನಲ್ಲಿ ಎಲ್ಲಿಯೂ ಕೂಡ ಸ್ಪಷ್ಟತೆ ಇಲ್ಲ. ಈಗಾಗಲೇ ಈ ಬಜೆಟ್‌ನಲ್ಲಿ ಒಂದು ವಿಚಾರವನ್ನು ಹೇಳಿದ್ದಾರೆ. ಈ ಹಿಂದೆ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲೂ ಕೂಡ 6 ಬೆಡ್‌ಗಳ ಆಸ್ಪತ್ರೆ ಮತ್ತು 25 ಬೆಡ್‌ಗಳ ಆಸ್ಪತ್ರೆಗಳನ್ನು ICU (Intensive Care Unit) ಮಾಡಲಾಗುವುದು ಎಂದು ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ, ಈಗಾಗಲೇ ಶೇ.90 ಭಾಗ ಈ ರಾಜ್ಯದಲ್ಲಿ Covid-19 ರ ಸಮಯದಲ್ಲಿ ಇದನ್ನು ಮಾಡಿದ್ದಾರೆ. ಅದಕ್ಕೆ ಸುಮಾರು 60 ರಿಂದ 70 ಕೋಟಿ ರೂಪಾಯಿಗಳು ಖರ್ಚು ಮಾಡಿದ್ದಾರೆ. ಆದರೆ, 2021–22ರ ಬಜೆಟ್ ಪುಸ್ತಕದ ಪುಟ ಸಂಖ್ಯೆ.37ರಲ್ಲಿ ಕಂಡಿಕೆ 113ರಲ್ಲಿ ಈ ರೀತಿ ಹೇಳಿದ್ದಾರೆ.

**(ಮುಂದು)**

**(547)22.3.2021/4.30/ಎಂ.ಎಂ–ಎಂ.ಡಿ**

**ಶ್ರೀ ಹೆಚ್.ಎಂ. ರಮೇಶಗೌಡ (ಮುಂದು):–**

Covid-19 ರ ಅವಧಿಯಲ್ಲಿ ಸೃಜಿಸಿದ ಮೌಲ್ಯಯುತವಾದ ವೈದ್ಯಕೀಯ ಸೌಕರ್ಯಗಳನ್ನು ವ್ಯರ್ಥವಾಗದಂತೆ ಸದ್ಬಳಕೆ ಮಾಡಲು ರಾಜ್ಯದ 19 ಜಿಲ್ಲಾ ಆಸ್ಪತ್ರೆಗಳಲ್ಲಿ 25 ಹಾಸಿಗೆ ಸಾಮರ್ಥ್ಯವುಳ್ಳ ಹಾಗೂ 100 ತಾಲ್ಲೂಕು ಆಸ್ಪತ್ರೆಗಳಲ್ಲಿ ಆರು ಹಾಸಿಗೆ ಸಾಮರ್ಥ್ಯವುಳ್ಳ ತೀವ್ರ ನಿಗಾ ಘಟಕಗಳನ್ನು 60 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಾರ್ಯಗತಗೊಳಿಸಲಾಗುವುದು ಎಂದು ಹೇಳುತ್ತಾರೆ. ಈಗಾಗಲೇ ಮಾಡಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳೂ ಹೇಳಿದ್ದಾರೆ. ಮಾಡಿದ್ದಾರೆಂಬುದು ನಮಗೂ ಸಹ ಗೊತ್ತಿದೆ. ಆದರೆ ಇದು ನಮ್ಮ ತೆರಿಗೆ ಹಣದಲ್ಲಿ ಮಾಡಿರುವುದಾಗಿದೆ. ಆದರೆ ಮತ್ತೆ ಈ ಬಜೆಟ್‌ನಲ್ಲಿ 60 ಕೋಟಿ ರೂಪಾಯಿಗಳನ್ನು ವಿನಿಯೋಗ ಮಾಡುತ್ತೇವೆಂದು ಹೇಳಿದ್ದಾರೆ, ಇದೇನು ಹಣ ಹೊಡೆಯುವ ಸ್ಕೀಮಾ? ಅವರು ಇದನ್ನು ಎಲ್ಲಿ ವಿನಿಯೋಗ ಮಾಡುತ್ತಾರೆಂದು ಹೇಳಿಲ್ಲ. ಈಗಾಗಲೇ ಮಾಡಿದ್ದಾರೆ. ಮಧ್ಯದಲ್ಲಿ 60 ಕೋಟಿ ರೂಪಾಯಿಗಳನ್ನು ವಿನಿಯೋಗ ಮಾಡುತ್ತೇವೆಂದು ಹೇಳಿದ್ದಾರೆ. ನಾನು ಹೇಳುವುದೇನೆಂದರೆ, ದೊಡ್ಡದೊಂದು ಭ್ರಷ್ಟಾಚಾರ ಮಾಡುವುದಕ್ಕೆ ಇದೊಂದು ದೊಡ್ಡ ಹುನ್ನಾರವಾಗಿದೆ. ಇಷ್ಟೇ ಅಲ್ಲ. ನಾನು ಇನ್ನೊಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ನಿನ್ನೆ ಮುಖ್ಯಮಂತ್ರಿಗಳು ಹೇಳಿದ್ದಾರೆ, ಅದನ್ನು 'ಪ್ರಜಾವಾಣಿ' ಪತ್ರಿಕೆಯಲ್ಲಿ ದೊಡ್ಡದಾಗಿ ಬರೆದಿದ್ದಾರೆ. ಭ್ರಷ್ಟಾಚಾರ ಈ ರಾಜ್ಯದಲ್ಲಿ ಬಹಳ ದೊಡ್ಡ ಮಟ್ಟದಲ್ಲಿ ಆಗುತ್ತಿದೆ ಎಂದು ಮಾನ್ಯ ಮುಖ್ಯಮಂತ್ರಿಯವರು ಒಪ್ಪಿಕೊಂಡಿದ್ದಾರೆ. ಈ ರಾಜ್ಯದಲ್ಲಿ ಭ್ರಷ್ಟಾಚಾರ ಬಹಳ ದೊಡ್ಡ ಮಟ್ಟದಲ್ಲಿ ಆಗುತ್ತಿದೆ ಎಂದು ಮಾನ್ಯ ಮುಖ್ಯಮಂತ್ರಿಯವರು ಇಷ್ಟೊಂದು ರಾಜಾರೋಷವಾಗಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒಪ್ಪಿಕೊಳ್ಳಬೇಕಾದರೆ ಆ ಭ್ರಷ್ಟಾಚಾರ ಮಾಡುತ್ತಿರುವವರ ಮೇಲೆ ಕ್ರಮ ತೆಗೆದುಕೊಳ್ಳಬೇಕಲ್ಲವೇ? ಏತಕ್ಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ? ಅವರೇ ಹೇಳಿದ್ದಾರೆ, ರಾಜ್ಯದಲ್ಲಿ ಅಧಿಕಾರಿಗಳು ಮಿತಿ ಮೀರಿ ನಡೆದುಕೊಳ್ಳುತ್ತಿದ್ದಾರೆ, ರಾಜ್ಯದಲ್ಲಿ ಅಧಿಕಾರಿಗಳ ಭ್ರಷ್ಟಾಚಾರ ಮುಗಿಲು ಮುಟ್ಟುತ್ತಿದೆ ಎಂದು ಹೇಳುತ್ತಿದ್ದಾರೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏತಕ್ಕೆ ಹಿಂಜರಿಯುತ್ತಿದ್ದಾರೆ? ಆ ರೀತಿ ಕ್ರಮ ತೆಗೆದುಕೊಳ್ಳಬೇಕಾದರೆ, ಸುಮ್ಮನೇ ಬಾಯಿ ಮಾತಿನಲ್ಲಿ ಆಗುವುದಿಲ್ಲ. ಭಾರತೀಯ ಜನತಾ ಪಾರ್ಟಿಯವರು manifesto ದಲ್ಲಿ ಹೇಳಿದ್ದಾರೆ, ತಾವು ಈ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ, ಈ ರಾಜ್ಯದಲ್ಲಿರುವ ಲೋಕಾಯುಕ್ತ ಇಲಾಖೆಯು ಹಲ್ಲು ಕಿತ್ತ ಹಾವಾಗಿದೆ, ಅದಕ್ಕೆ parallel ಆಗಿ ACB (Anti-Corruption Bureau) ಯನ್ನು ಮಾಡಿಕೊಂಡಿದ್ದಾರೆ. ಹಿಂದೆ ಇದ್ದ ಸರ್ಕಾರದ ಮೇಲೆ ಮಾನ್ಯ ಮುಖ್ಯಮಂತ್ರಿಯವರು ಸಾಕಷ್ಟು ಆಪಾದನೆಯನ್ನು ಮಾಡಿದರು. ನೀವು ಮಾಡಿರುವಂತಹ ಭ್ರಷ್ಟಾಚಾರವನ್ನು ಮುಚ್ಚಿಹಾಕುವುದಕ್ಕೆ ACB ಯನ್ನು ಮಾಡಿದ್ದೀರಿ. ನಾವು ಅಧಿಕಾರಕ್ಕೆ ಬಂದ 24 ಗಂಟೆಯಲ್ಲಿ ಕೂಡಲೇ ಅದನ್ನು ರದ್ದು ಮಾಡುತ್ತೇವೆ, ಮತ್ತೆ ಲೋಕಾಯುಕ್ತ ಇಲಾಖೆಗೆ ಪವರ್ ಕೊಡುತ್ತೇವೆ ಎಂದು ಹೇಳಿದ್ದರು. ಇದೇ ಸದನದಲ್ಲಿ ಒಂದು ಬಿಲ್ಲನ್ನು ತಂದಿರಿ. ಲೋಕಾಯುಕ್ತ ಕಾಯಿದೆಯಲ್ಲಿ ಒಂದು ಬಿಲ್ಲನ್ನು ತಿದ್ದುಪಡಿ ಮಾಡಬೇಕಾದರೆ ನಾನು ಹೇಳಿದೆ, ಆಗ ಮಾನ್ಯ ಮಾಧುಸ್ವಾಮಿಯವರು ಕಾನೂನು ಸಚಿವರಾಗಿದ್ದರು. "ನೋಡಿ ಸಾರ್, ನೀವು ಇವತ್ತು ಈ ಬಿಲ್ಲನ್ನು ತಂದಿದ್ದೀರಿ, ಇವತ್ತು ಲೋಕಾಯುಕ್ತ ಸಂಸ್ಥೆಗೆ ಅಧಿಕಾರವೇ ಇಲ್ಲ, ಅದು ಹಲ್ಲು ಕಿತ್ತ ಹಾವಂತಾಗಿದೆ. ಈ ಬಿಲ್‌ಗೆ ತರುತ್ತಿರುವ ತಿದ್ದುಪಡಿಗೆ ಏನಾದರೂ ಬೆಲೆ ಇದೆಯೆ" ಎಂದು ಕೇಳಿದೆ. ಅದು ನಮ್ಮ ಸರ್ಕಾರ ಇರಲಿ ಅಥವಾ ನಿಮ್ಮ ಸರ್ಕಾರ ಇರಲಿ, ಜಾತಿ ವ್ಯವಸ್ಥೆ ಆಧಾರದಲ್ಲಿ ಯಾರೋ ಒಬ್ಬ ನ್ಯಾಯಾಧೀಶರಿಗೆ ಅವರು ನಿವೃತ್ತರಾದ ಮೇಲೆ ಅವರಿಗೊಂದು ಹುದ್ದೆ ಕೊಡುವಂತಹ ಕೆಲಸ ಆಗಬಾರದು. ಹಿಂದೆ ಇದ್ದ ನ್ಯಾಯಮೂರ್ತಿಗಳಾದ ಶ್ರೀ ವೆಂಕಟಾಚಲಂ, ಶ್ರೀ ಸಂತೋಷ್ ಹೆಗ್ಡೆ ಅವರಿರಬಹುದು, ಇವತ್ತು ಕೂಡ ರಾಜ್ಯದ ಜನ ಅವರನ್ನು ನೆನೆಯುತ್ತಾರೆ. ಏಕೆಂದರೆ ಈ ರಾಜ್ಯದಲ್ಲಿ ಭ್ರಷ್ಟಾಚಾರಿಗಳಾದರೆ ಅವರು ಸಿಂಹಸ್ವಪ್ನವಾಗಿದ್ದರು. ಈ ರಾಜ್ಯಕ್ಕೆ ಅಂತಹ ಒಬ್ಬ ನ್ಯಾಯಾಧೀಶರ ಅವಶ್ಯಕತೆಯಿದೆ. ಇವತ್ತು ನ್ಯಾಯಾಧೀಶರಿದ್ದಾರೆ. ಅವರಿಗೆ ಏನಾದರೂ ಪವರ್ಸ್ ಇದೆಯೇ? ಲೋಕಾಯುಕ್ತಕ್ಕೆ ಯಾರಾದರೂ ಒಬ್ಬ ಅಧಿಕಾರಿ ಅಂಜುತ್ತಿದ್ದಾರಾ? ಏನೂ ಇಲ್ಲ. ತಮ್ಮ ಮುಖಾಂತರ ನಾನು ಆಗ್ರಹ ಮಾಡುತ್ತೇನೆ, ಮಾನ್ಯ ಮುಖ್ಯಮಂತ್ರಿಗಳೇ ಒಪ್ಪಿಕೊಂಡಿರುವುದರಿಂದ ಈ ರಾಜ್ಯದಲ್ಲಿ ಅಧಿಕಾರಿಗಳು ಲೂಟಿ ಹೊಡೆಯುತ್ತಿದ್ದಾರೆ. ಲೂಟಿಕೋರರು ಯಾರು ಲೂಟಿ ಹೊಡೆಯುತ್ತಿದ್ದಾರೆ ಅವರಿಗೆ ಶಿಕ್ಷೆ ಆಗಬೇಕಾಗುತ್ತದೆ. ಅವರಿಗೆ ಭಯ ಬರಬೇಕಾದರೆ ಲೋಕಾಯುಕ್ತ ಸಂಸ್ಥೆಯನ್ನು

ಬಲಪಡಿಸಬೇಕಾಗುತ್ತದೆ. ಲೋಕಾಯುಕ್ತ ಸಂಸ್ಥೆಯನ್ನು ಬಲಪಡಿಸದಿದ್ದರೆ ಈ ರಾಜ್ಯದಲ್ಲಿ ಯಾರು ಲೂಟಿಕೋರ ಅಧಿಕಾರಿಗಳಿದ್ದಾರೆ, ಅವರನ್ನು ಯಾರೂ ಸಹ ನಿರ್ವಹಣೆ ಮಾಡುವುದಕ್ಕಾಗುವುದಿಲ್ಲ. ಮುಖ್ಯಮಂತ್ರಿಯವರು ಏನು ಹೇಳಿದ್ದಾರೆ ಆ ಮಾತು ಅವರ ಗಮನಕ್ಕೆ ಬಂದಿರುವುದು, ಅವರೇ ರಾಜಾರೋಷವಾಗಿ ರಾಜ್ಯದ ಜನತೆಯ ಮುಂದಿಟ್ಟಿದ್ದಾರೆ. ಆದ್ದರಿಂದ ದಯಮಾಡಿ ಲೋಕಾಯುಕ್ತ ಸಂಸ್ಥೆಯನ್ನು ಬಲಪಡಿಸಿ ಎಂದು ಆಗ್ರಹ ಮಾಡುತ್ತೇನೆ. ಯಾರು ಭ್ರಷ್ಟರಿಗೆ ಸಿಂಹಸ್ವಪ್ನವಾಗಿದ್ದರು, ಅಂತಹ ನ್ಯಾಯಮೂರ್ತಿಗಳನ್ನು ಇಂತಹ ಸಂಸ್ಥೆಗೆ ನೇಮಕ ಮಾಡಬೇಕೆಂದು ತಮ್ಮ ಮುಖಾಂತರ ಆಗ್ರಹ ಮಾಡುತ್ತೇನೆ.

ನಮ್ಮ ಬಜೆಟ್ ಬುಕ್ ತೆಗೆದರೆ ಮೊದಲ ಪುಟದಿಂದ ಕೊನೆಯ ಪುಟದವರೆಗೂ ಪ್ರತಿಯೊಂದು ಪುಟದಲ್ಲಿಯೂ 'ಕೋವಿಡ್' ಎಂದು ಬಂದಿದೆ. ಆಯಿತು, ಸಂತೋಷ. ಕೋವಿಡ್ ಎರಡನೇ ಅಲೆ ಪ್ರಾರಂಭವಾಗುತ್ತಿದೆ, ನಾವೆಲ್ಲಾ ಬಹಳ ಎಚ್ಚರ ವಹಿಸಬೇಕೆಂದು ಹೇಳುತ್ತಿದ್ದಾರೆ. ಬಹಳ ಸಂತೋಷ. ಸರ್ಕಾರ ಈ ರಾಜ್ಯದ ಜನತೆಯ ಬಗ್ಗೆ ಇಷ್ಟೊಂದು ಹಗಲು-ರಾತ್ರಿ ಯೋಚನೆ ಮಾಡುತ್ತಿದ್ದಾರೆ, ಮೊದಲೇ precautionary measures ತೆಗೆದುಕೊಳ್ಳಬೇಕೆಂದು ಯೋಚನೆ ಮಾಡುತ್ತಿದ್ದಾರೆ ಅದಕ್ಕೆ ಅವರಿಗೆ ಅಭಿನಂದನೆಯನ್ನು ಹೇಳುತ್ತೇನೆ. ನಾವು ಬರೀ ಬಾಯಿ ಮಾತಿನಲ್ಲಿ ಕೋವಿಡ್ ಎರಡನೇ ಅಲೆ ಪ್ರಾರಂಭವಾಗುತ್ತಿದೆ ಎಂದರೆ, ಅದಕ್ಕೆ ಪೂರಕವಾದ ಕೆಲಸಗಳನ್ನು ಮಾಡಬೇಕಾಗಿದೆ. ಒಂದು ಜೀವವನ್ನು ಉಳಿಸಬೇಕೆಂದರೆ, ಆ್ಯಂಬುಲೆನ್ಸ್‌ಗಳ ಅವಶ್ಯಕತೆ ಇದೆ. ಮೊನ್ನೆ ನಮ್ಮ ರಾಜ್ಯದಲ್ಲಿ ಕೋವಿಡ್ ಬಂದಂತಹ ಸಂದರ್ಭದಲ್ಲಿ TT (Tempo Traveller) ಗಳನ್ನು ತೆಗೆದುಕೊಂಡರು. ಬಿ.ಬಿ.ಎಂ.ಪಿ., ಇಂದ ಸುಮಾರು 500 ರಿಂದ 600 TT ಗಳನ್ನು ತೆಗೆದುಕೊಂಡರು. ಅವರ್‍ಯಾರಿಗೂ ಸಹ ಒಂದು ರೂಪಾಯಿಯ ಪೇಮೆಂಟ್ ಕೊಡಲಿಲ್ಲ. ಅದಕ್ಕೆ ಅವರೆಲ್ಲಾ ತಾವು ಯಾವುದೇ ಕಾರಣಕ್ಕೂ ಬರುವುದಿಲ್ಲ ಎಂದು ಧರಣಿ ಮಾಡಿದ್ದಾರೆ. ಅದು ಆ್ಯಂಬುಲೆನ್ಸ್ ಅಲ್ಲ, ತಾತ್ಕಾಲಿಕವಾಗಿ ಆ ವಾಹನಗಳನ್ನು ತೆಗೆದುಕೊಂಡಿದ್ದರು. ಕೋವಿಡ್‌ನಲ್ಲಿ 71 ಸಾವಿರ ಕೋಟಿ ರೂಪಾಯಿಗಳ ಸಾಲ ಇತ್ತು ಎಂದು ಹೇಳುತ್ತಾರೆ, ತಾತ್ಕಾಲಿಕವಾಗಿ ತೆಗೆದುಕೊಂಡಿರುವ ಆ್ಯಂಬುಲೆನ್ಸ್ ಗಳಿಗೆ, ಟ್ಯಾಕ್ಸಿಗಳಿಗೆ ಪೇಮೆಂಟ್ ಕೊಡುವುದಕ್ಕೆ ನಿಮಗೆ ಯೋಗ್ಯತೆ ಇಲ್ಲ. ರೂ. 71 ಸಾವಿರ ಕೋಟಿ ರೂಪಾಯಿಗಳನ್ನು ಏನು ಮಾಡಿದಿರಿ? ಈ ರಾಜ್ಯದ ಪ್ರತಿಯೊಬ್ಬ ಮನುಷ್ಯ ತೆರಿಗೆ ಕಟ್ಟಿರುವ ಹಣ ಪೋಲಾಗುತ್ತಿದೆ. ಈ ರಾಜ್ಯದಲ್ಲಿ ಅದನ್ನು ಕೇಳುವವರು ಯಾರು? ಯಾರೂ ಕೇಳುವವರಿಲ್ಲ, ಕೇಳಿದರೂ ಅದನ್ನು ಈ ಸರ್ಕಾರ ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. Covid Warriors ಕೆಲಸ ಮಾಡಿದ್ದಾರೆ. Covid Warriors ನಲ್ಲಿ ಪತ್ರಕರ್ತರು, ಪೊಲೀಸರು, ಆರೋಗ್ಯ

ಇಲಾಖೆಯವರು, ಶಿಕ್ಷಣ ಇಲಾಖೆಯವರು, ಅಂಗನವಾಡಿ ಕಾರ್ಯಕರ್ತರು ಇದ್ದರು. ತಾವು ಸಹ ನೋಡಿದ್ದೀರಿ. ಎಲ್ಲೋ ಒಂದು ಘಟನೆಯಾದರೆ ಅದನ್ನು ಬಹಳ ದೊಡ್ಡದು ಮಾಡಿದರು. 30 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದರು. ಯಾರಿಗಾದರೂ ಒಬ್ಬರಿಗೆ 30 ಲಕ್ಷ ರೂಪಾಯಿಗಳನ್ನು ಕೊಟ್ಟರೇ, ಹಾಗಾದರೆ ಯಾವ ಕೋವಿಡ್ ವಾರಿಯರ್ಸ್ ಕೂಡ ಕೋವಿಡ್ ಬಂದು ಸಾಯಲಿಲ್ಲವೇ? ಎಲ್ಲರೂ ಸಹ ಚೆನ್ನಾಗಿದ್ದಾರಾ? ಇಲ್ಲ. ಒಂದು ಸರ್ಕಾರಕ್ಕೆ ಸರ್ಕಾರವೇ ದೊಡ್ಡದು. ಸರ್ಕಾರಕ್ಕಿಂತ ಬೇರೆ ಯಾರೂ ದೊಡ್ಡವರಲ್ಲ. ಈ ರಾಜ್ಯದ ತೆರಿಗೆ ಹಣದಲ್ಲಿ ಈ ಸರ್ಕಾರ ನಡೆಯುತ್ತಿದೆ. ಈ ರಾಜ್ಯದ ತೆರಿಗೆ ಹಣ ವ್ಯಯ ಆಗಬಾರದು, ಈ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ದುಡಿಯುತ್ತೇನೆ, ಸರ್ವತೋಮುಖ ಅಭಿವೃದ್ಧಿಯನ್ನು ಮಾಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಯವರು 100 ಬಾರಿ ಹೇಳುತ್ತಾರೆ. ಆದರೆ ಅವರ ಧ್ಯೇಯ ಮತ್ತು ವಾಕ್ಯ ಪುಸ್ತಕಕ್ಕೆ ಮಾತ್ರ ಸೀಮಿತವಾಗಿದೆ. ಆದರೆ ಅದು ಪ್ರಾಯೋಗಿಕವಾಗಿ ನಮ್ಮ ಕಣ್ಣಿಗೆ ಕಾಣಿಸುತ್ತಿಲ್ಲ. ಅದು ಯಾವುದೇ ಸರ್ಕಾರಗಳಿರಬಹುದು.

*"ಸರ್ವ ಜನಾಂಗದ ಶಾಂತಿಯ ತೋಟ, ರಸಿಕರ ಕಂಗಳ ಸೆಳೆಯುವ ನೋಟ"* ಇದು ಎಲ್ಲರೂ ಹೇಳುತ್ತಾರೆ. ಎರಡೂವರೆ ಲಕ್ಷ ಕೋಟಿ ರೂಪಾಯಿಗಳ ಬಜೆಟ್‌ನಲ್ಲಿ ರಾಜ್ಯದಲ್ಲಿರುವ ಕ್ರಿಶ್ಚಿಯನ್ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ಚರ್ಚ್‌ಗಳ ನವೀಕರಣ/ದುರಸ್ತಿ, ಸಮುದಾಯ ಭವನ ಕಟ್ಟಡ ನಿರ್ಮಾಣ, ಅನಾಥಾಶ್ರಮ ಮತ್ತು ವೃದ್ಧಾಶ್ರಮಗಳಿಗೆ ನೆರವು ಮುಂತಾದ ಕಾರ್ಯಕ್ರಮಗಳನ್ನು 200 ಕೋಟಿ ರೂ.ಗಳ ವೆಚ್ಚದಲ್ಲಿ ಮುಂದುವರಿಸಲಾಗುವುದು ಎಂದು ಹೇಳುತ್ತಾರೆ. ಇದನ್ನು ಕಳೆದ ಬಾರಿಯೂ ಹೇಳಿದ್ದರು. ಆಗಲೂ 200 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ನಮ್ಮ ರಾಜ್ಯದ ಬಜೆಟನ್ನು ಎರಡೂವರೆ ಲಕ್ಷ ಕೋಟಿ ಮಾಡುತ್ತಾರೆ, ಆಮೇಲೆ implementation ಆಗುವುದಿಲ್ಲ ಎಂದು ಹೇಳುತ್ತಾರೆ. ಮಾನ್ಯ ವಿರೋಧಪಕ್ಷದ ನಾಯಕರೂ ಮಾತನಾಡಿದರು. ಇವರು ಬಜೆಟ್‌ನ ಗಾತ್ರವನ್ನು ದೊಡ್ಡದು ಮಾಡುತ್ತಾ ಹೋಗುತ್ತಾರೆ, ಅದರ ಗಾತ್ರದ ಮೇಲೆಯೇ ಸಾಲವನ್ನು ತೆಗೆದುಕೊಳ್ಳಬೇಕಲ್ಲವೇ? Implementation ಆಗುವುದಿಲ್ಲ, ನಮ್ಮ ರಾಜ್ಯದಲ್ಲಿ ಅಷ್ಟೊಂದು source of income ಇಲ್ಲ, ನಮ್ಮಲ್ಲಿ ತೆರಿಗೆ ವಸೂಲಿಯಾಗುತ್ತಿಲ್ಲ ಎಂದು ಹೇಳುತ್ತಾರೆ. ಅಷ್ಟೊಂದು ತೆರಿಗೆ ವಸೂಲಿಯಾಗದಿದ್ದರೆ ಆ ಹಣವನ್ನು ಹೇಗೆ ವಿನಿಯೋಗ ಮಾಡುತ್ತೀರಿ? ಬಜೆಟ್‌ನಲ್ಲಿ ಘೋಷಣೆ ಮಾಡಿದ ಮೊತ್ತದಲ್ಲಿ ಶೇ.50ರಷ್ಟು implementation ಆಗುವುದಿಲ್ಲವೆಂದರೆ ನಮ್ಮ ರಾಜ್ಯದ ಬಜೆಟ್‌ನ ಗಾತ್ರವನ್ನು ಏಕಿಷ್ಟು ದೊಡ್ಡದು ಮಾಡುತ್ತೀರಿ? ದಯವಿಟ್ಟು ಕಡಿಮೆ ಮಾಡಿ. ತಾನು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದೇನೆ ಎಂದು ಈ ರಾಜ್ಯದ ಬಜೆಟನ್ನು ಒಂದೂವರೆ ಲಕ್ಷ ಕೋಟಿ ಇದ್ದದ್ದನ್ನು ಎರಡು ಲಕ್ಷ, ಎರಡು ಲಕ್ಷ ಇದ್ದದ್ದನ್ನು

ಎರಡೂವರೆ ಲಕ್ಷ ಕೋಟಿ ಈ ರೀತಿ ಮಾಡುವುದರಿಂದ ಯಾರಿಗೂ ಲಾಭವಿಲ್ಲ. ಶೇ.50 ರಷ್ಟು ಹಣ ಕೂಡ implementation ಆಗಿಲ್ಲ ಎನ್ನುವುದಕ್ಕೆ ಕಳೆದ ಸಲ ಬಜೆಟ್‌ನಲ್ಲಿ 200 ಕೋಟಿ ರೂಪಾಯಿಗಳನ್ನು ಇಟ್ಟರು, ಅದಕ್ಕೆ 35 ಕೋಟಿ ರೂಪಾಯಿಗಳನ್ನು ಕೊಟ್ಟರು. ಈ ವರ್ಷದ ಬಜೆಟ್‌ನಲ್ಲಿ ನೀವು ಎಷ್ಟು ಕೊಡುವುದಕ್ಕೆ ಸಾಧ್ಯ?

(ಮುಂದು)

**(548) 22–03–2021/ 04–40/ ಕೆಹೆಚ್–ವಿಕೆ**

**ಶ್ರೀ ಹೆಚ್.ಎಂ.ರಮೇಶ ಗೌಡ (ಮುಂದು):–**

ಹಾಗಾಗಿ ಇವರು ಇನ್ನೊಂದು ವಿಚಾರವನ್ನು ಹೇಳುತ್ತಾರೆ. ಈ ಹಿಂದೆ ಕಾಂಗ್ರೆಸ್ ಮತ್ತು ಜೆಡಿ(ಎಸ್) ಸಮ್ಮಿಶ್ರ ಸರ್ಕಾರದಲ್ಲಿ ಮಾನ್ಯ ಮುಖ್ಯಮಂತ್ರಿಯವರಾದ ಹೆಚ್.ಡಿ.ಕುಮಾರಸ್ವಾಮಿಯವರು ಇದ್ದಂತಹ ಸಂದರ್ಭದಲ್ಲಿ ಆವತ್ತು ಈ ಸಂಸ್ಥೆಗೆ 200 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಇದರಲ್ಲಿ 174 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ, ಇವರು 35 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. 71 ಸಾವಿರ ಕೋಟಿ ರೂಪಾಯಿಗಳಷ್ಟು ಸಾಲ ಮಾಡಿದ್ದಾರೆ. ಇದರಲ್ಲಿ 'ಸರ್ವ ಜನಾಂಗದ ಶಾಂತಿಯ ತೋಟ' ಎಲ್ಲಿದೆ? ಹಾಗಾಗಿ, ಇವರು ಈ ಕೋವಿಡ್ ಸಂದರ್ಭದಲ್ಲಿ ಒಂದೊಂದು ಅವಾಂತರವನ್ನು ಮಾಡಲಿಲ್ಲ. ನೈಸ್ ರೋಡ್ ಜಂಕ್ಷನ್‌ನಲ್ಲಿ 10 ಸಾವಿರ ಬೆಡ್‌ಗಳನ್ನು ಹಾಕಿದ್ದಾರೆ. ಈ ಐಡಿಯಾ ಕೊಟ್ಟಿರುವವರಿಗೆ ಏನಾದರೂ ಮಾನ–ಮರ್ಯಾದೆ ಇದೆಯೇ, ಒಂದು ದೊಡ್ಡ ಶೆಡ್‌ನಲ್ಲಿ 10 ಸಾವಿರ ಬೆಡ್‌ಗಳನ್ನು ಒಂದೇ ದಿವಸದಲ್ಲಿ ಹಾಕುತ್ತಾರೆ. ಇದರ ಬಗ್ಗೆ ಪತ್ರಿಕೆಯಲ್ಲಿ ದೊಡ್ಡ ವರದಿಯಾಯಿತು. ಇವರು 10 ಸಾವಿರ ಬೆಡ್‌ಗಳನ್ನು ಹಾಕುವುದಕ್ಕೆ ಯಾರು ಐಡಿಯಾವನ್ನು ಕೊಟ್ಟರೋ, ನನಗೆ ಗೊತ್ತಿಲ್ಲ. ಇದರ ಬಗ್ಗೆ ಇವರೇ ಹೇಳುತ್ತಾರೆ. ಇದಕ್ಕೆ ಬಿಲ್ಲನ್ನು ಕಳುಹಿಸಿದ್ದಾರೆ. ಆವತ್ತಿನ ದಿವಸ ಮಾನ್ಯ ಮುಖ್ಯ ಕಾರ್ಯದರ್ಶಿಯವರೇ ಪತ್ರಿಕೆಯಲ್ಲಿ ಬಿಡುಗಡೆ ಮಾಡಿದರು. ತಮಗೆಲ್ಲಾ ಗೊತ್ತಿರುವ ಹಾಗೆ ನಿಜವಾಗಿಯೂ ಪತ್ರಕರ್ತರು ಅಲ್ಲಿ ಕುಳಿತುಕೊಂಡು ಮಾತನಾಡುತ್ತಿದ್ದರು. 'ಕ್ಯಾಕರಿಸಿ, ಕ್ಯಾಕರಿಸಿ, ಉಗಿಯುತ್ತಿದ್ದರು'. ಏನ್ರೀ ಕೋವಿಡ್‌ಗೆ ಒಂದು ನಿಯಮ ಇದೆ. ಒಂದು ಆಸ್ಪತ್ರೆಯ ಒಂದು ರೂಮ್‌ನಲ್ಲಿ 5 ಜನರು ಇರಬಹುದು. ಅದಕ್ಕೆ ಒಂದು ನಿಯಮ ಎಂದು ಇದೆ. ಅಲ್ಲಿ PPE (Personal Protective Equipment) kit ಹಾಕಿಕೊಂಡಿರುತ್ತಾರೆ. ಅವರನ್ನು ನೋಡಿದರೆ ಕಳ್ಳರ ರೀತಿಯಲ್ಲಿ ಹೋಗುತ್ತಿರುತ್ತಾರೆ. ಆದರೆ, ತಾವು 10 ಸಾವಿರ ಕೋವಿಡ್ ರೋಗಿಗಳನ್ನು ತೆಗೆದುಕೊಂಡರೆ, ಇವರು 14 ದಿವಸ ಕ್ವಾರಂಟೈನ್‌ನಲ್ಲಿ ಇರಬೇಕು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆ 14 ದಿವಸಗಳ ಕ್ವಾರಂಟೈನ್‌ನಲ್ಲಿ ಇವತ್ತು 100 ಜನರನ್ನು ತೆಗೆದುಕೊಂಡು ಅಲ್ಲಿಗೆ ಹಾಕುತ್ತಾರೆ. ನಾಳೆ 100 ಜನರನ್ನು ಹಾಕುತ್ತಾರೆ. ಅಲ್ಲಿಗೆ ಪ್ರತಿನಿತ್ಯ 100–100 ಜನರನ್ನು ಹಾಕಿದರೆ, ಇವತ್ತು ಹಾಕಿದವನಿಗೆ 14 ದಿವಸಗಳು ಆಗುತ್ತದೆ. ಮತ್ತೆ ಪಕ್ಕದಲ್ಲಿ ಕೋವಿಡ್ ರೋಗಿ ಇದ್ದರೆ, ಅವನು ಹೇಗೆ ಗುಣಮುಖ ಹೊಂದುತ್ತಾನೆ? ಮತ್ತೆ ಅವನಿಗೆ ಕೋವಿಡ್ ರೋಗ ಬರುತ್ತದೆಯಲ್ಲವೇ, ಕೋವಿಡ್‌ನಲ್ಲಿ ದುಡ್ಡನ್ನು ಲೂಟಿ ಹೊಡೆಯುವುದಕ್ಕೆ ಯಾವ್ಯಾವ ಸ್ಕೀಮ್‌ಗಳನ್ನು ಮಾಡಿದರೆಂದರೆ, ಇವರದ್ದು ಒಂದೊಂದು ಅವಾಂತರ ಅಲ್ಲ. ಇದನ್ನು ಬಿಡಿ.

ಕುಮಾರ ಕೃಪ ಗೆಸ್ಟ್ ಹೌಸ್ ಅನ್ನು ಕೋವಿಡ್ ಸೆಂಟರ್ ಮಾಡುತ್ತೇವೆ ಎಂದು ಹೇಳಿದರು. ಅದಕ್ಕೆ ಇಷ್ಟು ದುಡ್ಡು ಖರ್ಚಾಗಿದೆ ಎಂದು ತೋರಿಸಿದರು. ಯಾರಾದರೊಬ್ಬರೂ ಕುಮಾರ ಕೃಪ ಗೆಸ್ಟ್ ಹೌಸ್‌ಗೆ ಹೋಗಿದ್ದಾನೆಯೇ, ಯಾವುದಾದರೂ ಒಂದು ರೂಮ್ ಅನ್ನು ಐ.ಸಿ.ಯೂ ಕೇರ್ ಸೆಂಟರ್ ಆಗಿ ಮಾಡಲಾಗಿದೆಯೇ, ಅಲ್ಲಿ ಕೋವಿಡ್ ಸೆಂಟರ್ ಮಾಡಿದರು. ಅಲ್ಲಿ ಒಬ್ಬರನ್ನೂ ಸಹ ಒಂದು ದಿವಸವೂ ಅಡ್ಮಿಟ್ ಮಾಡಲಿಲ್ಲ. ಈ ರಾಜ್ಯದ ತೆರಿಗೆ ಹಣದಲ್ಲಿ 10 ಸಾವಿರ ಬೆಡ್‌ಗಳನ್ನು ಹಾಕಿದರು. ಅದನ್ನು 6 ತಿಂಗಳು ಸುಮ್ಮನೆ ಇಟ್ಟುಕೊಂಡಿದ್ದರು. ಅದಕ್ಕೆ ಎ.ಸಿ., ವಿದ್ಯುಚ್ಛಕ್ತಿ ಬಿಲ್ಲು ಮತ್ತು ಆ ಜಾಗಕ್ಕೆ ಬಾಡಿಗೆ ಈ ರೀತಿ ಎಲ್ಲವನ್ನೂ ಸೇರಿಸಿ ಬಿಲ್ ಮಾಡಿದರು. ಆ ಬೆಡ್‌ಗಳ ವಿಚಾರದಲ್ಲಿ ಒಂದು ದೊಡ್ಡ ದಂಧೆಯನ್ನು ಮಾಡಿದರು. ಮೊದಲು ಬೆಡ್‌ಗಳನ್ನು ಬಾಡಿಗೆಗೆ ತೆಗೆದುಕೊಳ್ಳುವುದನ್ನು ಮಾಡಿದರು. ಈ ರಾಜ್ಯದ ಪತ್ರಕರ್ತರು, ಪ್ರಿಂಟ್ ಮೀಡಿಯಾ ಮತ್ತು ಎಲೆಕ್ಟ್ರಾನಿಕ್ ಮೀಡಿಯಾದವರು ಬೆಳಗ್ಗೆ–ಸಾಯಂಕಾಲ ಈ ಸರ್ಕಾರದ ಮರ್ಯಾದೆಯನ್ನು ಹರಾಜು ಹಾಕಿದ ಮೇಲೆ ಇಲ್ಲಾ, ನಾವು ಆ ಬೆಡ್‌ಗಳನ್ನು ಕೊಂಡುಕೊಳ್ಳುತ್ತೇವೆ. ಬಾಡಿಗೆಗೆ ಅಲ್ಲ ಎಂದು ಹೇಳಿದರು. ಆದಾದ ಮೇಲೆ ಒಬ್ಬರನ್ನು ಸಹ ತೆಗೆದುಕೊಂಡು ಹೋಗಿ ಆ ಜಾಗಕ್ಕೆ ಅಡ್ಮಿಟ್ ಮಾಡಲಿಲ್ಲ. ಅಲ್ಲಿ ಒಬ್ಬ ಕೋವಿಡ್ ರೋಗಿಯೂ ಉಳಿಯಲಿಲ್ಲ. ನಂತರ ಒಬ್ಬ ಕೋವಿಡ್ ರೋಗಿಯೂ ಬರುತ್ತಿಲ್ಲ ಎಂದು ಅದನ್ನು ಮುಚ್ಚಿದರು. ಇದನ್ನು 'ಸರ್ಕಾರ' ಎಂದು ಕರೆಯುತ್ತಾರೆಯೇ, ಇದು ರಾಜ್ಯದ ತೆರಿಗೆ ಹಣವೋ ಅಥವಾ ಇವರ ಮನೆ ದುಡ್ಡೋ; ಇದಕ್ಕೇನಾದರೂ ಬೆಲೆ ಇದೆಯೇ? ನಿಜವಾಗಿಯೂ, ತಾವು ಆ ಪೀಠದಲ್ಲಿ ಕುಳಿತುಕೊಂಡು, ತಾವು ಯಾವ ಪಕ್ಷಕ್ಕೂ ಸೀಮಿತವಾಗಿಲ್ಲ. ತಾವು ಪೀಠದಲ್ಲಿ ಕುಳಿತುಕೊಂಡು ಇಂತಹವರ ವಿರುದ್ಧ ಸರಿಯಾದ ರೀತಿಯಲ್ಲಿ ಆದೇಶಗಳನ್ನು ಮಾಡಬೇಕಾಗುತ್ತದೆ. ಭ್ರಷ್ಟಾಚಾರ ಮಾಡಿದಂತಹವನು ನಮ್ಮ ಸರ್ಕಾರದಲ್ಲಿ ಇರಲಿ, ನಿಮ್ಮ ಸರ್ಕಾರದಲ್ಲಿ ಇರಲಿ, ಇನ್ನೊಬ್ಬ ಇರಲಿ, ಇದಕ್ಕೆ ಏನು ಬೆಲೆ ಇಲ್ಲವೇ? ಇಷ್ಟ ಬಂದ ಹಾಗೆ ಇವರು ಆದೇಶಗಳನ್ನು ಮಾಡುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ॥"

ಇಲ್ಲಿ ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದ ಸಾಲುಗಳನ್ನು ಹೇಳುತ್ತಾರೆ.

**ಉಪ ಸಭಾಪತಿಯವರು:–** ಈ ಸಾಲುಗಳನ್ನು ಮಾನ್ಯ ಶ್ರೀ ಎಸ್.ಎಲ್.ಭೋಜೇಗೌಡರವರು ಹೇಳಿಕೊಟ್ಟರೇ?

**ಶ್ರೀ ಹೆಚ್.ಎಂ.ರಮೇಶ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನಾನು ಆಗಲೇ ಇದನ್ನು ಬರೆದಿಟ್ಟುಕೊಂಡಿದ್ದೆ ಮತ್ತು ಪುಸ್ತಕವನ್ನು ಮಡಚಿಟ್ಟುಕೊಂಡಿದ್ದೆ. ಆದರೆ, ನಾನು ಮಡಚಿ ಇಟ್ಟಿರುವುದನ್ನು ತೆಗೆಯುವುದಕ್ಕೆ ಕಷ್ಟವಾಗುತ್ತದೆ ಎಂದು ಮಾನ್ಯ ಎಸ್.ಎಲ್.ಭೋಜೇಗೌಡರವರು ತಾವು ತೆಗೆದುದನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ರಾಜ್ಯದ ಜನತೆಗೆ ಗೊತ್ತಾಗಬೇಕು. ಏಕೆಂದರೆ, ಇದು ನಮ್ಮನೆ ದುಡ್ಡಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕೋವಿಡ್ ಮತ್ತೆ ಮರುಕಳಿಸುತ್ತಿದೆ. ನಾವು ಎಚ್ಚರಿಕೆ ವಹಿಸಬೇಕಾಗುತ್ತದೆ. ಕೋವಿಡ್ ಸಂದರ್ಭದಲ್ಲಿ ಒಂದು ವರದಿ ಪತ್ರಿಕೆಯಲ್ಲಿ ಬಂದಿದೆ. ಮೆಟ್ರೋದಲ್ಲಿ ಪ್ರಯಾಣಿಕರಿಗೆಲ್ಲಾ temperature test ಮಾಡುತ್ತಾರೆ. Temperature ಹೆಚ್ಚು ಇದ್ದವರಿಗೆ ಕೋವಿಡ್ ರೋಗಿ ಎಂದು ತೀರ್ಮಾನ ಮಾಡುತ್ತಾರೆ. ಆ ಪಟ್ಟಿಯನ್ನು ಬಿ.ಬಿ.ಎಂ.ಪಿ.,ಯವರಿಗೆ ಕಳುಹಿಸುತ್ತಾರೆ. ಬಿ.ಬಿ.ಎಂ.ಪಿ.,ಯಲ್ಲಿ ಇದನ್ನು ನೋಡಿಕೊಳ್ಳುವವರಿಗೆ ತಲೆಗೆ ಇಷ್ಟು ಎಂದು ಆವತ್ತು ತೀರ್ಮಾನ ಮಾಡಲಾಗಿತ್ತು. ಮಾರನೇ ದಿವಸ ಪಟ್ಟಿಯನ್ನು ಕೊಡುತ್ತಾರೆ. ಅಲ್ಲಿರುವವರೆಲ್ಲಾ ನಾನು ಕೋವಿಡ್ ರೋಗಿ ಅಲ್ಲ. ನನಗೆ ನೆಗಟಿವ್ ಬಂದಿದೆ. ಆದರೆ, ಪಾಸಿಟಿವ್ ಎಂದು ಬಿ.ಬಿ.ಎಂ.ಪಿ.ಯವರ ಪಟ್ಟಿಯಲ್ಲಿ ಇದೆ. ಇಂತಹ ನೂರಾರು–ಸಾವಿರಾರು ಪ್ರಕರಣಗಳು ಆಗಿವೆ. ಮತ್ತೆ ಕೋವಿಡ್ ಕಂಡು ಬರುತ್ತಿದ್ದು, ಈ ರೀತಿಯ ಪ್ರಕರಣಗಳು ಮತ್ತೊಮ್ಮೆ ಪುನರಾವರ್ತನೆ ಆಗದಂತೆ ನೋಡಿಕೊಳ್ಳಬೇಕು. ಮಾನ್ಯ ಹೆಚ್.ಎಂ.ರಮೇಶಗೌಡರವರು ಹೊಸ ಸದಸ್ಯರಾಗಿದ್ದು, ಬಹಳ ಚೆನ್ನಾಗಿ ಗಂಭೀರವಾಗಿ ಮಾತನಾಡುತ್ತಿದ್ದಾರೆ. ಅವರು ಮಾತನಾಡುವುದನ್ನು ಮುಂದುವರೆಸಲಿ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಹೆಚ್.ಎಂ.ರಮೇಶ ಗೌಡರವರೇ, ಒಂದು ನಿಮಿಷ. ಈ ಕೋವಿಡ್ ವಿಚಾರದ ಬಗ್ಗೆ ಹಿಂದಿನ ಸದನದಲ್ಲಿಯೂ ಕೂಡ ಚರ್ಚೆಯಾಗಿತ್ತು. ಸಾಮಾನ್ಯವಾಗಿ ಸರ್ಕಾರ ಮಾಡುವಂತಹ ಯಾವುದಾದರೂ ವಿಚಾರದಲ್ಲಿ ಗೊಂದಲ ಇದ್ದರೆ, ತಪ್ಪಾಗಿದ್ದರೆ, ತಕ್ಷಣ ನಮ್ಮಲ್ಲಿರುವಂತಹ ಶಾಸಕರು, ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷದ ಸದಸ್ಯರು ಪತ್ರಿಕೆಗಳಿಗೆ ಆ ದಿವಸವೇ ಹೇಳಿಕೆಯನ್ನು ಕೊಟ್ಟಿರುತ್ತಾರೆ. ಅದರ ಮೇಲೆ ತನಿಖೆಯಾಗುತ್ತದೆ. ಕಳೆದ ಬಾರಿ ಮಾನ್ಯ ಮಂತ್ರಿಗಳಾದ ಅಶ್ವಥ್ ನಾರಾಯಣ್‌ರವರು ಮತ್ತು ಡಾ॥ ಸುಧಾಕರ್‌ರವರು ಎರಡು ಬಾರಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಈಗ ಆಯವ್ಯಯದ ಮೇಲೆ ಚರ್ಚೆ ನಡೆಯುತ್ತಿದೆ. ಎಲ್ಲಿ ಬೆಡ್‌ಗಳನ್ನು ಹಾಕಲಾಗಿದೆ, ಅಲ್ಲಿ ಯಾವ ರೀತಿಯಾಗಿದೆ, ಎಲ್ಲಿ ಟೆಸ್ಟ್ ಮಾಡಿದ್ದೇವೆ, ಎಲ್ಲಿ temperature ಪರೀಕ್ಷೆ ಮಾಡಿದ್ದೇವೆ, ಈ ಎಲ್ಲಾ ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ಇವರು ಆಯವ್ಯಯದ ಮೇಲೆ ಚರ್ಚೆ ಮಾಡುವಾಗ ನಿರ್ದಿಷ್ಟವಾದ ವಿಚಾರಗಳನ್ನು ಇಟ್ಟುಕೊಂಡು ಅತ್ಯಂತ ಕೆಟ್ಟ ಶಬ್ದಗಳಲ್ಲಿ ಸರ್ಕಾರವನ್ನು ನಿಂದಿಸುತ್ತಾ ಹೋದರೆ, ನಾವು ಕೂಡ ಉತ್ತರವನ್ನು ಕೊಡಬೇಕಾಗುತ್ತದೆ. ಇವರು ಆಯವ್ಯಯದ ಮೇಲೆ ಚರ್ಚೆ ಮಾಡಲಿ. ಇವರು ಚರ್ಚೆ ಮಾಡಿ ಪ್ರಜಾಪ್ರಭುತ್ವದಲ್ಲಿ ಟೀಕೆ ಮಾಡುವಂತಹ ಹಕ್ಕಿದೆ. ಆ ಟೀಕೆ ಆರೋಗ್ಯಕರವಾಗಿರಲಿ. ಈಗ ತಾವು ಏನಾದರೂ ವಿಚಾರವನ್ನು ತೆಗೆದುಕೊಂಡು ಬನ್ನಿ. 10 ಸಾವಿರ ಬೆಡ್‌ಗಳನ್ನು ಹಾಕಿದ್ದಾರೆ. ಇಂತಿಷ್ಟು ನಷ್ಟವಾಗಿದ್ದು ಮತ್ತು ಅನ್ಯಾಯವಾಗಿದೆ. ಇಂತಿಷ್ಟು ವಂಚನೆಯಾಗಿದೆ ಎಂದು ಹೇಳಿದರೆ ಸರ್ಕಾರದಿಂದ ಉತ್ತರ ಕೊಡೋಣ. ಇದರ ಬಗ್ಗೆ ತನಿಖೆಯಾಗಬೇಕೆಂದು ಹೇಳಿ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳೋಣ. ಆಯವ್ಯಯದ ಮೇಲೆ ಚರ್ಚೆ ಮಾಡುವಾಗ ಬಹಳ ದಿವಸಗಳ ಹಿಂದಿನ ವಿಚಾರಗಳನ್ನಿಟ್ಟುಕೊಂಡು ಈ ರೀತಿ ಆಪಾದನೆ ಮಾಡುವುದು ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ ತಮಗೆ ಸರಿ ಅನಿಸುತ್ತದೆಯೇ. ಮಾನ್ಯ ಹೆಚ್.ಎಂ.ರಮೇಶ ಗೌಡರವರಿಗಿಂತ ನಾವೆಲ್ಲಾ ಸ್ವಲ್ಪ ಹಿರಿಯ ಸದಸ್ಯರಾಗಿದ್ದು, ಈ ರೀತಿ ಮಾತನಾಡುವಾಗ ತಾವು ಕೂಡ ಧ್ವನಿಗೂಡಿಸುವುದು ಸರಿಯಲ್ಲ ಎಂದು ನಾನು ಹೇಳುವುದಿಲ್ಲ. ಕೆಲವೊಂದು ನಿರ್ದಿಷ್ಟವಾದ ವಿಚಾರಗಳ ಚರ್ಚೆಗೆ ನಿರ್ದಿಷ್ಟವಾಗಿ ಉಲ್ಲೇಖ ಮಾಡುವಂತಹ ಅಗತ್ಯ ಇದೆ. ಇದರ ಬಗ್ಗೆ ತಾವೇ ಹೇಳಿಕೊಟ್ಟಿದ್ದೀರಿ. ಈಗ ತಾವು ಏಕೆ ಸಮರ್ಥನೆ ಮಾಡುತ್ತೀರಿ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾನಾಯಕರೇ, ಬಹಳ ಸಂಯೋಚಿತ ಆಕ್ಷೇಪಣೆ ತಮಗೆ ಇದೆ. ನಮ್ಮ ಸಹದ್ಯೋಗಿ ಸನ್ಮಿತ್ರರ ಕಾಳಜಿ–ಕಳಕಳಿ ಇಷ್ಟೇ. ಇನ್ನು ಕರೋನಾ ಮುಗಿದಿಲ್ಲ. ಕೋವಿಡ್ ಕಥೆ ಮುಗಿದಿಲ್ಲ. ಇದು ಮತ್ತೆ ಮರುಕಳಿಸುತ್ತಿದೆ. ಮತ್ತೆ ಈ ರೀತಿ ಪ್ರಮಾದಗಳು ಆಗಬಾರದಲ್ಲವೇ, ಇದು never ending. ಇಡೀ ಬಜೆಟ್ ಪುಸ್ತಕದ ಎಲ್ಲಾ ಪುಟಗಳಲ್ಲಿ ಕೋವಿಡ್ ವಿಚಾರ ಇದೆ. ಇಡೀ ಬಜೆಟ್‌ನಲ್ಲಿ

ಕೋವಿಡ್‌ನ ಪ್ರಭಾವ ಇದೆ. ಏಕೆಂದರೆ, ಬಜೆಟ್ deficit ಆಯಿತು. ಸಂಪನ್ಮೂಲ ಕೊರತೆ ಆಯಿತು. ಇಂತಹ ಪ್ರಮಾದಗಳು, ಅನಾಹುತಗಳು ಸಂಭವಿಸಬಾರದಲ್ಲವೇ, ಅದಕ್ಕೆ ನಮ್ಮ ಸದಸ್ಯರು ಎಲ್ಲೆಲ್ಲಿ ವ್ಯತ್ಯಯಗಳು ಮತ್ತು ವ್ಯತ್ಯಾಸಗಳಾಗಿವೆ. ನಾವು ಮುಂದೆ ಏನು ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ನಾವು ಹೇಗೆ streamline ಗೆ ತರಬೇಕು ಹಾಗೂ ಅತ್ಯಂತ ಅರ್ಥಪೂರ್ಣವಾಗಿ ಹೇಗೆ ಕರೋನಾವನ್ನು ನಿಯಂತ್ರಣ ಮಾಡಬೇಕು. ಈಗ ತಾನೇ ಜಿಲ್ಲಾಸ್ಪತ್ರೆ ಮತ್ತು ತಾಲ್ಲೂಕು ಆಸ್ಪತ್ರೆಗಳ ಬಗ್ಗೆ ಹೇಳಿದ್ದರು. ಈಗಾಗಲೇ ನಾವೆಲ್ಲಾ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದಕ್ಕೆ ಮತ್ತೆ ಅಲೋಕೇಷನ್ ಏಕೆ ಮಾಡಬೇಕು? ಇದರ ಬಗ್ಗೆ ಅನುಮಾನ ಮೂಡುತ್ತದೆಯಲ್ಲವೇ, ಆತಂಕ ಬರುತ್ತದೆಯಲ್ಲವೇ, ಅದಕ್ಕೆ ಅವರು ಪ್ರಶ್ನೆಯನ್ನು ಕೇಳುತ್ತಿದ್ದಾರೆ. ತಾವು ಮುಜುಗರಕ್ಕೆ ಒಳಗಾಗಬೇಡಿ. ದಯಮಾಡಿ ಉತ್ತರವನ್ನು ಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಐ.ಸಿ.ಯೂ. ಸೇರಿದಂತೆ ಅನೇಕ ವಿಚಾರಗಳಿಗೆ ಈಗಾಗಲೇ ಕೋವಿಡ್ ಪರಿಸ್ಥಿತಿ ಬಂದಾಗ ಅಳವಡಿಕೆಯಾಗಿದೆ ಎನ್ನುವುದು ಸತ್ಯ. ಈಗ ಅವರು ಹೇಳುತ್ತಿರುವುದಕ್ಕೆ ಹೊಸದಾಗಿ ಹಣವನ್ನು ಖರ್ಚು ಮಾಡುವುದಕ್ಕೆ ಆಗುತ್ತದೆಯೇ? ಯಾವ ಕಡೆ ಐ.ಸಿ.ಯೂ., ಕಡಿಮೆ ಇದೆ. ಆ ಕಡೆ ಇದನ್ನು ಮಾಡಬೇಕಾಗುತ್ತದೆ. ಯಾವ ಕಡೆ ವೆಂಟಿಲೇಟರ್ ಕಡಿಮೆ ಇದೆ. ಆ ಕಡೆ ಹಾಕಬೇಕಾಗುತ್ತದೆ. ನೀವಾಗಲ್ಲಿ, ನಾವಾಗಲಿ, ಬಜೆಟ್‌ನಲ್ಲಿ ಮಾಡಿರುವಂತಹ ವಿಚಾರಗಳು ಹಿಂದೆ ಹಾಕಿರುವುದಕ್ಕೆ ಬಿಲ್ಲು ಮಾಡುವುದಕ್ಕೆ ಆಗುತ್ತದೆಯೇ, ಈ ರೀತಿ ಮಾಡಿರುವ ಉದಾಹರಣೆಗಳು ಇದ್ದರೆ ಹೇಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇವತ್ತು ಜಿಲ್ಲಾಸ್ಪತ್ರೆಗಳಲ್ಲಿ . . .

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, 50 ಓ.ಪಿ.ಟಿ.,ಗಳು ಮತ್ತು 50 ಐ.ಸಿ.ಯೂ., ಗಳನ್ನು ಮಾಡುತ್ತೇವೆ ಎಂದು ಹೇಳಿದರು. ಇದನ್ನು ನಾನು ಇಲ್ಲ ಎಂದು ಹೇಳಲಿಲ್ಲ. ಇದು ಹಣ ಹೊಡೆಯುವಂತಹ ದಂಧೆಯಾಗಿದೆ ಎಂದು ಹೇಳಿದ್ದಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಜಿಲ್ಲಾ ಕೇಂದ್ರದ ಆಸ್ಪತ್ರೆಗಳು, they are doing good now. ಅಲ್ಲಿ ಅನುಮಾನವೇ ಇಲ್ಲ. ತಾವು ಹೋಬಳಿ ಮಟ್ಟಕ್ಕೆ ಅಥವಾ ಗ್ರಾಮಾಂತರ ಭಾಗಕ್ಕೆ ಹೋಗಿ, ನಮ್ಮ ತಕರಾರು ಇಲ್ಲ. ಮತ್ತೆ ಜಿಲ್ಲಾಸ್ಪತ್ರೆಗಳಿಗೆ ಹೋಗುತ್ತೀರಲ್ಲವೇ.

**ಉಪ ಸಭಾಪತಿಯವರು:–** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ಒಂದು ನಿಮಿಷ ಇವರು ಮಾತನಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ತಮಗೆ ಭಾಷೆಯ ಮೇಲೆ ಅದ್ಭುತವಾದ ಹಿಡಿತ ಇದೆ. ಭಾವನಾತ್ಮಕ ಅಭಿನಯ ಅದಕ್ಕಿಂತ ಚೆನ್ನಾಗಿ ಇದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾನಾಯಕರೇ, ವಿಚಾರದ ಮೇಲ್ಲೂ ಹಿಡಿತ ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ಮಾತನ್ನು ಅತ್ಯಂತ ಸ್ಫುಟವಾಗಿ ಹೇಳಬಲ್ಲಿರಿ. ತಾವು ಹೇಳಿರುವುದನ್ನು 'ಸರಿ' ಎಂದು ನಿಮ್ಮ ಎದುರಿನಲ್ಲಿರುವವರಿಗೆ ಹೇಳಿಸಬಲ್ಲಿರಿ. ಆ ತಾಕತ್ತು ತಮಗೆ ಇದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ, ನಾನು ಹೇಳುತ್ತಿರುವುದೇನೆಂದರೆ, ಯಾವುದಾದರೂ ವೆಂಟಿಲೇಟರ್ ಮತ್ತು ಐ.ಸಿ.ಯೂ. ಹಾಕಿದರೆ, ಇವರು 50 ಐ.ಸಿ.ಯೂ., ಗಳನ್ನು ಹಾಕಿದ್ದಾರೆ ಎಂದು ಹೇಳಿದ್ದಾರೆ. ತಾವು ಸಹ ಬಜೆಟ್ ಅನ್ನು ಮಂಡನೆ ಮಾಡಿದ್ದೀರಿ. ಅನೇಕ ಬಾರಿ ತಾವು ಪ್ರಕಟಣೆಯನ್ನು ಕೊಟ್ಟಿದ್ದೀರಿ. ಒಂದು ಆಸ್ಪತ್ರೆಗೆ ಅಳವಡಿಕೆಯಾಗಿರುವಂತಹ ಯಾವುದಾದರೂ ಒಂದು ವ್ಯವಸ್ಥೆಗೆ ಐ.ಸಿ.ಯೂ., ಆಗಲಿ, ವೆಂಟಿಲೇಟರ್ ಆಗಲಿ, ಬಜೆಟ್‌ನಲ್ಲಿ ಘೋಷಣೆಯಾಗದೇ ಇರುವಂತಹ ಕಾರಣಕ್ಕೆ ಮತ್ತೊಂದು ಬಾರಿ ಬಿಲ್ಲು ಮಾಡುವುದಕ್ಕೆ ಆಗುತ್ತದೆಯೇ?

**(ಮುಂದು)**

**(549) 22/03/2021/ಎಸ್‌ಪಿಆರ್/ವಿಕೆ/4:50**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರ ಮೇಲೆ ನಮಗೆ ಯಾವ ಅನುಮಾನ ಹಾಗೂ ಆತಂಕವಿಲ್ಲ. ಆದರೆ, ನಮಗೆ ವ್ಯವಸ್ಥೆಯ ಮೇಲೆ ಆತಂಕ ಹಾಗೂ ಗಾಬರಿಯಿದೆ. ಈಗ ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳು ಸುಸಜ್ಜಿತವಾಗಿವೆ. ಸರ್ಕಾರವು ಬೇಕಾದರೆ ಹೋಬಳಿ ಮಟ್ಟದ ಆಸ್ಪತ್ರೆಗಳಿಗೆ ಹೋಗಲಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪಸಭಾಪತಿಯವರು:–** ಮಾನ್ಯ ಶ್ರೀಕಂಠೇಗೌಡರೇ, ಶ್ರೀ ರಮೇಶ ಗೌಡರವರು ಮಾತನಾಡುವುದನ್ನು ಮುಂದುವರೆಸಲಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಅಲ್ಲಿ ನಮಗೆ ಆತಂಕವಿದೆ. ಆದರೆ ಅದನ್ನು ಬಿಟ್ಟು ಹಾಲಿ ಇರುವ ಕಡೆಗಳಲ್ಲಿಯೇ ಪುನಃ ಮಾಡಲು ಸರ್ಕಾರವು ಆಯವ್ಯಯದಲ್ಲಿ ಹಣವನ್ನು ಏಕೆ ಮೀಸಲಿಟ್ಟಿದೆ? ದೇವರ ಆಣೆ ನಮಗೆ ಅವರ ಮೇಲೆ ಅನುಮಾನವಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ ಗೌಡರವರು ಬಹಳ ಗಂಭೀರವಾದ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಇದರ ಬಗ್ಗೆ ಚರ್ಚಿಸಲು ನನಗೆ ಸಮಯಾವಕಾಶ ದೊರೆತಿಲ್ಲ. ಆದರೂ ಸಹ ನಾನು ಇದರ ಬಗ್ಗೆ ಪ್ರಸ್ತಾಪಿಸಿದ್ದೇನೆ. ರಾಜ್ಯದ 19 ಜಿಲ್ಲಾ ಆಸ್ಪತ್ರೆಗಳಿಗೆ 25 ಹಾಸಿಗೆ ಸಾಮರ್ಥ್ಯವುಳ್ಳ ತೀವ್ರ ನಿಗಾ ಘಟಕವನ್ನು ಸ್ಥಾಪಿಸಲಾಗುವುದು ಎಂದು 2021–22ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿದೆ. ಅದೇ ರೀತಿಯಾಗಿ ರಾಜ್ಯದ 100 ತಾಲ್ಲೂಕು ಕೇಂದ್ರಗಳಲ್ಲಿ ಆರು ಹಾಸಿಗೆ ಸಾಮರ್ಥ್ಯವುಳ್ಳ ತೀವ್ರ ನಿಗಾ ಘಟಕಗಳನ್ನು 60 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಾರ್ಯಗತಗೊಳಿಸಲಾಗುವುದು ಎಂದು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿದೆ. ಇದರಲ್ಲಿರುವ ವಿಷಯವೇನೆಂದರೆ, ...

**ಉಪಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ತಾವು ಒಂದೂವರೆ ಗಂಟೆಗಳ ಕಾಲ ಆಯವ್ಯಯದ ಮೇಲೆ ಮಾತನಾಡಿದ್ದೀರಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, already this establishment is done to all the District Hospitals. ಈ ವಿಚಾರದಲ್ಲಿ ನನಗೆ ತುಂಬಾ ಸಂತೋಷವಿದೆ.

**ಉಪಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ಶ್ರೀ ರಮೇಶ ಗೌಡರವರು ಮಾತನಾಡಲಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಅದೇ ಆಸ್ಪತ್ರೆಯ ಅದೇ ಹಾಸಿಗೆಯ ತೀವ್ರ ನಿಗಾ ಘಟಕಗಳನ್ನು ಸ್ಥಾಪಿಸಲು 60 ಕೋಟಿ ರೂಪಾಯಿಗಳನ್ನು ಸರ್ಕಾರವು ಖರ್ಚು ಮಾಡುತ್ತದೆಯೋ ಅಥವಾ ಇದು ಪ್ರತ್ಯೇಕವಾದ 60 ಕೋಟಿ ರೂಪಾಯಿಗಳೋ ಎನ್ನುವುದರ ಬಗ್ಗೆ ನಮಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಮಾನವಿದೆ. ನಾವು ಯಾರೂ ದುಡ್ಡು ಹೊಡೆಯುತ್ತಾರೆಂದು ಹೇಳಿಲ್ಲ. ಈ ಅಂಶವನ್ನು ಶ್ರೀ ರಮೇಶ ಗೌಡರವರು ಪ್ರಸ್ತಾಪಿಸಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಯಾವುದಾದರೂ ಹೊಸ ಘೋಷಣೆ ಮಾಡಿ, ಅದನ್ನು ಹಳೆಯ ವ್ಯವಸ್ಥೆಗೆ ಅಳವಡಿಸಿದರೆ ಬಿಲ್ ಮಾಡುವುದಕ್ಕಾಗುತ್ತದೆಯೇ?

**(ಗೊಂದಲ)**

**Sri S.L. BOJEGOWDA:-** When it is already established, is it necessary to show the same in this Budget.

**ಉಪಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ನೀವು ಮಾತನಾಡಬೇಡಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇದು ಎಲ್ಲಿಯಾದರೂ ಉಂಟೇ? ದಯಮಾಡಿ ಸರ್ಕಾರವು ಇದರ ಬಗ್ಗೆ ತಿಳಿಸಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಸದಸ್ಯರು ಕೇಳಬೇಕು. ಈ ಮೊದಲು ಆಸ್ಪತ್ರೆಗಳಲ್ಲಿ ವೆಂಟಿಲೇಟರ್ ಮತ್ತು ತೀವ್ರ ನಿಗಾ ಘಟಕಗಳು ತುಂಬಾ ಕಡಿಮೆ ಸಂಖ್ಯೆಯಲ್ಲಿದ್ದವು. ಕರೋನಾ ಕಾಯಿಲೆ ಬಂದ ತಕ್ಷಣ ಅದರ ಅವಶ್ಯಕತೆಗಳೇನು ಎನ್ನುವುದು ಸರ್ಕಾರಕ್ಕೆ ಮತ್ತು ಆಸ್ಪತ್ರೆಗಳಿಗೆ ಗೊತ್ತಾಯಿತು. ಹೀಗಾಗಿ ಹೊಸ ಆಯವ್ಯಯದಲ್ಲಿ ಇದಕ್ಕಾಗಿ ಸ್ವಲ್ಪ ಹಣವನ್ನು ಮೀಸಲಿಟ್ಟು, ಎಲ್ಲೆಲ್ಲಿ ವೆಂಟಿಲೇಟರ್ ಮತ್ತು ತೀವ್ರ ನಿಗಾ ಘಟಕಗಳಿಲ್ಲ, ಅಲ್ಲೆಲ್ಲಾ ಇವುಗಳನ್ನು ನಾವು ಅಳವಡಿಸುತ್ತೇವೆ ಎಂದರೆ, ಇದರಲ್ಲಿ ತಪ್ಪೇನಿದೆ? ಆದರೆ ಈ ಹಿಂದೆ ಅಳವಡಿಸಿದ್ದಕ್ಕೆ ನಾವು ಬಿಲ್ ಮಾಡುತ್ತೇವೆಂದು ಶ್ರೀ ಭೋಜೇಗೌಡರು ಪ್ರಸ್ತಾಪಿಸುತ್ತಿದ್ದಾರೆ. ಈ ರೀತಿಯಾಗಿ ಮಾಡುವುದಕ್ಕಾಗುತ್ತದೆಯೇ?

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಿಮ್ಮ ಕೆಲಸಗಳ ಬಗ್ಗೆ ನಮಗೆ ತುಂಬಾ ಸಂತೋಷವಿದೆ ಮತ್ತು ಅದನ್ನು ನಾವು ಶ್ಲಾಘಿಸುತ್ತೇವೆ. Almost all the hospitals in

"ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

the State are covered with more than 25 beds ಎಂದು ನಾನು ಹೇಳುತ್ತೇನೆ. ಆದರೆ ಇದಕ್ಕಾಗಿ ಹಣವನ್ನು ಏಕೆ ಮೀಸಲಿಡುತ್ತೀದ್ದಿರೆಂದು ನಾನು ಕೇಳುತ್ತಿದ್ದೇನೆ.

**ಉಪಸಭಾಪತಿಯವರು:–** ಶ್ರೀ ರಮೇಶ ಗೌಡರವರೇ ನೀವು ಮಾತನಾಡಿ, yield ಆಗಬೇಡಿ.

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಜೆ.ಡಿ.ಎಸ್.ಪಕ್ಷದ ಇತರೆ ಮಾನ್ಯ ಸದಸ್ಯರುಗಳು ಶ್ರೀ ರಮೇಶ ಗೌಡರವರನ್ನು ವಹಿಸಿಕೊಂಡು ಮಾತನಾಡುತ್ತಿರುವುದು ಬಹಳ ಖುಷಿಯಾಗಿದೆ. ಆದರೆ, ಶ್ರೀ ರಮೇಶ ಗೌಡರವರು ಒಳ್ಳೆಯ ವಿಚಾರವನ್ನಿಟ್ಟುಕೊಂಡು ಮಾತನಾಡುತ್ತಿರುವುದನ್ನು ಇಡೀ ರಾಜ್ಯದ ಜನತೆ ನೋಡುತ್ತಿದ್ದಾರೆ. ಆದರೆ, ಅವರು ಬಳಸುವ ಶಬ್ದ ಮತ್ತು ಭಾಷೆ ಸರಿಯಾದುದಲ್ಲ. ಆ ಪೈಕಿ ಅವರು '10,000 ಹಾಸಿಗೆ ಹಾಕಿರುವವರ ಬಗ್ಗೆ ಪತ್ರಕರ್ತರು ಮೂಲೆಯಲ್ಲಿ ನಿಂತುಕೊಂಡು ಕ್ಯಾಕರಿಸಿ ಮುಖಕ್ಕೆ ಉಗಿಯುತ್ತಿದ್ದಾರೆ' ಎಂದು ಹೇಳಿದ್ದಾರೆ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಸದಸ್ಯರು ಕೇಳಲಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಶ್ರೀ ರಮೇಶ ಗೌಡರವರದ್ದು ಬಿಸಿ ರಕ್ತ, ಹೀಗಾಗಿ ಅದನ್ನು ಬದಲಾಯಿಸಿಕೊಳ್ಳಬೇಕು.

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಿಸಿ ರಕ್ತವನ್ನು ಬದಲಾಯಿಸಿಕೊಳ್ಳಬೇಕೇ? ಅವರಿಗೆ ಎಷ್ಟು ವರ್ಷವಾಗಿದೆ? ಅವರಿಗೆ ಮೂರು ಮಕ್ಕಳಾಗಿವೆ. ಮಾನ್ಯ ಸದಸ್ಯರು ಚೆನ್ನಾಗಿ ಮಾತನಾಡುತ್ತಿದ್ದಾರೆ; ಆದರೆ ಅವರು ಭಾಷೆಯ ಮೇಲೆ ಹಿಡಿತವನ್ನಿಟ್ಟುಕೊಳ್ಳಬೇಕು. ಅವರಿಗೆ ಒಳ್ಳೆಯದಾಗಬೇಕೆಂದು ನಾವು ಹೇಳುತ್ತೇವೆ.

**ಉಪಸಭಾಪತಿಯವರು:–** ಮಾನ್ಯ ರಮೇಶ ಗೌಡರವರೇ, ನೀವು ಮಾತನಾಡುವುದನ್ನು ಮುಂದುವರೆಸಿ.

**ಶ್ರೀ ಹೆಚ್.ಎಂ.ರಮೇಶ ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಇಲ್ಲಿ ಅಸಂಸದೀಯ ಶಬ್ದಗಳ ಬಳಕೆ ಮಾಡಿಲ್ಲ. ಇದು ಸದಸ್ಯರಿಗೆ ಅರ್ಥವಾಯಿತಲ್ಲವೇ? ಈ ಮಾತನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾನು ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮರವರು ಹೇಳಿದ್ದಕ್ಕಾಗಿ ಹೇಳುತ್ತಿದ್ದೇನೆ. I will agree, ತಪ್ಪಾಗಿದ್ದರೆ ನಾವು ಅದನ್ನು ತಿದ್ದಿಕೊಳ್ಳೋಣ. ಇದರಲ್ಲಿ ಯಾವುದೇ ತೊಂದರೆ ಇಲ್ಲ. ಆದರೆ, ಮಾನ್ಯ ಸಭಾನಾಯಕರು ಸಮಯದ ಬಗ್ಗೆ ಹೇಳುತ್ತಿದ್ದರು. ಇದರ ಬಗ್ಗೆ ನಾನು ಈ ಹಿಂದೆಯೂ ಸಹ ಪ್ರಸ್ತಾಪಿಸಿದ್ದೇನೆ. ನಾನು ಆಯವ್ಯಯದ ಮೇಲೆ ಮಾತನಾಡುತ್ತಿರುವ ಸಂದರ್ಭದಲ್ಲಿ ಸಭಾನಾಯಕರು ಪ್ರಸ್ತಾಪ ಮಾಡಿದರು. ಈ ಹಿಂದೆ ಸಮ್ಮಿಶ್ರ ಸರ್ಕಾರವು ಅಸ್ತಿತ್ವದಲ್ಲಿದ್ದಾಗ, ಅವರು ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗ ..., ಅವರು ಅವರ ಬೆನ್ನಿನ ಹಿಂದೆ ಸ್ವಲ್ಪ ನೋಡಿಕೊಳ್ಳಬೇಕು. ಅವರು ಈ ಹಿಂದೆ ಒಂದೇ ಒಂದು ದಿನವೂ ಸದನ ನಡೆಯುವುದಕ್ಕೆ ಬಿಡಲಿಲ್ಲ. ಈ ಹಿಂದೆ ಅವರು 14 ತಿಂಗಳುಗಳ ಕಾಲ ಸದನವನ್ನು ನಡೆಯುವುದಕ್ಕೆ ಬಿಡಲಿಲ್ಲ. ಆದರೆ ಇವತ್ತಿನ ದಿವಸ ಅವರು ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಿರ್ದಿಷ್ಟ ವಿಚಾರದ ಮೇಲೆ ನಮ್ಮ ಪಕ್ಷದ ನಿಲುವನ್ನು ನಾವು ವ್ಯಕ್ತಪಡಿಸಿದ್ದೇವೆ; ಇಲ್ಲವೆಂದು ಹೇಳಿಲ್ಲ. ಆದರೆ, ಆಯವ್ಯಯದ ಮೇಲೆ ಚರ್ಚೆ ಮಾಡುವಾಗ ಶ್ರೀ ರಮೇಶ ಗೌಡರವರು...

**ಶ್ರೀ ಹೆಚ್.ಎಂ.ರಮೇಶ ಗೌಡ:-** ಮಾನ್ಯ ಸಭಾಪತಿಯವರೇ, ನಾನು ಆಯವ್ಯಯದ ಮೇಲೆಯೇ ಚರ್ಚೆಯನ್ನು ಮಾಡುತ್ತಿದ್ದೇನೆ. ಅದನ್ನು ಬಿಟ್ಟು ಬೇರೆ ವಿಷಯದ ಮೇಲೆ ಮಾತನಾಡಿಲ್ಲ. ಅಲ್ಲಿನ ಮೊದಲನೆ ಪುಟದಿಂದ ಕೊನೆಯ ಪುಟದವರೆಗೆ ಕೋವಿಡ್ ...

**ಉಪಸಭಾಪತಿಯವರು:-** ಶ್ರೀ ರಮೇಶ್‌ಗೌಡರವರೇ, ನೀವು ಸಭಾನಾಯಕರ ಹೆಸರನ್ನು ಹೇಳಿದ್ದಕ್ಕೆ ಅವರು ಎದ್ದು ನಿಂತು ಮಾತನಾಡಿದರು. ಆದ್ದರಿಂದ ನೀವು ಪೀಠವನ್ನು ನೋಡಿಕೊಂಡು ಮಾತನಾಡಿ. ನೀವು ಪ್ರತಿಯೊಬ್ಬರ ಹೆಸರನ್ನು ಹೇಳಿದರೆ, ಅವರುಗಳು ಅದಕ್ಕೆ ಉತ್ತರಿಸಲು ಎದ್ದು ನಿಂತುಕೊಳ್ಳುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ಹಿಂದೆ ನಾವು ಸದನವನ್ನು ನಡೆಯುವುದಕ್ಕೆ ಬಿಡಲಿಲ್ಲ ಎಂಬುದಾಗಿ ಶ್ರೀ ರಮೇಶ ಗೌಡರವರು ಹೇಳಿದರು. ವಿರೋಧ ಪಕ್ಷಗಳಿಗೆ ಅವರದ್ದೇ ಆದ ಕೆಲವು ಜವಾಬ್ದಾರಿಗಳಿರುತ್ತವೆ.

**ಶ್ರೀ ಹೆಚ್.ಎಂ.ರಮೇಶ ಗೌಡ:-** ಮಾನ್ಯ ಸಭಾಪತಿಯವರೇ, ಹಾಗಾದರೆ, ನಾವೂ ಸಹ ಪ್ರತಿದಿನವೂ ಬಂದು ಗಲಾಟೆ ಮಾಡಬಹುದೇ? ನೀವು ಮಾತ್ರ ಗಲಾಟೆ ಮಾಡಬಹುದೇ?

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಾನು ಹೇಳುವುದನ್ನು ಕೇಳಬೇಕು. ಅವರು ಯಾವುದೋ ಒಂದು ವಿಚಾರದ ಬಗ್ಗೆ ಒತ್ತಾಯ ಮಾಡುತ್ತಾರೆ; ಮತ್ತಾವುದೋ ವಿಚಾರದ ಬಗ್ಗೆ ಧರಣಿ ಮಾಡುತ್ತಾರೆ. ಅಂದರೆ, ಸದನ ನಡೆಸುವುದಕ್ಕೆ ಬಿಡಲಿಲ್ಲವೆಂಬ ಅರ್ಥವಲ್ಲ. ಅವರ ವಿಚಾರದ ಬಗ್ಗೆ ಅವರು ಒತ್ತಾಯ ಮಾಡಿದ್ದಾರೆ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಅವರು ಒಂದಲ್ಲ; ಈ ರೀತಿಯಾಗಿ ನೂರು ಬಾರಿ ಮಾಡಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಹೌದು, ವಿರೋಧ ಪಕ್ಷದ ನಾಯಕನಾಗಿ ನಾನು ಮಾಡಬೇಕಾದ ಅವಶ್ಯಕತೆಗಳಿರುತ್ತವೆ. ಮಾನ್ಯ ರಮೇಶ ಗೌಡರು ಈಗ ಆಯವ್ಯಯದ ಮೇಲೆ ಮಾತನಾಡಲಿ.

**ಉಪಸಭಾಪತಿಯವರು:–** ಶ್ರೀ ರಮೇಶ ಗೌಡರವರೇ, ದಯಮಾಡಿ ಆಯವ್ಯಯದ ಮೇಲೆ ಮಾತನಾಡಿ. ನೀವು ಯಾರ ಹೆಸರನ್ನೂ ಉಲ್ಲೇಖಿಸದೇ ನೇರವಾಗಿ ಮಾತನಾಡಿ. ಹೀಗೆ ಮಾಡುವುದರಿಂದ ನಿಮ್ಮ ಸಮಯವು ಹೋಗುತ್ತಿದೆ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಆಯವ್ಯಯವನ್ನು ಯಾವ ಕಾರಣಕ್ಕಾಗಿ ಮಂಡಿಸುತ್ತಾರೆ? ರಾಜ್ಯವು ಅಭಿವೃದ್ಧಿಯಾಗಬೇಕು ಮತ್ತು ರಾಜ್ಯದಲ್ಲಿ ಉದ್ಯೋಗ ಸೃಷ್ಟಿಯಾಗಬೇಕು ಎನ್ನುವ ಉದ್ದೇಶದಿಂದ ಆಯವ್ಯಯದ ಮಂಡನೆಯಾಗುತ್ತದೆ. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ನಿರುದ್ಯೋಗವು ತಾಂಡವವಾಡುತ್ತಿದೆ ಎಂದು ಹೇಳಲಿಚ್ಛಿಸುತ್ತೇನೆ. ಇವತ್ತಿನ ದಿವಸ ಕೆ.ಪಿ.ಎಸ್.ಸಿ.ಯಲ್ಲಿ 5,000 ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿದರೆ, ಐದು ಲಕ್ಷ ಅರ್ಜಿಗಳು ಬರುತ್ತವೆ. ಕೆ.ಪಿ.ಎಸ್.ಸಿ.ಯಲ್ಲಿ ಯಾವ ರೀತಿಯಾಗಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ? ಇವತ್ತಿನ ದಿವಸ ಅಲ್ಲಿ ಜಾತಿ ಮತ್ತು ಹಣದ ಆಧಾರದ ಮೇಲೆ ಅಭ್ಯರ್ಥಿಗಳು ಆಯ್ಕೆಗೊಂಡು, ಹುದ್ದೆಗಳು ಭರ್ತಿಯಾಗುತ್ತವೆ. ಈ ರಾಜ್ಯದಲ್ಲಿ ಮತ್ತು ದೇಶದಲ್ಲಿ ನಮ್ಮ ಪಕ್ಷದೇ ಸರ್ಕಾರವು ಆಡಳಿತದಲ್ಲಿದ್ದರೆ, ಈ ರಾಜ್ಯವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವುದಾಗಿ ಮತ್ತು ರಾಜ್ಯವನ್ನು ಚಿನ್ನವನ್ನಾಗಿ ಮಾಡುತ್ತೇವೆ ಎಂಬುದಾಗಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಹೇಳುತ್ತಿದ್ದರು. ಅವರುಗಳು ‘ಅಚ್ಛೇ ದಿನ್’ ಎಂಬುದಾಗಿ ಹೇಳುತ್ತಿದ್ದರು.

“ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಆದರೆ ನಮಗೆಲ್ಲರಿಗೂ ತಿಳಿದಿರುವಂತೆ, ಈ ಹಿಂದೆ ನಮ್ಮ ರಾಜ್ಯದ ಒಂದೂರಿನಲ್ಲಿ ಒಬ್ಬರು ಅಥವಾ ಇಬ್ಬರು ಇಂಜಿನಿಯರ್‌ಗಳಿರುತ್ತಿದ್ದರು. ಹತ್ತು ಊರಿನ ಹಳ್ಳಿಗಳಲ್ಲಿ ಒಬ್ಬ ಡಾಕ್ಟರು ಇರುತ್ತಿದ್ದರು. ಆಗ ಅಲ್ಲಿನವರು 'ಆ ಮನೆಯಲ್ಲಿ ಎಂ.ಬಿ.ಬಿ.ಎಸ್. ಮಾಡಿದ ಡಾಕ್ಟರು ಇದ್ದಾರೆ' 'ಅವರ ಮಗ ಇಂಜಿನಿಯರ್ ಮಾಡಿದ್ದಾನೆ' ಎಂಬುದಾಗಿ ಹೇಳುತ್ತಿದ್ದರು. ಆದರೆ, ಇವತ್ತಿನ ದಿವಸ ಒಂದೊಂದು ಮನೆಯಲ್ಲಿ ಒಬ್ಬೊಬ್ಬ ಇಂಜಿನಿಯರ್‌ಗಳಿದ್ದಾರೆ. ಗ್ರಾಮೀಣ ಭಾಗದಲ್ಲಿನ ಒಂದೊಂದು ಹಳ್ಳಿಯಲ್ಲಿ ಎಂ.ಬಿ.ಬಿ.ಎಸ್. ಮಾಡಿದ 20 ಡಾಕ್ಟರುಗಳಿದ್ದಾರೆ. ಇವರುಗಳಿಗೆಲ್ಲಾ ಸರ್ಕಾರವು ಎಲ್ಲಿಂದ ಉದ್ಯೋಗವನ್ನು ನೀಡುತ್ತದೆ ಮತ್ತು ಹೇಗೆ ಉದ್ಯೋಗವನ್ನು ಸೃಷ್ಟಿ ಮಾಡುತ್ತದೆ? ಆದರೆ ಪ್ರಸಕ್ತ ಮಂಡಿಸಿರುವ ಆಯವ್ಯಯದಲ್ಲಿ ಇಂಜಿನಿಯರ್ ಮತ್ತು ಪದವೀಧರರ ಬಗ್ಗೆ ಚಕಾರವನ್ನು ಎತ್ತಲಾಗಿದೆಯೇ? ಇದರಲ್ಲಿ ಉದ್ಯೋಗ ಸೃಷ್ಟಿಯ ಬಗ್ಗೆ ಉಲ್ಲೇಖಿಸಲಾಗಿದೆಯೇ? ಈ ಕಾರಣಗಳಿಂದಾಗಿ ನಮ್ಮ ರಾಜ್ಯದಲ್ಲಿ ನಿರುದ್ಯೋಗವು ತಾಂಡವಾಡುತ್ತಿದೆ ಎಂದು ನಾನು ಹೇಳುತ್ತಿದ್ದೇನೆ. ಇದರಿಂದಾಗಿ ರಾಜ್ಯದಲ್ಲಿ ಕ್ರೈಂ ರೇಟ್‌ಗಳು ಜಾಸ್ತಿಯಾಗುತ್ತಿವೆ.

ಸರ್ಕಾರವು ಮಾತು ಎತ್ತಿದರೆ, ಕಳೆದೆರಡು ವರ್ಷಗಳಿಂದ ಕೋವಿಡ್ ಎಂದು ಹೇಳುತ್ತಿದೆ. ಈ ವಿಚಾರವನ್ನು ನಾನು ಯಾವ ಕಾರಣಕ್ಕಾಗಿ ಪ್ರಸ್ತಾಪಿಸುತ್ತಿದ್ದೇನೆ ಎಂದರೆ, ಈಗಾಗಲೇ ಕೋವಿಡ್‌ನ ಎರಡನೇ ಅಲೆಯು ಪ್ರಾರಂಭವಾಗಿದೆ. ಈ ಕಾರಣಕ್ಕಾಗಿ ನಾನು ಟ್ಯಾಕ್ಸಿ, ಟಿ.ಟಿ. ಮತ್ತು ಆಂಬ್ಯುಲೆನ್ಸ್‌ಗಳ ಬಗ್ಗೆ ನಾನು ಮಾತನಾಡಿದ್ದೇನೆ. ಬಿ.ಬಿ.ಎಂ.ಪಿ.ಯವರು ಟ್ಯಾಕ್ಸಿ, ಟಿ.ಟಿ. ಮತ್ತು ಆಂಬ್ಯುಲೆನ್ಸ್ ಅಂದರೆ ಒಟ್ಟಾರೆಯಾಗಿ 500 ವಾಹನಗಳ ಅವಶ್ಯಕತೆ ಪುನಃ ಇದೆ ಎಂದು ಹೇಳುತ್ತಿದ್ದಾರೆ. ಆದರೆ, ಸದರಿ ವಾಹನದವರು ತಾವು ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಚಾಲಕ ಮತ್ತು ಮಾಲೀಕರ ಪರಿಸ್ಥಿತಿ ಹೇಗಿದೆ ಎಂದರೆ..., ನನಗೆ ತಿಳಿದ ಮಾಲೀಕರೊಬ್ಬರು 10 ಟ್ಯಾಕ್ಸಿಗಳನ್ನು ಪಾಲಿಕೆಗೆ ನೀಡಿದ್ದಾರೆ. ಆ ವಾಹನಗಳ ಚಾಲಕರು ತಮಗೆ ಸಂಬಳವನ್ನು ನೀಡಿಲ್ಲವೆಂದು ಟ್ಯಾಕ್ಸಿ ಮಾಲೀಕರಿಗೆ ಅವರ ವಾಹನಗಳನ್ನು ಹಿಂದಿರುಗಿಸದೇ, ಅವರುಗಳ ಮನೆಯ ಹತ್ತಿರ ತೆಗೆದುಕೊಂಡು ಹೋಗಿ ನಿಲ್ಲಿಸಿಕೊಂಡಿದ್ದಾರೆ. ಇದರಿಂದಾಗಿ ಚಾಲಕರುಗಳು ಕಣ್ಣೀರಲ್ಲಿ ಕೈತೊಳೆಯುತ್ತಾ, ಕಣ್ಣಲ್ಲಿ ನೀರನ್ನು ಸುರಿಸುತ್ತಿದ್ದಾರೆ. ಇವರುಗಳ ಸಮಸ್ಯೆಯನ್ನು ಸರ್ಕಾರವು ಬಗೆಹರಿಸಬೇಕು.

ಬಿ.ಬಿ.ಎಂ.ಪಿ.ಯಲ್ಲಿಯೂ ಸಹ ಹತ್ತು ಸಾವಿರ ಕೋಟಿ ರೂಪಾಯಿಗಳ ಗಾತ್ರದಷ್ಟು ಆಯವ್ಯಯವನ್ನು ಮಂಡಿಸುತ್ತಾರೆ. ಆದರೆ ಇವತ್ತಿನ ದಿವಸದವರೆಗೂ ಸಹ ಪಾಲಿಕೆಯವರು ತಮಗೆ ತೆರಿಗೆ ಸಂಗ್ರಹವಾಗುವುದಿಲ್ಲವೆಂದು ತಿಳಿಸುತ್ತಿದ್ದಾರೆ. ಇದಕ್ಕೆ ಕಾರಣವೇನೆಂದರೆ, 2003ನೇ ಇಸವಿಯಲ್ಲಿ 'ಬೆಟರ್‌ಮೆಂಟ್ ತೆರಿಗೆ'ಯನ್ನು ಸ್ಥಗಿತಗೊಳಿಸಿದರು. ಇದಾದ ನಂತರ ಎಷ್ಟೋ ಸರ್ಕಾರಗಳು ಆಡಳಿತವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆಸಿವೆ; ಆದರೆ ಯಾರಿಗೂ ಸಹ ಸದರಿ ತೆರಿಗೆಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲವೇ? 2003ನೇ ಸಾಲಿನಲ್ಲಿ ಆ ಕಾಯ್ದೆಗೆ ಸಣ್ಣ ತಿದ್ದುಪಡಿಯನ್ನು ಮಾಡುವುದರ ಮೂಲಕ ಸದರಿ ತೆರಿಗೆಯನ್ನು ಸ್ಥಗಿತಗೊಳಿಸಿದರು. ಬೆಂಗಳೂರು ನಗರದಲ್ಲಿ ಬೆಟರ್‌ಮೆಂಟ್ ತೆರಿಗೆಯನ್ನು ಪಾವತಿಸಿಲ್ಲವೆಂದರೆ, ಸ್ವತ್ತಿನ ಖಾತೆ ಆಗುವುದಿಲ್ಲ. ಖಾತೆ ಆಗುವುದಿಲ್ಲವೆಂದಾದರೆ, ಮನೆಯ ನಕ್ಷೆಯನ್ನು ಅನುಮೋದಿಸುವುದಿಲ್ಲ. ಈ ರೀತಿಯ ವ್ಯವಸ್ಥೆಗಳಾದಾಗ, ಮನೆ ಕಟ್ಟುವವರು ಎಲ್ಲಿಗೆ ಹೋಗುತ್ತಾರೆ? ಅವರುಗಳೆಲ್ಲರೂ ನೇಣು ಹಾಕಿಕೊಳ್ಳಬೇಕೆ? ಇದು ಸರ್ಕಾರದ ಜವಾಬ್ದಾರಿಯಲ್ಲವೇ? ಸರ್ಕಾರಕ್ಕೆ ಇದರ ಬಗ್ಗೆ ಅರಿವಿಲ್ಲವೇ? ಬೆಂಗಳೂರಿನ ಜನರು ಏನು ಮಾಡುತ್ತಾರೆ? ಇದನ್ನು 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ' ಎಂಬುದಾಗಿ ಮರುನಾಮಕರಣ ಮಾಡಿದರು. ಇದುವರೆವಿಗೂ ಸಹ ಪಾಲಿಕೆಯು 'ಬೆಟರ್‌ಮೆಂಟ್ ತೆರಿಗೆ'ಯನ್ನು ಸಂಗ್ರಹಿಸುತ್ತಿಲ್ಲ. ಇದನ್ನು ಪುನಃ ಸಂಗ್ರಹಿಸಲು ಪ್ರಾರಂಭಿಸಿದರೆ, ಲಕ್ಷಾಂತರ ಜನರು ತೆರಿಗೆ ಪಾವತಿಸುತ್ತಾರೆ ಮತ್ತು ಸಾವಿರಾರು ಕೋಟಿ ರೂಪಾಯಿಗಳಷ್ಟು ಹಣ ಇವತ್ತಿನ ದಿವಸ ತೆರಿಗೆಯ ರೂಪದಲ್ಲಿ ಬಂದು, ಪಾಲಿಕೆಯ ಬೊಕ್ಕಸವು ತುಂಬುತ್ತದೆ. ಇವತ್ತಿನ ದಿವಸ ಪಾಲಿಕೆಯಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಸಂಬಳವನ್ನು ನೀಡಲು ಅಲ್ಲಿ ಹಣವಿಲ್ಲ. ಪ್ರಸ್ತುತ ಉಪಮುಖ್ಯಮಂತ್ರಿಗಳು ಸದನದಲ್ಲಿ ಉಪಸ್ಥಿತರಿದ್ದಾರೆ. ಅವರು ಈ ಹಿಂದೆ ಕಾರ್ಯಕ್ರಮವೊಂದಕ್ಕೆ ಹೋದಾಗ ಹೇಳುತ್ತಿದ್ದರು. ಅವರು ಇವತ್ತೂ ಸಹ ಹೇಳಿಕೆಯೊಂದನ್ನು ನೀಡಿದ್ದಾರೆ.

**(ಮುಂದು)**

**(550)/22-3-2021/5-00/ಎಚ್‌ಎಂ/ಬಿಎನ್‌ಎಸ್**

**ಶ್ರೀ ಎಚ್.ಎಂ.ರಮೇಶ್ ಗೌಡ**(ಮುಂದು):-

ಮಾನ್ಯ ಉಪ ಮುಖ್ಯಮಂತ್ರಿಗಳಾದ ಸಾರಿಗೆ ಸಚಿವರು ನಿನ್ನೆ ಕೆಎಸ್‌ಆರ್‌ಟಿಸಿ ಯ ಒಂದು ಸಮಾರಂಭದಲ್ಲಿ, ಸಾರಿಗೆ ನೌಕರರಿಗೆ ಏಕೆ ನಮ್ಮ ಮೇಲೆ ಇಷ್ಟು ಕೋಪ, ಮತ್ತೆ ಧರಣಿ ಮಾಡುತ್ತೇವೆ ಎಂದು ಹೇಳುತ್ತೀರಿ, ಆ ರೀತಿ ಮಾಡಬೇಡಿ, ಹಾಗೆ ಮಾಡಿದರೆ ಸಾರಿಗೆ ಸಂಸ್ಥೆ ಸರ್ವನಾಶವಾಗುತ್ತದೆ ಎಂದು ಹೇಳಿದ್ದಾರೆ. ಇದನ್ನು ಅವರು ಕಾಳಜಿಯಿಂದ ಹೇಳಿದ್ದಾರೆ. ಏಕೆ ಹೀಗಾಗುತ್ತಿದೆ ಎನ್ನುವುದನ್ನು ಯೋಚನೆ ಮಾಡಬೇಕು. ಈಗಾಗಲೇ ಸಾರಿಗೆಯವರಿಗೆ 1800 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಎಲ್ಲಿಂದ ಬಂತು ಈ ಹಣ? ರಾಜ್ಯದ ಬೊಕ್ಕಸದ ಹಣ, ಜನರು ಕಟ್ಟಿರುವ ತೆರಿಗೆ ಹಣ ಇದು. ಒಂದು ಯೋಜನೆಯ ಹಣವನ್ನು ಇನ್ನೊಂದು ಯೋಜನೆಗೆ, ಇನ್ನೊಂದು ಯೋಜನೆಯ ಹಣವನ್ನು ಇನ್ನಾವುದಕ್ಕೊ ಕೊಡುತ್ತಾರೆ.. ಯಾವುದಕ್ಕೆ ಹಣ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಲಿ ಅದು ರಾಜ್ಯದ ಜನರು ಕಟ್ಟಿದ ತೆರಿಗೆಯ ಹಣ. ಅದನ್ನು ಸರಿಯಾಗಿ ವಿನಿಯೋಗ ಮಾಡಬೇಕಾಗಿರುವುದು ಸರ್ಕಾರದ ಜವಾಬ್ದಾರಿ.

ಇನ್ನು ಕೆ.ಪಿ.ಎಸ್.ಸಿ. ವಿಚಾರದಲ್ಲಿ ಹೇಳಬೇಕು ಎಂದರೆ, ಸರೋಜಿನಿ ಮಹಿಷಿ ವರದಿಯನ್ನು ಅನುಷ್ಠಾನಕ್ಕೆ ತರಬೇಕೆಂದು ನಾನು ಆಗ್ರಹ ಮಾಡುತ್ತೇನೆ. ಖಾಸಗಿ ಕ್ಷೇತ್ರದಲ್ಲಿಯು ಉದ್ಯೋಗವನ್ನು ಕೊಡಬೇಕೆಂದು ಸರೋಜಿನಿ ಮಹಿಷಿ ವರದಿಯಲ್ಲಿದೆ. ಆದರೆ ಅದು ಇದುವರೆಗೂ ಇಂಪ್ಲಿಮೆಂಟ್ ಆಗಿಲ್ಲ. ಇವತ್ತು ನಮ್ಮ ಕನ್ನಡಿಗರ ಪರಿಸ್ಥಿತಿ ಏನಾಗಿದೆ ನೋಡಿ, ರೈಲ್ವೇ ಇಲಾಖೆಯಲ್ಲಿ, ಮೆಟ್ರೋದಲ್ಲಿ ಯಾರ್ಯಾರೋ ಬಂದಿದ್ದಾರೆ. ನಮ್ಮವರು ಇಲ್ಲವೆ ಇಲ್ಲ. ಇವತ್ತು ಬ್ಯಾಂಕ್‌ಗಳಲ್ಲಿ ಪರಿಸ್ಥಿತಿ ಯಾವ ರೀತಿ ಇದೆ ಎನ್ನುವ ವಿಚಾರವನ್ನು ಇನ್ನೊಂದು ದಿನ ಚರ್ಚೆಗೆ ತರುತ್ತೇನೆ. ಇಂದಿರಾ ನಗರದ ಸಿಎಂಎಚ್ ರಸ್ತೆಯಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್ ಇದೆ. ಖಾಸಗಿ ಹಣಕಾಸು ಸಂಸ್ಥೆಗಳಾವವು ಆರ್‌ಬಿಐ ಗೈಡ್‌ಲೈನ್ಸ್ ಫಾಲೋ ಮಾಡುತ್ತಿಲ್ಲ. ಈ ರಾಜ್ಯದಲ್ಲಿ 7–8 ವರ್ಷಗಳಿಂದ ಒಬ್ಬರೆ ಒಬ್ಬರು ಶ್ರೀ ಐ.ಎಸ್.ಎನ್.ಎಸ್. ಪ್ರಸಾದ್ ಎನ್ನುವವರು ಹಣಕಾಸು ಕಾರ್ಯದರ್ಶಿಯಾಗಿದ್ದಾರೆ. ಅವರೇ ಬಹಳ ಉತ್ತಮವಾದ ಅಧಿಕಾರಿ ಅವರನ್ನು ಬಿಟ್ಟರೆ ಈ ರಾಜ್ಯದಲ್ಲಿ ಆ ಖಾತೆಯನ್ನು ನಿರ್ವಹಣೆ ಮಾಡುವ ಯಾವ ಐಎಎಸ್ ಅಧಿಕಾರಿ ಇಲ್ಲ ಎನ್ನುವ ರೀತಿಯಲ್ಲಿ ಯಾವುದೇ ಸರ್ಕಾರ ಬರಲಿ ಅವರನ್ನೇ ಇಟ್ಟುಕೊಂಡಿದ್ದಾರೆ. ಮಾನ್ಯ ಸಿದ್ದರಾಮಯ್ಯನವರ ಸರ್ಕಾರದಲ್ಲಿ, ಮಾನ್ಯ ಎಚ್.ಡಿ.ಕುಮಾರಸ್ವಾಮಿಯವರ ಸರ್ಕಾರದಲ್ಲಿ ಮತ್ತು ಈಗ ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಸರ್ಕಾರದಲ್ಲಿಯು ಆ ಅಧಿಕಾರಿಯೇ ಇದ್ದಾರೆ. ಬ್ಯಾಂಕ್‌ಗಳು ಯಾವ ರೀತಿ ಕಾರ್ಯನಿರ್ವಹಿಸುತ್ತಿವೆ ಎಂದರೆ, ಒಬ್ಬ ಶಕ್ತಿ ಇರುವ ಶಾಸಕರು ಸಾಲ ತೆಗೆದುಕೊಳ್ಳಲು ಹೋದರೆ ಒಂದು ಅರ್ಜಿಗೆ ಸಹಿ ಹಾಕಿದರೆ ಸಾಕು, 6 ತಿಂಗಳಿಗಾಗಿಯಾದರೂ ತೆಗೆದುಕೊಳ್ಳಿ ಅಥವಾ ಒಂದು ವರ್ಷಕ್ಕಾದರೂ ತೆಗೆದುಕೊಳ್ಳಿ ನಡೆಯುತ್ತದೆ. ಆದರೆ ಸಾಲವನ್ನು ತೀರಿಸುತ್ತೇವೆ ಎಂದು ಹೋದರೆ ನೀವು ಅರ್ಜಿಯನ್ನು ಕೊಡಿ ಅದು ಅಪ್ರೂವಲ್ ಆಗಬೇಕಾದರೆ ಒಂದು ತಿಂಗಳು ಬೇಕಾಗುತ್ತದೆ. ಅಪ್ರೂವಲ್ ತೆಗೆದುಕೊಂಡ ನಂತರ ನೀವು ಹಣ ಕಟ್ಟಿ ಎಂದು ಹೇಳುತ್ತಾರೆ. ಕೋಟಿಗಟ್ಟಲೆ ಬ್ಯಾಂಕ್‌ನ ಹಣವನ್ನು ದರೋಡೆ ಮಾಡಿಕೊಂಡು ಹೋಗುತ್ತಿರುವ ಕಳ್ಳರಿಗೆ ಬ್ಯಾಂಕ್‌ಗೆ ಕರೆಯಿಸಿ settlement ಮಾಡಿಕೊಂಡಿರುತ್ತಾರೆ. NPA ಯಾದರೆ ಬರಿ 10% ಅಥವಾ 20% ಗೆ settlement ಮಾಡಿಕೊಳ್ಳುತ್ತಾರೆ. ಇಂತಹ ಪರಿಸ್ಥಿತಿ ಇವತ್ತು ನಮ್ಮ ಬ್ಯಾಂಕ್‌ಗಳಲ್ಲಿ ಇದೆ.

ದೇಶದಲ್ಲಿ ಪ್ರತಿಯೊಬ್ಬರಿಗೂ ಬ್ಯಾಂಕ್ ಅಕೌಂಟ್ ಇರಬೇಕು ಎಂದು ಮಾನ್ಯ ಪ್ರಧಾನಮಂತ್ರಿಗಳು ಹೇಳಿದ್ದಾರೆ. ನಾವೇ 15 ಲಕ್ಷ ರೂ.ಗಳನ್ನು ಜನರ ಖಾತೆಗೆ ಹಾಕುತ್ತೇವೆ ಎಂದು ಕೂಡಾ ಹೇಳಿದರು. ಆದರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

15 ರೂ.ಗಳನ್ನು ಹಾಕಲಿಲ್ಲ, 15ಪೈಸೆ ಕೂಡಾ ಹಾಕಲಿಲ್ಲ. ರೈತರಿಗೆ 2000 ರೂ.ಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಅಷ್ಟಕ್ಕೆ ನಮ್ಮ ರೈತರು ತೃಪ್ತಿಪಟ್ಟುಕೊಳ್ಳಬೇಕು. ಇಂತಹ ಪರಿಸ್ಥಿತಿ ಇವತ್ತು ನಮ್ಮ ದೇಶದಲ್ಲಿ ಇದೆ.

**ಶ್ರೀ ಬಿ.ಸಿ.ಪಾಟೀಲ್(ಕೃಷಿ ಸಚಿವರು):-** ಮಾನ್ಯ ಸಭಾಪತಿಗಳೆ, 6000 ರೂ.ಗಳನ್ನು ಕೇಂದ್ರ ಸರ್ಕಾರ ಕೊಡುತ್ತದೆ, 4000 ರೂಪಾಯಿಗಳನ್ನು ಕರ್ನಾಟಕ ಸರ್ಕಾರ ಕೊಡುತ್ತದೆ. ಒಟ್ಟು 10,000 ರೂ.ಗಳನ್ನು ರೈತರಿಗೆ ಕೊಡುತ್ತಿದ್ದೇವೆ.

**ಶ್ರೀ ಎಚ್.ಎಂ.ರಮೇಶ್ ಗೌಡ:-** ಮಾನ್ಯ ಸಭಾಪತಿಗಳೆ, 6000 ರೂಪಾಯಿಗಳನ್ನು ಕೊಟ್ಟರೆ ಸಾಕಾಗುತ್ತದೆಯೇ? 10,000 ರೂ.ಗಳನ್ನು ಎಷ್ಟು percent ಗೆ ಕೊಟ್ಟಿದ್ದೀರಿ?

**ಶ್ರೀ ಬಿ.ಸಿ.ಪಾಟೀಲ್:-** ಅದರ ಪಟ್ಟಿಯನ್ನು ಕೊಡುತ್ತೇನೆ.

**ಶ್ರೀ ಎಚ್.ಎಂ.ರಮೇಶ್ ಗೌಡ:-** ಮಾನ್ಯ ಸಭಾಪತಿಗಳೆ, ಪಟ್ಟಿಯನ್ನು ಬೇಡ, ಹಾಗೆ ಹೇಳಿಬಿಡಿ. 15 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದರು.

**ಶ್ರೀ ಮುನಿರಾಜು ಗೌಡ. ಪಿ.ಎಂ(ತುಳಸಿ):-** ಮಾನ್ಯ ಸಭಾಪತಿಗಳೆ, ಯಾರು ಹೇಳಿದ್ದಾರೆ 15ಲಕ್ಷ ರೂ.ಗಳನ್ನು ಖಾತೆಗೆ ಹಾಕುತ್ತೇವೆ ಎಂದು. ನಿಮ್ಮ ಹತ್ತಿರ ಸಾಕ್ಷಿ ಇದ್ದರೆ ಕೊಡಿ.

**ಶ್ರೀ ಎಚ್.ಎಂ.ರಮೇಶ್ ಗೌಡ:-** ಮಾನ್ಯ ಸಭಾಪತಿಗಳೆ, ನಾನು ಏಕೆ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ ಎಂದರೆ, ಈ ದೇಶದ ಪ್ರಧಾನ ಮಂತ್ರಿಗಳೆ 15 ಲಕ್ಷ ರೂ.ಗಳನ್ನು ಖಾತೆಗೆ ಹಾಕುತ್ತೇವೆ ಎಂದು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿಯು ಬಿಜೆಪಿ ಸರ್ಕಾರವೇ ಇದೆ.

**ಶ್ರೀ ಮುನಿರಾಜು ಗೌಡ. ಪಿ.ಎಂ(ತುಳಸಿ):-** ಮಾನ್ಯ ಸಭಾಪತಿಗಳೆ, 15 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎಂದು ಎಲ್ಲಿಯು ನಮ್ಮ ಪ್ರಧಾನ ಮಂತ್ರಿಗಳು ಹೇಳಿರುವುದಿಲ್ಲ. ಅದರ ಬಗ್ಗೆ ಪ್ರೂಫ್ ಇದ್ದರೆ ದೃಢೀಕರಣ ಮಾಡಿ ಕೊಡಿ. ಸುಮ್ಮನೆ ಬಾಯಿ ಮಾತಿನಲ್ಲಿ ಹೇಳಬಾರದು.

**ಶ್ರೀ ಯು.ಬಿ.ವೆಂಕಟೇಶ್:-** 15 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿರುವುದು ಇಡೀ ಜಗತ್ತಿಗೆ ಗೊತ್ತಿದೆ. ಅದರ ಬಗ್ಗೆ proof ಕೇಳಬೇಡಿ.

**ಶ್ರೀ ಮುನಿರಾಜು ಗೌಢ ಪಿ.ಎಂ:-** ಎಲ್ಲಿಯು ಹೇಳಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಯು.ಬಿ.ವೆಂಕಟೇಶ್:–** ಕೊಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಕೊಟ್ಟಿಲ್ಲ ಅಷ್ಟೆ. ಒಪ್ಪಿಕೊಳ್ಳಿ. ನಿಮ್ಮ ಗೃಹ ಸಚಿವರು ಅದನ್ನು ಒಂದು ಜುಮ್ಲಾ ಎಂದು ಹೇಳಿದ್ದಾರೆ.

**ಶ್ರೀ ಎಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಗಳೆ, ಈಗ ಪಶ್ಚಿಮ ಬಂಗಾಳದಲ್ಲಿ ಚುನಾವಣೆ ಇದೆ. ಚುನಾವಣೆಗಳು ಬಂದಾಗ ಹೇಗೆ ಜನರಿಗೆ ಟೋಪಿ ಹಾಕುತ್ತಾರೆ ಎಂದರೆ, ಭಾರತೀಯ ಜನತಾ ಪಾರ್ಟಿಯವರು ಪಶ್ಚಿಮ ಬಂಗಾಳದಲ್ಲಿ ಮನೆಗೆ ಒಬ್ಬರಿಗೆ ಉದ್ಯೋಗ ಕೊಡುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಪ್ರಧಾನ ಮಂತ್ರಿಗಳು ಹೇಳಿದ್ದಾರೆ ಎನ್ನುವುದಕ್ಕೆ proof ಕೊಡಿ ಎಂದು ಮಾನ್ಯ ಸದಸ್ಯರು ಕೇಳಿದರು. ಈ ದೇಶದ 130 ಕೋಟಿ ಜನರ ಪ್ರತಿನಿಧಿ, ನಮ್ಮನ್ನು ಆಳುವವರು ಅವರ ಮಾತಿಗೆ ಬೆಲೆ ಇದೆ. ಅದರ ಪೇಪರ್ ಕಟ್ಟಿಂಗ್ಸ್ ಬೇಕಾದರೆ ಕೊಡುತ್ತೇನೆ. 15 ಲಕ್ಷ ರೂ.ಗಳನ್ನು ಕೊಡುತ್ತೇವೆ ಎಂದು ಹೇಳಿ ಕೊಡಲಿಲ್ಲ. ಈಗ ಅವರ ಪಕ್ಷದವರೆ ಮುಖ್ಯಮಂತ್ರಿಗಳಿದ್ದಾರೆ ಅವರಾದರೂ ಕೊಡಬೇಕಲ್ಲವೆ 15 ಲಕ್ಷ ರೂ.ಗಳನ್ನು.

**(ಗೊಂದಲ)**

**ಶ್ರೀ ಸಿ.ಎಂ. ಲಿಂಗಪ್ಪ:–** ಮಾನ್ಯ ಸಭಾಪತಿಗಳೆ, Switzerland ನಿಂದ ಹಣ ತಂದು ಪ್ರತಿಯೊಂದು ಖಾತೆಗೆ 15 ಲಕ್ಷ ರೂ.ಗಳನ್ನು ಕೊಡುತ್ತೇವೆ ಎಂದು ಮಾನ್ಯ ಪ್ರಧಾನ ಮಂತ್ರಿಗಳು ಹೇಳಿರುವುದು 100 ಕ್ಕೆ 100% ನಿಜ. ಈಗ ಅವರೆಲ್ಲರೂ ಅದನ್ನು ಮರೆತ್ತುಬಿಟ್ಟರು.

**ಶ್ರೀ ಅರುಣ ಶಹಾಪೂರ:–** ಮಾನ್ಯ ಸಭಾಪತಿಗಳೆ, ಕಾಂಗ್ರೆಸ್ ಪಕ್ಷದವರದ್ದೂ ಯಾವಾಗಲೂ Goebbels ವಾದ. ಮಾನ್ಯ ಪ್ರಧಾನ ಮಂತ್ರಿಗಳು 15 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ ಎನ್ನುವ Goebbels ವಾದವನ್ನು ಮಾಡುತ್ತಿದ್ದಾರೆ. ಇದರಿಂದ ಹೊರಗೆ ಬನ್ನಿ, ಎಲ್ಲ ವಿಚಾರವು ಜಗತ್ತಿಗೆ ಗೊತ್ತಿದೆ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಗಳೆ, ವಿದೇಶದ ಬ್ಯಾಂಕಿನ ಖಾತೆಯಲ್ಲಿರುವ ಭಾರತೀಯರ unaccounted ಹಣವನ್ನು ತಂದು ಭಾರತದ ಪ್ರತಿಯೊಬ್ಬನ ಖಾತೆಗೆ 15 ಲಕ್ಷ ರೂಪಾಯಿಗಳನ್ನು ಕೊಡಬಹುದು ಅಷ್ಟು ಬೇನಾಮಿ ಹಣ ಅಲ್ಲಿ ಇದೆ. ಅದನ್ನು ತಂದಾಗ ಕೊಡುತ್ತೇವೆ ಎಂದು ಹೇಳಿದರು. ಆದರೆ ಅದನ್ನು ತರಲಿಲ್ಲ, ಹಣ ಕೊಡಲಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಗಳೆ, ಮಾನ್ಯ ಪ್ರಧಾನ ಮಂತ್ರಿಗಳು ವರ್ಷಕ್ಕೆ 2 ಕೋಟಿ ಉದ್ಯೋಗಗಳನ್ನು ಕೊಡುತ್ತೇವೆ ಎಂದು ಹೇಳಿದರು. ಇವರು ಎಷ್ಟು ವರ್ಷದಿಂದ ಪ್ರಧಾನ ಮಂತ್ರಿಗಳಾಗಿದ್ದಾರೆ? 2 ಕೋಟಿ ಜನರಿಗೆ ಬೇಡ 2000 ಜನರಿಗಾದರೂ ಕೆಲಸವನ್ನು ಕೊಟ್ಟಿರುವುದಿಲ್ಲ. ಅದಕ್ಕೆ ನಾನು ಕೆಪಿಎಸ್‌ಸಿ ಬಗ್ಗೆ ಹೇಳಿದ್ದೇನೆ. ರಾಜ್ಯದಲ್ಲಿ 5000 ಹುದ್ದೆಗಳನ್ನು ಕಾಲ್ ಮಾಡಿದರೆ, 5 ಲಕ್ಷ ಅರ್ಜಿಗಳು ಬರುತ್ತವೆ. ಆದರೆ ಅಲ್ಲಿ ಆಯ್ಕೆಯಾಗುವುದು ಜಾತಿ ಮತ್ತು ದುಡ್ಡಿನ ಆಧಾರದ ಮೇಲೆ. ಈ ಸತ್ಯ ಎಲ್ಲರಿಗೂ ಗೊತ್ತಿದೆ. ಯಾರೂ ಕಣ್ಣಿಗೆ ಪಟ್ಟಿ ಕಟ್ಟಿರುವುದಿಲ್ಲ, ಅಥವಾ ಈ ಸರ್ಕಾರದವರ ರೀತಿಯಲ್ಲಿ ಸುಳ್ಳನ್ನು ಸತ್ಯ ಮಾಡಲು ಹೊರಟಿರುವುದಿಲ್ಲ. ಇದು ಸತ್ಯ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಗಳೆ, ಹಿಂದಿನ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರೆ ಯಾವುದೆ ಚುನಾವಣೆಯಲ್ಲಿ ಹೇಳಿರುವುದೆಲ್ಲವನ್ನು ಮಾಡಲು ಆಗುವುದಿಲ್ಲ. ಇದು ಜುಮ್ಲಾ ಚುನಾವಣೆ ಸಮಯದಲ್ಲಿ ಹೇಳುವುದಷ್ಟೆ ಅದನ್ನು ಕಾರ್ಯರೂಪಕ್ಕೆ ತರುವುದಲ್ಲ ಎಂದು ಇವತ್ತಿನ ಈ ದೇಶದ ಗೃಹ ಸಚಿವರಾದವರು ಒಂದು Press Conference ನಲ್ಲಿ ಹೇಳಿದ್ದಾರೆ. ಆ ರೆಕಾರ್ಡ್ಸ್ ಕೂಡಾ ಇದೆ. ಅದಕ್ಕಾಗಿ ಎಲ್ಲರೂ ಸುಮ್ಮನಿರಿ.

**ಉಪಸಭಾಪತಿಯವರು:–** ಮಾನ್ಯ ರಮೇಶ್ ಗೌಡರೆ ಮುಗಿಸಿ, ಈಗಾಗಲೇ ಮುಕ್ಕಾಲು ಗಂಟೆಯಿಂದ ಮಾತನಾಡುತ್ತಿದ್ದೀರಿ.

**ಶ್ರೀ ಎಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಗಳೆ, ಈ ಎಲ್ಲ ವಿಚಾರವು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು. ಇವತ್ತು ಉದ್ಯೋಗವಿಲ್ಲದೆ ಜನರು ನರಳಾಡುತ್ತಿದ್ದಾರೆ. ಕೋವಿಡ್ ಬಂದಾದ ಮೇಲೆ ಈ ರಾಜ್ಯದ ಯುವಕರು ಪ್ರತಿದಿನ ನಮ್ಮ ಹತ್ತಿರ ಬರುತ್ತಾರೆ, ನಿಮ್ಮ ಹತ್ತಿರವು ಬಂದಿಲ್ಲಾ ಎಂದು ಅಲ್ಲ. ಯುವಕರು ಬಂದು ಎಲ್ಲಿಯಾದರೂ ಆಗಲಿ ಒಂದು ಕೆಲಸ ಕೊಡಿಸಿ ಎಂದು ಕೇಳುತ್ತಿದ್ದಾರೆ. ಎಲ್ಲಿಂದ ಕೊಡಿಸುವುದು ಕೆಲಸವನ್ನು. ಇರುವ ಕೆಲಸದಿಂದಲೇ ತೆಗೆದು ಹಾಕುತ್ತಿದ್ದಾರೆ. ಕೋವಿಡ್ ಬಂದ ಮೇಲೆ 100 ಜನ ನೌಕರರು ಇರುವಲ್ಲಿ 60 ಜನರನ್ನು ತೆಗೆದುಹಾಕಿದ್ದಾರೆ, 40 ಜನರನ್ನು ಇಟ್ಟುಕೊಂಡಿದ್ದಾರೆ. ಟಾಟಾ ಕಂಪನಿ ಒಂದು ಬಿಟ್ಟು ಉಳಿದ ಎಲ್ಲ ಕಂಪನಿಗಳಲ್ಲಿ ನೌಕರರನ್ನು ತೆಗೆದಿದ್ದಾರೆ. Software ಕಂಪನಿಗಳ ನೌಕರರು ಎಷ್ಟೊ ಜನರು depression ಗೆ ಹೋಗಿದ್ದಾರೆ. ಅವರ ಪರಿಸ್ಥಿತಿ ಹೇಳಲು ಆಗದು. ಕೋವಿಡ್ ಬಂತು ಎಂದು 71,000 ಕೋಟಿ ರೂಪಾಯಿಗಳ ಸಾಲವನ್ನು ಮಾಡಿದ ಮೇಲೆ ಕನಿಷ್ಠ

ಉದ್ಯೋಗ ಸೃಷ್ಟಿಗೆ ಏನಾದರೂ ಮಾಡಬೇಕಾಗಿತ್ತು. ಅದರ ಬಗ್ಗೆ ಎಲ್ಲಿಯು ಚಕಾರ ಎತ್ತಿರುವುದಿಲ್ಲ. ಏನು ಇದು ದುರ್ದೈವ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ರಮೇಶ್ ಗೌಡರೆ depression ಗೆ ಹೋದವರ ಅಡ್ರೆಸ್ ಕೊಡಿ, impression ಗೋಸ್ಕರ ಏನೇನೋ ಹೇಳಲು ಹೋಗಬೇಡಿ. Software ಕಂಪನಿಗಳ ನೌಕರರು ಎಷ್ಟೋ ಜನರು ಮನೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

**(ಮುಂದು)**

**(551)22–03–2021(05–10)ಬಿಎಸ್‌ಡಿ–ಬಿಎನ್‌ಎಸ್**

**ಶ್ರೀ ಎನ್.ರವಿಕುಮಾರ್ (ಮುಂದು):–**

Software Engineer ಗಳು ಮನೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

**ಶ್ರೀ ಹೆಚ್.ಎಂ. ರಮೇಶ್ ಗೌಡ:–** ಮಾನ್ಯ ಸಭಾಪತಿಯವರೇ, NIMHANS ಆಸ್ಪತ್ರೆಯಲ್ಲಿ ಎಷ್ಟು ಜನ treatment ತೆಗೆದುಕೊಳ್ಳುತ್ತಿದ್ದಾರೆ ಎಂಬುದನ್ನು ಹೋಗಿ ನೋಡಲಿ. ಅವರ ಸರ್ಕಾರ ಇದ್ದು, ಅವರ ಆರೋಗ್ಯ ಸಚಿವರನ್ನು ಕೇಳಲಿ.

**(ಗೊಂದಲ)**

**ಡಾ: ತೇಜಸ್ವಿನಿ ಗೌಡ:–** ಈ ರೀತಿ ಸಾರಾಸಗಟಾಗಿ ಸದನದಲ್ಲಿ ಹೇಳುವುದು ತಪ್ಪಾಗುತ್ತದೆ. I.T. Sector ನವರು ಮನೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ ಮಾನ್ಯ ಸದಸ್ಯರು ಅವರೆಲ್ಲರೂ NIMHANS ಗೆ ಹೋಗಿದ್ದಾರೆ ಎಂದು ಹೇಳುವುದು ತಪ್ಪಾಗುತ್ತದೆ.

**ಶ್ರೀ ಹೆಚ್.ಎಂ. ರಮೇಶ್ ಗೌಡ:–** 60% ಜನರು ಅಲ್ಲಿಗೆ ಹೋಗಿ ಇನ್ನುಳಿದ 40% ಜನರು ಮನೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಬಜೆಟ್‌ನಲ್ಲಿ implement ಮಾಡಬೇಕಾಗಿತ್ತು, ಅದನ್ನು ಮಾಡಿದ್ದಾರೆಯೇ? ರಾಜ್ಯದ ರೈತರು ಮತ್ತು ಯುವಕರ ಬಗ್ಗೆ ಅವರಿಗೆ ಬಹಳ ಕಾಳಜಿ ಇದೆಯಲ್ಲವೇ? 2 ಕೋಟಿ ಉದ್ಯೋಗವನ್ನು ಸೃಷ್ಟಿ ಮಾಡುವವರಲ್ಲವೇ? ಕೇಂದ್ರ ಮತ್ತು ರಾಜ್ಯದಲ್ಲಿ ಅವರದೇ ಸರ್ಕಾರ ಇದ್ದರೂ ಏಕೆ ಮಾಡಲಿಲ್ಲ? ರೂ.71,000 ಕೋಟಿಯನ್ನು ಸಾಲ ಮಾಡಿದ್ದು, ಎಲ್ಲಿ ಸಾಲ ಮಾಡಿದ್ದಾರೆಂಬುದನ್ನು ಹೇಳಲಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು Software Engineer ಗಳು depression ಗೆ ಹೋಗಿದ್ದಾರೆ ಎಂದು ಹೇಳುತ್ತಿರುವ ವಿಚಾರವು ನೂರಕ್ಕೆ ನೂರರಷ್ಟು ಸತ್ಯವಾಗಿದೆ. ನಾನು ವಾಸ ಮಾಡುವ ಭಾಗದಲ್ಲಿ ಭಾಗಮನೆ Tech Park ಎಂದು ಒಂದು Software City ಯನ್ನು create ಮಾಡಿದ್ದಾರೆ. ಅಲ್ಲಿ ಹತ್ತಾರು Multi National Company ಗಳು ಇವೆ. ಅಲ್ಲಿ ಒಂದೊಂದು building ಅನ್ನು ಒಂದೊಂದು Company ತೆಗೆದುಕೊಂಡಿದ್ದು, ಮಾರಕ ರೋಗವಾದ ಕೊರೋನಾ ಬಂದ ಮೇಲೆ ಎಂಟತ್ತು floor ಗಳನ್ನು ತೆಗೆದುಕೊಂಡಿದ್ದ Company ಗಳು ಎಲ್ಲವನ್ನು ಖಾಲಿ ಮಾಡಿ ಕೇವಲ ಒಂದು floor ನಲ್ಲಿ ಇದ್ದಾರೆ. Work from home ಆಗಿ ಕೆಲಸ ಮಾಡುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರೆ ಎಷ್ಟು ಜನರಿಗೆ ಕೆಲಸದಿಂದ ತೆಗೆದಿದ್ದಾರೆ? ತಿಂಗಳಿಗೆ ರೂ.1–2 ಲಕ್ಷ ಸಂಬಳ ತೆಗೆದುಕೊಳ್ಳುತ್ತಿದ್ದ ನೌಕರರಿಗೆ ಕೇವಲ ರೂ. 60 ಸಾವಿರ ಕೊಡುತ್ತೇವೆ, ಇಷ್ಟ ಇದ್ದರೆ ಕೆಲಸ ಮಾಡಿ, ಇಲ್ಲದಿದ್ದರೆ ಬಿಟ್ಟು ಹೋಗಿ ಎಂದು ಹೇಳಿದ್ದಾರೆ. ಸುತ್ತಮುತ್ತ ಇರುವ area ದವರು software company ಗಳು ಇವೆ ಎಂದು ಬಾಡಿಗೆ ನಂಬಿಕೊಂಡು ಇದ್ದರು. ಅವರು ಎಲ್ಲಾ ಖಾಲಿ ಮಾಡಿಕೊಂಡು ಹೋದಮೇಲೆ ಬಾಡಿಗೆ ಬರುವುದು ನಿಂತು ಆ ಜನರು ಬೀದಿಗೆ ಬಂದಿದ್ದಾರೆ. ಇದನ್ನು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಹೆಚ್.ಎಂ. ರಮೇಶ್ ಗೌಡ:-** ಮಾನ್ಯ ಸಭಾಪತಿಯವರೇ, ನಾನು ಏಕೆ ಈ ವಿಚಾರವನ್ನು ಪ್ರಸ್ತಾಪ ಮಾಡಿದೆ ಎಂದರೆ, ' ಅನ್ನದಾತ ರೈತ, ಸದಾ ನೆಮ್ಮದಿ ಮತ್ತು ತೃಪ್ತಿಯಿಂದ ಬದುಕುವಂತಾಗಬೇಕು ಎಂಬುದು ನಮ್ಮ ಸರ್ಕಾರದ ಗುರಿಯಾಗಿದೆ, ಈ ಗುರಿ ತಲುಪಲು ಸಹಕಾರಿಯಾಗಬಲ್ಲ ಕಾರ್ಯಕ್ರಮಗಳನ್ನು ಪ್ರಸ್ತುತ ಮುಂಗಡ ಪತ್ರದಲ್ಲಿ ರೂಪಿಸಲಾಗಿದೆ, ಪ್ರಧಾನಿ ನರೇಂದ್ರ ಮೋದಿಜಿಯವರ ಆಶಯದಂತೆ ರೈತರ ಆದಾಯವನ್ನು ದುಪ್ಪಟ್ಟುಗೊಳಿಸುವ ದಿಸೆಯಲ್ಲಿ ನೂತನ ಕಾರ್ಯಕ್ರಮಗಳು ನೆರವಾಗಲಿವೆ ಎಂದು ಹೇಳಿದ್ದಾರೆ. ನಾನು ಅದಕ್ಕಾಗಿಯೇ ಪ್ರಸ್ತಾಪ ಮಾಡಿದೆ, 2 ಕೋಟಿ ಉದ್ಯೋಗದ ವಿಚಾರವನ್ನು ಇದಕ್ಕಾಗಿಯೇ ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು first page ನಲ್ಲಿ ಪ್ರಧಾನ ಮಂತ್ರಿಗಳ ಧ್ಯೇಯ ಏನಿದೆ, ನಮ್ಮ ಧ್ಯೇಯ ಏನಿದೆ, ರಾಜ್ಯಕ್ಕೆ ಏನೇನು ಮಾಡುತ್ತಾರೆ ಎಂದು ಮೊದಲನೆಯ ಪ್ಯಾರಾದಲ್ಲಿ ಹೇಳಿದ್ದಾರೆ. ಅದಕ್ಕಾಗಿಯೇ ಪ್ರಸ್ತಾಪ ಮಾಡಿದ್ದೇನೆ. ಈ ಪ್ರಸ್ತಾಪ ಮಾಡಿದ ಮೇಲೆ ರಾಜ್ಯದ ಯುವಕರ ಬಗ್ಗೆ ಕಾಳಜಿ ಇರಬೇಕಲ್ಲವೇ? ಉದ್ಯೋಗವನ್ನು ಸೃಷ್ಟಿ ಮಾಡಬೇಕಲ್ಲವೇ? ಉದ್ಯೋಗವನ್ನು ಸೃಷ್ಟಿ ಮಾಡಬೇಕೆಂದರೆ ಬಜೆಟ್‌ನಲ್ಲಿ allocation ಮಾಡಬೇಕಲ್ಲವೇ? ಬಜಟ್ implement

"ತಿದ್ದುಪಡಿಯಾಗದ ಪ್ರತಿ/ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುವುದಿಲ್ಲ, 50% implement ಆಗುವುದಿಲ್ಲ. ಅದು ಬೇರೆ. ಆದರೂ ಒಂದಷ್ಟು ಉದ್ಯೋಗ ಸೃಷ್ಟಿ ಮಾಡಲು ಹಣ ವಿನಿಯೋಗ ಮಾಡಬೇಕಲ್ಲವೇ? ಈಗಾಗಲೇ ಸುಮಾರು 1 ಲಕ್ಷಕ್ಕೂ ಹೆಚ್ಚು ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಅದನ್ನು ಇದುವರೆಗೂ fill up ಮಾಡಲಿಲ್ಲ. ಈಗಾಗಲೇ ಸಾಕಷ್ಟು ಬಾರಿ strike ಗಳು ನಡೆಯುತ್ತಿವೆ. ಇದರ ಬಗ್ಗೆ ಒಂದಲ್ಲ, ಎರಡು ಬಾರಿ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿದಾಗ ' ಇದರ ಬಗ್ಗೆ Finance Department ನಿಂದ clearance ಬರಬೇಕು, ನಂತರ ಇದರ ಬಗ್ಗೆ ತೀರ್ಮಾನ ಮಾಡುತ್ತೇವೆ' ಎಂದು ಹೇಳುತ್ತಾರೆ. Finance Department ನಿಂದ clearance ಬರುವುದು ಯಾವಾಗ? ತೀರ್ಮಾನ ಮಾಡುವುದು ಯಾವಾಗ? ಅವರು clearance ಕೊಡುವುದು ಯಾವಾಗ? ರಾಜ್ಯದ ಜನ ನೆಮ್ಮದಿಯಿಂದ ಇರುವುದು ಯಾವಾಗ? ಗುಣಮಟ್ಟದ ಶಿಕ್ಷಣವನ್ನು ಯಾವಾಗ ಕೊಡುತ್ತಾರೆ? ಈಗಾಗಲೇ New Education Policy ಯನ್ನು ತಂದಿದ್ದಾರೆ. ಅವರು Old Education Policy ಗೆ recruitment ಮಾಡುತ್ತಿಲ್ಲ. ಇನ್ನು New Education Policy ಯನ್ನು ಜಾರಿಗೆ ತಂದು ಬಾಯಿ ಬಡಿದುಕೊಳ್ಳುತ್ತಾರೆಯೇ? ಆ Freedom Park ನಲ್ಲಿ ಬೆಳಗ್ಗೆಯಿಂದ ಸಾಯಂಕಾಲದವರೆಗೂ ಬರೀ strike ನಡೆಯುತ್ತಿವೆ. ಆ ಪೊಲೀಸ್‌ನವರು ಬೆಳಗ್ಗೆಯಿಂದ ಸಾಯಂಕಾಲದವರೆಗೂ ಕಾದು-ಕಾದು ಅವರ ಕಾಲು ಬಿದ್ದುಹೋಗಿದೆ. ಇಂತಹ ಪರಿಸ್ಥಿತಿ ಇದೆ.

2021-22ನೇ ಸಾಲಿನ ಆಯವ್ಯಯವನ್ನು ತುಲನಾತ್ಮಕವಾಗಿ ವಿಮರ್ಶಿಸಿದಲ್ಲಿ ಜಲ ಸಂಪನ್ಮೂಲ ಇಲಾಖೆಯಡಿ ಬರುವ ನಾಲ್ಕು ನೀರಾವರಿ ನಿಗಮಗಳಾದ ಕೃಷ್ಣಾ-ಭಾಗ್ಯ ಜಲ ನಿಗಮ, ಕರ್ನಾಟಕ ನೀರಾವರಿ ನಿಗಮ, ವಿಶ್ವೇಶ್ವರಯ್ಯ ನೀರಾವರಿ ನಿಗಮ ಮತ್ತು ಕಾವೇರಿ ನೀರಾವರಿ ನಿಗಮಗಳಲ್ಲಿ ಈಗಾಗಲೇ ಅನುಮೋದಿತವಾಗಿರುವ ಹಲವು ನೀರಾವರಿ ಯೋಜನೆಗಳಲ್ಲಿ Programme of Work ನಲ್ಲಿ ಅಳವಡಿಕೆಯಾಗಿರುವ ಕಾಮಗಾರಿಗಳಿಗೆ ಮತ್ತು action plan ನಲ್ಲಿ ಸೇರ್ಪಡೆಯಾಗಿರುವ ಕಾರ್ಯಕ್ರಮಗಳಿಗೆ ಅಗತ್ಯವಿರುವ ಅನುದಾನವನ್ನು, ಕಾರ್ಯಕ್ರಮ ಆಧಾರದ ಮೇಲೆ ಮತ್ತು ಅನುಗುಣತೆಗೆ ತಕ್ಕಂತೆ ಹಂಚಿಕೆ ಮಾಡಿಲ್ಲ. ಆದರೆ ಇದಕ್ಕೆ ಹಂಚಿಕೆ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಆಯವ್ಯಯದಲ್ಲಿ para Nos. 85,86,87,88,89 ಮತ್ತು 90 ರಲ್ಲಿ ರಾಜ್ಯದ ಹಲವು ಪ್ರಮುಖ ನೀರಾವರಿ ಯೋಜನೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಯೋಜನೆಗಳಿಗೆ ಅಗತ್ಯವಿರುವ ಅನುದಾನವನ್ನು ಒದಗಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. 2021-22ನೇ ಸಾಲಿನ ಆಯವ್ಯಯದ ಸವಿವರ ವೆಚ್ಚ ಅಂದಾಜುಗಳು, ಬೇಡಿಕೆವಾರು ಅಡಿ ಅಭಿಯಾಚನೆ ಸಂಖ್ಯೆ: 21 (Demand No.21) ರಲ್ಲಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಯವ್ಯಯ ಅಂದಾಜುವಿನಲ್ಲಿ ಅನುದಾನವನ್ನು ಒದಗಿಸಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪಿಸಿದ ನಾಲ್ಕು ನೀರಾವರಿ ನಿಗಮಗಳಿಗೆ ಅನುದಾನವನ್ನು allocation ಮಾಡಬೇಕಲ್ಲವೇ? Allocation ಮಾಡಿಲ್ಲ. ಉದಾಹರಣೆಗೆ ಕಳಸ–ಬಂಡೂರಿ ತಿರುವು ನಾಲಾ ಯೋಜನೆಗಳಿಗೆ ರೂ.1677 ಕೋಟಿ ಅಂದಾಜು ಮೊತ್ತವಾಗಿದ್ದು, ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆಯನ್ನು ಹಿಂದಿನ ವರ್ಷಗಳಲ್ಲಿ ನೀಡಿದ್ದರೂ, ಪ್ರಸಕ್ತ ವರ್ಷದಲ್ಲಿ ಈ ಯೋಜನೆಯ ಅನುಷ್ಠಾನಕ್ಕೆ ಒದಗಿಸಿರುವ ಹಣದ ಬಗ್ಗೆ ಪ್ರಸ್ತಾಪವಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಕಳೆದ ಬಾರಿಯ ಆಯವ್ಯಯದಲ್ಲಿ ಈ ಯೋಜನೆಗೆ allocation ಮಾಡುತ್ತಾರೆ, ಆದರೆ ಈ ವರ್ಷ ಹೇಳಿಯೂ allocation ಮಾಡಿಲ್ಲ. ಅದೇರೀತಿ ಭದ್ರ ಮೇಲ್ದಂಡೆ ಯೋಜನೆಯ ರೂ.21,474 ಕೋಟಿ ಪರಿಷ್ಕೃತ ಅಂದಾಜು ಮೊತ್ತಕ್ಕೆ ಈ ಹಿಂದೆಯೇ ಆಡಳಿತಾತ್ಮಕ ಅನುಮೋದನೆ ನೀಡಿದ್ದರೂ ಈ ಯೋಜನೆಗೆ ಪ್ರಸಕ್ತ ಸಾಲಿನಲ್ಲಿ ಅನುದಾನ ನೀಡಿರುವ ಬಗ್ಗೆ ಪ್ರಸ್ತಾಪವಿಲ್ಲ. ಅದೇರೀತಿ ಎತ್ತಿನಹೊಳೆ ಯೋಜನೆಯೊಳಗೆ ಕೋಲಾರ ಹಾಗೂ ನಮ್ಮ ಚಿಕ್ಕಬಳ್ಳಾಪುರ ಭಾಗಗಳು ಈ ಬರುತ್ತದೆ. ಇದರಲ್ಲಿ ಸಮಗ್ರ ಕುಡಿಯುವ ನೀರಿನ ಯೋಜನೆ, ಬೇಡ್ತಿ–ವರದಾ ನದಿ ಜೋಡಣೆ ಹಾಗೂ ತುಂಗಭದ್ರಾ ಜಲಾಶಯಗಳಲ್ಲಿ ಹೂಳು ತುಂಬುವುದನ್ನು ತಡೆಯಲು ಸಮಾನಾಂತರ ಜಲಾಶಯ ಕುರಿತು ಪ್ರಸ್ತಾಪಿಸಿರುವ ಯೋಜನೆಗಳಿಗೆ ಒದಗಿಸಿರುವ ಅನುದಾನದ ಬಗ್ಗೆ ಚಕಾರವೆತ್ತಿಲ್ಲ. ಇದಲ್ಲದೇ ಶತಮಾನಗಳಿಂದ ವಿವಾದಕ್ಕೊಳಗಾಗಿ ತಮಿಳುನಾಡಿನ ಕ್ಯಾತೆ ಮತ್ತು ತಕರಾರಿನಿಂದ ಕಾವೇರಿ ಕಣಿವೆಯಲ್ಲಿ ಅಪೂರ್ಣವಾಗಿ ನೆನೆಗುದಿಗೆ ಬಿದ್ದಿರುವ ಹಲವಾರು ನೀರಾವರಿ ಯೋಜನೆಗಳ ಬಗ್ಗೆ ಆಯವ್ಯಯದಲ್ಲಿ ಒಂದೂ ಪದ ಬಳಕೆಯಿಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ತಮಿಳುನಾಡಿನ ಜೊತೆ ಕಾವೇರಿ ನದಿನೀರಿನ ಹಂಚಿಕೆಯಲ್ಲಿ ತಕರಾರು ಇದ್ದು, ಈಗ ಮಳೆ ಬಂದಿದ್ದು, ಕಾವೇರಿ ನದಿಯಲ್ಲಿ ನೀರು ಇದ್ದಾಗ ಅದರ ಸಮಸ್ಯೆ ಕಡಿಮೆ ಇರುತ್ತದೆ, ಇಲ್ಲದಿದ್ದರೆ ಎಷ್ಟರಮಟ್ಟಿಗೆ ತೀವ್ರತೆ ಇರುತ್ತದೆಂದರೆ, ಹಿಂದಿನ ಸರ್ಕಾರ ಗಂಭೀರವಾದ ಪರಿಸ್ಥಿತಿಯನ್ನು ಎದುರಿಸಿದ ಸಂದರ್ಭದಲ್ಲಿ ಈ ದೇಶದ ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ದೇವೇಗೌಡರು ವಿಧಾನಸೌಧದ ಗಾಂಧಿ ಪ್ರತಿಮೆ ಮುಂದೆ ಧರಣಿಗೆ ಕುಳಿತರು. ಆವತ್ತು ಪ್ರಧಾನ ಮಂತ್ರಿಗಳು ತೀರ್ಮಾನ ಮಾಡಿದರು. ಅಂತಹ ಪರಿಸ್ಥಿತಿ ಇರುವ ಬಹಳ ಸೂಕ್ಷ್ಮವಾದ ವಿಚಾರವಾಗಿದ್ದು, ಅಂತಹದ್ದರ ಬಗ್ಗೆ ಒಂದೇ ಒಂದು ಸಣ್ಣ ಪದವನ್ನು ಮಾನ್ಯ ಮುಖ್ಯಮಂತ್ರಿಗಳು ಬಳಸಿಲ್ಲ. ಇದು ಬಹಳ ನೋವಿನ ಸಂಗತಿಯಾಗಿದೆ. ಇದಕ್ಕೆ ಒಂದು ರೂಪಾಯಿ ದುಡ್ಡು ಇಟ್ಟಿಲ್ಲ. ಎರಡೂವರೆ ಲಕ್ಷ ಕೋಟಿ ರೂಪಾಯಿಗಳ ಬಜೆಟ್‌ನಲ್ಲಿ ಇಂತಹ ವಿಚಾರವನ್ನು major ಆಗಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪರಿಗಣಿಸಬೇಕಾಗಿತ್ತು. ಆದರೆ ಏಕೋ-ಏನೋ ಗೊತ್ತಿಲ್ಲ, ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಚಕಾರವೆತ್ತದೇ ಒಂದು ರೂಪಾಯಿ ಹಣವನ್ನು ಇಟ್ಟಿಲ್ಲ.

ಇನ್ನು ರಾಜ್ಯದಲ್ಲಿ ಮೂಲಸೌಕರ್ಯಗಳನ್ನು ಕಲ್ಪಿಸುವ ಪ್ರಮುಖ ಇಲಾಖೆ ಮತ್ತು ಮುಂಚೂಣಿಯಲ್ಲಿರುವ ಲೋಕೋಪಯೋಗಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಗಳಲ್ಲಿ ಅಗತ್ಯವಾಗಿ ಮೂಲ ಸೌಕರ್ಯಗಳನ್ನು ಕಲ್ಪಿಸುವ ರಸ್ತೆ, ಸೇತುವೆ, ಶಾಲಾ ಕಟ್ಟಡ, ಆಸ್ಪತ್ರೆ ಕಟ್ಟಡ, ಕಛೇರಿ ಕಟ್ಟಡ ಮುಂತಾದವುಗಳ ನಿರ್ಮಾಣದ ಬಗ್ಗೆ ಆಯವ್ಯಯದ ಭಾಷಣದಲ್ಲಿ ಒಂದು ರೂಪಾಯಿ ಅನುದಾನವನ್ನು ಸಹ ಕೊಟ್ಟಿಲ್ಲ.

**(ಮುಂದು)**

**(552)/22.03.2021/5.20/ಹೆಚ್‌ವಿಃಎಕೆ** **(ಮಾನ್ಯ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಹೆಚ್.ಎಂ.ರಮೇಶ್‌ಗೌಡ (ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಆಯವ್ಯಯ ಪುಸ್ತಕದ ಕಂಡಿಕೆ ಸಂಖ್ಯೆಃ 07, 19 ಮತ್ತು 20ರಲ್ಲಿ **"ಕೋವಿಡ್-19** ಸಾಂಕ್ರಾಮಿಕ ರೋಗದ ಹರಡುವಿಕೆಯಿಂದ ಸರ್ಕಾರ ಸಂಕಷ್ಟದ ಆರ್ಥಿಕ ಪರಿಸ್ಥಿತಿಯನ್ನು ಎದುರಿಸ್ತುತ್ತಿದೆ ಎನ್ನುವ ನೈಜ ಸಂಗತಿ ಇದ್ದರೂ, 2019-20, 2020-21ನೆ ಸಾಲಿನ ಆರ್ಥಿಕ ವರ್ಷದಲ್ಲಿ ಲೋಕೋಪಯೋಗಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆಗಳ ಲೆಕ್ಕ ಶೀರ್ಷಿಕೆಯಡಿಯಲ್ಲಿ ಸಮ್ಮಿಶ್ರ ಸರ್ಕಾರ ವಿವಿಧ ಕಾಮಗಾರಿಗಳನ್ನು Appendix-E ಅಳವಡಿಸಿ ಅಗತ್ಯವಿರುವ ಅನುದಾನವನ್ನು ಈ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಈ ಪೈಕಿ ಹಲವಾರು ಕಾಮಗಾರಿಗಳಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು ಕೆಲವು ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಟೆಂಡರ್ ಪ್ರಕ್ರಿಯೆ ಮುಗಿದು ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳ ತುಲನಾತ್ಮಕ ವಿಮರ್ಶೆಗೆ ಕೆಲವು ಕಾಮಗಾರಿಗಳು ಉಳಿದಿವೆ. ಆರ್ಥಿಕ ಇಲಾಖೆಯ ನಿರ್ದೇಶನದಂತೆ non-grounded ಎಂದು ಕಡಿತಗೊಳಿಸಲಾಗಿದೆ. ಕನಿಷ್ಠ ಪಕ್ಷ ಪ್ರಸ್ತುಕ ವರ್ಷದ ಈ ಆಯವ್ಯಯದಲ್ಲಿ ಮೂಲಸೌಕರ್ಯವನ್ನು ಒದಗಿಸುವ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆ, ಸಣ್ಣ ನೀರಾವರಿ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗಳಿಗೆ 2021-22ನೇ ಸಾಲಿನ ಆಯವ್ಯಯದಲ್ಲಿ ಅಗತ್ಯ ಅನುದಾನವನ್ನು ಭರಿಸಬೇಕಾಗಿತ್ತು. ಆದರೆ, ಆ ರೀತಿ ಆಗಿಲ್ಲ. ಆದ್ದರಿಂದ ಪ್ರಸಕ್ತ ಭಾರತೀಯ ಜನತಾ ಪಕ್ಷದ ಸರ್ಕಾರ ವಿವಿಧ ಇಲಾಖೆಗಳಿಗೆ ಮೂಲಸೌಕರ್ಯಗಳನ್ನು ಒದಗಿಸುವ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

programme of work and spillover ಕಾಮಗಾರಿಗಳಿಗೆ ಅನುದಾನವನ್ನು ಸರಿದೂಗಿಸಲು ಆಯವ್ಯಯವನ್ನು ತಯಾರು ಮಾಡಲಾಗಿದೆಯೆಂದು ಕಾಣಿಸುತ್ತದೆ. ಮುಂಬರುವ ದಿನಗಳಲ್ಲಿ ರಾಜ್ಯ ಸರ್ಕಾರ ಸಂಬಳ, ಸಾರಿಗೆ, ಪಿಂಚಣಿ, ಸಾಮಾಜಿಕ ಭದ್ರತೆ ಯೋಜನೆಗಳಿಗೆ ಆರ್ಥಿಕ ಸಂಪನ್ಮೂಲ ಕ್ರೋಡೀಕರಿಸುವುದರಲ್ಲಿಯೂ ವಿಫಲವಾಗಿ, ದಿವಾಳಿಯತ್ತ ಸಾಗುತ್ತಿದೆ. ಆದ್ದರಿಂದ ರಾಜ್ಯ ಸರ್ಕಾರ ಕೂಡಲೇ ಎಚ್ಚೆತ್ತುಗೊಂಡು ಸಂಪನ್ಮೂಲಗಳನ್ನು ಕ್ರೋಡೀಕರಿಸುವುದಕ್ಕೆ ಮುಂದಾಗಬೇಕಾಗಿದೆ. ದಿನೇದಿನೇ ಬೆಳೆಯುತ್ತಿರುವ ಬೆಂಗಳೂರು ನಗರದಲ್ಲಿ ನಾಗರಿಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಉತ್ತಮ ಆಡಳಿತ ವ್ಯವಸ್ಥೆಯನ್ನು ಮತ್ತು ಪೊಲೀಸ್ ವ್ಯವಸ್ಥೆಯನ್ನು ಸರಿತೂಗಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿರುವ ಆಯವ್ಯಯದ ಪುಸ್ತಕ ಸುಳ್ಳಿನ ಪುಸ್ತಕವೆಂದು ಹೇಳುವುದಕ್ಕೆ ಬಯಸುತ್ತೇನೆ. ಇದರಲ್ಲಿ ಯುವಕರಿಗೆ ಆದ್ಯತೆಯನ್ನು ನೀಡಿಲ್ಲ. ಯುವಕರಿಗೆ ಉದ್ಯೋಗ ಸೃಷ್ಟಿ ಮಾಡುವುದಕ್ಕೆ ಒಂದು ರೂಪಾಯಿಗಳ ಅನುದಾನವನ್ನು ಮೀಸಲಿಟ್ಟಿಲ್ಲ. ನೀರಾವರಿ ಕ್ಷೇತ್ರಕ್ಕೆ ಒಂದು ರೂಪಾಯಿ ಕೊಟ್ಟಿಲ್ಲ. ಆದರಲ್ಲೂ ವಿಶೇಷವಾಗಿ ಮಂಡ್ಯ ಜಿಲ್ಲೆ ರೈತರು ಮತ್ತು ಕಾವೇರಿ ನದಿ ಜಲಾನಯನ ಪ್ರದೇಶದ ರೈತರಿಗೆ ಅನುಕೂಲವಾಗುವಂತಹ ಯೋಜನೆಗಳು ಇಲ್ಲ. ಬೆಂಗಳೂರು ನಗರ ಬೃಹದಾಕಾರವಾಗಿ ಬೆಳೆಯುತ್ತಿದೆ ಈ ನಗರಕ್ಕೆ ಕುಡಿಯುವ ನೀರನ್ನು ಒದಗಿಸುವುದಕ್ಕಾಗಿ ಒಂದೇ ಒಂದು ರೂಪಾಯಿಗಳನ್ನು ಈ ಆಯವ್ಯಯದಲ್ಲಿ ಒದಗಿಸಿಲ್ಲ, ಅದರ ಬಗ್ಗೆ ಘೋಷಣೆಯನ್ನು ಮಾಡಿಲ್ಲ. ಸರ್ಕಾರದ ಈ ನೀತಿಯನ್ನು ನಾನು ಖಂಡಿಸುತ್ತಿದ್ದೇನೆ ಮತ್ತು ಈ ಆಯವ್ಯಯ ಜನ ವಿರೋಧಿ ಆಯವ್ಯವೆಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶವನ್ನು ನೀಡಿದ ತಮಗೆ ವಂದಿಸುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 12. ನಿಯಮ 72ರ ಮೇರೆಗೆ ಗಮನ ಸೆಳೆಯುವ ಸೂಚನೆಗಳು

**ಅ) ವಿಷಯ: ಕೋಲಾರ ಜಿಲ್ಲೆಯ ಕೋಳಿ ಸಾಕಾಣಿಕೆದಾರರಿಗೆ ಜಿಲ್ಲಾಡಳಿತ ಹಾಗೂ ಸಂಬಂಧಪಟ್ಟ ಇಲಾಖೆಯ ವತಿಯಿಂದ ಸೌಲಭ್ಯಗಳು ದೊರೆಯದೆ ಇರುವುದರಿಂದ ಕೋಳಿ ಸಾಕಾಣಿಕೆದಾರರು ಸಂಕಷ್ಟ ಅನುಭವಿಸುತ್ತಿರುವ ಕುರಿತು.**

---

**ಶ್ರೀ ಗೋವಿಂದರಾಜು(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಕೋಲಾರ ಜಿಲ್ಲೆಯ ಕೋಳಿ ಸಾಕಾಣಿಕೆದಾರರಿಗೆ ಜಿಲ್ಲಾಡಳಿತ ಹಾಗೂ ಸಂಬಂಧಪಟ್ಟ ಇಲಾಖೆಯ ವತಿಯಿಂದ ಸೌಲಭ್ಯಗಳು ದೊರೆಯದೆ ಇರುವುದರಿಂದ ಕೋಳಿ ಸಾಕಾಣಿಕೆದಾರರು ಸಂಕಷ್ಟ ಅನುಭವಿಸುತ್ತಿರುವ ಕುರಿತು ಮಾನ್ಯ ಪಶುಸಂಗೋಪನಾ ಸಚಿವರ ಗಮನ ಸೆಳೆಯುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಮಾನ್ಯ ಪಶುಸಂಗೋಪನಾ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ,...

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಮೊದಲು 45 ದಿನಗಳ ಕೋಳಿ ಮರಿಗಳಿಗೆ 3 ರೂಪಾಯಿ 80 ಪೈಸೆಗಳನ್ನು ನೀಡಲಾಗುತ್ತಿತ್ತು. ಈಗ ಇಲಾಖೆ ಮತ್ತು ಮಾಲೀಕರ ಒಪ್ಪಂದದ ಮೇರೆಗೆ ರೈತರಿಗೆ 6.20 ಪೈಸೆಗಳನ್ನು ಕೊಡುವಂತಹ ವ್ಯವಸ್ಥೆ ಆಗಿದೆ. ಬೇರೆ ಸಮಸ್ಯೆಗಳನ್ನು ಪರಿಹರಿಸಲು ಒಂದು ಸಮಿತಿಯನ್ನು ಸಹ ರಚನೆ ಮಾಡಲಾಗಿದೆ.

**ಶ್ರೀ ಗೋವಿಂದರಾಜು:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಯಾವ ಯೋಜನೆಗಳನ್ನು ಮಾಡಲಾಗಿದೆ ಅದಕ್ಕೆ ಸಂಬಂಧಪಟ್ಟಂತೆ ಅವರು ಉತ್ತರವನ್ನು ನೀಡಿದ್ದಾರೆ. ಒಂದು ಜಿಲ್ಲಾಪಂಚಾಯಿತಿ ಸದಸ್ಯನಿಗೆ ಸುಮಾರು 120 ಗಿರಿರಾಜ ಕೋಳಿ ಮರಿಗಳನ್ನು ಕೊಟ್ಟು, ತನ್ನ ಕ್ಷೇತ್ರದಲ್ಲಿ ಹಂಚಿಕೆ ಮಾಡಿಕೊಳ್ಳುವಂತೆ ಏರ್ಪಾಡು ಮಾಡಲಾಗಿತ್ತು. ಅದನ್ನು ಸಹ ಈಗ ನಿಲ್ಲಿಸಲಾಗಿದೆ. ಕೋಲಾರ ಜಿಲ್ಲೆಯಲ್ಲಿ ಕೋಳಿ ಸಾಕಾಣಿಕೆಗೆ ಸಂಬಂಧಪಟ್ಟಂತೆ ಸಹಾಯಕ ನಿರ್ದೇಶಕರನ್ನು ನೇಮಕ ಮಾಡಲಾಗಿತ್ತು. ಆ ಪೋಸ್ಟ್ ಅನ್ನು ಸಹ ಈಗ ರದ್ದುಗೊಳಿಸಲಾಗಿದೆ. ಕೋಳಿ ಸಾಕಾಣಿಕೆಗೆ ಸಂಬಂಧಪಟ್ಟಂತೆ ಸರ್ಕಾರ ಜಾರಿಗೊಳಿಸಿರುವ ಯೋಜನೆಗಳ ಬಗ್ಗೆ ನನ್ನ ತಕರಾರಿಲ್ಲ. ಆದರೆ, ಕೋಳಿ ಸಾಕಾಣಿಕೆಯಲ್ಲಿರುವ ಮೂಲ ಸಮಸ್ಯೆಗಳ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಕೋಳಿ ಸಾಕಾಣಿಕೆಗೆ ಸಂಬಂಧಪಟ್ಟಂತೆ ಯಾವುದೇ ಯೋಜನೆಗಳಿಲ್ಲ.

**(ಮುಂದು)**

**(553) 22.3.2021 5.30 ಪಿಕೆ:ಎಕೆ**

**ಶ್ರೀ ಗೋವಿಂದ ರಾಜು(ಮುಂದು):-**

ಕೋಳಿ ಸಾಕಾಣಿಕೆಯ ಸಂಬಂಧ ರಾಜ್ಯ ಸರ್ಕಾರದ ವತಿಯಿಂದ ಯಾವುದೇ ರೀತಿಯ ಯೋಜನೆಗಳಿಲ್ಲ. ಕರ್ನಾಟಕ ಭಾಗದಲ್ಲಿ ಸುಮಾರು 26,000 ಜನ ರೈತರು ಕೋಳಿ ಸಾಕಾಣಿಕೆ ಮಾಡುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಸಹ ಹೆಚ್ಚಿನ ರೀತಿಯಲ್ಲಿ ಕೋಳಿ ಸಾಕಾಣಿಕೆ ಮಾಡುತ್ತಿದ್ದಾರೆ. ಕೋಲಾರ ಜಿಲ್ಲೆ ಅಲ್ಲದೇ ರಾಜ್ಯದ ಎಲ್ಲಾ ಭಾಗಗಳಲ್ಲೂ ಕೋಳಿ ಸಾಕಾಣಿಕೆಗೆ ಸಂಬಂಧಪಟ್ಟಂತೆ ಇರುವ ಮೂಲ ಸಮಸ್ಯೆಯ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಆದ್ದರಿಂದ ಇದನ್ನು ಮಾನ್ಯ ಸಭಾಪತಿಯವರು ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಅಲ್ಲದೇ ಈ ವಿಷಯ ಮಾತನಾಡುವಾಗ ಸಂಬಂಧಪಟ್ಟ ಮಂತ್ರಿಗಳಿದ್ದರೆ ಒಳ್ಳೆಯದಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ಕುರಿತು ಚರ್ಚೆ ಮಾಡಿದರೆ ಸರ್ಕಾರ ತನ್ನ ಉತ್ತರ ಕೊಡುತ್ತದೆ. ಹೆಚ್ಚುವರಿಯಾಗಿ ಏನೇನು ಅನುಕೂಲತೆಗಳು ಬೇಕು ಅದನ್ನು ಕೇಳಲಿ. ಇಲ್ಲಿ ಸಮಸ್ಯೆ ಇರುವುದೇನೆಂದರೆ, ಕೋಳಿಯನ್ನು ಕೊಟ್ಟು ಬೆಳೆಸುತ್ತಿರುವ ಕಂಪನಿಗಳು ಯಾವುದಿದೆಯೋ, ಅವರು 3 ರೂಪಾಯಿ 80 ಪೈಸೆಯಾಗಿತ್ತು. ಅದನ್ನು ಹೆಚ್ಚು ಮಾಡಬೇಕು ಎಂದು ಕೇಳಿದಾಗ ಒಂದು ಒಪ್ಪಂದ ಮಾಡಿಕೊಂಡು 6 ರೂಪಾಯಿ 20 ಪೈಸೆಗೆ ನಿಗಿದಿ ಮಾಡಲಾಯಿತು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಮಾನ್ಯ ಸಚಿವರು ಇಲ್ಲ ಎನ್ನುವುದು ಮಾನ್ಯ ಗೋವಿಂದರಾಜುರವರ ಆತಂಕವಾಗಿದೆ. ಸಚಿವರು ಇಲ್ಲದಿದ್ದರೆ ನಮ್ಮ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ ಎನ್ನುವುದು ಅವರ ಭಾವನೆಯಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು, ಕೆಳಮನೆಯಲ್ಲಿ ಒಂದು ಪ್ರಸ್ತಾವನೆ ಇರುವುದರಿಂದ ಅಲ್ಲಿದ್ದಾರೆ.

**ಶ್ರೀ ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ಕರ್ನಾಟಕದಲ್ಲಿ ಕೋಳಿ ಸಾಕಾಣಿಕೆದಾರರ ದೊಡ್ಡ ಅಸೋಸಿಯೇಷನ್ ಮಾಡಿಕೊಂಡಿದ್ದೇವೆ. ನಾನೂ ಸಹ ಒಬ್ಬ ಕೋಳಿ ಸಾಕಾಣಿಕೆದಾರ.

**ಸಭಾಪತಿಯವರು:–** ಈಗೇನು ಮಾಡಬೇಕು ಅದನ್ನು ಹೇಳಿ.

**ಶ್ರೀ ಗೋವಿಂದ ರಾಜು:–** ಈಗೇನು ಇಂಟಿಗ್ರೇಷನ್ ಪದ್ಧತಿಯಲ್ಲಿ ಬೆಲೆಯನ್ನು ಜಾಸ್ತಿ ಮಾಡಿರುವುದು ಸಂತೋಷದ ವಿಚಾರವಾಗಿದೆ. ರೈತರಿಗೆ ಹೆಚ್ಚು ಹಣ ಸಿಗಬೇಕು ಎನ್ನುವುದು ನಮ್ಮ ಉದ್ದೇಶ ಕೂಡ ಆಗಿತ್ತು. ಕೋಳಿ ಸಾಕಾಣಿಕೆ ಮಾಡುವುದಕ್ಕೆ ಹಣವನ್ನು ಜಾಸ್ತಿ ಮಾಡಿದ್ದಾರೋ ಆ ಸಂಬಂಧ ನಾನೂ ಕೂಡ ಸಲಹೆ–ಸೂಚನೆಗಳನ್ನು ಕೊಟ್ಟಿದ್ದೆ. ಕರ್ನಾಟಕ ಪೌಲ್ಟ್ರಿ ಫಾರ್ಮರ್ಸ್ ಅಂಡ್ ಬ್ರೀಡರ್ಸ್ ಅಸೋಸಿಯೇಷನ್ ಇದೆ, ಆ ಅಸೋಸಿಯೇಷನ್ ಮುಖಾಂತರ ಚರ್ಚೆ ಮಾಡಿ ಇತ್ಯರ್ಥ ಮಾಡಿಸಿದವರಲ್ಲಿ ನಾನೂ ಒಬ್ಬನಾಗಿದ್ದೇನೆ. ಕೋಳಿಗಳಿಗೆ ಹಕ್ಕಿ ಜ್ವರ ಬಂತು. ಈಗ ಪ್ರತಿವರ್ಷ ಹಕ್ಕಿ ಜ್ವರ ಬರುತ್ತಿದೆ. ಇದರಿಂದ ಕೋಳಿ ಸಾಕಾಣಿಕೆದಾರರು ಸಾವಿರಾರು ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಿದ್ದಾರೆ. ಸರ್ಕಾರದಿಂದ ಇದುವರೆಗೂ ಇದಕ್ಕೆ ಯಾವುದೇ ಕಾರ್ಯಕ್ರಮವನ್ನು ಕೊಟ್ಟಿಲ್ಲ. ನೆರೆಯ ಆಂಧ್ರ ಮತ್ತು ತೆಲಂಗಾಣ ರಾಜ್ಯ ಸರ್ಕಾರಗಳು ಕೋಳಿ ಸಾಕಾಣಿಕೆದಾರರಿಗೆ ಏನೇನು ಸವಲತ್ತು ಕೊಟ್ಟಿದ್ದಾರೆ ಎನ್ನುವುದನ್ನು ಸದನದ ಗಮನಕ್ಕೆ ತರುತ್ತೇನೆ, ದಯವಿಟ್ಟು ಅದನ್ನು ಗಮನಿಸಬೇಕು. ಆಂಧ್ರ ಮತ್ತು ತೆಲಂಗಾಣ ರಾಜ್ಯಗಳು ಸರಬರಾಜು ಮಾಡುವ ವಿದ್ಯುತ್‌ನ ಒಂದು ಯೂನಿಟ್‌ಗೆ 2 ರೂಪಾಯಿಗಳಂತೆ ಸಹಾಯ ಧನ ಕೊಡುತ್ತವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದಲ್ಲದೇ Minimum Support Price ಅಡಿಯಲ್ಲಿ ಜೋಳ ಏನು ಸರ್ಕಾರದಿಂದ ಖರೀದಿ ಮಾಡುತ್ತಾರೆ ಅದನ್ನು ಸಬ್ಸಿಡಿ ದರದಲ್ಲಿ ಕೋಳಿ ಸಾಕಾಣಿಕೆದಾರರಿಗೆ ಕೊಡುತ್ತಾರೆ. ಹೀಗೆ ಕಳೆದ ವರ್ಷ 45 ಲಕ್ಷ ಟನ್ ಜೋಳವನ್ನು ಕೋಳಿ ಸಾಕಾಣಿಕೆದಾರರಿಗೆ ವಿತರಣೆ ಮಾಡಿದ್ದಾರೆ. ಆ ವ್ಯವಸ್ಥೆ ನಮ್ಮ ರಾಜ್ಯದಲ್ಲಿಲ್ಲ. ಅದಲ್ಲದೇ, ಕೋಳಿ ಸಾಕಾಣಿಕೆದಾರರ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೆ 4 ಸದಸ್ಯರ ಸಮಿತಿಯನ್ನು ತೆಲಂಗಾಣ ರಾಜ್ಯದಲ್ಲಿ ಮಾಡಿದ್ದಾರೆ. ಕೋಳಿ ಸಾಕಾಣಿಕೆಯನ್ನು ದೊಡ್ಡ ಉದ್ದಿಮೆಯನ್ನಾಗಿ ಮಾಡಿದ್ದಾರೆ. ನಾವೂ ಕೂಡ ಅದೇರೀತಿ ಮಾಡಬೇಕು.

**ಸಭಾಪತಿಯವರು:-** ಆಯಿತು, ದಯವಿಟ್ಟು ಕುಳಿತುಕೊಳ್ಳಿ. ಇದು ಗಮನ ಸೆಳೆಯುವ ಸೂಚನೆಯಾಗಿದೆ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಸಣ್ಣ ಕೋಳಿ ಸಾಕಾಣಿಕೆದಾರರಿಗೆ ಸಬ್ಸಿಡಿ ದರದಲ್ಲಿ ಸಾಲ ಕೊಡಬೇಕು. ಇದೂ ಒಂದು ಕೃಷಿ ವಲಯ. ರೈತರೇ ಕೋಳಿಯನ್ನು ಸಾಕುತ್ತಾರೆ. ಕೋಳಿ ಸಾಕಾಣಿಕೆದಾರರಿಗಿ ಯಾವುದೇ ರೀತಿಯ ಸೌಲಭ್ಯಗಳಿಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ವಾರ್ಷಿಕವಾಗಿ 26000 ಕೋಟಿ ಕೋಳಿ ಉದ್ಯಮದಿಂದ ಬರುತ್ತಿದೆ.

**ಸಭಾಪತಿಯವರು:-** ಸರ್ಕಾರ ಏನು ಮಾಡಬೇಕು ಎಂದು ಹೇಳಿ. ನೀವು ಭಾಷಣ ಮಾಡುತ್ತಾ ಹೋಗುತ್ತಿದ್ದೀರಿ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಒಂದೊಂದನ್ನೇ ಹೇಳುತ್ತಿದ್ದೇನೆ. ಪಂಚಾಯಿತಿ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಂದ ಕೋಳಿ ಸಾಕಾಣಿಕೆದಾರರಿಗೆ ಬಹಳ ಕಿರುಕುಳ ಆಗುತ್ತಿದೆ. ನಮ್ಮ ಸಭಾನಾಯಕರ ಜಿಲ್ಲೆ ಇರಬಹುದು ಅಥವಾ ಬೇರ ಕಡೆ ಇರಬಹುದು, ಅಲ್ಲಿ ಕೋಳಿ ಸಾಕಾಣಿಕೆ ಮನೆಯನ್ನೇನು ಕಟ್ಟುತ್ತಾರೋ ಅದನ್ನು ಕನ್‌ವರ್ಷನ್ ಮಾಡಿಕೊಳ್ಳಬೇಕೆಂದು ಹೇಳುತ್ತಾರೆ. ಕೋಳಿ ಸಾಕಾಣಿಕೆ ಕೃಷಿ ವಲಯದಲ್ಲಿ ಬರುತ್ತದೆ. ಇದನ್ನು ನಾನು ಕಂದಾಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸದಸ್ಯರು ನಿಯಮ 72 ಅಡಿಯಲ್ಲಿ ಚರ್ಚೆ ಮಾಡಿ ಅನೇಕ ವಿಚಾರಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಆಂಧ್ರಪ್ರದೇಶ ಮತ್ತು ತೆಲ್ಲಂಗಾಣ ರಾಜ್ಯಗಳಲ್ಲಿ ಯಾವರೀತಿ ಅನುಕೂಲ ಮಾಡಿ ಕೊಟ್ಟಿದ್ದಾರೋ ಅದೇರೀತಿ ನಮ್ಮಲ್ಲೂ ಮಾಡಿಕೊಡಬೇಕು ಎಂದು ಹೇಳುತ್ತಿದ್ದಾರೆ. ಕೋಳಿ ಸಾಕಾಣಿಕೆದಾರರಿಗೆ ಆಹಾರದ ಪೂರೈಕೆ ಕೂಡ ಮಾಡಬೇಕು ಎಂದು ಹೇಳಿದ್ದಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಬ್ಸಿಡಿ ದರದಲ್ಲಿ ಅವರಿಗೆ ಸಾಲ-ಸೌಲಭ್ಯ ಕೊಡಬೇಕು ಎಂದು ಹೇಳಿದ್ದಾರೆ. ಅವರ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಪಶುಸಂಗೋಪನಾ ಇಲಾಖೆಯ ಆಯುಕ್ತರು, ಕಾರ್ಯದರ್ಶಿಗಳು ಮತ್ತು ಮಂತ್ರಿಗಳ ಜೊತೆಯಲ್ಲಿ ಸದ್ಯದಲ್ಲಿ ಇವರ ಸಮಕ್ಷಮದಲ್ಲಿ ಮೀಟಿಂಗ್ ಮಾಡಿ ಸೂಕ್ತ ತೀರ್ಮಾನ ಮಾಡುತ್ತೇವೆ.

**ಸಭಾಪತಿಯವರು:-** ಮಂತ್ರಿಗಳು ಸಭೆ ಕರೆದಾಗ, ನಿಮ್ಮನ್ನೂ ಕರೆದು ಚರ್ಚೆ ಮಾಡಿ ಸರ್ಕಾರ ಸೂಕ್ತ ರೀತಿಯಲ್ಲಿ ಸ್ಪಂದಿಸುವಂತಹ ಕೆಲಸ ಮಾಡುತ್ತದೆ ಎಂದು ಹೇಳಿದ್ದಾರೆ.

**ಶ್ರೀ ಗೋವಿಂದ ರಾಜು:-** ಕೋಳಿ ಸಾಕಾಣಿಕೆದಾರರ ಪರವಾಗಿ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಉಳಿದ ಪ್ರಶ್ನೆಗಳನ್ನು ನಾನು ಆ ಸಭೆಯಲ್ಲಿ ಮಂಡಿಸುತ್ತೇನೆ.

**ಸಭಾಪತಿಯವರು:-** ಮುಂದಿನ ಗಮನ ಸೆಳೆಯುವ ಸೂಚನೆ ವಿಷಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರಿಗೆ ಬರುತ್ತದೆ. ಮಾನ್ಯ ಸಚಿವರು ಸದನದಲ್ಲಿ ಇಲ್ಲ. ಎಲ್ಲಿ ಹೋಗಿದ್ದಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಬರುತ್ತೇನೆ ಎಂದು ಹೇಳಿದ್ದರು. ಇಷ್ಟು ಹೊತ್ತಿನವರೆಗೂ ಇಲ್ಲೇ ಇದ್ದರು.

**ಸಭಾಪತಿಯವರು:-** ಅವರನ್ನು ಕರೆಸಿ. ಅವರು ಬಂದ ನಂತರ ಈ ವಿಷಯವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಈ ಕುರಿತು ನಾನು ಕೊಡುವ ಉತ್ತರದಿಂದ ಮಾನ್ಯ ಸದಸ್ಯರಿಗೆ ಸಮಾಧಾನವಾಗುವುದಾದರೆ, ಮಾನ್ಯ ಸಚಿವರು ಬರದೇ ಇದ್ದರೂ ಅಡ್ಡಿ ಇಲ್ಲ, ಸರಿಯಾದ ಉತ್ತರ ಸಿಕ್ಕಿದೆ ಎಂದೆನಿಸುತ್ತದೆ.

**ಸಭಾಪತಿಯವರು:-** ಹಾಗಾದರೆ ಎಲ್ಲಾ ಸಚಿವರ ಉತ್ತರಗಳನ್ನು ನಾಳೆಯಿಂದ ನೀವೇ ಹೇಳಿಬಿಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-**ಇದೊಂದಕ್ಕೆ ಮಾತ್ರ ಹೇಳುತ್ತೇನೆ.

**ಸಭಾಪತಿಯವರು:-** ಸದನದ ಪದ್ಧತಿ ಏನು ಎಂದು ನಾನು ನಿಮಗೆ ಹೇಳುತ್ತಿದ್ದೇನೆ. ಮಾನ್ಯ ಸಚಿವರೇ ಬರಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-**ಇದೊಂದು ಸಲ ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಪದೇ ಪದೇ ಈ ರೀತಿ ಆಗುವುದು ಸರಿಯಲ್ಲ. ಸಂಬಂಧಪಟ್ಟ ಮಂತ್ರಿಗಳೇ ಸದನದಲ್ಲಿ ಇರಬೇಕು. ಎಲ್ಲವನ್ನೂ ನೀವೇ ಹೇಳಿದರೆ ಉಳಿದ ಮಂತ್ರಿಗಳು ಏಕೆ ಬೇಕು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-**ನನ್ನ ಹತ್ತಿರ ಹೋಗಿ ಹೇಳಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-ಎಲ್ಲಾ** ಮಂತ್ರಿಗಳ ಪರವಾಗಿ ಮಾನ್ಯ ಸಭಾನಾಯಕರೇ ಉತ್ತರ ನೀಡುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನೀವು ಸಭಾನಾಯಕರಾಗಿದ್ದಾಗಲೂ ಹೀಗೆಯೇ ಮಾಡುತ್ತಿದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್:-** ನಾನೂ ಕೂಡ ಉತ್ತರ ಕೊಡುತ್ತಿದ್ದೆ. ಆದರೆ ನಿಮ್ಮಷ್ಟು ಭಾರ ಹೊರುತ್ತಿರಲಿಲ್ಲ.

**ಸಭಾಪತಿಯವರು:-** ಮಾನ್ಯ ಎಸ್.ಆರ್.ಪಾಟೀಲರು ಸಭಾನಾಯಕರು ಆಗಿದ್ದಾಗ ನಿಮ್ಮ ತರಹ ಮಾಡಿಲ್ಲ. ಆಯಿತು ಹೇಳಿ. ಮುಂದಿನ ಸಲ ಹೀಗೆ ಆಗಬಾರದು. ನಾಳೆಯಿಂದ ಹೀಗೆ ಮಾಡುವುದಕ್ಕೆ ಹೋಗಬೇಡಿ. ಸಂಬಂಧಪಟ್ಟ ಮಂತ್ರಿಗಳೇ ಬರಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಆಯಿತು.

**ಆ) ವಿಷಯ: ಸರ್ಕಾರದ ವಿವಿಧ ಯೋಜನೆಗಳಲ್ಲಿ ಟ್ಯಾಕ್ಸಿ ಸೇವೆಗಾಗಿ ನಾಲ್ಕು ಚಕ್ರದ ವಾಹನ ಖರೀದಿಸಲು ಬಿ.ಪಿ.ಎಲ್ ಕಾರ್ಡ್ ಕಡ್ಡಾಯ ಮಾಡಿದ್ದು, ಪ್ರಸ್ತುತ ನಾಲ್ಕು ಚಕ್ರ ವಾಹನ ಹೊಂದಿರುವವರ ಬಿ.ಪಿ.ಎಲ್. ಕಾರ್ಡ್ ರದ್ದುಪಡಿಸಲಾಗುವುದೆಂದು ಸರ್ಕಾರ ಆದೇಶ ಹೊರಡಿಸಿರುವುದರಿಂದ ಫಲಾನುಭವಿಗಳು ಗೊಂದಲಕ್ಕೆ ಈಡಾಗಿರುವುದರ ಕುರಿತು.**

\- - -

**ಶ್ರೀ ಶಾಂತರಾಮ್ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಸರ್ಕಾರದ ವಿವಿಧ ಯೋಜನೆಗಳಲ್ಲಿ ಟ್ಯಾಕ್ಸಿ ಸೇವೆಗಾಗಿ ನಾಲ್ಕು ಚಕ್ರದ ವಾಹನ ಖರೀದಿಸಲು ಬಿ.ಪಿ.ಎಲ್ ಕಾರ್ಡ್ ಕಡ್ಡಾಯ ಮಾಡಿದ್ದು, ಪ್ರಸ್ತುತ ನಾಲ್ಕು ಚಕ್ರ ವಾಹನ ಹೊಂದಿರುವವರ ಬಿ.ಪಿ.ಎಲ್. ಕಾರ್ಡ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರದ್ದುಪಡಿಸಲಾಗುವುದೆಂದು ಸರ್ಕಾರ ಆದೇಶ ಹೊರಡಿಸಿರುವುದರಿಂದ ಫಲಾನುಭವಿಗಳು ಗೊಂದಲಕ್ಕೆ ಈಡಾಗಿರುವುದರ ಕುರಿತು ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

. .

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಬದುಕಿಗಾಗಿ 4 ಚಕ್ರಗಳ ಹೊಂದಿದ ಬಾಡಿಗೆ ವಾಹನ ಹೊಂದಿರುವವರಿಗೆ ಬಿ.ಪಿ.ಎಲ್. ಕಾರ್ಡ್ ಕೊಡುವುದಕ್ಕೆ ಅವಕಾಶ ಇದೆ. ಯಾರು ಬಾಡಿಗೆ ವಾಹನವನ್ನು ಅವಲಂಬಿಸಿರುತ್ತಾರೋ ಅವರು 4 ಚಕ್ರದ ವಾಹನ ಹೊಂದಿದ್ದರೂ ಅವರಿಗೆ ಬಿ.ಪಿ.ಎಲ್ ಕಾರ್ಡ್ ಕೊಡುವುದಕ್ಕೆ ಅವಕಾಶ ಇದೆ. ಇದು ಇವತ್ತಿನ ಕಾನೂನಲ್ಲ. 2015ರಿಂದಲೇ ಈ ರೀತಿಯ ಆದೇಶ ಇದೆ. ನಂತರ, ಸ್ವಂತ ಉಪಯೋಗಕ್ಕಾಗಿ 4 ಚಕ್ರದ ವಾಹನ ಹೊಂದಿರುವವರಿಗೆ ಬಿ.ಪಿ.ಎಲ್. ಕಾರ್ಡ್ ಅನ್ವಯಿಸುವುದಿಲ್ಲ. ಆದ್ದರಿಂದ ಮಾನ್ಯ ಶಾಂತರಾಮ್ ಬುಡ್ನ ಸಿದ್ದಿಯವರಿಗೆ ಯಾವುದೇ ರೀತಿಯ ಗೊಂದಲ ಬೇಕಾಗಿಲ್ಲ. ಈಗ ಯಾವುದೇ ಸುತ್ತೋಲೆಗಳನ್ನು ಹೊರಡಿಸಿಲ್ಲ. ಹಿಂದಿನ ಸುತ್ತೋಲೆಯನ್ನು ಕಾರ್ಯಗತ ಮಾಡುತ್ತಿದ್ದೇವೆ. ಯಾವುದೇ ಕಾರಣಕ್ಕೂ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಗೊಂದಲಗಳಿದ್ದರೆ ಈ ಸುತ್ತೋಲೆಯ ಸಂಬಂಧ ನೆನಪೋಲೆ ಕಳುಹಿಸಿ ಇಂತಹ ಬಿ.ಪಿ.ಎಲ್ ಪಡಿತರ ಚೀಟಿಯಲ್ಲಿ, ಬಾಡಿಗೆ ವಾಹನ ಹೊಂದಿರುವವರಿಗೆ ತೊಂದರೆ ಕೊಡಬಾರದು ಎನ್ನುವ ಸೂಚನೆಯನ್ನು ನೀಡಲಾಗುತ್ತದೆ.

**ಶ್ರೀ ಶಾಂತರಾಮ್ ಬುಡ್ನ ಸಿದ್ದಿ:–** ಆದರೆ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನಲ್ಲಿ ಯಾರು 4 ಚಕ್ರಗಳ ವಾಹನ ಹೊಂದಿದ್ದಾರೋ ಅವರು ಸಾಲ ಮಾಡಿ ಖರೀದಿ ಮಾಡಿರುತ್ತಾರೆ. ಸುಮಾರು 3–4 ವರ್ಷಗಳ ಕಾಲದವರಿಗೆ ಆ ಸಾಲದ ಕಂತು ತುಂಬಿ ಸುಸ್ತಾಗಿರುತ್ತಾರೆ. ಜೀವನ ನಿರ್ವಹಣೆಗೆ ಕಷ್ಟವಾಗಿರುತ್ತದೆ. ಅದಕ್ಕೋಸ್ಕರ, 4–5 ವರ್ಷದ ನಂತರ ಅವರ ಜೀವನ ನಿರ್ವಹಿಸಲು ಅನುಕೂಲವಾಗುವವರೆಗೆ ಬ್ಯಾಂಕಿನ ಕಂತು ಮುಗಿದ ಮೇಲೆ ಬೇಕಾದರೆ ಅಲ್ಲಿನ ಗ್ರಾಮ ಲೆಕ್ಕಿಗರ ವರದಿಯನ್ನು ತೆಗೆದುಕೊಂಡು ತದನಂತರ ಒಂದು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಉತ್ತರ ಕನ್ನಡ ಜಿಲ್ಲಾಧಿಕಾರಿಯವರಿಗೆ ಈ ಕುರಿತು ಸೂಚನೆ ಕೊಡಲಾಗುತ್ತದೆ. ಯಾರ್‍ಯಾರು 4 ಚಕ್ರದ ಬಾಡಿಗೆ ವಾಹನಗಳನ್ನು ಹೊಂದಿದ್ದಾರೋ ಅಂಥವರಿಗೆ ಬಿ.ಪಿ.ಎಲ್ ಕಾರ್ಡ್‌ನ ಹಿನ್ನೆಲೆಯಲ್ಲಿ ತೊಂದರೆ ಕೊಡಬಾರದು ಎನ್ನುವ ಸೂಚನೆಯನ್ನು ತಕ್ಷಣ ಕೊಡುವ ವ್ಯವಸ್ಥೆ ಮಾಡುತ್ತೇವೆ.

**ಸಭಾಪತಿಯವರು:–** ಈ ನಿಟ್ಟಿನಲ್ಲಿ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಸೂಚನೆ ಕಳುಹಿಸುವ ವ್ಯವಸ್ಥೆ ಮಾಡಿ. ಆಗ ವಿನಾ ಕಾರಣ ತೊಂದರೆ ಕೊಡುವುದು ತಪ್ಪುತ್ತದೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(554) 22-03-2021 5.40 ಡಿಎಸ್-ಆರ್‌ಎನ್**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ಸೂಚನೆಯನ್ನು ಕೊಟ್ಟು, ಯಾವುದೇ ಕಾರಣಕ್ಕೂ ಬಾಡಿಗೆ ವಾಹನ ಹೊಂದಿರುವಂತಹ ನಾಲ್ಕು ಚಕ್ರ ವಾಹನ ಇರುವ ಮಾಲೀಕರಿಗೆ ಬಿಪಿಎಲ್ ಪಡಿತರ ಚೀಟಿ ಕೊಡುವಂತಹ ವಿಚಾರದಲ್ಲಿ ತೊಂದರೆ ಕೊಡಬೇಡಿ, ಅವರಿಗೆ ಬಿಪಿಎಲ್ ಪಡಿತರ ಚೀಟಿಯನ್ನು ಕೊಡಬೇಕು ಮತ್ತು ಇರುವಂತಹ ಬಿಪಿಎಲ್ ಪಡಿತರ ಚೀಟಿಯನ್ನು ಊರ್ಜಿತಗೊಳಿಸಬೇಕು ಎಂದು ಸೂಚನೆ ಕೊಡಲಾಗಿದೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾನಾಯಕರೇ, ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಯವರಿಗೆ ಸೂಚನೆಯನ್ನು ಕೊಡಿ. ಕೇವಲ ಉತ್ತರ ಕನ್ನಡಕ್ಕೆ ಮಾತ್ರ ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಇಡೀ ರಾಜ್ಯದ ಜಿಲ್ಲಾಧಿಕಾರಿಯವರಿಗೆ ಸೂಚನೆ ಕೊಡುತ್ತೇವೆ.

**ಸಭಾಪತಿಯವರು:-** ಶ್ರೀಯುತರುಗಳಾದ ಎಸ್.ಆರ್.ಪಾಟೀಲ್, ಮಾನ್ಯ ವಿರೋಧ ಪಕ್ಷದ ನಾಯಕರು, ಎಂ.ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು, ಕೆ.ಪ್ರತಾಪಚಂದ್ರ ಶೆಟ್ಟಿ ಹಾಗೂ ನಿರಾಣಿ ಹಣಮಂತ್ ರುದ್ರಪ್ಪ ರವರು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುವುದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೆ ಮಾನ್ಯ ಸಭಾನಾಯಕರಿಗೆ ಪಾಠವನ್ನು ತೆಗೆದುಕೊಂಡಿದ್ದೀರಿ. ಹಾಗಾಗಿ ಈಗ ನಮ್ಮ ಪ್ರಶ್ನೆಗೆ ಉತ್ತರ ಹೇಳುವವರು ಮುಖ್ಯಮಂತ್ರಿಗಳು ಎಂದುಕೊಂಡಿದ್ದೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಸಿದ್ಧಪಡಿಸಿಕೊಟ್ಟಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಾಳೆ ಮುಖ್ಯಮಂತ್ರಿಗಳು ಸದನಕ್ಕೆ ಬರುತ್ತಾರೆಯೇ?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾಳೆ ಮತ್ತೆ ಮುಂದಕ್ಕೆ ಹಾಕಿಸಬಾರದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು ಬಹಳ ಮಹತ್ವದ ವಿಚಾರವಾಗಿದೆ. ಈ ವಿಚಾರವನ್ನು ನಾಲ್ಕು ಜನ ಕೇಳಿದ್ದೇವೆ. ಈ ಕಡೆ ಆ ಕಡೆ ಸೇರಿಯೇ ನಾವು ಚರ್ಚೆ ಮಾಡುತ್ತಿದ್ದೇವೆ. ಈ ವಿಚಾರಕ್ಕೆ ಮಾನ್ಯ ಮುಖ್ಯಮಂತ್ರಿಯವರೇ ಉತ್ತರ ಹೇಳಬೇಕಾಗಿದೆ. ಏಕೆಂದರೆ, ಇದರಲ್ಲಿ policy matter ಇದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಮುಖ್ಯಮಂತ್ರಿಗಳೇ ಬರುತ್ತಾರೆಂದರೆ ನಾಳೆ ತೆಗೆದುಕೊಳ್ಳಿ. ಇಲ್ಲದಿದ್ದರೆ ಇವತ್ತು ತೆಗೆದುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಉತ್ತರ ಸಿದ್ಧವಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಉತ್ತರ ತೆಗೆದುಕೊಂಡು ಏನು ಮಾಡಬೇಕು?

**ಸಭಾಪತಿಯವರು:–** ನಿಮ್ಮ ಸಮಾಧಾನಕ್ಕೆ ಅವರು ಉತ್ತರ ಓದಲಿ.

**ಶ್ರೀ ಎಸ್.ಆರ್.ಪಾಟೀಲ್:–** ಈ ವಿಚಾರಕ್ಕೆ ಮುಖ್ಯಮಂತ್ರಿಗಳು ಬಂದರೆ ಸರಿಯಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾಳೆ ಅಥವಾ ನಾಳಿದ್ದು ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುತ್ತೇನೆ.

**ಸಭಾಪತಿಯವರು:–** ಮುಖ್ಯಮಂತ್ರಿಗಳಿದ್ದರೆ ನಾಳೆ ಅಥವಾ ನಾಳಿದ್ದು ಉತ್ತರ ಕೊಡಿಸಬೇಕಾಗುತ್ತದೆ. ಇಲ್ಲದಿದ್ದರೆ ಈಗಲೇ ನೀವೇ ಉತ್ತರ ಕೊಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರೇ, ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದು ನಿಮ್ಮ ಜವಾಬ್ದಾರಿ. ‘ನಾಳೆಗೆ ಬನ್ನಿ’ ಎಂದು ಮುಖ್ಯಮಂತ್ರಿಗಳಿಗೆ ಹೇಳಿ, ಅವರು ಬರುತ್ತಾರೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ನಾಲ್ಕು ಜನರು ಕೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಲಿ. ಆದರೆ, ಮಾನ್ಯ ಮುಖ್ಯಮಂತ್ರಿಗಳು ಯಾವಾಗ ಬರುತ್ತಾರೆಂದು ಮಾನ್ಯ ಸಭಾನಾಯಕರು ಸರಿಯಾಗಿ ಹೇಳಬೇಕು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾಳೆ ಅಥವಾ ನಾಳಿದ್ದು ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುತ್ತಾರೆಂದರೆ ನನ್ನದೇನು ಅಭ್ಯಂತರವಿಲ್ಲ. ಇದು ಮುಖ್ಯವಾದ ವಿಚಾರವಾಗಿರುವುದರಿಂದ ಮಾನ್ಯ ಮುಖ್ಯಮಂತ್ರಿಯವರು ಬರಲಿ. ಮಾನ್ಯ ಸಭಾನಾಯಕರೇ, ನಾಳೆ ಮುಖ್ಯಮಂತ್ರಿಗಳು ಬರುತ್ತಾರೆಂದು ಇಲ್ಲಿ ಹೇಳಿರುತ್ತೀರಿ, ಅವರು ಬರಲಿಲ್ಲವೆಂದರೆ ತಪ್ಪಾಗಬಾರದು. ನೀವು ಸರಿಯಾಗಿ ಹೇಳಿದರೆ ಅದರಂತೆ ನಾವು ನಡೆಯುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮನವಿ ಮಾಡುವುದಲ್ಲ, ಅದಕ್ಕೆ ನೀವು ಉತ್ತರ ಕೊಡಿಸಬೇಕು.

**ಶ್ರೀ ಎಸ್.ಆರ್.ಪಾಟೀಲ್:–** ಸದನ ನಡೆಯುವಾಗ ಮಾನ್ಯ ಮುಖ್ಯಮಂತ್ರಿಗಳು ಬಂದರೆ ಸದನಕ್ಕೂ ಶೋಭೆ ಬರುತ್ತದೆ. ಅನೇಕ ಸಮಸ್ಯೆಗಳು ಬಗೆಹರಿಯುತ್ತವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ನಾಳೆ ಅಥವಾ ನಾಳಿದ್ದು ತೆಗೆದುಕೊಳ್ಳೋಣ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಗಂಭೀರವಾದ ವಿಚಾರವಾಗಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳೇ ಉತ್ತರವನ್ನು ಕೊಡಲಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದರಲ್ಲಿ policy matter ಇದೆ. Finance implications ಇದೆ.

**ಸಭಾಪತಿಯವರು:–** ಈಗ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬರುವುದು ಗ್ಯಾರಂಟಿ ಇಲ್ಲ. ನಾಳೆ ನೀವು, 'ನೀವು ಹೇಳಿದಿರಿ; ಬರಲಿಲ್ಲ' ಎಂದು ನನಗೆ ಕೇಳುತ್ತೀರಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳನ್ನು ಕರೆಸಿಕೊಳ್ಳುವ ಸಾಮರ್ಥ್ಯ ನಿಮಗಿದೆ.

**ಸಭಾಪತಿಯವರು:–** ನಾನು ಹೇಳುವುದಕ್ಕಾಗುವುದಿಲ್ಲ. ಈಗ ನೀವು ಸರ್ಕಾರದ ಗಮನವನ್ನು ಸೆಳೆದು ಚರ್ಚೆ ಮಾಡಿ. ಸರಿಯಿಲ್ಲವೆಂದರೆ ಮುಖ್ಯಮಂತ್ರಿಗಳು ಬಂದ ಮೇಲೆ ಚರ್ಚೆ ಮಾಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಗಳ ಮುಂದೆ ಚರ್ಚೆ ಮಾಡುವುದು ಯೋಗ್ಯವಾಗಿದೆ. ಇದರಲ್ಲಿ ಮುಖ್ಯಮಂತ್ರಿಗಳ involvement ಬಹಳ ಅವಶ್ಯ ಇದೆ. ಇಲ್ಲದಿದ್ದರೆ ನಮಗೆ ನ್ಯಾಯ ಸಿಗುವುದಿಲ್ಲ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ಸಭಾನಾಯಕರಾಗಿ ಕೆಲಸ ಮಾಡಿದ್ದೀರಿ. ಮುಖ್ಯಮಂತ್ರಿಗಳ ಪ್ರಶ್ನೆಗೆ ನೀವೇ ಬಹಳಷ್ಟು ಸಲ ಉತ್ತರ ಹೇಳಿದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಮುಖ್ಯಮಂತ್ರಿಗಳು ನಾಳೆಗೆ ಬರುತ್ತಾರೆಂದು ಮಾನ್ಯ ಸಭಾನಾಯಕರು ಹೇಳಿದ್ದಾರೆ.

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾಳೆಯೇ ಮುಖ್ಯಮಂತ್ರಿಗಳು ಬರುತ್ತಾರೆಂದು ಖಚಿತವಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರೇ, ಪ್ರತಿಪಕ್ಷದ ನಾಯಕರು ಗಮನ ಸೆಳೆಯುವ ಸೂಚನೆಯಲ್ಲಿ ಪ್ರಶ್ನೆಯನ್ನು ಕೇಳಿದ್ದಾರೆ ಎಂದು ತಾವು ಮುಖ್ಯಮಂತ್ರಿಗಳಿಗೆ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುವುದು ಬೇಡ. ನಿಯಮ 330 ಅನ್ನು ತೆಗೆದುಕೊಳ್ಳಿ.

## 13. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ

**ವಿಷಯ: ಖಾಸಗಿ ಅನುದಾನ ರಹಿತ ಹಾಗೂ ಅನುದಾನ ಸಹಿತ ಸ್ಥಳಾಂತರ ಹಾಗೂ ಹಸ್ತಾಂತರವಾದ ಶಾಲೆ ಹಾಗೂ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ.**

---

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ರಾಜ್ಯದಲ್ಲಿ ಖಾಸಗಿ ಅನುದಾನ ರಹಿತ ಮತ್ತು ಅನುದಾನ ಸಹಿತಿ ಶಿಕ್ಷಣ ಸಂಸ್ಥೆಗಳನ್ನು ಸ್ಥಳಾಂತರ ಹಾಗೂ ಹಸ್ತಾಂತರವಾದ ಶಾಲಾ–ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ ಮಾನ್ಯ ಶಿಕ್ಷಣ ಸಚಿವರ ಗಮನವನ್ನು ನಿಯಮ 330 ರಡಿಯಲ್ಲಿ ಸೆಳೆಯಬಯಸುತ್ತಿದ್ದೇನೆ. ಹಿಂದೆ ಅನುದಾನಕ್ಕೆ ಒಳಪಟ್ಟಿರುವ ಶಾಲೆಗಳಿರಬಹುದು, ಅನುದಾನ ರಹಿತ ಶಾಲಾ–ಕಾಲೇಜುಗಳಿರಬಹುದು. ಹಸ್ತಾಂತರ ಅಥವಾ ಸ್ಥಳಾಂತರವಾಗಿರುವ ಸಂದರ್ಭದಲ್ಲಿ ಹೊಸ ಶಾಲೆಗಳು ಎಂದು ಪರಿಗಣಿಸುವ ಪದ್ಧತಿ ಕರ್ನಾಟಕ ರಾಜ್ಯದಲ್ಲಿ ಆರಂಭವಾಗಿದೆ. ಇದರ ಪರಿಣಾಮ ಏನಾಗಿದೆ ಎಂದರೆ, ಆ ಶಾಲೆಗಳಲ್ಲಿ ಆಡಳಿತ ಮಂಡಳಿಯು ಅಧಿಕಾರ ನಡೆಯಬೇಕೆನ್ನುವ ನಿಟ್ಟಿನಲ್ಲಿ ಆಡಳಿತಾತ್ಮಕವಾಗಿರುವ ಕಾರಣಗಳಿಗಾಗಿ ಆ ಮ್ಯಾನೇಜ್‌ಮೆಂಟ್‌ನವರು ಹಸ್ತಾಂತರ ಅಥವಾ ಸ್ಥಳಾಂತರಗೊಂಡಿರುವಂತಹ ಸಂದರ್ಭದಲ್ಲಿ ಹೊಸ ಶಾಲೆ ಎಂದು ಅನುದಾನವನ್ನೇ ನಿಲ್ಲಿಸುವಂತಹ ಕೆಲಸಕ್ಕೆ ಇವತ್ತು ಶಿಕ್ಷಣ ಇಲಾಖೆ ಕೈ ಹಾಕಿದೆ. ಅದರ ಪರಿಣಾಮವಾಗಿ ಸ್ಥಳಾಂತರ ಅಥವಾ ಹಸ್ತಾಂತರಗೊಂಡಿರುವಂತಹ ಸಂದರ್ಭದಲ್ಲಿ ಅಲ್ಲಿರುವಂತಹ ನೌಕರರಿಗೆ ತೊಂದರೆಯಾಗುತ್ತಿದೆ. ಆ ಶಾಲಾ–ಕಾಲೇಜುಗಳಲ್ಲಿ ಖಾಲಿಯಾಗಿರುವಂತಹ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಅವಕಾಶ ಇಲ್ಲದಿರುವಂಥದ್ದು ಈ ಸಂಸ್ಥೆಗಳಿಗೆ ಸಂಕಷ್ಟವನ್ನು ತಂದೊಡ್ಡಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಮ್ಮ ಮುಖಾಂತರ ನಾನು ಮಾನ್ಯ ಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಹಸ್ತಾಂತರ ಮತ್ತು ಸ್ಥಳಾಂತರಗೊಂಡ ಈ ಶಾಲೆಗಳಿಗೂ ಕೂಡ ಅನುದಾನವನ್ನು ಕೊಡಬೇಕು, ಅನುದಾನ ಕೊಡುವುದನ್ನು ಮುಂದುವರೆಸಬೇಕು. ಈಗಾಗಲೇ ಅನುದಾನಕ್ಕೆ ಒಳಪಟ್ಟಿರುವ ಸಿಬ್ಬಂದಿ ವರ್ಗಕ್ಕೆ ಅವರ ಸಂಬಳ, ಸವಲತ್ತುಗಳು ಯಥಾವತ್ತಾಗಿ ಮುಂದುವರೆಯಬೇಕೆಂದು ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಅತ್ಯಂತ ಮಾರ್ಮಿಕವಾದ ವಿಚಾರವನ್ನು ಜ್ವಲಂತ ಸಮಸ್ಯೆಯನ್ನು ಸಹೋದ್ಯೋಗಿ ಮಿತ್ರರಾದ ಮಾನ್ಯ ಅರುಣ ಶಹಾಪುರರವರು ಪ್ರಸ್ತಾಪ ಮಾಡಿದ್ದಾರೆ. ಖಾಸಗಿ ವಲಯದವರು ಸರ್ಕಾರಕ್ಕೆ ಪೂರಕವಾಗಿ ಶಿಕ್ಷಣ ನೀಡುವಂತಹ ಕೆಲಸವನ್ನು ಈ ರಾಜ್ಯದಲ್ಲಿ ಅನೂಚಾನವಾಗಿ ಮಾಡಿಕೊಂಡು ಬಂದಿದ್ದಾರೆ. ಸ್ವಾತಂತ್ರ್ಯದ ಅನಂತರದ ದಶಕಗಳಲ್ಲಿ ಇವರದ್ದು ದೊಡ್ಡ ಪಾತ್ರ ಇತ್ತು; ಬಹಳ ಗಣನೀಯವಾದ ಕೆಲಸವನ್ನು ಸರ್ಕಾರವನ್ನೂ ಮೀರಿ ಮಾಡುತ್ತಿತ್ತು. ಆಗ ಬಹಳ ಶಾಲೆಗಳಿಗೆ ಅನುದಾನವನ್ನು ಕೊಟ್ಟಿದ್ದಾರೆ. ಇನ್ನು ಅನುದಾನ ಇಲ್ಲದಿರುವಂತಹ ಸಂಸ್ಥೆಗಳು ಇದ್ದವು. ಸಮಸ್ಯೆ ಏನಾಗಿದೆ ಎಂದರೆ, ಬಹಳ ಕಡೆ ಎಲ್ಲೆಲ್ಲಿ ಅನುದಾನಿತ ಶಾಲೆಗಳಿವೆಯೋ ಅಲ್ಲಿಯೇ ಸರ್ಕಾರಿ ಶಾಲೆಗಳನ್ನು ತೆರೆಯುವುದಕ್ಕೆ ಅನುಮತಿಯನ್ನು ಕೊಟ್ಟುಬಿಟ್ಟರು. ಸರ್ಕಾರದ ಮನಸ್ಸಿನಲ್ಲಿ ಏನಿದೆ ಎಂದರೆ, ಸರ್ಕಾರಿ ಶಾಲೆಯಾದರೂ ಒಂದೇ, ಅನುದಾನಿತ ಶಾಲೆಯಾದರೂ ಒಂದೇ. It is also part and parcel of the Government ಎನ್ನುವ ಅಭಿಪ್ರಾಯ ಸರ್ಕಾರದಲ್ಲಿರಬೇಕಾಗಿತ್ತು. ಸರ್ಕಾರ ಏನು ಮಾಡಿತು ಎಂದರೆ ಐದು ಕಿ.ಮೀ. ಗೆ ಒಂದು ಶಾಲೆ ಕೊಡುವ ನಿಯಮವನ್ನು ಬಿಟ್ಟುಬಿಟ್ಟರು. ಎಲ್ಲೆಲ್ಲಿ ಯಾರ್ಯಾರು ಕೇಳುತ್ತಾರೆಯೋ ಅವರಿಗೆಲ್ಲಾ ಅನುಮತಿಯನ್ನು ಕೊಟ್ಟುಬಿಟ್ಟರು. ಇದರಿಂದ ಮಕ್ಕಳ ಶಾಲಾ ದಾಖಲಾತಿಗೆ ತೊಂದರೆಯಾಯಿತು. ಮತ್ತೊಂದು ಕಡೆ ಸರ್ಕಾರದ ನಿಯಮಗಳು ಬದಲಾಗುತ್ತಾ ಬಂದವು. ಕಡಿಮೆ ಜಾಗದಲ್ಲಿ ಆಗುವುದಿಲ್ಲ, ಜಾಗ ವಿಸ್ತಾರವಾಗಿರಬೇಕು, ಕಟ್ಟಡ ದೊಡ್ಡದಾಗಿರಬೇಕು, ಸಂಪನ್ಮೂಲ ಹೆಚ್ಚು ಇರಬೇಕೆಂದು ಹೇಳಿದರು. ಅವರು ಏನು ಮಾಡಿದರು ಎಂದರೆ, ಸ್ವಲ್ಪ ದೊಡ್ಡ ಜಾಗ ಹಿಡಿದು ಕಟ್ಟಡವನ್ನು ಕಟ್ಟಿದರು, ಸಂಪನ್ಮೂಲಗಳನ್ನು ಕೊಟ್ಟರು. ಅವರು ಅಲ್ಲಿಗೆ ಸ್ಥಳಾಂತರಗೊಳ್ಳುತ್ತೇವೆಂದು ಹೇಳಿದರು. ಇದರಿಂದ ಮಕ್ಕಳ ಸಂಖ್ಯೆಗೆ ಕೊರತೆ ಬಿದ್ದರೆ ಅಥವಾ ಕಟ್ಟಡದ ಸಂಪನ್ಮೂಲಗಳನ್ನು ಚೆನ್ನಾಗಿ ಮಾಡಿಕೊಡುವುದಾದರೆ ಸ್ಥಳಾಂತರ ಮಾಡಿಕೊಳ್ಳುತ್ತಾರೆ. ಅವರು ಇನ್ನೇನು ಮಾಡುತ್ತಿಲ್ಲ. ಅಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಥಳಾಂತರ ಮಾಡಿರುವ ಶಾಲೆಗಳಿಗೆ ಇಷ್ಟೇ ಮೀಟರ್ ಒಳಗೆ ಇರಬೇಕು, ಇಷ್ಟು ಮೀಟರ್‌ನಲ್ಲಿ ಖಾಲಿ ನಿವೇಶನಗಳು ಇರಬೇಕಲ್ಲವೇ? ಇಷ್ಟೇ ಮೀಟರ್ ಒಳಗೆ ಮಕ್ಕಳು ಬರಬೇಕಲ್ಲವೇ? ಹಾಗಾಗಿ ಬಹಳ ಚೆನ್ನಾಗಿ ನಡೆಯುತ್ತಿರುವಂತಹ ಸಂಸ್ಥೆಗಳು ಮಕ್ಕಳ ದಾಖಲಾತಿಯ ಕಷ್ಟದಿಂದಾಗಿ ಮತ್ತು ಸಂಪನ್ಮೂಲಗಳ ಕೊರತೆಯಿಂದಾಗಿ ಒಳ್ಳೊಳ್ಳೆಯ ಕಟ್ಟಡಗಳಿಗೆ ಸ್ಥಳಾಂತರಗೊಂಡಿದ್ದಾರೆ. ಈಗ ನಮ್ಮ ಅಧಿಕಾರಿಗಳು ಹೇಳುತ್ತಾರೆ, ಇದಕ್ಕೆ ನಿಯಮ ಅಡ್ಡವಿದೆ, ನೀವು ಸ್ಥಳಾಂತರಗೊಂಡ ಮೇಲೆ ನಾವು ಅನುದಾನ ಕೊಡುವುದಕ್ಕೆ ಬರುವುದಿಲ್ಲ, ಸಂಬಳ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಆ ಶಾಲೆಯ ಮತ್ತು ಶಿಕ್ಷಕರ ಸ್ಥಿತಿ ಏನಾಗಬೇಕು? ಯಾರೋ ಖುಷಿಯಿಂದ ಸಂಸ್ಥೆಯನ್ನು ಪ್ರಾರಂಭ ಮಾಡಿರುತ್ತಾರೆ, ಆನಂತರ ಬಂದಂತಹ ಆಡಳಿತ ಮಂಡಳಿಯವರಿಗೆ ಆ ಶಾಲೆಯನ್ನು ನಡೆಸಿಕೊಂಡು ಹೋಗಬೇಕೆನ್ನುವ ಭಾವನೆ, ಮನಸ್ಥಿತಿ ಬೇಕಲ್ಲವೇ? ಶಿಕ್ಷಣ ಒಂದು ರೀತಿಯಲ್ಲಿ ದಾನದ ಕೆಲಸ, ಅದು ಸಾಮಾಜಿಕ ಕಳಕಳಿಯನ್ನಿಟ್ಟುಕೊಂಡು ಮಾಡುವಂತಹ ಕೆಲಸ. ತಲೆಮಾರು ಬದಲಾದಂತೆ ಆಡಳಿತ ಮಂಡಳಿಗೆ ಹೊಸಬರು ಬಂದ ಹಾಗೆ, ಅವರು ತೀರಿಕೊಂಡ ಹಾಗೆಲ್ಲಾ, 'ಅಯ್ಯೋ! ಈ ಸ್ಕೂಲ್ ನಮಗೆ ಏಕೆ, ಆದಾಯ ಬರುವಂತಹ ಸಂಸ್ಥೆಗಳು, ಕೈಗಾರಿಕೆಗಳು, ವ್ಯಾಪಾರ ಇದ್ದರೆ ನೋಡೋಣ' ಎಂದು ಹೇಳುತ್ತಾರೆ. ಹಾಗಾಗಿ ಆಡಳಿತ ಮಂಡಳಿಗಳು ಬದಲಾವಣೆಯಾಗಿಬಿಟ್ಟರೆ ಅನುದಾನವನ್ನು ನಿಲ್ಲಿಸಿಬಿಡುತ್ತಾರೆ, ಅನುಮತಿ ಕೊಡುವುದಿಲ್ಲ. ಆಡಳಿತ ಮಂಡಳಿಗಳು ಯಾರಾದರೇನು; ಶಾಲೆಯನ್ನು ನಡೆಸಿದರೆ ಸರಿಯಲ್ಲವೇ? ಆಡಳಿತ ಮಂಡಳಿಗಳು ಯಾರಾದರೇನು, ಸ್ಥಳಾಂತರ ಮಾಡಿದರೆ ಸರಿಯಲ್ಲವೇ? ಹಾಗಾಗಿ ಒಟ್ಟು ಹಿತದೃಷ್ಟಿಯಿಂದ ಶಾಲಾ–ಕಾಲೇಜುಗಳು ಸ್ಥಳಾಂತರಗೊಂಡಾಗ ಅನುದಾನ ಕೊಡುವಂತಹ ಪ್ರಕ್ರಿಯೆ, ಆಡಳಿತ ಮಂಡಳಿಗಳು ಬದಲಾವಣೆಯಾದಾಗ ಅವರಿಗೆ ಅನುದಾನ ಕೊಡುವಂತಹ, ಮಾನ್ಯತೆ ಕೊಡುವಂತಹ ಕೆಲಸ ಆಗಬೇಕು. **(ಮುಂದು)**

(555)22-03-2021/5-50/bkp-rn

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಮುಂದು):-**

ಇದಕ್ಕಾಗಿ ಕಚೇರಿಗಳಿಗೆ ಅಲೆದು ಅಲೆದು ಅವರಿಗೆ ಸಾಕಾಗಿದೆ. ಅದಕ್ಕಾಗಿ ಹಣ ವ್ಯಯ ಮಾಡುವುದು ಕಷ್ಟವಾಗಿಬಿಟ್ಟಿದೆ. ನಮಗೆ ಪೂರಕವಾದ ಶಿಕ್ಷಣ ಕೊಡುವಂತಹ ಕೆಲಸವನ್ನು ಈ ಸಂಸ್ಥೆಗಳು ಮಾಡುತ್ತಿರುವುದರಿಂದ ತಾವು ಅನುಚಾರವಾಗಿ ನಡೆದುಕೊಂಡು ಬಂದಂತಹ ಸಂಸ್ಥೆಗಳನ್ನು ಸ್ಥಳಾಂತರದ ಕಾರಣಕ್ಕಾಗಿ ಆಡಳಿತ ಮಂಡಳಿಗಳ ಮ್ಯಾನೇಜ್‌ಮೆಂಟ್ ಬದಲಾಗದಂತಹ ಕಾರಣಕ್ಕಾಗಿ ಅನುದಾನ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಲ್ಲಿಸುವಂತಹದ್ದು ಹಾಗೂ ಮಾನ್ಯತೆಯನ್ನು ರದ್ದುಪಡಿಸುವಂತಹದ್ದು ಸರ್ವಥಾ ಒಳ್ಳೆಯದಲ್ಲ. ತಾವು ಕಾಳಜಿವುಳ್ಳವರಾಗಿದ್ದು, ಇದನ್ನು ಅರ್ಥ ಮಾಡಿಕೊಳ್ಳಬಲ್ಲಿರಿ. ಶಿಕ್ಷಕರ ಕುಟುಂಬದವರಿದ್ದೀರಿ, ಸಮರ್ಥ ಶಿಕ್ಷಣ ಸಚಿವರಾಗಿದ್ದೀರಿ. ಈ ಸಮಸ್ಯೆಗೆ ಇವತ್ತು ಒಂದು ತಿಲಾಂಜಲಿ ಹಾಡಬೇಕು, ಪರಿಹಾರ ಕೊಡಬೇಕೆಂದು ನಾನು ಆ ಎಲ್ಲಾ ನೊಂದ ಶಿಕ್ಷಕರ ಪರವಾಗಿ ಮತ್ತು ಸಂಸ್ಥೆಗಳ ಪರವಾಗಿ ಮನವಿ ಮಾಡುತ್ತೇನೆ.

**ಶ್ರೀ ಶಶೀಲ್ ಜಿ. ನಮೋಶಿ(ಶಿಕ್ಷಕರ ಕ್ಷೇತ್ರ):** ಮಾನ್ಯ ಸಭಾಪತಿಯವರೇ, ಸರ್ಕಾರ ಶಾಲೆಗಳಿಗೆ permission ಕೊಡುವಾಗ ಏನೋ ಸಣ್ಣ ಸ್ಥಳಗಳಲ್ಲಿ ಅಥವಾ ಬಾಡಿಗೆ ಕಟ್ಟಡಗಳಲ್ಲಿ ಅಥವಾ lease ತೆಗೆದುಕೊಂಡಿರುತ್ತಾರೆ. ನೀವು ಅವರಿಗೆ ಕಂಡೀಷನ್ಸ್ ಹಾಕುತ್ತೀರಿ, 3 ವರ್ಷದೊಳಗೆ ನೀವು ಹೊಸ ಕಟ್ಟಡಗಳನ್ನು ಕಟ್ಟಬೇಕು, ಇಂತಿಷ್ಟು ಎಕರೆ ಜಾಗವಿರಬೇಕು, ಇಂತಿಷ್ಟು ಎತ್ತರದ ಅಡಿಯಲ್ಲಿ ಬಿಲ್ಡಿಂಗ್ ಇರಬೇಕೆಂದು ನೀವೇ ಷರತ್ತು ಹಾಕಿರುತ್ತೀರಿ. ಪಾಪ ಅವನು 3-4 ವರ್ಷಗಳಲ್ಲಿ ಆ conditions fulfill ಮಾಡಿ ಕಷ್ಟಪಟ್ಟು ಹೊಸ ಬಿಲ್ಡಿಂಗ್ ಕಟ್ಟಿಸುತ್ತಾನೆ, ಸ್ಥಳಾಂತರಗೊಳಿಸಿ ಅವನು ಏನು ಮಾಡುತ್ತಾನೆ ಎಂದರೆ, permission ಕೊಡಲಿಲ್ಲವೆಂದರೂ ಕೂಡ ಅವನು ಹೋಗುತ್ತಾನೆ. ಏಕೆಂದರೆ, ನೀವು ಷರತ್ತು ವಿಧಿಸಿದ ಕಾರಣ ಅವನು ಹೊಸ ಬಿಲ್ಡಿಂಗ್ ಕಟ್ಟಿದ್ದಾನೆ, ಅವನು ಬಾಡಿಗೆ ಏಕೆ ಕೊಡಬೇಕೆಂದು ಹೊಸ ಬಿಲ್ಡಿಂಗ್‌ಗೆ ಹೋಗುತ್ತಾನೆ. ಆದರೆ, ಇದೂವರೆಗೂ ಸಹಿತ ನೀವು ಅವನಿಗೆ permission ಕೊಟ್ಟಿಲ್ಲ. ಇದು ಎಲ್ಲಿಯ ನ್ಯಾಯ? ನಿಮ್ಮ conditions fulfill ಮಾಡಿಲ್ಲವೇ ಸರ್? ಹೊಸ ಬಿಲ್ಡಿಂಗ್ ಕಟ್ಟಿ ಎಲ್ಲಾ ಮೂಲಭ>ೂತ ಸೌಕರ್ಯಗಳನ್ನೂ ಸಹ ಒದಗಿಸಿದ್ದಾರೆ. ಆದರೂ ಸಹ ಅದಕ್ಕೆ permission ಕೊಡುವುದಕ್ಕೆ ನಿಮಗೆ ಏನು ತೊಂದರೆ? ಏಕೆ ಅವರನ್ನು ಇಷ್ಟೊಂದು ಕಾಡಿಸುತ್ತೀರಿ? ಸರ್ ಹೊಸದಾಗಿ permission ತೆಗೆದುಕೊಳ್ಳುವುದು ಬಹಳ ಕಷ್ಟ. ಆದರೆ, ಇವರು ಅದಕ್ಕೆ ಏನು ಹೇಳುತ್ತಾರೆ ಎಂದರೆ, ನೀವು Commissioner ಹಂತದಲ್ಲಿ ಅಲ್ಲ. ನೀವು ಸರ್ಕಾರಕ್ಕೆ ಹೋಗಿ. ಸರ್ 2-3 ವರ್ಷಗಳು ಆಗಿದೆ, ಉದಾಹರಣೆಗಳಿವೆ. you are not given them permission, why? ಏಕೆ ಅಷ್ಟೊಂದು ಕಷ್ಟ ಕೊಡುತ್ತೀರಿ? this is only bureaucratic delay. ನೀವು ಉನ್ನತ ಮಟ್ಟದಲ್ಲಿ ತೊಂದರೆ ಕೊಡಲಿಕ್ಕೆ ಇಲ್ಲ. ಆದರೆ, ಕೆಳಗಿನ ಮಟ್ಟದಲ್ಲಿ ಇಷ್ಟರಮಟ್ಟಿಗೆ ಇಂತಹ ಕೇಸ್‌ನಲ್ಲಿ corruption ಇದೆ ಎಂದು ಅದನ್ನು ಹೇಳಬಾರದು. ಏಕೆ ಅಷ್ಟೊಂದು ತೊಂದರೆ ಕೊಡುತ್ತೀರಿ? ನಾನು grant ಬಗ್ಗೆ ಹೇಳುವುದಾದರೆ ಖಂಡಿತ ಮಾನ್ಯ ಅರುಣ್ ಶಹಾಪುರರವರು ಹೇಳಿದಂತಹದ್ದು ಖಂಡಿತ ನಿಜ. ಅವರಿಗೂ ನೀವು ತೊಂದರೆ ಕೊಡಬೇಡಿ. ಮೊದಲು ನೀವು ಅವರಿಗೆ ಸರಳೀಕರಣಗೊಳಿಸಿ,

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

simplify ಮಾಡಿದರೆ ಶಿಕ್ಷಣ ಇಲಾಖೆಯಲ್ಲಿ ಸುಧಾರಣೆಯಾಗುತ್ತದೆ ಅಥವಾ ಈ ರೀತಿಯ corruption ದೂರ ಆಗುತ್ತದೆ. ಮಾನ್ಯ ಸಚಿವರು ನಿಜವಾಗಿಯೂ ಹೇಳಬೇಕೆಂದರೆ ಈ ರೀತಿಯ ಕೆಲಸ ಅವರಿಗೂ ಬೇಕಾಗಿಲ್ಲ. ಆದರೆ, ಇದರ ಬಗ್ಗೆ ಮೊದಲು ಗಮನಹರಿಸಿ ಅದಕ್ಕೆ ಅವಕಾಶ ಕೊಡಿ ಎಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ನಿರಾಣಿ ಹನುಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತಾ, ನಿಯಮ–330ರ ಕೆಳಗಡೆ ಮಾನ್ಯ ಅರುಣ್ ಶಹಾಪುರರವರು ಉತ್ತಮವಾಗಿರತಕ್ಕಂತಹ ವಿಚಾರವನ್ನು ತಂದಿದ್ದಾರೆ. ಈಗಾಗಲೇ ಹಿರಿಯ ಶಾಸಕರು ಮಾತನಾಡಿದ್ದಾರೆ. ಅನುದಾನ ಮತ್ತು ಅನುದಾನಸಹಿತವಾಗಿರತಕ್ಕಂತಹ ಶಾಲೆ–ಕಾಲೇಜುಗಳನ್ನು ಸ್ಥಳಾಂತರ ಮಾಡುವಂತಹ ಸಂದರ್ಭದಲ್ಲಿ ಯಾವುದೇ ಕಾರಣದಿಂದಲೂ ಸಹಿತ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಟ್ಟು ಸ್ಥಳಾಂತರ ಮಾಡುವಂತಹ ಸಂದರ್ಭದಲ್ಲಿ ಸ್ಥಳಾಂತರ ಮತ್ತು ಹಸ್ತಾಂತರದ ನಿಯಮಗಳಲ್ಲಿ ಸಡಿಲಿಕೆಯಾಗಬೇಕು. ಅದು ಸರಾಗವಾಗಿ ಸ್ಥಳಾಂತರ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು ಅದರ ಜೊತೆಗೆ ಅದು ಅನುದಾನಕ್ಕೆ ಒಳಪಡಿಸಲಿಕ್ಕೆ ಕೂಡ ಅವಕಾಶ ಮಾಡಿಕೊಡಬೇಕು. ಈಗ ಇರತಕ್ಕಂತಹ ಶಾಲೆಗಳೇ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿರುವಂತಹ ಸಂದರ್ಭದಲ್ಲಿ ಆಗಿರಬಹುದು, ಅಥವಾ ಮಕ್ಕಳ ಸಂಖ್ಯೆಯ ಕೊರತೆಯಿಂದ ಬೇರೆ ಕಡೆಗೆ ಸ್ಥಳಾಂತರಗೊಂಡಿರುವಂತಹ ಸಂದರ್ಭದಲ್ಲಿ ಆ ಆಡಳಿತ ಮಂಡಳಿಗೆ ಆ ಶಾಲಾ–ಕಾಲೇಜುಗಳನ್ನು ಪ್ರಾರಂಭಿಸುವುದಕ್ಕೆ ಅವಕಾಶ ಮಾಡಿಕೊಡಬೇಕು ಹಾಗೂ ಅನುದಾನವನ್ನು ಸಹಿತ ಹಳೆಯ ಶಾಲೆ ಎಂದು consider ಮಾಡಿಯೇ ಮಾಡಬೇಕು ಎನ್ನುವಂತಹ ಒತ್ತಾಯವನ್ನು ತಮ್ಮ ಮುಖಾಂತರ ಮಾಡುತ್ತಿದ್ದೇನೆ.

**ಶ್ರೀ ಚಿದಾನಂದ್ ಎಂ. ಗೌಡ(ಪದವೀಧರರ ಕ್ಷೇತ್ರ):** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಇದೇ ವಿಚಾರಕ್ಕೆ ಸಂಬಂಧಪಟ್ಟಂತೆ ಈ ಕೊರಟಗೆರೆ ತಾಲ್ಲೂಕಿನ ಗೌತಮ ವಿದ್ಯಾಸಂಸ್ಥೆ ಕೋಡಿತಿಮ್ಮನಹಳ್ಳಿಯಲ್ಲಿ 2009ನೇ ಸಾಲಿನಲ್ಲಿ ಅನುದಾನಕ್ಕೆ ಒಳಪಡುತ್ತದೆ. 2014ನೇ ಸಾಲಿಗೆ ಆ ಸಂಸ್ಥೆ ಶ್ರೀ ಸಿದ್ದಾರ್ಥ ಗೌತಮ ಗ್ರಾಮಾಂತರ ಪ್ರೌಢ ಶಾಲೆ ಎಂದು ಅದು ಬದಲಾವಣೆಯಾಗುತ್ತದೆ. ಈ ಬದಲಾವಣೆಯಾಗಿ ಇಲ್ಲಿಯವರೆಗೂ ಕೂಡ ಅಂದರೆ 2021ನೇ ಸಾಲಿನವರೆಗೂ ಕೂಡ ಅದಕ್ಕೆ ಅನುದಾನ ಬರುತ್ತದೆ. ಈ ನಡುವೆ ಶಿಕ್ಷಣ ಇಲಾಖೆ ಅವರಿಗೆ ಒಂದು ನೋಟಿಸ್ ಕೊಡುತ್ತದೆ.

**ಸಭಾಪತಿಯವರು:** ಶ್ರೀಯುತ ಚಿದಾನಂದಗೌಡರೆ, ಆಯಿತು, ಈಗ ಏನು ಹೇಳಬೇಕಾಗಿದೆ, ಅದನ್ನು ಹೇಳಿ.

**ಶ್ರೀ ಚಿದಾನಂದ್ ಎಂ. ಗೌಡ** : ಮಾನ್ಯ ಸಭಾಪತಿಯವರೇ, ಏನಿಲ್ಲ. ಅವರಿಗೆ ಈಗ ಅನುದಾನ ನಿಲ್ಲಿಸುತ್ತೇವೆಂದು ಶಿಕ್ಷಣ ಇಲಾಖೆ ನೋಟಿಸ್ ಕೊಟ್ಟಿದೆ. ಅದು ಸ್ಥಳಾಂತರವಾಯಿತು ಹಾಗೂ ಹಸ್ತಾಂತರವಾಯಿತು ಎನ್ನುವ ಕಾರಣಕ್ಕಾಗಿ ನಿಲ್ಲಿಸಿದ್ದಾರೆ. ಈಗ already ಅವರಿಗೆ ನೋಟಿಸ್ serve ಆಗಿದೆ. ಕೋರ್ಟ್‌ನಿಂದ ಕೂಡ ಆದೇಶವಾಗಿದೆ ಎಂದು ಹೇಳುತ್ತಿದ್ದಾರೆ. ಯಾವ ಗಳಿಗೆಯಲ್ಲಿ ಬೇಕಾದರೂ ಅದು ನಿಂತು ಹೋಗುತ್ತದೆ ಎಂದು ಅಲ್ಲಿ ಕೆಲಸ ಮಾಡುತ್ತಿರುವಂತಹ ಶಿಕ್ಷಕರು ಆತಂಕಕ್ಕೊಳಗಾಗಿದ್ದಾರೆ. ಅದು ಬಹಳ ಉತ್ತಮವಾಗಿ ನಡೆಯುತ್ತಿರುವಂತಹ ಪ್ರೌಢಶಾಲೆಯಾಗಿದೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಒಂದು ಆಡಳಿತ ಮಂಡಳಿ ಕೆಳಗಡೆ ಈಗ ಅವರು ಏನು lease ಗೆ ತೆಗೆದುಕೊಂಡು ಅಲ್ಲಿ ಕಟ್ಟಡ ಕಟ್ಟಿಕೊಂಡು ನಡೆಸುತ್ತಿರುತ್ತಾರೆ, ಮತ್ತೆ ಸ್ವಂತ ಕಟ್ಟಡ ಕಟ್ಟುತ್ತಾರೆ, ಅವರು ಸ್ಥಳಾಂತರ ಮಾಡಬೇಕೆಂದರೆ ಆಗ ಇಲಾಖೆಯವರು ವಿಪರೀತ ಕಂಡೀಷನ್ಸ್ ಹಾಕುತ್ತಾರೆ. ನೀವು ಹೊಸ ಶಾಲೆ ಎಂದು consider ಮಾಡುತ್ತೀರಿ. ಒಂದೇ ಆಡಳಿತ ಮಂಡಳಿ, ಒಂದೇ ಸ್ಕೂಲ್ ಸ್ಥಳಾಂತರಗೊಳ್ಳುವಂತಹದ್ದು, ಕಟ್ಟಡ ಬದಲಾವಣೆಯಾಗುವಂತಹದ್ದು, ಸ್ಥಳ ಬದಲಾವಣೆಯಾಗುವಂತಹದ್ದು, ಅದನ್ನು ನಿಶ್ಚಿತವಾಗಿ ನಾವು ಪ್ರಾರಂಭ ಮಾಡಿದ ಹಾಗೆ ಮಾಡುತ್ತೇವೆಂದರೆ ಇದು ತೀರಾ ಬಹಳ ಅನ್ಯಾಯವಾಗುತ್ತದೆ. ಈಗ management to management change ಆದರೆ ನೀವು ಅದಕ್ಕೆ ಬೇಕಾದರೆ ಹೊಸ ಶಾಲೆ ಎಂದು ಹೇಳಿ consider ಮಾಡಿ. ಆದರೆ, ಅವರು ಸ್ವಂತ ಕಟ್ಟಡ ಕಟ್ಟಿಕೊಂಡು ಅಲ್ಲಿಗೇ ಶಿಫ್ಟ್ ಮಾಡುತ್ತೇವೆ ಎಂದರೆ ಅದನ್ನು ನಾವು ಹೊಸದಾಗಿ ಕರೆಯುತ್ತೇವೆ ಎಂದು ಹೇಳಿದರೆ ಬಹಳ ಅನ್ಯಾಯವಾಗುತ್ತದೆ ಹಾಗೂ ಅಲ್ಲಿ ಕೆಲಸ ಮಾಡುತ್ತಿರುವಂತಹವರಿಗೆ ಎಲ್ಲರಿಗೂ ಸಹ ತುಂಬಾ ತೊಂದರೆಯಾಗುತ್ತದೆ. ದಯಮಾಡಿ ತಾವು ಇದನ್ನು ಸರಳೀಕರಣಗೊಳಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಸಭಾಪತಿಯವರು:** ಮಾನ್ಯ ಸಚಿವರೆ ಮಾತನಾಡಿ. ಉತ್ತರ ಬಹಳ ಹೆಚ್ಚು ಇದೆ, ಮಂಡಿಸುತ್ತೇನೆಂದು ಹೇಳಿಬಿಡಿ.

**ಶ್ರೀ ಎಸ್.ಸುರೇಶ್ ಕುಮಾರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):** ಈಗ ಈ ಸ್ಥಳಾಂತರ ಮತ್ತು ಹಸ್ತಾಂತರದ ಬಗ್ಗೆ ಬಾರಿ ಚರ್ಚೆಯಾಗಿದೆ. ಇದು ಬಹಳ ಹಿಂದೆಯೇ ಶಿಕ್ಷಣ ಕಾಯ್ದೆಯಲ್ಲಿ ಏನು ನಿಯಮಗಳನ್ನು ಮಾಡಿದ್ದರು, ಅದರ ಪ್ರಕಾರ ಮಾಡಿಕೊಂಡು ಬಂದಿದ್ದಾರೆ. ಈಗ ಕಾನೂನಿನ ಅಭಿಪ್ರಾಯ ಕೂಡ ಇದನ್ನು As if it were new school ಎನ್ನುವುದರ ಬದಲು As if a new school ಎಂದು ಮಾಡಬಾರದು ಎಂದು ಒಂದು ಮಾಡಿದ್ದಾರೆ. ನಾನು ಈಗ ಒಂದು ಕೆಲಸ ಮಾಡುತ್ತೇನೆ. ಇವರೆಲ್ಲರನ್ನೂ ಕೂಡ ಕರೆದು ಚರ್ಚೆ ಮಾಡಿ ಇದನ್ನು ಯಾವ ರೀತಿ ಸರಳೀಕರಣ ಮಾಡಬಹುದು ಎಂದು ಚರ್ಚಿಸಿನಾನು ಮಾಡಿಕೊಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:** ಧನ್ಯವಾದಗಳು ಸರ್.

**ಆ) ವಿಷಯ:- ಸರ್ಕಾರಿ ವಸತಿಯುತ ಕಿವುಡ ಮಕ್ಕಳ ಶಾಲೆಯ ಅಂಗವಿಕಲ ಶಿಕ್ಷಕರಿಗೆ ವಿಶೇಷ ವಿನಾಯಿತಿ ನಿಯಮಗಳನ್ನು ರೂಪಿಸಿ ಜೇಷ್ಠತೆಯನ್ನು ನಿಗದಿಗೊಳಿಸಿ ನಿವೃತ್ತ ಸಿಬ್ಬಂದಿಗಳಿಗೆ ಪಿಂಚಣಿ ನೀಡಲು ಸರ್ಕಾರದಿಂದ ಭರವಸೆ ನೀಡಲಾಗಿದ್ದರೂ ಪ್ರಸ್ತಾವನೆಯ ಜಾರಿಗೆ ಬಂದಿಲ್ಲದಿರುವ ಬಗ್ಗೆ.**

**- - -**

**ಶ್ರೀ ಎನ್. ಅಪ್ಪಾಜಿ ಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):** ಮಾನ್ಯ ಸಭಾಪತಿಯವರೆ, ನಿಯಮ-330ರ ಮೇರೆಗೆ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ಸರ್ಕಾರಿ ವಸತಿಯುತ ಕಿವುಡ ಮತ್ತು ಮಕ್ಕಳ ಶಾಲೆಯ ಅಂಗವಿಕಲ ಶಿಕ್ಷಕರಿಗೆ ವಿಶೇಷ ವಿನಾಯಿತಿಯ ನಿಯಮಗಳನ್ನು ರೂಪಿಸಿ, ಜೇಷ್ಠತೆಯನ್ನು ನಿಗದಿಗೊಳಿಸಿ, ನಿವೃತ್ತ ಸಿಬ್ಬಂದಿಗಳಿಗೆ ಪಿಂಚಣಿ ನೀಡಲು ಸರ್ಕಾರದಿಂದ ಭರವಸೆ ನೀಡಲಾಗಿದ್ದರೂ ಪ್ರಸ್ತಾವನೆ ಜಾರಿಗೆ ಬಂದಿಲ್ಲದ್ದರ ಬಗ್ಗೆ ಇದು ಚರ್ಚೆಯಾಗಿದೆ. ಬಹುಶ: ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರು ಇಲ್ಲಿಯೇ ಇದ್ದಾರೆ. ಇದು ವಿಧಾನಸಭೆಯಲ್ಲಿ ಮಾನ್ಯ ಶ್ರೀ ರವಿ ಸುಬ್ರಹ್ಮಣ್ಯರವರು ಹಾಗೂ ಮಾನ್ಯ ಯು.ಟಿ.ಖಾದರ್‌ರವರು ಇದರ ಬಗ್ಗೆ ಬಹಳ ಸಮಗ್ರವಾಗಿ ಚರ್ಚೆ ಮಾಡಿದ್ದಾರೆ. ಮಾನ್ಯ ಮಂತ್ರಿಯವರೂ ಕೂಡ ಕಳೆದ ಸುಮಾರು 6 ಅಧಿವೇಶನಗಳಿಂದಲೂ ಕೂಡ ಇದರ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ, ಇದನ್ನು ಪರಿಹಾರ ಮಾಡುತ್ತೇವೆಂದು ಚರ್ಚೆಯಾಗುತ್ತಲೇ ಇದೆ. ಮಾನ್ಯ ಸಚಿವರು ಕೂಡ ಇದರ ಬಗ್ಗೆ ಕಳಕಳಿಯಿದೆ ಎಂದು ಅವರ ಉತ್ತರದಲ್ಲಿ ಉತ್ತರ ಕೊಟ್ಟಿದ್ದಾರೆ. ದುರದೃಷ್ಟವಶಾತ್ ಇಷ್ಟೆಲ್ಲಾ ಚರ್ಚೆ ಆದರೂ ಕೂಡ ಇದರ ಬಗ್ಗೆ ಯಾವುದೇರೀತಿಯಾದಂತಹ ಪರಿಹಾರವಾಗಿಲ್ಲ. ಕಳೆದ ಸುಮಾರು6 ಅಧಿವೇಶನಗಳಿಂದಲೂ ಇದು ಚರ್ಚೆಯಾಗಿದ್ದು, ಮಾನ್ಯ ಮಂತ್ರಿಗಳು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಉತ್ತರ ಕೊಟ್ಟಿದ್ದರೂ ಕೂಡ ಇದಕ್ಕೆ ಉತ್ತರ ಸಿಗದೇ ಪರಿಹಾರವಾಗದಿದ್ದರೆ ಅಲ್ಲಿ ಕೆಲಸ ಮಾಡುವಂತಹ ನಿವೃತ್ತ ನೌಕರರ ಸ್ಥಿತಿಗತಿಯೇನು? ದಯವಿಟ್ಟು ಮಾನ್ಯರ ಮುಖಾಂತರ ಹೇಳುತ್ತೇನೆ. ಈ ವಿಷಯದ ಬಗ್ಗೆ ಸಂಪೂರ್ಣವಾದಂತಹ ಮಾಹಿತಿ ಮಾನ್ಯ ಸಚಿವರಿಗಿದೆ. ವಿಧಾನಸಭೆಯಲ್ಲಿ ಇದು ಬಹಳ ದೀರ್ಘವಾಗಿ ಚರ್ಚೆಯಾಗಿದೆ. ಮಾನ್ಯ ಸಚಿವರು ಕೂಡ 3ರಿಂದ 6 ತಿಂಗಳೊಳಗೆ ಇದಕ್ಕೆ ಪರಿಹಾರ ಕೊಡುತ್ತೇವೆ ಎಂದು ಕೂಡ ಮಾತು ಕೊಟ್ಟಿದ್ದಾರೆ. ಇಷ್ಟೆಲ್ಲಾ  ಆದರೂ ಕೂಡ ಏನೂ ಪರಿಹಾರವಾಗಿಲ್ಲ. ಹಾಗಾಗಿ ತಮ್ಮ ಮುಖಾಂತರ ಇನ್ನು ಮುಂದೆ ಈ ವಿಷಯದ ಬಗ್ಗೆ ಬಹಳ ತಡಮಾಡದೇ ಏನು ನಿವೃತ್ತರಾಗಿರುವಂತಹ ಈ ನೌಕರರಿಗೆ ಅವರ ಎಲ್ಲಾ ಸವಲತ್ತುಗಳನ್ನು ಬೇಗ ಒದಗಿಸಬೇಕು. ಆರ್ಥಿಕ ಇಲಾಖೆ ಹಾಗೂ ಲೋಕಾಯುಕ್ತ ಇಲಾಖೆ ಇದರ ಬಗ್ಗೆ ಕ್ರಮಗಳನ್ನು ಕೈಗೊಂಡಿದೆ. ಹಾಗಾಗಿ ಇದಕ್ಕೆ ಒಂದು ಬಹಳ ಗೌರವಯುತವಾಗಿ ನಿವೃತ್ತಿ ಹೊಂದಿರುವ ನೌಕರರಿಗೆ ಹಾಗೂ ಶಿಕ್ಷಕರಿಗೆ ತಾವು ಪರಿಹಾರ ಕೊಡಬೇಕೆಂದು ತಮ್ಮ ಮುಖಾಂತರ ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ)**: ಮಾನ್ಯ ಸಭಾಪತಿಯವರೇ, ಈ ಸಮಾಜದಲ್ಲಿ ಅಂಗವಿಕಲರ ಬಗ್ಗೆ ಮಾತನಾಡುವುದು ಎಂದರೆ ಬಹಳ ಅತ್ಯಂತ ನೋವಿನ ಸಂಗತಿ. ಈ ಅಂಗವಿಕಲ ಶಿಕ್ಷಕರುಗಳು ನಿವೃತ್ತಿಯಾದರೆ ಅವರುಗಳಿಗೆ ಪಿಂಚಣಿಯೇ ಇಲ್ಲವೆಂದರೆ ಹೇಗೆ? ಯಾವುದೋ ಇಲಾಖೆಯಲ್ಲಿ, ಕಾಯ್ದೆಯಲ್ಲಿ ಅಥವಾ ನಿಯಮಗಳಲ್ಲಿ ಏನೋ ದೋಷ ಉಂಟಾಗಿ ಅವರುಗಳಿಗೆ ಪಿಂಚಣಿ ಸೌಲಭ್ಯಗಳಿಂದ ತೊಂದರೆಯಾಗಿದೆ ಎಂದರೆ ಇದನ್ನು ದಯಮಾಡಿ, ಮಾನ್ಯ ಸಚಿವರು, ತಾವು ಇದರ ಬಗ್ಗೆ ಬಹಳ ಸಂಪೂರ್ಣವಾಗಿ ತಿಳಿದುಕೊಂಡಿದ್ದೀರಿ, ಇದರಲ್ಲಿ ಜನಸಂಖ್ಯೆ ಮುಖ್ಯವಲ್ಲ. ಈಗ ಅಂಗವಿಕಲ ವಿದ್ಯಾರ್ಥಿಗಳ ಶಿಕ್ಷಕರು ಅಂದರೆ ಕಿವುಡ, ಮೂಗ ಮಕ್ಕಳಿಗೆ ಪಾಠ ಕಲಿಸುವಂತಹವರು ಸಹ ಅಂಗವಿಕಲರೇ ಆಗಿರುತ್ತಾರೆ. ಅವರುಗಳಿಗೆ ಪಿಂಚಣಿ ಸೌಲಭ್ಯವಿಲ್ಲವೆಂದರೆ ಹೇಗೆ?  ಅವರು ಒಬ್ಬರು ಇರಲಿ ಅಥವಾ 10,000 ಶಿಕ್ಷಕರಿರಲಿ, ಅದು ಸಂಖ್ಯೆ ಮುಖ್ಯವಲ್ಲ. ಇಂತಹವರುಗಳಿಗೆ ನಿವೃತ್ತಿ ವೇತನ ದೊರೆಯುತ್ತಿಲ್ಲ, ಕಾಯ್ದೆಯಲ್ಲಿ ದೋಷವಿದೆಯೋ ಅಥವಾ ಸರ್ಕಾರದ ನಿಯಮಾವಳಿಯಲ್ಲಿ ದೋಷವಿದೆಯೋ ಅದನ್ನು ಸರಿಪಡಿಸಿ ಅವರೆಲ್ಲರಿಗೂ ಕೂಡ ನಿವೃತ್ತಿ ವೇತನ ಬರುವಂತೆ ಮಾಡಬೇಕು.

**(ಮುಂದು)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(556) 22.03.2021 06.00 ಎಸ್‌ವಿ-ವಿಕೆ**

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಇದರ ಬಗ್ಗೆ ಕೆಳಮನೆಯ ಮಾನ್ಯ ಸದಸ್ಯರೂ ಸಹ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಮಾನ್ಯ ಸಚಿವರು ಅರ್ಥ ಮಾಡಿಕೊಂಡಿದ್ದಾರೆ. ಆದ್ದರಿಂದ ಮಾನ್ಯ ಸಚಿವರು ಕ್ರಮ ವಹಿಸಿ ತತ್‌ಕ್ಷಣದಿಂದಲೇ ಅವರಿಗೆಲ್ಲಾ ಪಿಂಚಣಿ ಸೌಲಭ್ಯ ದೊರೆಯುವಂತೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದ್ದು ಅತ್ಯಂತ ಅಪರೂಪದ ಮತ್ತು ಮನ ಕಲಕುವ ವಿಚಾರ. ವಿಕಲಚೇತನ ಮಕ್ಕಳಿಗೆ ವಿಶೇಷವಾಗಿ ಕಿವುಡರು ಹಾಗೂ ಮೂಕ ಮಕ್ಕಳಿಗೆ ಶಿಕ್ಷಣ ಕೊಡುವಂತಹ ವ್ಯವಸ್ಥೆ ನೇರವಾಗಿ ಸರ್ಕಾರದಿಂದ ಆಗಬೇಕಾಗಿತ್ತು. ಪರ್ಯಾಯವಾಗಿ ಸಂಸ್ಥೆಗಳು ಸರ್ಕಾರದ ಪರವಾಗಿ ಸರ್ಕಾರದ ವಿಶೇಷ ಅನುದಾನವನ್ನು ಪಡೆದು ಈ ಶಾಲೆಗಳನ್ನು ನಡೆಸಲಿಕ್ಕೆ ಪ್ರಾರಂಭ ಮಾಡಿತು. ಏಕೆಂದರೆ ಉಳಿದ ಮಕ್ಕಳಿಗೆ ಇಂದು ಸರ್ಕಾರ ಶಿಕ್ಷಣವನ್ನು ನೀಡುತ್ತಿದೆ. ಅಂತೆಯೇ ವಿಕಲಚೇತನ ಮಕ್ಕಳಿಗೂ ಶಿಕ್ಷಣವನ್ನು ನೀಡಬೇಕಾದುದ್ದು ಸರ್ಕಾರದ ಅತ್ಯಂತ ಆದ್ಯತೆಯ ಕೆಲಸವಾಗಬೇಕಾಗಿದೆ. ಆ ಕೆಲಸವನ್ನು ಈ ಶಾಲೆಗಳು ಮಾಡಿಕೊಂಡು ಬಂದಿವೆ.

ಸರ್ಕಾರದ ಬಗ್ಗೆ ಒಂದು ಜಿಜ್ಞಾಸೆ ಇತ್ತು. ಈ ಶಾಲೆಗಳನ್ನು ಮತ್ತು ಈ ಶಾಲೆಗಳ ಶಿಕ್ಷಕರನ್ನು ಸರ್ಕಾರದ ಜೊತೆಗೆ ವಿಲೀನ ಮಾಡಬೇಕು. ಅದರೊಂದಿಗೆ ಅವರಿಗೆ ಸೇವಾ ಭದ್ರತೆಯನ್ನು ನೀಡಬೇಕು. ವೇತನ ಹಾಗೂ ನಿವೃತ್ತಿಯ ಎಲ್ಲಾ ಸವಲತ್ತುಗಳನ್ನೂ ನೀಡಬೇಕು. ಈ ಕುರಿತು ನಿರಂತರವಾದ ಚರ್ಚೆ ನಡೆಯಿತು. ಎಲ್ಲಿಯವರೆಗೆ ಹೋಯಿತೆಂದರೆ ಲೋಕಾಯುಕ್ತ ನ್ಯಾಯಾಲಯಕ್ಕೂ ಹೋಯಿತು. ಲೋಕಾಯುಕ್ತ ನ್ಯಾಯಾಲಯದಲ್ಲಿ ತೀರ್ಮಾನ ಬಂದಿತು. ಈ ವಿಕಲಚೇತನ ಶಾಲೆಗಳ ಶಿಕ್ಷಕರಿಗಾಗಿ ವಿಶೇಷ ನಿಯಮಗಳನ್ನು ರೂಪಿಸಿ ಅವರ ಸೇವೆಯನ್ನು ವಿಲೀನಗೊಳಿಸಬೇಕು. ವಿಲೀನಗೊಳಿಸಿ ಸರ್ಕಾರಿ ಶಿಕ್ಷಕರಿಗೆ ಏನು ಸವಲತ್ತುಗಳನ್ನು ನೀಡಲಾಗುತ್ತಿದೆಯೋ ಅವುಗಳನ್ನು ನೀಡಬೇಕು. ವೇತನದ ಜೊತೆಗೆ ನಿವೃತ್ತಿ ವೇತನವನ್ನು ನೀಡಬೇಕು.

ಈ ಹಿಂದೆ 2019ರಲ್ಲಿ ಮಾನ್ಯ ಖಾದರ್ ಅವರು ಸಚಿವರಾಗಿದ್ದ ಸಂದರ್ಭದಲ್ಲಿ, in principle he has agreed to it. ಅವರ ಸೇವೆಯನ್ನು ವಿಲೀನಗೊಳಿಸಿ, ಅವರಿಗೆ ನಿವೃತ್ತಿ ವೇತನವನ್ನು ನೀಡಲಾಗುವುದು ಎನ್ನುವಂತಹ ಭರವಸೆಯನ್ನು ಈ ಸದನದಲ್ಲಿ ಕೊಟ್ಟಿದ್ದರು. ಆದರೆ ಇನ್ನೂ ಅದು

ಅನುಷ್ಠಾನಕ್ಕೆ ಬಂದಿರುವುದಿಲ್ಲ. ಏಕೆಂದರೆ ಅದಕ್ಕೆ ವಿಶೇಷ ನಿಯಮಾವಳಿಗಳನ್ನು ಸರ್ಕಾರ ರೂಪಿಸಿ, ನಂತರ ಅವರನ್ನು ವಿಲೀನಗೊಳಿಸಬೇಕು. Then only they will be eligible for pension.

ಮಾನ್ಯ ಸಚಿವರೇ, ತಮಗೆ ಅನುಭವ ಇದೆ. ಒಬ್ಬ ವಿಕಲಚೇತನ ಮಗುವನ್ನು ಒಬ್ಬ ತಾಯಿ ನೋಡಿಕೊಳ್ಳುವುದು ಕಷ್ಟ. ಹತ್ತಾರು ಮಕ್ಕಳನ್ನು ಅತ್ಯಂತ ತಾಳ್ಮೆಯಿಂದ, ಸಂಯಮದಿಂದ ಸಂಭಾಳಿಸುವಂತಹ ಕೆಲಸವನ್ನು ಈ ಶಿಕ್ಷಕರು ಮಾಡಿಕೊಂಡು ಬಂದಿದ್ದಾರೆ. ಈ ವಿಶೇಷ ಶಾಲೆಗಳ ಶಿಕ್ಷಕರನ್ನು ವಿಶೇಷವಾಗಿ ನಾವು ನೋಡಬೇಕು. ಮಾನವೀಯ ದೃಷ್ಟಿಕೋನದಿಂದ ನೋಡಬೇಕು. ಅಂತಃಕರಣದ ದೃಷ್ಟಿಯಿಂದ ನೋಡಬೇಕು. ಸರ್ಕಾರ ಮಾತು ಕೊಟ್ಟಿದೆ. ಸರ್ಕಾರಗಳು ಬದಲಾಗುತ್ತಿವೆ, ಆದರೆ ಅವರ ಸಮಸ್ಯೆ ಪರಿಹಾರವಾಗುತ್ತಿಲ್ಲ. ಅವರ ನಿವೃತ್ತಿ ಬದುಕು ಅತ್ಯಂತ ಶೋಚನೀಯ ಸ್ಥಿತಿ ತಲುಪಿದೆ. ಈ ಹಿಂದೆ ಸರ್ಕಾರ ಮಾತು ಕೊಟ್ಟಿರುವ ಪ್ರಕಾರ ಇವರ ಸೇವೆಯನ್ನು ವಿಲೀನಗೊಳಿಸಬೇಕು ಮತ್ತು ಅವರಿಗೆ ಪಿಂಚಣಿ ಸೌಲಭ್ಯವನ್ನು ನೀಡಬೇಕೆಂದು ನಾನು ಆಗ್ರಹಿಸುತ್ತೇನೆ. ತಾವು ಇಂದೇ ಅದಕ್ಕೆ ಸ್ಪಷ್ಟವಾದ ಉತ್ತರವನ್ನು ನೀಡಬೇಕು. ಏನಾದರೂ ಮಾಡಿ ಮುಂದಿನ ವರ್ಷದಿಂದ ಅವರಿಗೆ ನಿವೃತ್ತಿ ವೇತನ ಬರುವಂತೆ ಅವರನ್ನು ನೋಡಿಕೊಳ್ಳಬೇಕೆಂದು ಹೇಳಿ ನಾನು ಆಗ್ರಹಿಸುತ್ತೇನೆ.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕ ಸಹೋದರರು ಹೇಳಿರುವುದು ಈಗಾಗಲೇ ನನ್ನ ಗಮನದಲ್ಲಿದೆ. ನಮ್ಮ ಸರ್ಕಾರ ಬಂದಾಗಿನಿಂದಲೂ ಸುಮಾರು ನಾಲ್ಕೈದು ಬಾರಿ ಈ ಒಂದು ಸಂಸ್ಥೆಯ ಬಗ್ಗೆ ಚರ್ಚೆ ಕೂಡ ಆಗಿದೆ. ಸಾಮಾನ್ಯ ಮಕ್ಕಳ ಶಿಕ್ಷಕರಿಗಿಂತ ವಿಶೇಷ ಮಕ್ಕಳ ಶಿಕ್ಷಕರ ಪಾಡೇನು ಎಂಬುದನ್ನು ನಾನು ಕೂಡ ಅನುಭವಿಸಿದ್ದೇನೆ. ಅದು ನನಗೂ ಕೂಡ ತಿಳಿದಿರುವಂತಹದ್ದು. ಕಳೆದ ಬಾರಿ ವಿಧಾನ ಪರಿಷತ್ತಿನಲ್ಲಿ ಹಾಗೂ ವಿಧಾನ ಸಭೆಯಲ್ಲಿ ಇದರ ಬಗ್ಗೆ ಪ್ರಶ್ನೆ ಬಂದಾಗ ಇದನ್ನು ಸಮರ್ಪಕವಾಗಿ ಚರ್ಚೆ ಮಾಡಲಾಗಿದ್ದು, ಸಚಿವಸಂಪುಟಕ್ಕೆ ಈ ವಿಷಯವನ್ನು ಒಯ್ದು ಅಲ್ಲಿ ಅನುಮೋದನೆ ಪಡೆದುಕೊಳ್ಳುವುದು ಬಾಕಿಯಿದೆ. ಈ ವಾರದಲ್ಲಿಯೇ ಅಲ್ಲಿಯೂ ಕೂಡಿ ವಿಶೇಷವಾದ ನಿಯಮಾವಳಿಗಳನ್ನು ಚರ್ಚೆ ಮಾಡಿ ಮುಂದೆ ಬರಲಿರುವ ಮೊದಲನೆಯ ಅಥವಾ ಎರಡನೆಯ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಳ್ಳಲಾಗುವುದು. ಮುಂದಿನ ಬಾರಿ ನಾನು ಇಲ್ಲಿಗೆ ಬರುವ ವೇಳೆಗೆ ಅದಕ್ಕೆ ಸಚಿವ ಸಂಪುಟದ ಅನುಮೋದನೆಯನ್ನು ತೆಗೆದುಕೊಳ್ಳುತ್ತೇನೆ. ಆ ಮೂಲಕ ಆ ಶಿಕ್ಷಕರಿಗೆ ನ್ಯಾಯವನ್ನು ಒದಗಿಸುವಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ನನ್ನ ಕಡೆಯಿಂದ ಮಾಡುತ್ತೇನೆ ಎನ್ನುವ ಭರವಸೆಯನ್ನು ನನ್ನ ಶಾಸಕ ಸಹೋದರರಿಗೆ ಕೊಡಲು ಇಚ್ಛಿಸುತ್ತೇನೆ.

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳನ್ನರ್ಪಿಸುತ್ತೇವೆ.

**ಶ್ರೀ ಎನ್. ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರು ಹೇಳಿರುವ ಉತ್ತರ ಬೇರೆ. ಆದರೆ ಕಳೆದ ಸದನದಲ್ಲಿ ನೀಡಿರುವ ಉತ್ತರಕ್ಕೂ ಈ ಬಾರಿ ಒದಗಿಸಲಾಗಿರುವ ಉತ್ತರಕ್ಕೂ ಒಂದು ಅಕ್ಷರ ವ್ಯತ್ಯಾಸವಿರುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಅಪ್ಪಾಜಿಗೌಡರೇ, ಈಗ ಮಾನ್ಯ ಸಚಿವರು ಮುಂಬರುವ ಸಚಿವಸಂಪುಟ ಸಭೆಯೊಳಗೆ ಆ ವಿಷಯವನ್ನು ಸಚಿವಸಂಪುಟಕ್ಕೆ ತೆಗೆದುಕೊಂಡು ಹೋಗಿ ಅನುಮೋದನೆಯನ್ನು ಪಡೆದುಕೊಳ್ಳುತ್ತೇನೆ. ಮುಂದಿನ ಬಾರಿ ಸದನಕ್ಕೆ ಬಂದಾಗ ಇದರ ಬಗ್ಗೆ ತಿಳಿಸುತ್ತೇನೆ ಎಂದು ಹೇಳಿದ್ದಾರೆ. ಮಾನ್ಯ ಸಚಿವರು ಬಹಳ ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಭರವಸೆಯು ಬೇಗ ಅನುಷ್ಠಾನಗೊಳ್ಳಲಿ ಎಂದು ಹೇಳಿ ಮುಂಗಡವಾಗಿಯೇ ಧನ್ಯವಾದಗಳನ್ನು ತಿಳಿಸುತ್ತೇನೆ.

**ಸಭಾಪತಿಯವರು:–** ಮುಂದಿನ ಸರದಿ ಮಾನ್ಯ ನಸೀರ್ ಅಹ್ಮದ್.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ ನಿಯಮ 330ರ ಅಡಿಯಲ್ಲಿ ಮಾತನಾಡಲು ನನಗೆ ಅವಕಾಶ ನೀಡಿದ್ದಕ್ಕೆ ಧನ್ಯವಾದಗಳು. ನನ್ನ ಮಾತುಗಳನ್ನು ಕೇಳಲಿಕ್ಕೆ ಮಾನ್ಯ ಸಚಿವರು ಸದನದಲ್ಲಿ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಪ್ಪಿದರೆ ನಾನು ಉತ್ತರವನ್ನು ನೀಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ನೀಡಬೇಕಾದ ಸಚಿವರು ಯಾರು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಆನಂದ್ ಸಿಂಗ್ ಅವರು ಉತ್ತರವನ್ನು ನೀಡಬೇಕು.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಅವರಿಂದ ನನಗೆ ಮೂರು ಪತ್ರಗಳು ಬಂದಿವೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾನಾಯಕರೇ, ಅವರ ಒಂದು ಫೋಟೋ ಅನ್ನು ನಮಗೆ ಕೊಟ್ಟುಬಿಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಸಭಾನಾಯಕರು ಉತ್ತರವನ್ನು ಕೊಡಲಿ, ನಮಗೇನೂ ತೊಂದರೆಯಿಲ್ಲ. ಆದರೆ ಸಭಾನಾಯಕರಿಗೆ ಬಹಳ ತ್ರಾಸ ಆಗುತ್ತದೆ ಎಂಬ ಕಾಳಜಿ ನಮ್ಮದು.

**ಸಭಾಪತಿಯವರು:-** ಮಾನ್ಯ ನಸೀರ್ ಅಹ್ಮದ್ ಅವರೇ, ತಾವು ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರೇ, ಮಾನ್ಯ ಆನಂದ ಸಿಂಗ್ ಅವರು "ನನಗೆ ಪೂರ್ವನಿಯೋಜಿತ ಕಾರ್ಯಕ್ರಮವಿರುವ ಕಾರಣ ಪ್ರಸ್ತುತ ನಡೆಯುತ್ತಿರುವ ಅಧಿವೇಶನದಲ್ಲಿ ದಿನಾಂಕ 22.03.2021ರಂದು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯಕಲಾಪದಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ ಎಂಬ ವಿಷಯವನ್ನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಾ ಸದರಿ ದಿನದ ಕಾರ್ಯಕಲಾಪಗಳ ಹಾಜರಾತಿಯಿಂದ ವಿನಾಯಿತಿ ನೀಡಬೇಕೆಂದು ತಮ್ಮಲ್ಲಿ ಕೋರುತ್ತೇನೆ" ಎಂದು ಪತ್ರ ಬರೆದಿದ್ದಾರೆ. ಹಿಂದೆಯೂ ಒಮ್ಮೆ ಅವರು ಪತ್ರವನ್ನು ಕೊಟ್ಟಿದ್ದರು. ಸದನ ನಡೆಯುವಾಗ ಅನ್ಯ ಕಾರ್ಯಕ್ರಮಕ್ಕೆ ಹೋಗಬಾರದು ಎಂಬುದು ಅವರಿಗೂ ತಿಳಿದಿದೆಯೆಂದು ಭಾವಿಸುತ್ತೇನೆ. ಹಾಗಾದರೆ ಉತ್ತರ ಹೇಳುವವರು ಯಾರು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟರೆ ನಾನೇ ಉತ್ತರವನ್ನು ಕೊಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಅತ್ಯಂತ ಹಿರಿಯರು ಮತ್ತು ಅನುಭವಿಗಳಿದ್ದೀರಿ. ಸದನ ನಡೆಯುವ ಸಂದರ್ಭದಲ್ಲಿ ಪೂರ್ವ ನಿಯೋಜಿತ ಕಾರ್ಯಕ್ರಮಕ್ಕೆ ಹೋಗುತ್ತೇನೆ ಎಂದರೆ ಸದನವು second priority ಎಂಬಂತಾಗುತ್ತದೆ.

**ಸಭಾಪತಿಯವರು:-** ಇತರ ಕಾರ್ಯಕ್ರಮಗಳನ್ನು ಒಪ್ಪಿಕೊಳ್ಳಬಾರದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸದನ ನಡೆಯುವ ಸಂದರ್ಭದಲ್ಲಿ ಅವರು ತಮ್ಮ ಖಾಸಗಿ ಕಾರ್ಯಕ್ರಮ ಅಥವಾ ಇನ್ನಿತರ ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸಿದರೆ ಈ ಸದನ ಏಕೆ? ಯಾವ ಪುರುಷಾರ್ಥಕ್ಕೆ ಈ ಸದನವನ್ನು ಕರೆಯಬೇಕು? ಮಂತ್ರಿಗಳೇ ಸದನದಲ್ಲಿ ಇಲ್ಲ ಎಂದರೆ ನಾವೇನು ಗೋಡೆಗಳೊಂದಿಗೆ ಮಾತನಾಡಬೇಕೆ? ದೊಡ್ಡ ಹೋರಾಟ ಮಾಡಿ, ಇಲ್ಲಿಂದ ಅಲ್ಲಿಗೆ ಜಿಗಿದು...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಹಿಂದೆಯೂ ಅನೇಕ ಸಂದರ್ಭಗಳಲ್ಲಿ ಸಭಾನಾಯಕರೇ ಉತ್ತರವನ್ನು ಕೊಟ್ಟಿರುತ್ತಾರೆ.

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರೇ, ನಾನು ನಿಮ್ಮ ವಿಷಯವಾಗಿ ಮಾತನಾಡುವುದಿಲ್ಲ. ಈಗ ಮಾನ್ಯ ಸಭಾಪತಿಯವರು ಪತ್ರವನ್ನು ಓದಿದರು. ಪೂರ್ವನಿಯೋಜಿತ ಕಾರ್ಯಕ್ರಮ ಇದ್ದುದರಿಂದ ವಿಧಾನ ಪರಿಷತ್ತಿನ ಕಲಾಪಗಳಿಗೆ ಹಾಜರಾತಿಯಿಂದ ವಿನಾಯ್ತಿಯನ್ನು ನೀಡಬೇಕು ಎಂದು ಬರೆದಿದ್ದಾರೆ. ಬಹುತೇಕ ನನ್ನ ಸಾರ್ವಜನಿಕ ಬದುಕಿನಲ್ಲಿ ಸಭಾಪತಿಯವರಿಗೆ ಈ ರೀತಿ ಪತ್ರ ಬರೆದಿರುವುದು ಇದೇ ಮೊದಲ ಬಾರಿಗೆ. ಇದಕ್ಕಿಂತಲೂ top priority ಏನ್ನಿದೆ? ಮಂತ್ರಿಯಾಗುವುದಕ್ಕೆ ದೊಡ್ಡ ಹೋರಾಟ ಮಾಡಿರುತ್ತಾರೆ. ಸದನ ನಡೆಯುವ ಸಂದರ್ಭದಲ್ಲಿ ಎಲ್ಲಿಯೋ ಕಾರ್ಯಕ್ರಮಕ್ಕೆ ಹೋಗುತ್ತೇನೆ ಎಂದರೆ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ...

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಅವರು ಮಾತನಾಡಲಿ. ಇದು ಸದನದ ಘನತೆಯ ಪ್ರಶ್ನೆಯಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ಸದನದ ಬಗ್ಗೆ ಮಾನ್ಯ ಸಚಿವರಿಗೆ ಗೌರವವಿಲ್ಲ. That Hon'ble Minister has taken this House very lightly. It is a disrespect to this August House. ಈ ರೀತಿಯ ವರ್ತನೆ ಸಹಿಸುವುದಕ್ಕಾಗುವುದಿಲ್ಲ. ಅವರು ಹೇಳಿದ್ದನ್ನೆಲ್ಲಾ ಕೇಳಿಕೊಂಡು ಕುಳಿತರೆ ನಾವೇಕೆ ಇಲ್ಲಿ ಈ ಕುರ್ಚಿಯ ಮೇಲೆ ಕುಳಿತುಕೊಳ್ಳಬೇಕು? ಇದಕ್ಕೇನಾದರೂ ಒಂದು ಪರಿಹಾರವನ್ನು ಕಂಡುಕೊಳ್ಳಬೇಕು. It is a serious matter, and it is happening every day. ಇಂದು ಸಭಾನಾಯಕರು ನಾಲ್ಕು ಪ್ರಶ್ನೆಗಳಿಗೆ ಉತ್ತರವನ್ನು ನೀಡಿದ್ದಾರೆ. ಅವರು ಜವಾಬ್ದಾರಿಯನ್ನು ಹೊರಬಾರದು.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಹಿಂದೆ ಒಂದು ಬಾರಿ ಅವರ ಆಪ್ತ ಕಾರ್ಯದರ್ಶಿ ನನಗೆ ಪತ್ರ ಬರೆದಿದ್ದು ತಮಗೆ ತಿಳಿದಿರಬಹುದು. ಇದು ಮೂರನೆಯ ಪತ್ರ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಆಪ್ತ ಸಹಾಯಕ ಅಥವಾ ಆಪ್ತ ಕಾರ್ಯದರ್ಶಿ ಕಡೆಯಿಂದ ತಮಗೆ ಪತ್ರವನ್ನು ಬರೆಸುತ್ತಾರೆ. ಈಗ ಅವರೇ ಬರೆದಿದ್ದಾರೆ. ಪೂರ್ವ ನಿಯೋಜಿತ ಕಾರ್ಯಕ್ರಮ ಏನು?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರ ಕಷ್ಟ ನನಗೊಬ್ಬನಿಗೆ ಅರ್ಥವಾಗುತ್ತಿರುವುದು. ಮಾನ್ಯ ಮುಖ್ಯಮಂತ್ರಿಗಳು ಬಿಟ್ಟರೆ ಬಹಳ ಖಾತೆಗಳ ಜವಾಬ್ದಾರಿಯನ್ನು ಅವರು ಹೊತ್ತಿದ್ದಾರೆ. ನನ್ನ ಅನುಭವದ ಹಿನ್ನೆಲೆಯಲ್ಲಿ ಹೇಳುವುದಾದರೆ ಅಪರೂಪಕ್ಕೆ ಯಾರಾದರೂ ಸಚಿವರು ಅತ್ಯಂತ ಅನಿವಾರ್ಯ ಕಾರಣಗಳಿಂದ ಬೇರೆಯವರಿಗೆ ಜವಾಬ್ದಾರಿಯನ್ನು ಹೊರಿಸುತ್ತಿದ್ದರು. ಬೆಳಿಗ್ಗೆ ಪ್ರಾರಂಭಿಸಿದರೆ ಸಂಜೆ 6.30–7.00 ಗಂಟೆಗೆ ನಾವು ಮನೆಗೆ ಹೋಗುವವರೆವಿಗೂ ಎಲ್ಲರನ್ನು ಮಾನ್ಯ ಸಭಾನಾಯಕರು ನಿಭಾಯಿಸುತ್ತೇನೆಂದರೆ ಯಾರು ಅದಕ್ಕೆ ನ್ಯಾಯವನ್ನು ಒದಗಿಸುವವರು?

**(ಮುಂದು)**

(557) 22.03.2021, 6 .10 KG.VK

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು):–**

ಏನು ಕೊಡುವುದಕ್ಕೆ ಆಗುತ್ತದೆ? ಇದು ಒಂದು ಆಸ್ಪತ್ರೆಯ ಮಹತ್ವದ ವಿಚಾರ. ಮೈಸೂರಿನಲ್ಲಿ ಒಂದು ಆಸ್ಪತ್ರೆಯನ್ನು ಮುಚ್ಚಿ ಆ ಆಸ್ಪತ್ರೆಯಲ್ಲಿದ್ದಂತಹ ಇಡೀ ಉಪಕರಣಗಳನ್ನು ಸ್ಥಳಾಂತರಿಸಿದ್ದಾರೆ. There is no hospital at all. ಈಗ ಅದು run ಆಗುತ್ತಿಲ್ಲ. ಇದು ಬಹಳ ಮಹತ್ವದ ವಿಚಾರ. ಇದನ್ನು ಸರಿಪಡಿಸುವುದಕ್ಕಿಂತಲೂ ಬೇರೆ ಜವಾಬ್ದಾರಿ ಏನಿದೆ? ಮಾನ್ಯ ಸಭಾಪತಿಯವರು ಎಷ್ಟು ಬಾರಿ ಮಾನ್ಯ ಸಭಾನಾಯಕರ ನೆರವಿಗೆ ಬರುವುದಕ್ಕೆ ಆಗುತ್ತದೆ? This is not good.

**ಸಭಾಪತಿಯವರು:–** ಮಾನ್ಯ ಸಭಾಪತಿಯವರೇ, ತಾವು ಉತ್ತರ ಹೇಳುವುದು ಮಹತ್ವ ಅಲ್ಲ. ಈ ಸದನದ ಗೌರವ ಏನೆಂದರೆ ನಾವೆಲ್ಲರೂ ಈ ಸದನದ ಗೌರವ ಮತ್ತು ಘನತೆ ಬಗ್ಗೆ ಮಾತನಾಡುತ್ತೇವೆ. ನಾನು ಇದಕ್ಕೆ ಸಂಬಂಧಪಟ್ಟಂತೆ, ನನ್ನದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ನಾನು 2006ರಲ್ಲಿ ಶಿಕ್ಷಣ ಮತ್ತು ಕಾನೂನು ಮಂತ್ರಿಯಾಗಿದ್ದೆ. ಆ ಸಂದರ್ಭದಲ್ಲಿ ಒಂದು ದಿವಸ ಕೆ.ಎಲ್.ಇ., ರವರ ಒಂದು ಕಾರ್ಯಕ್ರಮಕ್ಕೆ ಸಂಜೆ 6.30ಕ್ಕೆ ಒಪ್ಪಿಕೊಂಡಿದ್ದೆ. ಪ್ರತಿದಿವಸ ಸಾಮಾನ್ಯವಾಗಿ ಸಂಜೆ 6.30 ಕ್ಕೆ ಕೆಳಮನೆಯ ಕಾರ್ಯಕಲಾಪಗಳು ಮುಗಿಯುತ್ತವೆ ಎಂದು ಆ ಕಾರ್ಯಕ್ರಮಕ್ಕೆ ಒಪ್ಪಿಕೊಂಡಿದ್ದೆ. ಆ ಸಂದರ್ಭದಲ್ಲಿ ಕೆಳಮನೆಯಲ್ಲಿ ಸನ್ಮಾನ್ಯ ಕೃಷ್ಣರವರು ಸಭಾಧ್ಯಕ್ಷರಿದ್ದರು. ಅಂದು ಸಂಜೆ 4.00 ಗಂಟೆಗೆ Human Rights Bill ಬಂತು. ಆಗ ನಾನು, ಶ್ರೀ ಮಾಧುಸ್ವಾಮಿ ಮತ್ತು ಶ್ರೀ ವಾಟಾಳ್ ನಾಗರಾಜ್‌ರವರು ಸೇರಿ ಒಂದು ಚೀಟಿಯನ್ನು ಪೀಠಕ್ಕೆ ಕಳುಹಿಸಿ ಈ ರೀತಿ ಸಂಜೆ 6.30ಕ್ಕೆ ಒಂದು ಕಾರ್ಯಕ್ರಮಕ್ಕೆ ಒಪ್ಪಿಗೆ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸೂಚಿಸಿರುವುದರಿಂದ ದಯಮಾಡಿ ನನ್ನನ್ನು ಸಂಜೆ 6.30 ಗಂಟೆಗೆ ಕಳುಹಿಸಬೇಕೆಂದು ಕೇಳಿಕೊಂಡಿದ್ದೆ. ಅದಕ್ಕೆ ಮಾನ್ಯ ಸಭಾಧ್ಯಕ್ಷರು ಆ ಚೀಟಿಯ ಮೇಲೆ ನೀವು ಕಾನೂನು ಮತ್ತು ಶಿಕ್ಷಣ ಮಂತ್ರಿಗಳು ಇದ್ದೀರಿ, ನಿಮಗೆ ಸದನ ನಡೆಯುವಂತಹ ಸಂದರ್ಭದಲ್ಲಿ ಹೊರಗಿನ ಕಾರ್ಯಕ್ರಮಗಳಿಗೆ ಒಪ್ಪಿಗೆ ಕೊಡಬಾರದೆಂದು ಕನಿಷ್ಠ ಬುದ್ದಿಯೂ ಇಲ್ಲ ಎಂದು ಬರೆದು ಕಳುಹಿಸಿದರು. ದಾಖಲೆಯಲ್ಲಿ ಬುದ್ಧಿ ಇಲ್ಲವೆಂದು ಬರೆದರು. ಆ ಮೇಲೆ 'ಕ್ಷಮಿಸಿ' ಎಂದು ನಾನು ಮತ್ತೆ ಬರೆದು ಪೀಠಕ್ಕೆ ಕಳುಹಿಸಿದೆ. ನಂತರ ಅವರು ಸಂಜೆ 6.30 ಕ್ಕೆ ನನ್ನನ್ನು ಕಳುಹಿಸಿಕೊಟ್ಟರು. ಸದನ ನಡೆಯುವಂತಹ ಸಂದರ್ಭದಲ್ಲಿ ಯಾವುದೇ ಕಾರ್ಯಕ್ರಮವಿರಲಿ, particularly ವಿಧಾನ ಪರಿಷತ್ತಿನಲ್ಲಿ ಈ ರೀತಿ ನಿಷ್ಕಾಳಜಿ ಮಾಡಿ ಸದನಕ್ಕೆ ಬರಲಿಲ್ಲವೆಂದರೆ, ನನಗೂ ಸಹ ನೋವಾಗುತ್ತದೆ. ಈ ಸದನವನ್ನು ಯಾವುದಕ್ಕೂ ಲೆಕ್ಕಕ್ಕೆ ತೆಗೆದುಕೊಂಡಿಲ್ಲವೆಂದರೆ ಹೇಗೆ? ಆಸ್ಪತ್ರೆಯಲ್ಲಿ admit ಆಗಿದ್ದಾರೆ ಅಥವಾ ಕೆಳಮನೆಯಲ್ಲಿ ವಿಧೇಯಕ ಇದೆ ಎಂದು ಹೇಳಿದರೆ ಪರವಾಗಿಲ್ಲ. ಇಲ್ಲಿಯವರೆಗೆ ಮೂರು ಬಾರಿ ಆಗಿದೆ. ಮಾನ್ಯ ಸಭಾನಾಯಕರೇ, ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ತಾವು ತಪ್ಪು ತಿಳಿದುಕೊಳ್ಳಬೇಡಿ. ಇದು ಪದೇ ಪದೇ repeat ಆಗಬಾರದು, ಇದು ಅವರದ್ದು ಮಾತ್ರವಲ್ಲ. ಯಾರೇ ಸಚಿವರಾಗಿರಲಿ, ಈ ರೀತಿ ವಿನಾಕಾರಣ ಮಾಡಿದರೆ ನಾನು ಕೇಳುವುದಿಲ್ಲ. ಇಲ್ಲವೆಂದರೆ, ಬೇರೆ ಬೇರೆ ರೀತಿಯಿಂದ ಹೇಳಬೇಕಾಗುತ್ತದೆ. ದಯಮಾಡಿ ತಾವು ಕ್ಷಮಿಸಬೇಕು, ಈ ಸದನದ ಗೌರವ ಘನತೆಯನ್ನು ಎತ್ತಿಹಿಡಿಯಬೇಕು,

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮಗೆ ಪತ್ರ ಆ ರೀತಿ ಬರೆದಿದ್ದಾರೆ. ಇದಕ್ಕೆ ಮೂಲ ಕಾರಣ ಬೇರೆ ಇದೆ. ಅವರಿಗೆ ಅವರ ಖಾತೆಯ ಬಗ್ಗೆ ಅತೃಪ್ತಿ, ಅಸಮಧಾನ ಇದೆ. ಅವರಿಗೆ ಸದನಕ್ಕೆ ಬಂದು ಉತ್ತರ ಕೊಡುವುದಕ್ಕೆ ಮನಸ್ಸಿಲ್ಲ. ಆದ್ದರಿಂದ, ಮಾನ್ಯ ಸಚಿವರಾದ ಆನಂದ್ ಸಿಂಗ್‌ರವರು ಆ ರೀತಿ ಬರೆದಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅದು ಸರ್ಕಾರಕ್ಕೆ ಗೊತ್ತಿಲ್ಲ.

**ಶ್ರೀ ಕೆ.ಗೋವಿಂದರಾಜ್ (ವಿಧಾನ ಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ನಾನು ತಮಗೆ ಈಗಾಗಲೇ 2-3 ಬಾರಿ ತಿಳಿಸಿದ್ದೇನೆ. ಲಿಖಿತ ಮೂಲಕ ಪ್ರಶ್ನೆಗಳಿಗೆ ಇದುವರೆಗೂ ಒಂದು ಉತ್ತರವು ಸಹ ಬಂದಿಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ಇದರ ಬಗ್ಗೆ ಮಾತನಾಡಿ. ಆಮೇಲೆ ಅದನ್ನು ಹೇಳಿ. ನೀವು ಇದನ್ನು ಶಿವಪೂಜೆಯಲ್ಲಿ ಕರಡಿಗೆ ಬಿಟ್ಟಂತೆ ಹೇಳುತ್ತಿದ್ದೀರಿ.

**ಶ್ರೀ ಕೆ.ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ನನ್ನದೊಂದು ಸಮಸ್ಯೆ ಇತ್ತು. ಅದಕ್ಕೆ ಹೇಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ಅದನ್ನು ಬಿಡಿ. ಇದರ ಬಗ್ಗೆ ಹೇಳಿ. ನಾನು ಸದನದ ಬಗ್ಗೆ ಮಾತನಾಡುತ್ತಿದ್ದೇನೆ. ತಾವು ಲಿಖಿತ ಪ್ರಶ್ನೆಗೆ ಹೊರಟ್ಟಿದ್ದೀರಿ. ನಸೀರ್‌ರವರೇ, ತಾವು ಮಾತನಾಡಿ.

**ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, ಸಭಾನಾಯಕರು ಉತ್ತರ ಕೊಡುತ್ತೇನೆಂದು ಹೇಳಿ ಅಧಿಕಾರಿಗಳು ಬರೆದು ಕಳುಹಿಸಿರುವಂತಹ ಉತ್ತರವನ್ನು ಓದುತ್ತಾರೆ. ಇದು ನಡೆಯುತ್ತಿದ್ದ ಒಂದು ಆಸ್ಪತ್ರೆ. ಆ ಆಸ್ಪತ್ರೆಯಲ್ಲಿ ಉಚಿತವಾಗಿ dialysis, Covid-19 patients ಗೆ ಚಿಕಿತ್ಸೆ ದೊರೆಯುತ್ತಿತ್ತು. ಸಾಮಾನ್ಯ ಜನರು ಸಹ ಅಲ್ಲಿಗೆ ಹೋಗುತ್ತಿದ್ದರು. ಆದರೆ, lease amount ವಿಚಾರದಲ್ಲಿ Management ಮತ್ತು ಇವರ ನಡುವೆ ವ್ಯತ್ಯಾಸ ಬಂದಿದೆ. Management ನವರು ಮೂರು ಲಕ್ಷ ಕೊಡಿ ಎಂದು ಕೇಳುತ್ತಿದ್ದಾರೆ. ಅವರು ಅದಕ್ಕೆ 1.25 ಲಕ್ಷ ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅದಕ್ಕೆ lockout ಮಾಡಿದ್ದಾರೆ. ನಿಜವಾಗಲೂ ಅವರಿಗೆ ರೋಗಿಗಳ ಬಗ್ಗೆ ಸ್ವಲ್ಪವು ಕನಿಕರವಿಲ್ಲ....

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಈಗ ತಾವು ಮಾನ್ಯ ಸಭಾನಾಯಕರೇ ಉತ್ತರ ಕೊಡಬಹುದೆಂದು ಹೇಳುತ್ತೀರೋ ಅಥವಾ ಮಾನ್ಯ ಸಚಿವರು ಬಂದು ಉತ್ತರ ಕೊಡಬೇಕೆಂದು ಹೇಳುತ್ತೀರೋ?

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಂದು ಉತ್ತರ ಹೇಳಲಿ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಮಾನ್ಯ ಸಚಿವರು ಬಂದು ಉತ್ತರ ಹೇಳಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, Tribunal ನಲ್ಲಿ tender ಮೂಲಕ ಮಾಡಿ ಎಂದು ಹೇಳಿದೆ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಸಂಧಾನ ಮಾಡಿ ಎಂದು ಹೇಳಿದ್ದೆವು ಅವರು ಮಾಡಿದ್ದಾರೆಯೇ?

. **ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, Tribunal ಉತ್ತರದಲ್ಲಿ ಟೆಂಡರ್ ಮೂಲಕ ಮಾಡಿ ಎಂದು ಹೇಳಿದೆ. ನನಗೆ ಇರುವ ಮಾಹಿತಿ ಪ್ರಕಾರ ಆಸ್ಪತ್ರೆಯವರು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದಾರೆ. ಅದಕ್ಕೆ ಮಾನ್ಯ ಉಚ್ಚ ನ್ಯಾಯಾಲಯ ನ್ಯಾಯಯುತವಾಗಿ ತೀರ್ಮಾನ ಮಾಡಿಕೊಂಡು ವರದಿ ಕೊಡಿ ಎಂದು ಹೇಳಿದ್ದಾರೆ. ಹಾಗಾಗಿ, ಮಾನ್ಯ ಸಚಿವರು ಬಂದ ತಕ್ಷಣ ಮಾನ್ಯ ಸದಸ್ಯರನ್ನು ಮತ್ತು ಅವರನ್ನು ಸೇರಿಸಿ ಒಂದು ಸಭೆ ಮಾಡಿ ಇದಕ್ಕೆ ಏನಾದರೊಂದು ಪರಿಹಾರವನ್ನು ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆ. ಈಗ ನಾನು ಸರ್ಕಾರದ ಪರವಾಗಿ ಹೇಳುತ್ತಿದ್ದೇನೆ. ಮಾನ್ಯ ಸಚಿವರು ಬಂದ ತಕ್ಷಣ ಮಾನ್ಯ ಸದಸ್ಯರನ್ನು ಮತ್ತು ಅವರನ್ನು ಕರೆದು ಒಂದು ಸಭೆ ಮಾಡಿ ಇದಕ್ಕೆ ಒಂದು ನ್ಯಾಯಯುತವಾದ ಪರಿಹಾರವನ್ನು ಮಾಡೋಣ. ಏಕೆಂದರೆ, ಆಸ್ಪತ್ರೆ open ಆಗಬೇಕು ಎನ್ನುವುದರ ಬಗ್ಗೆ ಎರಡು ಮಾತಿಲ್ಲ. ಅದರಲ್ಲಿ ಬಡ ರೋಗಿಗಳಿದ್ದಾರೆ. ಅದನ್ನು ಪುನಃ ಪ್ರಾರಂಭವಾಗುವಂತೆ ಮಾಡಬೇಕಾಗಿರುವುದು ಸರ್ಕಾರದ ಜವಾಬ್ದಾರಿ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಸಾಕಷ್ಟು ವಿಷಯಗಳಿವೆ. ಅವು ಚರ್ಚೆಯಾಗಬೇಕು, ಮೈಸೂರಿನ ಸಾಕಷ್ಟು ಹಿರಿಯ ಸದಸ್ಯರು ಸಹ ಈ ಸದನದಲ್ಲಿದ್ದಾರೆ. ಇಲ್ಲಿ ಇರುವಂತಹ ಜಾಗ Bibi Ayesha Milli Hospital ಎಂದು ಇದೆ.  ಅದರ ಬೆಲೆ ಲೋಕೋಪಯೋಗಿ ಇಲಾಖೆಯಿಂದ ಬರೆಸಿಕೊಂಡಿರುವಂಥದ್ದು 37 ಕೋಟಿ 92 ಸಾವಿರ ಇದೆ. ಇದು ಅಲ್ಲಿರುವ ಜಾಗದ ಬೆಲೆ ಎಂದು ಹಾಕಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಈಗ ಚರ್ಚೆ ಮಾಡುತ್ತೇನೆಂದರೆ, ಚರ್ಚೆ ಮಾಡುವುದಕ್ಕೆ allow ಮಾಡುತ್ತೇನೆ. ಇಲ್ಲವೆಂದರೆ, ಮಾನ್ಯ ಸಚಿವರು ಬಂದು ಉತ್ತರ ಹೇಳಬೇಕೆಂದರೆ, ಮಾನ್ಯ ಸಚಿವರು ಬಂದ ಮೇಲೆ ಚರ್ಚೆಯನ್ನು ಮಾಡೋಣ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಂದರೆ ಸರಿ. ನಾವು ಮಾತನಾಡುವುದು  ಅವರಿಗೂ ತಿಳಿಯುತ್ತದೆ. ಅವರು ಹೊಸದಾಗಿ ಬಂದಿರುವಂತಹ ಸಚಿವರು.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಆಯಿತು.

•ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಂದ ಮೇಲೆ ಒಂದು ಸಭೆಯನ್ನು ಮಾಡೋಣ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಸಭೆ ಮಾಡಿದರೆ ಆಗುವುದಿಲ್ಲ. ಮಾನ್ಯ ಸದಸ್ಯರು ಸದನಲ್ಲಿ ಚರ್ಚೆಯಾಗಬೇಕೆಂದು ಹೇಳುತ್ತಿದ್ದಾರೆ. ಹಾಗಾಗಿ, ಮಾನ್ಯ ಸಚಿವರು ಬಂದು ಸದನದಲ್ಲಿ ಉತ್ತರವನ್ನು ಕೊಡಲಿ. ಮಾನ್ಯ ವೆಂಕಟೇಶ್‌ರವರೇ, ತಾವು ಮಾತನಾಡಿ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಎಂತೆಂತಹ ವಿಚಾರಗಳು ಬಂದರೂ ಸಹ, ಸಭಾನಾಯಕರು ಅದಕ್ಕೆ ಬಹಳ ಉತ್ತಮವಾಗಿ ಉತ್ತರ ನೀಡುತ್ತಾರೆ. ಅದರಲ್ಲಿ ಎರಡನೇ ಮಾತಿಲ್ಲ. ಅಂತಹ ನಿಷ್ಠಾವಂತರು ನಮ್ಮ ವಿಧಾನ ಪರಿಷತ್ತಿನಲ್ಲಿ ಇರುವುದು ನಮ್ಮ ಅದೃಷ್ಟ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಮಾನ್ಯ ಸಭಾನಾಯಕರೇ, ಎಲ್ಲವನ್ನು ಮೈಮೇಲೆ ಹಾಕಿಕೊಳ್ಳುತ್ತಾರೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ದುರಾದೃಷ್ಟವೆಂದರೆ, ಅವರು ಯಾವಾಗಲೂ ಆಡಳಿತ ಪಕ್ಷದಲ್ಲಿ ಇರಬಾರದು. ಅವರು ಆಡಳಿತ ಪಕ್ಷದಲ್ಲಿದ್ದರೆ ಅದು ನಮ್ಮ ದುರಾದೃಷ್ಟ. ಅವರು ವಿರೋಧ ಪಕ್ಷದಲ್ಲಿದ್ದರೆ ಈ ರಾಜ್ಯಕ್ಕೆ ಬಹಳ ಒಳ್ಳೆಯದು ಆಗುತ್ತದೆ. ಅವರೇ ಏನಾದರೂ ಮಾಡಿ ಈಚೆಗೆ ಬಂದರೆ, ಈ ರಾಜ್ಯಕ್ಕೆ ಒಳ್ಳೆಯದು ಆಗುತ್ತದೆ. ಮೊನ್ನೆ ದಿವಸ ತಮಗೆ ಗೊತ್ತಿದ್ದಂತೆ, flyover ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ನಾವು ಮಾತನಾಡಿದ ನಂತರ ಮಾನ್ಯ ಸಚಿವರು ಬಂದು ಉತ್ತರ ಕೊಡಬೇಕೆಂದು ಕೇಳಿದ್ದೆವು. ಮಾನ್ಯ ಸಚಿವರು ಬಂದಾಗ ಒಂದು ವಿಚಾರ ಬಂತು, ನಾನು NHAI 4 ಜನರನ್ನು ಕರೆದು ಸಭೆ ಮಾಡಿದೆ. ಸರ್ಕಾರಿ ಅಧಿಕಾರಿಗಳು ಕೊಟ್ಟಿದ್ದನ್ನು ಮಾನ್ಯ ಸಭಾನಾಯಕರು ಓದುತ್ತಾರೆ. ಇದು ತಪ್ಪು. ಅಕಸ್ಮಾತ್ ಯಾರೋ ಒಬ್ಬರು ಸಚಿವರು ಬರುವುದಿಲ್ಲ ಎಂದರೆ, ಒಪ್ಪಬಹುದು. ಆದರೆ, ಎಲ್ಲದಕ್ಕೂ ಈ ರೀತಿಯಾದರೆ ಹೇಗೆ? ಮಾನ್ಯ ಸಭಾನಾಯಕರು ಬಹಳ ಒಳ್ಳೆಯವರು. ಅವರ ಒಳ್ಳೆಯತನವನ್ನು ಬೇರೆಯವರು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಇದು ಆಗಬಾರದೆಂದು ನಮ್ಮ ವಿನಂತಿ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ದಯವಿಟ್ಟು ಈ ಸದನ ಮುಗಿಯುವವರೆಗೆ ಮಾನ್ಯ ಸಚಿವರುಗಳಿಗೆ ಹಾಜರಿರುವಂತೆ ಹೇಳಿ. ಇದು ಇಡೀ ಸದನದ ತೀರ್ಮಾನ. ಇದನ್ನು ಅರ್ಥ ಮಾಡಿಕೊಳ್ಳುತ್ತೀರೆಂದು ನಾನು ಭಾವಿಸಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 14. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ

**ವಿಷಯ:** ಡಿಸೇಲ್, ಪೆಟ್ರೋಲ್ ಹಾಗೂ ಗ್ಯಾಸ್ ಬೆಲೆಗಳು ಹೆಚ್ಚಾಗಿರುವುದರಿಂದ ದಿನನಿತ್ಯ ಬಳಕೆಯ ವಸ್ತುಗಳು ದುಬಾರಿಯಾಗಿರುವ ಕಾರಣ ಸಾಮಾನ್ಯ ಜನರ ಪರಿಸ್ಥಿತಿ ಚಿಂತಾಜನಕವಾಗಿರುವ ಕುರಿತು.

– – –

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಿಯಮ 59 ರಡಿಯಲ್ಲಿ ಈ ಬೆಲೆ ಏರಿಕೆ ಸಲುವಾಗಿ ಈ ನಿಲುವಳಿ ಸೂಚನೆಯನ್ನು ಮಂಡಿಸಿದ್ದೆ. ತಾವು ಅದನ್ನು ನಿಯಮ 68 ಕ್ಕೆ ಪರಿವರ್ತನೆ ಮಾಡಿ ಈಗ ಬೆಲೆ ಏರಿಕೆ ವಿಚಾರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿದ್ದೀರಿ. ಅದಕ್ಕೆ ತಮಗೆ ಮತ್ತೊಮ್ಮೆ ವಂದಿಸಿ ನಾನು ನನ್ನ ಮಾತುಗಳನ್ನು ಪ್ರಾರಂಭ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, 2014 ರಲ್ಲಿ ಬಿ.ಜೆ.ಪಿ. ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಮೊದಲು, ಆಗಿನ UPA ಸರ್ಕಾರ 10 ವರ್ಷಗಳ ಕಾಲ ಎರಡು ಸರ್ಕಾರಗಳ ವಿರುದ್ಧ ಈ ಬೆಲೆ ಏರಿಕೆ ವಿಚಾರವಾಗಿ ಇಡೀ ದೇಶಾದ್ಯಂತ ಕನ್ಯಾಕುಮಾರಿಯಿಂದ ಹಿಡಿದು ಕಾಶ್ಮೀರದವರೆಗೂ ಬಹಳಷ್ಟು ಪ್ರತಿಭಟನೆಗಳು ನಡೆದವು. ಆಗ ಸ್ವಲ್ಪ ಮಟ್ಟಿಗೆ ಗ್ಯಾಸ್ ಬೆಲೆ ಏರಿಕೆಯಾಗಿತ್ತು. UPA ಸರ್ಕಾರ ಇದ್ದಾಗ. ಆ ಸಂದರ್ಭಲ್ಲಿ ಬಿಜೆಪಿ ಮಹಿಳಾ ಸಂಸದರು ಮತ್ತು ಮಹಿಳಾ ಶಾಸಕರುಗಳು ತಲೆಯ ಮೇಲೆ ಸಿಲೆಂಡರ್‌ನ್ನು ಹೊತ್ತುಕೊಂಡು ಪ್ರತಿಭಟನೆ ಮಾಡಿದ್ದನ್ನು ನಾವೂ ಕಣ್ಣಾರೆ ನೋಡಿದ್ದೇವೆ. ಅಷ್ಟು ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆ ಮಾಡಿದರು. ಇವತ್ತು ಪೆಟ್ರೋಲ್, ಡೀಸಲ್ ಬೆಲೆ 50 ಪೈಸೆಯಷ್ಟು ಹೆಚ್ಚಿಗೆಯಾದರೆ, ಯಾರು bicycle ತೆಗೆದುಕೊಂಡು ಹೊರಟರು? ಯಾರು ಎತ್ತಿಗಾಡಿಯಲ್ಲಿ ಹೋಗುತ್ತಿದ್ದಾರೆ? ಅವತ್ತು ಮಾಡುತ್ತಿದ್ದ ದಾಂದಲೆಯನ್ನು ನೋಡಿದರೆ, UPA ಸರ್ಕಾರದಿಂದ ಯಾರೂ ಸಹ ಈ ದೇಶದಲ್ಲಿ ಬದುಕುವುದು ದುಸ್ತರವೆನ್ನುವಷ್ಟರ ಮಟ್ಟಿಗೆ ಪ್ರತಿಭಟನೆಗಳನ್ನು ಮಾಡಿದರು. ಅವು ಸಣ್ಣ ಪ್ರಮಾಣದ ಪ್ರತಿಭಟನೆಗಳಲ್ಲ. ಅವು ದಾಂದಲೆ ರೂಪದ ಪ್ರತಿಭಟನೆಗಳು. ಆ ಪ್ರತಿಭಟನಾ ಸಂದರ್ಭದಲ್ಲಿ ಇಂದಿನ ಮಾನ್ಯ ಗೌರವಾನ್ವಿತ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಅಧಿಕಾರಕ್ಕೆ ಬಂದರೆ, ನಿಶ್ಚಿತವಾಗಿಯೂ ಈ ದೇಶದ ಸ್ಥಿತಿಗತಿಗಳಲ್ಲಿ ಸುಧಾರಣೆಯಾಗುತ್ತದೆಂದು ಹೇಳಿದ್ದರು.

**(ಮುಂದು)**

**(558) 22–03–2021 (6–20)ಎಂವಿ–ಬಿಎನ್‌ಎಸ್**

**ಶ್ರೀ ಎಸ್.ಆರ್.ಪಾಟೀಲ್ (ಮುಂದು...):–**

ನಿಶ್ಚಿತವಾಗಿಯೂ ಈ ದೇಶದ ಸ್ಥಿತಿಗತಿ ಸುಧಾರಣೆಯಾಗುತ್ತದೆ. ಈಗ ಬೆಲೆ ಏರಿಕೆಗೆ ಪರಿಹಾರವೆಂದರೆ, ಮಾನ್ಯ ನರೇಂದ್ರ ಮೋದಿಯವರ ಸರ್ಕಾರವೇ ಪರಿಹಾರ ಎನ್ನುವಷ್ಟರ ಮಟ್ಟಿಗೆ ತಮ್ಮ ಭಾಷಣದ ಮುಖಾಂತರ ಜನರನ್ನು ಬಿಂಬಿತ ಮಾಡಿದರು. ಮಾನ್ಯ ನರೇಂದ್ರ ಮೋದಿಯವರ ಸರ್ಕಾರ ಈ ದೇಶಕ್ಕೆ ಬರಬೇಕು ಮತ್ತು ಅವರು ಈ ದೇಶದ ಆಡಳಿತ ಸೂತ್ರವನ್ನು ಹಿಡಿಯಬೇಕು. ಅವರು ಈ ದೇಶದ ರಾಜ್ಯಭಾರ ಮಾಡಿದರೆ ಬೆಲೆ ಸ್ಥಿಮಿತಕ್ಕೆ ಬರುತ್ತದೆ. ಬಡವರು ಮತ್ತು ಮಧ್ಯಮ ವರ್ಗದವರು ನೆಮ್ಮದಿಯಿಂದ ಬದುಕುವುದಕ್ಕೆ ಸಾಧ್ಯವಿದೆ ಎನ್ನುವಷ್ಟರ ಮಟ್ಟಿಗೆ ನಂಬಿಸಿದ್ದರು. ಅಷ್ಟೇ ಅಲ್ಲ, ಸ್ವರ್ಗವೇ ಧರೆಗೆ ಬರುತ್ತದೆ ಎನ್ನುವಷ್ಟರ ಮಟ್ಟಿಗೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದರು. 2014ರಲ್ಲಿ ಎನ್.ಡಿ.ಎ. ಸರ್ಕಾರ ಅಧಿಕಾರಕ್ಕೆ ಬಂತು. ಮಾನ್ಯ ಅರುಣ ಶಹಾಪುರ್‌ರವರೆ ಅವರು ಅಧಿಕಾರಕ್ಕೆ ಬಂದು ಸುಮಾರು ಏಳು ವರ್ಷವಾಗಿದೆ. ಆದರೆ, ಈಗ ದೇಶದ ಅರ್ಥ ವ್ಯವಸ್ಥೆ ಏನಾಗಿದೆ ಎಂದರೆ, ಅದು ದುಸ್ಥಿತಿಗೆ ಬಂದಿದೆ. ಅದು ಅಲ್ಲೋಲ ಕಲ್ಲೋಲ ಆಗುವಷ್ಟರ ಮಟ್ಟಿಗೆ ದೇಶದ ಅರ್ಥ ವ್ಯವಸ್ಥೆ ಹಾಳಾಗಿದೆ. ಎಲ್ಲಾ ಬೆಲೆಗಳು ಸಹ ಗಗನಕ್ಕೇರಿವೆ. ಈಗ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಾಗಿದೆ. ಸಿಲಿಂಡರ್ ಗ್ಯಾಸ್ ಬೆಲೆ ಏರಿಕೆಯಾಗಿದೆ. ತರಕಾರಿಗಳ ಬೆಲೆ ಏರಿಕೆಯಾಗಿದೆ. ಜೀವನಾವಶ್ಯಕ ವಸ್ತುಗಳಾದ ದವಸ ಧಾನ್ಯಗಳ ಬೆಲೆ ಏರಿಕೆಯಾಗಿದೆ. ಮನುಷ್ಯ ತನ್ನ ಜೀವನ ಸಾಗಿಸುವುದಕ್ಕೆ ಏನೇನು ಅವಶ್ಯಕ ವಸ್ತುಗಳು ಬೇಕು, ಆ ಎಲ್ಲಾ ವಸ್ತುಗಳ ಬೆಲೆ ಗಗನಕ್ಕೇರಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಲೆ ಏರಿಕೆಯಿಂದ ಜನರು ಬದುಕುವುದಕ್ಕೆ ಬಹಳ ಕಷ್ಟವಾಗಿದೆ. ದೇಶದಲ್ಲಿ ಬಡವರು ಮತ್ತು ಮಧ್ಯಮ ವರ್ಗದವರು ಹಾಗೂ ಕೂಲಿನಾಲಿ ಮಾಡಿಕೊಂಡು ಬದುಕು ಸಾಗಿಸುವಂತಹವರು ಒಂದು ಚೆಂಬು ನೀರು ಕುಡಿದು, ಹೊಟ್ಟೆಗೆ ತಣ್ಣೀರು ಬಟ್ಟೆ ಕಟ್ಟಿಕೊಂಡು, ತಮ್ಮ ಹೊಟ್ಟೆಯನ್ನು ನೆಲಕ್ಕೆ ಹಾಕಿ ಮಲಗಿಕೊಳ್ಳುವಂತಹ ಸ್ಥಿತಿಗೆ ಬಂದಿದೆ. ಈಗ ಮಾರ್ಕೆಟ್‌ಗೆ ಹೋಗುವಂತಿಲ್ಲ. ಈಗ ಹೇಗಾಗಿದೆ ಎಂದರೆ, ಮೊದಲು ಜೇಬಿನಲ್ಲಿ ನೋಟು ಇಟ್ಟುಕೊಂಡು, ಮಾರ್ಕೆಟ್‌ಗೆ ಹೋಗಿ, ಕೈಚೀಲದಲ್ಲಿ ವಸ್ತುಗಳನ್ನು ಖರೀದಿ ಮಾಡಿಕೊಂಡು ಬರುತ್ತಿದ್ದೆವು. ಆದರೆ, ಈಗ ಕೈಚೀಲದಲ್ಲಿ ನೋಟುಗಳನ್ನು ತುಂಬಿಕೊಂಡು ಹೋಗಿ, ಖರೀದಿ ಮಾಡುವಂತಹ ವಸ್ತುಗಳನ್ನು ಜೇಬಿನಲ್ಲಿ ಹಾಕಿಕೊಂಡು ಬರುವಂತೆ ಅಗಿದೆ. ಅಷ್ಟು ಬೆಲೆ ಹೆಚ್ಚಾಗಿದೆ. ಅದನ್ನು ನಾನು ಅತಿಶಯೋಕ್ತಿ ಮತ್ತು ಅತಿರಂಜಿತವಾಗಿ ಹೇಳುವುದಿಲ್ಲ. ತಮಗೆ ಗೊತ್ತಿರುವಂತೆ, ನಿಮ್ಮ ವಾಹನದ ಚಾಲಕ ಹೇಳುತ್ತಾನೆ. ಆಗ 100–200 ರೂಪಾಯಿಗಳು ಇದ್ದರೆ, ಈಗ 300–400 ರೂಪಾಯಿಗಳವರೆಗೆ ವೆಚ್ಚವಾಗುತ್ತದೆ. ಅದರ ಇತಿಮಿತಿ ತಪ್ಪಿ ಹೋಗಿದೆ. ಅದರ ಜೊತೆಗೆ 2020–21ರಲ್ಲಿ ಕೊರೊನಾ ಜನರನ್ನು ತೀವ್ರವಾಗಿ ಭಾದಿಸುತ್ತಿತ್ತು. ಆಗ

ವ್ಯಾಪಾರ ಮತ್ತು ವಹಿವಾಟು ನಿಂತು ಹೋದವು. ಉದ್ಯಮಗಳು ನಿಂತು ಹೋದವು. ಲಾಕ್‌ಡೌನ್‌ನಲ್ಲಿ ಜನರು ಹೊರಗೆ ಕೆಲಸ ಮಾಡುವುದಕ್ಕೆ ಕೆಲಸವೇ ಇರಲಿಲ್ಲ. ಅವರು ಮನೆಯಲ್ಲಿ ಬರಿಗೈಯಲ್ಲಿ ಕೂರುವಂತೆ ಆಯಿತು. ಅವರಿಗೆ ದುಡಿಮೆ ಇಲ್ಲದಂತೆ ಆಯಿತು. ಅವರಿಗೆ ಬದುಕು ಸಾಗಿಸುವುದೇ ಬಹಳ ಕಷ್ಟವಾಯಿತು. ಜೀವನ ಸಾಗಿಸುವುದು ಹೇಗೆ ಎನ್ನುವಂತಹ ಒಂದು ಶೋಚನಿಯ ಸ್ಥಿತಿಯಲ್ಲಿ ತಮ್ಮ ತಲೆಯ ಮೇಲೆ ಕೈಹೊತ್ತಿಕೊಂಡು ಕೂರುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಇಂತಹ ಸಂದರ್ಭದಲ್ಲಿ ಕೊರ್ರೊನಾ ಒಂದು ದೊಡ್ಡ ಮಹಾವ್ಯಾಧಿ. ಅದು ಇಡೀ ಮನುಕುಲದ ನಾಶಕ್ಕೆ ಬಂದಂಥದ್ದು. ಅದು ಎಲ್ಲಾ ವ್ಯಾಪಾರ ವಹಿವಾಟುಗಳನ್ನು ಸ್ಥಗಿತ ಮಾಡಿ, ಉದ್ಯಮಗಳನ್ನು ನಿಲ್ಲಿಸಿ, ಜನರು ಉದ್ಯೋಗ ಕಳೆದುಕೊಳ್ಳುವಂತಹ ದುಸ್ಥಿತಿಗೆ ಬಂದಾಗ, ಜನರು ಆರ್ಥಿಕವಾಗಿ ಬಹಳಷ್ಟು ಕಷ್ಟದಲ್ಲಿದ್ದಾಗ, ಉದ್ಯೋಗವಿಲ್ಲದೆ ಬರಿಗೈಯಲ್ಲಿ ಕುಳಿತು, ಕೆಲಸವಿಲ್ಲದೆ ಮನೆಯಲ್ಲಿ ಕುಳಿತಿರುವಂತಹ ಸಂದರ್ಭದಲ್ಲಿ, ವಸ್ತುಗಳ ಬೆಲೆಗಳನ್ನು ಇಳಿಸಿ ಅದನ್ನು ತಳಹದಿಗೆ ತರಬೇಕಲ್ಲವೇ? ಏಕೆಂದರೆ, ಜನರು ತಮ್ಮ ಬದುಕನ್ನು ಸಾಗಿಸಬೇಕಲ್ಲವೇ? ಸರ್ಕಾರ ಏನಾದರೂ ಬೇರೆ ಬೇರೆ ರೂಪದಲ್ಲಿ incentive ಮುಖಾಂತರ, ಸಬ್ಸಿಡಿ ಮುಖಾಂತರ ಆ ಬೆಲೆಗಳು ಏರಿಕೆಯಾಗದಂತೆ, ತಳಹದಿಗೆ ತರುವಂತಹ ಕೆಲಸ ಮಾಡಬೇಕು.  ಆದರೆ, ಬೆಲೆಗಳನ್ನು ಇಳಿಸುವುದರ ಬದಲಾಗಿ, ಪರೋಕ್ಷ ತೆರಿಗೆ ಪ್ರಮಾಣವನ್ನು ಬಡವರು ಮತ್ತು ಮಧ್ಯಮ ವರ್ಗದವರ ಮೇಲೆ ಹೆಚ್ಚಿಗೆ ಮಾಡಿದ್ದಾರೆ. ಕೇಂದ್ರ ಸರ್ಕಾರ 2019ರಲ್ಲಿ ಒಂದು ಲೀಟರ್ ಡೀಸೆಲ್‌ಗೆ 15.83 ರೂಪಾಯಿಗಳು ಮತ್ತು ಪೆಟ್ರೋಲ್‌ಗೆ 19.98 ರೂಪಾಯಿಗಳನ್ನು ತೆರಿಗೆ ರೂಪದಲ್ಲಿ ಸಂಗ್ರಹಿಸುತಿತ್ತು.  ಈಗ ಕೋವಿಡ್–19 ಬಂದ ನಂತರ, ತಕ್ಷಣ ಇವರು ಏನು ಮಾಡಿದರು ಎಂದರೆ, ಮೊದಲು ಡೀಸೆಲ್ ಮೇಲಿನ ಅಡಿಷನಲ್ ಎಕ್ಸೈಸ್ ಡ್ಯೂಟಿ 15.83 ರೂಪಾಯಿಗಳು ಇತ್ತು. ಈಗ ಡೀಸೆಲ್ ಮೇಲೆ 31.83 ರೂಪಾಯಿಗಳಿಗೆ ಅಡಿಷನಲ್ ಎಕ್ಸೈಸ್ ಡ್ಯೂಟಿ ಹೆಚ್ಚಿಸಿದರು. ಮೊದಲು ಪೆಟ್ರೋಲ್ ಮೇಲೆ ಅಡಿಷನಲ್ ಎಕ್ಸೈಸ್ ಡ್ಯೂಟಿ 19.98 ರೂಪಾಯಿಗಳು ಇತ್ತು. ಈಗ ಪೆಟ್ರೋಲ್ ಮೇಲೆ 32.98 ರೂಪಾಯಿಗಳಿಗೆ ಅಡಿಷನಲ್ ಎಕ್ಸೈಸ್ ಡ್ಯೂಟಿ ಹೆಚ್ಚಿಸಿದರು. ಜನರು ಇಂತಹ ಸಂದರ್ಭದಲ್ಲಿ ಕಷ್ಟ ಮತ್ತು ನೋವಿನಲ್ಲಿದ್ದು ಇಂತಹ ಆರ್ಥಿಕ ದುಸ್ಥಿತಿಯಲ್ಲಿರುವಂತಹ ಸಂದರ್ಭದಲ್ಲಿ, ಜನರಿಗೆ ಉದ್ಯೋಗವಿಲ್ಲದಂತಹ ಸಂದರ್ಭದಲ್ಲಿ, ಅವರು ಹೊಟ್ಟೆಗೆ ತಿನ್ನುವುದಕ್ಕೆ ಗತಿಯಿಲ್ಲದಂತಹ ಸಂದರ್ಭದಲ್ಲಿ, ಈ ಬೆಲೆ ಏರಿಕೆಯನ್ನು ಅಡಿಷನಲ್ ಎಕ್ಸೈಸ್ ಡ್ಯೂಟಿಯನ್ನು ಹೆಚ್ಚಿಸುವುದರ ಮುಖಾಂತರ ಇನ್ನು ಹೆಚ್ಚಿಗೆ ಮಾಡುವಂತಹ ಪರಿಸ್ಥಿತಿಯಾಗಿದೆ. ಅಂದರೆ, ಕೋವಿಡ್–19 ನಂತರ ಪ್ರತಿ ಲೀಟರ್ ಪೆಟ್ರೋಲ್ ಮೇಲೆ 13 ರೂಪಾಯಿಗಳನ್ನು ಮತ್ತು ಪ್ರತಿ ಲೀಟರ್ ಡೀಸೆಲ್ ಮೇಲೆ 16 ರೂಪಾಯಿಗಳನ್ನು ಹೆಚ್ಚಿಸಿದರು. ಈಗ ಡೀಸೆಲ್ ಮತ್ತು ಪೆಟ್ರೋಲ್ ಬೆಲೆ ಹೆಚ್ಚಾದ ಕೂಡಲೇ ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗುತ್ತದೆ. ಏಕೆಂದರೆ, ಸಾಗಾಣಿಕೆಯ ವೆಚ್ಚ ಹೆಚ್ಚಾಗುತ್ತದೆ. ಸಾಗಾಣಿಕೆ ವೆಚ್ಚ ಹೆಚ್ಚಾದ

ಕೂಡಲೇ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತದೆ. ಕರ್ನಾಟಕ ರಾಜ್ಯ ಸರ್ಕಾರ ಪೆಟ್ರೋಲ್ ಮೇಲೆ ಶೇಕಡಾ 35ರಷ್ಟು ಮತ್ತು ಡೀಸೆಲ್ ಮೇಲೆ ಶೇಕಡಾ 24ರಷ್ಟು ತೆರಿಗೆ ವಿಧಿಸುತ್ತದೆ. ಇದು ರಾಜ್ಯ ಸರ್ಕಾರದ ತೆರಿಗೆ. ಕೇಂದ್ರ ಸರ್ಕಾರದ ತೆರಿಗೆ ಬೇರೆ ಇದೆ. ಉದಾಹರಣೆಗೆ; 2012ರಲ್ಲಿ ಡಾ॥ಮನಮೋಹನ್ ಸಿಂಗ್‌ರವರು ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಯು.ಪಿ.ಎ. ಸರ್ಕಾರವಿದ್ದಾಗ ಒಂದು ಬ್ಯಾರೆಲ್ ಕಚ್ಚಾ ತೈಲದ ಬೆಲೆ 125.45 ಡಾಲರ್ಸ್ ಇತ್ತು. ಆಗ ಪ್ರತಿ ಲೀಟರ್‌ನ ಡೀಸೆಲ್ ಬೆಲೆ 41.91 ರೂಪಾಯಿ ಮತ್ತು ಪೆಟ್ರೋಲ್ ಬೆಲೆ 78.57 ರೂಪಾಯಿ ಇತ್ತು. 2014ರಲ್ಲಿ ಎನ್.ಡಿ.ಎ. ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ, ಪ್ರತಿ ಬ್ಯಾರೆಲ್ ಕಚ್ಚಾ ತೈಲದ ಬೆಲೆ ಕಡಿಮೆಯಾಯಿತು. ಅಂದರೆ, 125.45 ರಿಂದ 105.52 ಡಾಲರ್ಸ್‌ಗೆ ಇಳಿಕೆಯಾಯಿತು. 2012ರಲ್ಲಿ 125.45 ಡಾಲರ್ಸ್ ಇದ್ದದ್ದು, 2014ರಲ್ಲಿ ಎನ್.ಡಿ.ಎ. ಸರ್ಕಾರ ಬಂದ ನಂತರ 105.52 ಡಾಲರ್ಸ್‌ಗೆ ಇಳಿದಾಗ ಅದರ ದರ ಕಡಿಮೆಯಾಗಬೇಕಲ್ಲವೇ? 2012ರಲ್ಲಿ ಪ್ರತಿ ಬ್ಯಾರೆಲ್‌ಗೆ 125.45 ಡಾಲರ್ಸ್ ಇದ್ದಾಗ ಪ್ರತಿ ಲೀಟರ್ ಡೀಸೆಲ್‌ಗೆ 41.91 ರೂಪಾಯಿ ಇತ್ತು. 2014ರಲ್ಲಿ ಪ್ರತಿ ಬ್ಯಾರೆಲ್‌ಗೆ 105.52 ಡಾಲರ್ಸ್ ಆದಾಗ ಪ್ರತಿ ಲೀಟರ್ ಡೀಸೆಲ್‌ಗೆ ಬೆಲೆ 55.48 ರೂಪಾಯಿಗಳು. 2012ರಲ್ಲಿ ಪ್ರತಿ ಲೀಟರ್ ಪೆಟ್ರೋಲ್ ಬೆಲೆ 78.57 ರೂಪಾಯಿಗಳಿತ್ತು. 2014ರಲ್ಲಿ ಅದು 80.11 ರೂಪಾಯಿಗಳು. 2017ರಲ್ಲಿ ಬಹಳಷ್ಟು ಗಣನೀಯವಾಗಿ ಪ್ರತಿ ಬ್ಯಾರೆಲ್ ಕಚ್ಚಾ ತೈಲದ ಬೆಲೆ 47.56 ಡಾಲರ್ಸ್‌ಗೆ ಇಳಿಕೆಯಾಯಿತು. ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಕೇಂದ್ರ ಸರ್ಕಾರ ಡೀಸೆಲ್ ಮೇಲೆ 15.83 ರೂಪಾಯಿಗಳ ಅಡಿಷನಲ್ ಎಕ್ಸೈಸ್ ಡ್ಯೂಟಿ ಹೆಚ್ಚಿಸಿದರು. ಈಗ 125.45 ಡಾಲರ್ಸ್‌ನಿಂದ 47.56 ಡಾಲರ್ಸ್‌ಗೆ ಇಳಿದಾಗ, ಅದನ್ನು ಕಡಿಮೆ ಮಾಡಬೇಕು. ಆದರೆ, ಅವರು ಮತ್ತೆ ತೆರಿಗೆಯನ್ನು ಹೆಚ್ಚಿಗೆ ಮಾಡುತ್ತಾರೆ. ಏಕೆಂದರೆ, ಕಚ್ಚಾತೈಲದ ಬೆಲೆ ಹೆಚ್ಚಾಗಿದೆ ಎಂದು ಡೀಸೆಲ್ ಮೇಲೆ 15.83 ರೂಪಾಯಿ ತೆರಿಗೆಯನ್ನು ಹೆಚ್ಚಿಗೆ ಮಾಡಿದರು ಮತ್ತು ಪೆಟ್ರೋಲ್ ಮೇಲೆ 19.98 ರೂಪಾಯಿಗಳ ತೆರಿಗೆಯನ್ನು ಹೆಚ್ಚಿಗೆ ಮಾಡಿದರು. 2013ರಲ್ಲಿ ಹೆಚ್ಚುವರಿಯಾಗಿ ಡೀಸೆಲ್ ಮೇಲೆ 3.45 ರೂಪಾಯಿಗಳು ಮತ್ತು ಪೆಟ್ರೋಲ್ ಮೇಲೆ 9.21 ರೂಪಾಯಿಗಳನ್ನು ಸಂಗ್ರಹ ಮಾಡುತ್ತಿದ್ದರು. ಆಗ 3.45 ರೂಪಾಯಿಗಳು ಎಲ್ಲಿ? ಈಗ 15.83 ರೂಪಾಯಿಗಳು ಎಲ್ಲಿ? ನೋಡಿ ಇದು ಎಷ್ಟು ಅಜಗಜಾಂತರವಿದೆ.

**(ಮುಂದು)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(559) 06.30 22.03.2021 ಎಲ್‌ಎಲ್/ಬಿಎನ್‌ಎಸ್**

**ಶ್ರೀ ಎಸ್.ಆರ್. ಪಾಟೀಲ್(ಮುಂದು):-**

2017ರಲ್ಲಿ Additional Excise Duty ಯನ್ನು ಹೆಚ್ಚು ಮಾಡಿದ ಕೂಡಲೇ ಪ್ರತಿ ಲೀಟರ್ ಡಿಸೇಲ್ ಬೆಲೆ 54 ರೂಪಾಯಿ ಇತ್ತು. ಪೆಟ್ರೋಲ್ ಬೆಲೆ 76 ರೂಪಾಯಿ 55 ಪೈಸೆ ಇತ್ತು. Automatically, Excise Duty ಹೆಚ್ಚಾದ ಕೂಡಲೇ ಪೆಟ್ರೋಲ್ ಮತ್ತು ಡಿಸೇಲ್ ಬೆಲೆ ಹೆಚ್ಚಾಯಿತು. It will naturally shoot up. ಆದರೆ, ದಿನಾಂಕ:01.06.2020ರಂದು ಅಂದರೆ, ಕಳೆದ ವರ್ಷದ ಬಗ್ಗೆ ನಾನು ಹೇಳುತ್ತೇನೆ. ಕೇಂದ್ರ ಸರ್ಕಾರವು ತನ್ನ Additional Excise Duty ಯನ್ನು ಡೀಸೆಲ್ ಮೇಲೆ 31 ರೂಪಾಯಿ 83 ಪೈಸೆಗೆ ಏರಿಸಿದರು ಮತ್ತು ಪೆಟ್ರೋಲ್ ಮೇಲೆ 32 ರೂಪಾಯಿ 98 ಪೈಸೆಗೆ ಅಂದರೆ, ಅಂದಾಜು 33 ರೂಪಾಯಿಯಷ್ಟು Additional Excise Duty ಯನ್ನು ಹೆಚ್ಚು ಮಾಡಿದ್ದಾರೆ. ಇದರ ಪರಿಣಾಮವಾಗಿ ರಾಜ್ಯದಲ್ಲಿ ಇವೊತ್ತಿನ ದಿವಸ ಪೆಟ್ರೋಲ್ ಎಷ್ಟಾಗಿದೆಯೆಂದರೆ, ಪ್ರತಿ ಲೀಟರ್ ಪೆಟ್ರೋಲ್‌ಗೆ 95 ರೂಪಾಯಿ ದರ ಇರುತ್ತದೆ. ಅಂದಾಜು ಮೊತ್ತ ಅಂದರೆ, ಸ್ವಲ್ಪ ಹೆಚ್ಚು ಕಡಿಮೆ ನಾನು ಹೇಳುತ್ತಿದ್ದೇನೆ. ಜೊತೆಗೆ, ಪ್ರತಿ ಲೀಟರ್ ಡೀಸೆಲ್ 90 ರೂಪಾಯಿಗೆ ಬಂದಿದೆ. ಅಷ್ಟೆ ಅಲ್ಲದೇ, ರಾಜಸ್ಥಾನ ಮತ್ತು ಮಧ್ಯಪ್ರದೇಶದಲ್ಲಿ ಪೆಟ್ರೋಲ್ ಬೆಲೆ ಶತಕ ಬಾರಿಸಿದೆ. ಅಂದರೆ, ಪ್ರತಿ ಲೀಟರ್ ಪೆಟ್ರೋಲ್ ಬೆಲೆ 100 ರೂಪಾಯಿ ಕ್ರಾಸ್ ಆಗಿರುತ್ತದೆ.

ಇದರ ಜೊತೆಗೆ, ರಾಜ್ಯದಲ್ಲಿ ಮಾರಾಟವಾದಂತಹ ಇಂಧನಗಳಿಂದ ಕೇಂದ್ರ ಸರ್ಕಾರ ಎಷ್ಟು ಹಣ ಸಂಗ್ರಹ ಮಾಡಿದೆ ಎನ್ನುವ ಬಗ್ಗೆ ನಾನು ಹೇಳುತ್ತೇನೆ. ಕೇಂದ್ರ ಸರ್ಕಾರದಲ್ಲಿ ಶ್ರೀ ನರೇಂದ್ರ ಮೋದಿಯವರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕರ್ನಾಟಕ ರಾಜ್ಯದಿಂದ ಫೆಬ್ರವರಿ ತಿಂಗಳ ಅಂತ್ಯದವರೆಗೆ ಅಂದಾಜು 1,18,135 ಕೋಟಿ ರೂಪಾಯಿಯಷ್ಟು Additional Excise Duty ಯನ್ನು ರಿಕವರಿ ಮಾಡಿರುತ್ತಾರೆ. ನಾನು ಕರ್ನಾಟಕ ರಾಜ್ಯದ ಬಗ್ಗೆ ಮಾತ್ರ ಹೇಳುತ್ತಿದ್ದೇನೆ. We are in the month of March. ಈ ತಿಂಗಳುಗಳ ಅಂಕಿ-ಸಂಖ್ಯೆಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಹಾಗಾಗಿ, ಫೆಬ್ರವರಿ ತಿಂಗಳ ಅಂತ್ಯದವರೆಗೆ Additional Excise Duty ನೆಪದಲ್ಲಿ ನಮ್ಮ ಕರ್ನಾಟಕ ರಾಜ್ಯದಿಂದಲೇ 1,18,135 ಕೋಟಿ ರೂಪಾಯಿಯ ಬೃಹತ್ ಮೊತ್ತ ಸಂಗ್ರಹವಾಗಿರುತ್ತದೆ. ಈ ಮೊತ್ತವನ್ನು ಕೇಂದ್ರ ಸರ್ಕಾರ ತೆರಿಗೆ ರೂಪದಲ್ಲಿ ನಮ್ಮಿಂದ ಸಂಗ್ರಹ ಮಾಡಿರುತ್ತದೆ. ಅದೇ ರೀತಿ ನಮ್ಮಿಂದ ತೆಗೆದುಕೊಂಡ ಹಣದ ಮೇಲೆ ಅವರು ನಮಗೆ ವಾಪಸ್ಸು ಕೊಡುವಾಗ ಅಂದರೆ, 2020-21ರ ಕಳೆದ ಆರ್ಥಿಕ ವರ್ಷದಲ್ಲಿ 733 ಕೋಟಿ

ರೂಪಾಯಿಯಷ್ಟು ಹಣ ಮಾತ್ರ ನಮಗೆ ಹಂಚಿಕೆ ಮಾಡಿರುತ್ತಾರೆ. Out of Rs.1,18,135/- Crores, additional Excise Duty ಸಂಗ್ರಹ ಮಾಡಿ ನಮ್ಮ ರಾಜ್ಯಕ್ಕೆ ಕೊಟ್ಟಿದ್ದು ಕೇವಲ 733 ಕೋಟಿ ರೂಪಾಯಿಗಳು. ಅದರಂತೆ, ಎಲ್ಲಿ 733 ಕೋಟಿ ರೂಪಾಯಿ, ಎಲ್ಲಿ 1,18,135 ಕೋಟಿ ರೂಪಾಯಿ? ಅದೇ ರೀತಿ ಈ ವರ್ಷ ನಮ್ಮ ರಾಜ್ಯ ಸರ್ಕಾರ ಪೆಟ್ರೋಲ್ ಮತ್ತು ಡಿಸೇಲ್ ಮೇಲೆ ಮಾರಾಟ ತೆರಿಗೆ ಮೇಲೆ ಅಂದರೆ, ನಮ್ಮಲ್ಲಿ ಮಾರಾಟ ತೆರಿಗೆ ಹಾಕುತ್ತಾರೆ. ಅದರಂತೆ, ಮಾರಾಟ ತೆರಿಗೆ ಮುಖಾಂತರ 14,164 ಕೋಟಿ ರೂಪಾಯಿಯಷ್ಟು ಹಣ ಸಂಗ್ರಹ ಮಾಡಿರುತ್ತದೆ. ಅದೇ ರೀತಿ ಕೇಂದ್ರ ಸರ್ಕಾರ ಈ ವರ್ಷದ ಫೆಬ್ರವರಿ ತಿಂಗಳ ಅಂತ್ಯದವರೆಗೆ 27,842 ಕೋಟಿ ರೂಪಾಯಿಗಳಷ್ಟು ಹಣವನ್ನು ಸಂಗ್ರಹ ಮಾಡಿರುತ್ತದೆ. ಅದರಂತೆ, ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡೂ ಸೇರಿ 42,006 ಕೋಟಿ ರೂಪಾಯಿಗಳಷ್ಟು ಕೇವಲ ಪೆಟ್ರೋಲ್ ಮತ್ತು ಡೀಸೆಲ್‌ನಿಂದ ಸಂಗ್ರಹ ಮಾಡಿರುತ್ತದೆ. ಇದಕ್ಕೆ ನಾವು ಏನು ಹೇಳಬೇಕು? ‘ಹಗಲು ದರೋಡೆ’ ಎನ್ನಬೇಕೇ ಅಥವಾ ಇಂಗ್ಲೀಷ್‌ನಲ್ಲಿ, broad daylight dacoity ಎಂದು ಹೇಳಬೇಕೇ? ಈ ಮೊತ್ತ ಏನು? ಈ ಹೊತ್ತಿನಲ್ಲಿ ಪ್ರತಿ ಲೀಟರ್ ಡೀಸೆಲ್‌ಗೆ 90 ರೂಪಾಯಿಗಿಂತಲೂ ಅಧಿಕ ದರ ಇದೆ. ಅದೇ ರೀತಿ ಪ್ರತಿ ಲೀಟರ್ ಪೆಟ್ರೋಲ್‌ಗೆ 100 ರೂಪಾಯಿ ದಾಟಿ ಶತಕ ಬಾರಿಸಿದೆ.

ಮತ್ತೊಂದು ವಿಷಯವನ್ನು ಈ ಸದನದ ಗಮನಕ್ಕೆ ತರುವುದಕ್ಕೆ ಬಯಸುವುದೇನೆಂದರೆ, ‘Economic Times’ ದಿನಪತ್ರಿಕೆಯಲ್ಲಿ ವರದಿ ಮಾಡಿರುವ ಪ್ರಕಾರ ನಮ್ಮ ಅಕ್ಕ–ಪಕ್ಕದ ರಾಷ್ಟ್ರಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೇಗಿದೆ ಎಂಬ ಬಗ್ಗೆ ವರದಿ ಮಾಡಿರುತ್ತದೆ. ಇದುವರೆವಿಗೂ ನಾನು ನಮ್ಮ ರಾಜ್ಯದ ಬಗ್ಗೆ ಮಾತ್ರ ಹೇಳಿರುತ್ತೇನೆ. ಅದೇ ರೀತಿಯಾಗಿ ನಮ್ಮ ಪಕ್ಕದ ದೇಶವಾದ ಪಾಕಿಸ್ತಾನ ದೇಶದಲ್ಲಿ ಪೆಟ್ರೋಲ್ ಬೆಲೆ ಪ್ರತಿ ಲೀಟರ್‌ಗೆ 51 ರೂಪಾಯಿ ಇದೆ. As on today I am telling. ಇದರಲ್ಲಿ ಕೆಲವು ಪೈಸೆಗಳು ವ್ಯತ್ಯಾಸ ಇರಬಹುದು. ಅದೇ ರೀತಿ ಡೀಸೆಲ್ ಬೆಲೆ 52 ರೂಪಾಯಿ 91 ಪೈಸೆ ಇರುತ್ತದೆ. ಬಾಂಗ್ಲಾದೇಶದಲ್ಲಿ, ಈ ದೇಶವನ್ನು ನಾವೇ liberate ಮಾಡಿದವರು. ಹೊಸ ರಾಷ್ಟ್ರ ಉದಯವಾಗುವುದಕ್ಕೆ ಶ್ರೀಮತಿ ಇಂದಿರಾಗಾಂಧಿಯವರು ಈ ದೇಶದ ಪ್ರಧಾನ ಮಂತ್ರಿಯಾಗಿದ್ದಾಗ ಬಾಂಗ್ಲಾದೇಶ ಅಂದರೆ, ಪೂರ್ವ ಪಾಕಿಸ್ತಾನವನ್ನು ಹೊಸ ರಾಷ್ಟ್ರವನ್ನಾಗಿ ಮೊನ್ನೆ ಮೊನ್ನೆಯ ದಿವಸ ನಾವೇ ನಿರ್ಮಿಸಿದಂತಹ ರಾಷ್ಟ್ರವಾದ ಬಾಂಗ್ಲಾದೇಶದಲ್ಲಿ ಪ್ರತಿ ಲೀಟರ್ ಪೆಟ್ರೋಲ್ ಬೆಲೆ 76 ರೂಪಾಯಿ 70 ಪೈಸೆ ಇದೆ. ಅಂದರೆ, ನಮಗಿಂತಲೂ ಕಡಿಮೆ ದರ ಇದೆ. ಅದೇ ರೀತಿ ಪ್ರತಿ ಲೀಟರ್ ಡೀಸೆಲ್ ಬೆಲೆ ನಮ್ಮ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದೇಶದಲ್ಲಿ 90 ರೂಪಾಯಿ ಇದ್ದರೆ, ಆ ದೇಶದಲ್ಲಿ 56 ರೂಪಾಯಿ ಇದೆ. ಅಂದರೆ, ನಮ್ಮ ಪಕ್ಕದ ದೇಶವಾದ ಬಾಂಗ್ಲಾದೇಶ, ನಾವೇ ನಿರ್ಮಿಸಿದಂತಹ ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೇಗೆ ಕಡಿಮೆ ಇರುತ್ತದೆ? ಆ ದೇಶದಲ್ಲಿ ಆರ್ಥಿಕ ಸ್ಥಿತಿ ಹೇಗೆ ಅನುಕೂಲವಾಗುತ್ತದೆ? ಇನ್ನು ನಮ್ಮ ದೇಶದಿಂದ ಕೆಳಭಾಗಕ್ಕೆ ಬಂದರೆ, ಶ್ರೀಲಂಕಾ ದೇಶದಲ್ಲಿ ಪೆಟ್ರೋಲ್ ಬೆಲೆ ಪ್ರತಿ ಲೀಟರ್‌ಗೆ 60 ರೂಪಾಯಿ 33 ಪೈಸೆ ಇದೆ. ಅದೇ ರೀತಿ ಡೀಸೆಲ್‌ಗೆ 58 ರೂಪಾಯಿ 33 ಪೈಸೆ ಇದೆ. ನೇಪಾಳ ದೇಶದಲ್ಲಿ ಪ್ರತಿ ಲೀಟರ್ ಪೆಟ್ರೋಲ್‌ಗೆ 68 ರೂಪಾಯಿ 99 ಪೈಸೆ ಇದೆ. ಅಂದರೆ, 69 ರೂಪಾಯಿ ಇದೆ. ಅದೇ ರೀತಿ ಪ್ರತಿ ಲೀಟರ್ ಡೀಸೆಲ್ ಬೆಲೆ 58 ರೂಪಾಯಿ 33 ಪೈಸೆ ಇದೆ. ನಮ್ಮ ದೇಶದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಎಲ್ಲಿ? ಆದರೆ, ನೇಪಾಳ ದೇಶದಲ್ಲಿ, ಶ್ರೀಲಂಕಾ ದೇಶದಲ್ಲಿ, ಬಾಂಗ್ಲಾದೇಶದಲ್ಲಿ ಮತ್ತು ಪಾರಂಪರಿಕ ವೈರಿ ರಾಷ್ಟ್ರ ಎನ್ನುವ ಪಾಕಿಸ್ತಾನದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ನಮಗೆ ಮತ್ತು ಅವರಿಗೆ ಎಷ್ಟು ಅಜ-ಗಜಾಂತರ ಇದೆ? ಇದು ನನಗೆ ಅರ್ಥವೇ ಆಗುತ್ತಿಲ್ಲ.

ಇದರ ಜೊತೆಗೆ, ಬಿ.ಜೆ.ಪಿ. ಪಕ್ಷದವರೇ ಆದಂತಹ ಶ್ರೀ ಸುಬ್ರಮಣ್ಯಂಸ್ವಾಮಿಯವರು ರಾಜ್ಯಸಭಾ ಸದಸ್ಯರಾದವರು, 02.02.2021ರಂದು ಅಂದರೆ ಇದೇ ವರ್ಷದಲ್ಲಿ ತಮ್ಮ ಟ್ವಿಟ್ಟರ್ ಖಾತೆಯಲ್ಲಿ ಒಂದು ಟ್ವೀಟ್ ಮಾಡಿದ್ದಾರೆ. ಅದೇನೆಂದರೆ, *"ರಾಮನ ದೇಶದಲ್ಲಿ ಪ್ರತಿ ಲೀಟರ್ ಪೆಟ್ರೋಲ್‌ಗೆ 93 ರೂಪಾಯಿ. ಅಂದರೆ, ರಾಮ ಇರುವಂತಹ ಇಂಡಿಯಾ ದೇಶದಲ್ಲಿ. ಸೀತಾ ಮಾತೆ ಇರುವಂತಹ ನೇಪಾಳ ದೇಶದಲ್ಲಿ 53 ರೂಪಾಯಿ. ಅದೇ ರೀತಿ ರಾವಣ ಇರುವಂತಹ ದೇಶದಲ್ಲಿ ಪ್ರತಿ ಲೀಟರ್ ಪೆಟ್ರೋಲ್‌ಗೆ 51 ರೂಪಾಯಿ ಇದೆ"* ಎಂದು ಹೇಳಿದ್ದಾರೆ. ಇದು ನಾನು ಹೇಳುತ್ತಿರುವ ಮಾತಲ್ಲ. ಇದನ್ನು ಬಿ.ಜೆ.ಪಿ. ಪಕ್ಷದ ರಾಜ್ಯಸಭಾ ಸದಸ್ಯರಾದಂತಹ ಶ್ರೀ ಸುಬ್ರಮಣ್ಯಂ ಸ್ವಾಮಿಯವರು ಹೇಳಿದ್ದಾರೆ. (**ಗೊಂದಲ**) ಅವರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಅಥವಾ ಅವರು ಹೇಳಿದರೆಂದು ನಾನು ಹೇಳಬಾರದೆಂದು ಇಲ್ಲ. ಇದರಲ್ಲಿ ಅಂಕಿ-ಸಂಖ್ಯೆಗಳು ಬದಲಾಗುತ್ತವೆ. ಈ ಮಾಹಿತಿಗಳು ಏನಿವೆ ಅವುಗಳನ್ನು ನಮ್ಮ ಪಾರ್ಟಿಯಲ್ಲಿ ನಾವು ಪರಸ್ಪರ ಹಂಚಿಕೊಳ್ಳುತ್ತೇವೆ. ಹಾಗಾಗಿ, ಶ್ರೀ ನರೇಂದ್ರ ಮೋದಿಯವರ ವಿರುದ್ಧ ಒಬ್ಬೊಬ್ಬರೇ ಈಗ ತಮ್ಮ ಅಪಸ್ವರವನ್ನು ಚಾಲನೆ ಮಾಡಿದ್ದಾರೆ. ಅದರಲ್ಲಿ ಶ್ರೀ ಸುಬ್ರಮಣ್ಯಂಸ್ವಾಮಿಯವರು ನಿಮ್ಮ ಪಕ್ಷದಲ್ಲಿ ಈಗ ಈ ರೀತಿ ಅಪಸ್ವರವನ್ನು ಪ್ರಾರಂಭ ಮಾಡಿದ್ದಾರೆ. ಅಂದರೆ, ಸಣ್ಣ ಪ್ರಮಾಣದಲ್ಲಿ ಪ್ರಾರಂಭವಾಗಿವೆ. ಅದು ದೊಡ್ಡ ಪ್ರಮಾಣದಲ್ಲಿ ಇರುವುದಿಲ್ಲ. ಶ್ರೀ ಸುಬ್ರಮಣ್ಯಂಸ್ವಾಮಿಯವರಂತಹ dare and devil ಇದ್ದವರು ಅವರು ಜೋರಾಗಿ ಮಾತನಾಡಿದ್ದಾರೆ. (**ಗೊಂದಲ**) ಶ್ರೀ ಗುಲಾಂನಬಿ ಅಜಾದ್‌ರವರನ್ನು ಬೀಳ್ಕೊಡುವ ಸಂದರ್ಭದಲ್ಲಿ ಬಿ.ಜೆ.ಪಿ. ಪಕ್ಷದ ಪ್ರಧಾನ ಮಂತ್ರಿಗಳು ಕಣ್ಣೀರು ಹಾಕಿದ್ದಾರೆ. ಆ ದಿನವೇ ಈ ಸರ್ಕಾರದ

ವಿಚಾರ ಏನಿದೆ ಎಂದು ನಮಗೆ ಅನ್ನಿಸಿತ್ತು. ಬಿ.ಜೆ.ಪಿ. ಸರ್ಕಾರದ ಬೆಲೆ ಏರಿಕೆಗೆ ಇದು ಒಂದು. ಅಂದರೆ, ಬಿ.ಜೆ.ಪಿ. ಪಕ್ಷದ ಹಡಗು ಏನಿದೆ, ಅದಕ್ಕೆ ಈಗ ತೂತು(ರಂಧ್ರ)ಗಳು ಬೀಳುತ್ತಿವೆ. ಅದರಲ್ಲಿ ಬೆಲೆ ಏರಿಕೆ ಎನ್ನುವುದು ಒಂದು ದೊಡ್ಡ ರಂಧ್ರವಾಗಿದೆ. ಇದರಿಂದಾಗಿ, ಹಡಗಿನೊಳಗೆ ನೀರು ಬರುತ್ತದೆಯಲ್ಲವೇ? ಹಾಗಾಗಿ, ಹೆಚ್ಚು ನೀರು ಬಂದು ಪೂರ್ಣ ಹಡಗು ತುಂಬಿತೆಂದರೆ (**ಗೊಂದಲ**) ಅದು ಮುಂದೆ ಗೊತ್ತಾಗುತ್ತದೆ. ಆಗ ನಮಗೂ ಗೊತ್ತಾಗುತ್ತದೆ ಆಡಳಿತ ಪಕ್ಷದವರಿಗೂ ಗೊತ್ತಾಗುತ್ತದೆ. ಇದರಲ್ಲಿ ನಮ್ಮ ಅನಿಸಿಕೆಗಳನ್ನು ನಾವು ಹೇಳುತ್ತಿದ್ದೇವೆ. ಈ ದೇಶದ ಪ್ರಬುದ್ಧ ಮತದಾರನ ನಿರ್ಣಯ ಯಾವ ರೀತಿ ಇರುತ್ತದೋ ಅದನ್ನು ನಾವು ತಲೆ ಬಾಗಿಸಿ ಸ್ವೀಕಾರ ಮಾಡಬೇಕು. ಅಂದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರ ಪ್ರಭು ಕೊಟ್ಟಂತಹ ನಿರ್ಣಯವನ್ನು ನಾವು ತಲೆ ಬಾಗಿಸಿ ಸ್ವೀಕಾರ ಮಾಡಬೇಕು. We should bow our head down. We have to respect the committed voters.

ನಮ್ಮ ದೇಶದ ಪ್ರಧಾನ ಮಂತ್ರಿಯವರಾದ ಶ್ರೀ ನರೇಂದ್ರ ಮೋದಿಯವರು ದಿನಾಂಕ:17.02.2021ರಂದು ತಮಿಳುನಾಡು ರಾಜ್ಯಕ್ಕೆ ಭೇಟಿ ಕೊಟ್ಟಾಗ ಬೆಲೆ ಏರಿಕೆ ಬಗ್ಗೆ ಮೊಟ್ಟ ಮೊದಲನೆ ಬಾರಿಗೆ ಮಾತನಾಡಿದ್ದಾರೆ. ಆ ಸಂದರ್ಭದಲ್ಲಿ ಏನು ಹೇಳಿದ್ದಾರೆಂದರೆ, "ಬೆಲೆ ಏರಿಕೆಗೆ ಹಿಂದಿನ ಸರ್ಕಾರ ಕಾರಣ" ಎಂದು ಹೇಳಿದ್ದಾರೆ. ಇಷ್ಟು ಪ್ರಮಾಣದಲ್ಲಿ ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್ ಬೆಲೆ ಏರುವುದಕ್ಕೆ ಕಾರಣವನ್ನು ನೋಡಿದರೆ, ಗ್ಯಾಸ್ ಸಿಲಿಂಡರ್ ತಲೆ ಮೇಲೆ ಹೊತ್ತು ತಿರುಗುವಂತಹ ಸಮಯದಲ್ಲಿ ಪ್ರತಿ ಗ್ಯಾಸ್ ಸಿಲಿಂಡರ್ ಬೆಲೆ 350 ರೂಪಾಯಿ ಇತ್ತು. ಈಗ ಪ್ರತಿ ಗ್ಯಾಸ್ ಸಿಲಿಂಡರ್ ಬೆಲೆ 950 ಸಮೀಪ ಹೋಗಿರುತ್ತದೆ. ಅಂದರೆ 3 ಪಟ್ಟು ಹೆಚ್ಚಾಗಿರುತ್ತದೆ. ಈ ಒಂದು ವೇಳೆ ನಮ್ಮ ಸರ್ಕಾರ ಆ ಜಾಗದಲ್ಲಿದ್ದರೆ ನಮ್ಮ ಪರಿಸ್ಥಿತಿ ಏನಾಗುತ್ತಿತ್ತು ಎಂಬುದನ್ನು ನಾವು ಯೋಚನೆ ಮಾಡುತ್ತಿದ್ದೇವೆ.

**(ಮುಂದು)**

**(560) 22.03.2021 6.40 ವೈಎಲ್-ಜಿಆರ್**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಈ ಹಿಂದೆ ಇದ್ದಂತಹ ಸರ್ಕಾರ ಕಡಿಮೆ ಪ್ರಮಾಣದಲ್ಲಿ ಕಚ್ಚಾ ತೈಲ ಆಮದು ಮಾಡಿಕೊಳ್ಳುವ dependence ಕಡೆ ಗಮನಹರಿಸಿಲ್ಲ, ಪೆಟ್ರೋಲ್ ಪ್ರಾಡೆಕ್ಟ್ಸ್ ಆಮದು ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ಕಡಿಮೆ ಆಮದು ಮಾಡಿಕೊಳ್ಳುವ ಕಡೆ ಯಾವುದೇ ರೀತಿಯ ಪ್ರಯತ್ನ ಮಾಡಿಲ್ಲದ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಲುವಾಗಿಯೇ ಪೆಟ್ರೋಲ್, ಡೀಸೆಲ್ ಬೆಲೆ ಜಾಸ್ತಿಯಾಗಿದೆ ಎನ್ನುವಂಥ ಮಾತನ್ನು ಭಾಷಣ ಮಾಡುವಾಗ ಹೇಳಿದರು. ಅವರ ಸರ್ಕಾರದಲ್ಲಿ ಆ ರೀತಿಯಾಗಿಲ್ಲವೇ? ಅವರ ಸರ್ಕಾರದಲ್ಲಿಯು ಕಚ್ಚಾ ತೈಲವನ್ನು ಹೆಚ್ಚು ಪ್ರಮಾಣದಲ್ಲಿ ಆಮದು ಮಾಡಿದ್ದಾರೆ. ನಾವು ಹೆಚ್ಚು ಪ್ರಮಾಣದಲ್ಲಿ ಕಚ್ಚಾ ತೈಲವನ್ನು ಆಮದು ಮಾಡಿಕೊಂಡಿರುವುದರಿಂದಲೇ ನಮ್ಮನ್ನು ಇಲ್ಲಿಗೆ ತಂದು ಕೂರಿಸಿರುವುದು. ನಾವು ಮಾಡಿದ ಹಾಗೆಯೇ ಅವರು ಮಾಡುತ್ತಾರೆಯೇ? Shifting the responsibility on another Government is not a good trend in politics. ಈ ದೇಶಕ್ಕೆ ಸ್ವತಂತ್ರ ಬಂದಾಗ ಬಲಿಷ್ಠ ರಾಷ್ಟ್ರವನ್ನಾಗಿ ಮಾಡಿ, ಇಡೀ ಪ್ರಪಂಚದಲ್ಲಿಯೇ ಶಕ್ತಿ ಶಾಲಿ ಸಮೃದ್ಧ ರಾಷ್ಟ್ರವಾಗಿ ಮಾಡಿ, ಪ್ರತಿಯೊಬ್ಬ ಭಾರತೀಯರನ್ನು ಹೆಮ್ಮೆ, ಗರ್ವದಿಂದ ನಾನು ಸಹ ಭಾರತೀಯ ಎಂದು ಹೇಳುವಂತಹ ಬಲಿಷ್ಠ ರಾಷ್ಟ್ರವನ್ನು ನಿರ್ಮಾಣ ಮಾಡಿದ್ದಾರೆ. ಶ್ರೀ ಪಂಡಿತ್ ಜವಾಹರ್‌ಲಾಲ್ ನೆಹರೂರವರು, ಡಾ॥ ಮನಮೋಹನ್ ಸಿಂಗ್‌ರಂತಹ ಜಗತ್ಪ್ರಸಿದ್ಧವಾದ ಆರ್ಥಿಕ ತಜ್ಞರು ಈ ದೇಶವನ್ನು ಕಟ್ಟಿ ಬಲಿಷ್ಠ ರಾಷ್ಟ್ರವಾಗಿ ಮಾಡಿರುವುದು, ನಮ್ಮ ಕಣ್ಣ ಮುಂದೆಯೇ ನಾಶವಾಗುತ್ತಿದೆ ಎಂದು ನನಗೆ ನೋವಾಗುತ್ತಿದೆ.

**ಶ್ರೀ ಮುರುಗೇಶ್ ಆರ್ ನಿರಾಣಿ (ಗಣಿ ಮತ್ತು ಭೂ ವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಅದರ ಸಲುವಾಗಿಯೇ clear mandate ಮಾಡಿ, ಭಾರತೀಯ ಜನತಾ ಪಾರ್ಟಿಯವರಿಗೆ ಈ ದೇಶದ ಜನರು ಆಶೀರ್ವಾದ ಮಾಡಿ, 300 ಕ್ಕಿಂತ ಹೆಚ್ಚು ಸ್ಥಾನವನ್ನು ಕಲ್ಪಿಸಿ, ಸಂಸತ್ತಿನಲ್ಲಿ ಆಡಳಿತ ನಡೆಸುವುದಕ್ಕೆ ಅವಕಾಶ ಕಲ್ಪಿಸಿದ್ದಾರೆ. ಬಲಿಷ್ಠ ಭಾರತವನ್ನಾಗಿ ಮಾಡಿರುವುದಕ್ಕಾಗಿಯೇ ಈ ದೇಶದ ಪ್ರಜೆಗಳು ಸ್ಪಷ್ಟವಾಗಿ ವಿರೋಧ ಪಕ್ಷದ ಕಡೆ ಕೂರಲು ಸಾಧ್ಯವಾಗದೇ ಇರುವಷ್ಟು ಸ್ಥಾನಗಳನ್ನು ನೀಡಿದ್ದಾರೆ. ಅದೇ ರೀತಿ ಎಲ್ಲಾ ರಾಜ್ಯದಲ್ಲಿಯು ನಡೆಯುತ್ತಿದೆ. ಇದರ ಸಲುವಾಗಿ ಯಾರು ಬಲಿಷ್ಠ ಭಾರತವನ್ನು ನಿರ್ಮಿಸುತ್ತಿದ್ದಾರೆ; ಯಾರು ಇದರ ಹಿಂದೆ ಇದ್ದರೂ; ಈಗ ಏನು ನಡೆಯುತ್ತಿದೆ ಎಂಬುದನ್ನು 130 ಕೋಟಿ ಜನರು ನೋಡುತ್ತಿದ್ದಾರೆ. ಅದರ ಸಲುವಾಗಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು, ಮಾನ್ಯ ನರೇಂದ್ರ ಮೋದಿಯವರು ನಮ್ಮ ದೇಶಕ್ಕೆ ಮಾತ್ರವಲ್ಲದೇ, ಇಡೀ ಜಗತ್ತಿಗೆ ಆದರ್ಶ ರಾಜಕಾರಣಿಯಾಗಿ ಹೇಗೆ ಇರಬೇಕು, ಒಬ್ಬ ಲೀಡರ್ ಎಂದರೆ ಹೇಗೆ ಇರಬೇಕೆಂಬುದನ್ನು ತೋರಿಸಿಕೊಟ್ಟಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇಷ್ಟು ದೊಡ್ಡ ಸಂಖ್ಯೆಯಲ್ಲಿ,...

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, 301 ಸದಸ್ಯರನ್ನು ಲೋಕಸಭೆಗೆ,... Divert ಮಾಡಬೇಡಿ. ನಮ್ಮನ್ನು ದಾರಿ ತಪ್ಪಿಸಿದರೆ ಹೇಗೆ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಒಂದು ನಿಮಿಷ. ಮಾನ್ಯ ರವಿಕುಮಾರ್‌ರವರು ಮಾತನಾಡಲಿ.

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಹಿರಿಯರಾದಂಥ ಮಾನ್ಯ ಎಸ್.ಆರ್.ಪಾಟೀಲ್‌ರವರು ಶ್ರೀಲಂಕಾ, ನೇಪಾಳದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಕಡಿಮೆ ಇದ್ದು, ಭಾರತ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಜಾಸ್ತಿಯಾಗಿದೆ ಎನ್ನುವಂಥ ಮಾತನ್ನು ಹೇಳಿದರು. ಯು.ಪಿ.ಎ. ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಸಹ ಇದೇ ಪರಿಸ್ಥಿತಿ ಇತ್ತು. ನೇಪಾಳ, ಪಾಕಿಸ್ತಾನ, ಶ್ರೀಲಂಕಾದಲ್ಲಿ ಕಚ್ಚಾ ತೈಲದ ಬೆಲೆ ಕಡಿಮೆ ಇದ್ದು, ಭಾರತ ದೇಶದಲ್ಲಿ ಕಚ್ಚಾ ತೈಲದ ಬೆಲೆ ಜಾಸ್ತಿ ಇತ್ತು. ಈಗ ಕಚ್ಚಾ ತೈಲದ ಬೆಲೆ ಜಾಸ್ತಿಯಾಗಿರುವ ಬಗ್ಗೆ ನಮಗೂ ದುಃಖ ಇದೆ. ಮಾನ್ಯ ಎಸ್.ಆರ್.ಪಾಟೀಲ್‌ರವರ ಮೂಲಕ ಒಂದು ಸಂಗತಿಯನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಪೆಟ್ರೋಲ್‌ಗೆ ಪರ್ಯಾಯವಾಗಿ ನಮ್ಮ ದೇಶದಲ್ಲಿ ಏನಾದರೂ ದೊಡ್ಡ ಪ್ರಯತ್ನ ನಡೆದಿದ್ದರೆ, ಉದಾಹರಣೆಗೆ ಹೇಳುವುದಾದರೆ, ಶೇ. 20 ರಷ್ಟು ಎಥೆನಾಲ್ ಉಪಯೋಗ ಮಾಡಿಕೊಳ್ಳುವ ಬಗ್ಗೆ ಆಲೋಚನೆ ಇರುತ್ತದೆ. ಅದೇ ರೀತಿ ವಿಂಡ್ ಎನರ್ಜಿ ಬಗ್ಗೆ ಇರಬಹುದು, ಎಲೆಕ್ಟ್ರಿಕ್ ಎನರ್ಜಿ ಇರಬಹುದು ಅಥವಾ ಸೋಲಾರ್ ಬಗ್ಗೆ ಇರಬಹುದು. ಸಾಲು-ಸಾಲಾಗಿ ಪರ್ಯಾಯವಾಗಿ alternatives to petrol ಬಗ್ಗೆ ಏನಾದರೂ ಪ್ರಯತ್ನ ಮಾಡಿದರೆ ಅದು ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರ ಸರ್ಕಾರದಲ್ಲಿ ಮಾತ್ರ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅದು ಕಾಂಗ್ರೆಸ್ ಸರ್ಕಾರದ ಕಾಲದಿಂದ ನಡೆಯುತ್ತಿದ್ದ ಪ್ರಯತ್ನವಾಗಿದೆ. ಎಥೆನಾಲ್ ಉಪಯೋಗ ಮಾಡಿಕೊಳ್ಳುವ ಬಗ್ಗೆ ಆಲೋಚನೆ ಇರುತ್ತದೆ. ವಿಂಡ್ ಎನರ್ಜಿ ಬಗ್ಗೆ ಇರಬಹುದು, ಎಲೆಕ್ಟ್ರಿಕ್ ಎನರ್ಜಿ ಇರಬಹುದು ಅಥವಾ ಸೋಲಾರ್ ಎನರ್ಜಿ ಬಗ್ಗೆ ಇರಬಹುದು ಇದೆಲ್ಲವೂ ಕಾಂಗ್ರೆಸ್ ಸರ್ಕಾರದ ಕಾಲದಿಂದ ನಡೆಯುತ್ತಿದ್ದ ಪ್ರಯತ್ನವಾಗಿದೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇದೆಲ್ಲಾ ನಮ್ಮ ಸರ್ಕಾರದಲ್ಲಿ ಆಗಿರುವುದು. ಇಡೀ ಏಷ್ಯಾದಲ್ಲಿಯೇ biggest solar power plant ಮಾಡಿದ್ದು ನಮ್ಮ ಸರ್ಕಾರ; ಅವರ ಸರ್ಕಾರ ಅಲ್ಲ. ನಮ್ಮ ಸರ್ಕಾರ ಮಾಡಿರುವ ಕೆಲಸವನ್ನು ಅವರ ಸರ್ಕಾರ ಮಾಡಿರುವುದು ಎಂದು ಹೇಳಿಕೊಳ್ಳುವುದಕ್ಕೆ ಹೊರಟಿದ್ದಾರೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಕೊನೆಯ ಅಂಶವನ್ನು ಹೇಳುತ್ತೇನೆ. ಪೆಟ್ರೋಲ್, ಡೀಸೆಲ್ ಬೆಲೆಗೆ ಸಂಬಂಧಿಸಿದಂತೆ, ಇಡೀ ದೇಶದಲ್ಲಿಯೇ ಸ್ವತಃ ಕೇಂದ್ರ ಸರ್ಕಾರವೇ ಬೆಲೆಯನ್ನು ಹೆಚ್ಚು ಮಾಡಿಲ್ಲ ಮತ್ತು ಮಾನ್ಯ ಮನಮೋಹನ್ ಸಿಂಗ್‌ರವರು ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಪೆಟ್ರೋಲ್ ಮತ್ತು ಡೀಸೆಲ್‌ಗೆ ಸಂಬಂಧಿಸಿದಂತೆ ಸಾವಿರಾರು ಕೋಟಿ ರೂಪಾಯಿ ಸಾಲ ಮಾಡಿದ್ದು, ಅದರ ಬಡ್ಡಿ ಭರಿಸುವ ಕೆಲಸವನ್ನು ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು ಮಾಡುತ್ತಿದ್ದಾರೆ. ಅಷ್ಟು ಸಾಲವನ್ನು ಯು.ಪಿ.ಎ. ಸರ್ಕಾರ ಮಾಡಿದೆ. ಹಾಗಾಗಿ ಇದರ ಬಗ್ಗೆ ಸಹ ಬೆಳಕು ಚೆಲ್ಲಬೇಕು. ಇನ್ನೊಂದು ಕೊನೆಯ ಅಂಶವನ್ನು ಹೇಳುತ್ತೇನೆ. ಇದಕ್ಕೆ reverse ಆಗಿ ಜನ ನಿಜಕ್ಕೂ ದುಃಖಿತರಾಗಿದ್ದರೆ,... ನಾನು ಕಚ್ಚಾ ತೈಲ ಬೆಲೆ ಜಾಸ್ತಿಯಾಗಿರುವುದರಿಂದ ಜನರು ದುಃಖಿತರಾಗಿಲ್ಲ ಎಂದು ಹೇಳುವುದಿಲ್ಲ. ನಮಗೂ ಸಹ ಪೆಟ್ರೋಲ್, ಡೀಸೆಲ್ ಬೆಲೆ ಜಾಸ್ತಿಯಾಗಿರುವುದಕ್ಕೆ ನೋವು ಇದ್ದು, ಅದರ ಬೆಲೆಯನ್ನು ಕಡಿಮೆ ಮಾಡುವ ಬಗ್ಗೆ ಮುಂದಿನ ದಿನಗಳಲ್ಲಿ ಕೇಂದ್ರ ಸರ್ಕಾರ ಯೋಚನೆ ಮಾಡುತ್ತದೆ ಎಂದು ಭಾವಿಸಿದ್ದೇನೆ. ಹಾಗಾಗಿ ಇದಕ್ಕೆ reverse ಆಗಿ ಪ್ರತಿ ಮನೆಯ ಕುಟುಂಬಕ್ಕೂ ಸಹ ತಲುಪುವಂಥ ಯೋಜನೆಗಳನ್ನು ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರ ಸರ್ಕಾರ ಜಾರಿಗೆ ತಂದಿದೆ. ಜನರು ಬಹಳ ದುಃಖದಲ್ಲಿದ್ದಾರೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು ಒಳ್ಳೆಯ ಕೆಲಸವನ್ನು ಮಾಡಿದ್ದು, ಅವಶ್ಯಕವಾಗಿಯೇ ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿಲ್ಲವೆಂದು ಜನರು ಸುಮ್ಮನೆ ಇದ್ದಾರೆ. ಬೆಲೆ ಜಾಸ್ತಿಯಾಗಿರುವ ಬಗ್ಗೆ ನಮಗೂ ನೋವು ಇದೆ. ಮುಂದಿನ ದಿನಗಳಲ್ಲಿ ಕೇಂದ್ರ ಸರ್ಕಾರದವರು ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಕಡಿಮೆ ಮಾಡುತ್ತಾರೆ ಎನ್ನುವಂಥ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ಹೇಳಿದ ಹಾಗೆ ಆ ದಿವಸ ಬೇಗ ಬರಲಿ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಾಗಿರುವುದು ನಮಗೂ ಏನು ಖುಷಿಯ ಸಂಗತಿಯಾಗಿಲ್ಲ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ

ಕಡಿಮೆಯಾಗಿ ಸಾಮಾನ್ಯ ಜನರು ಬದುಕು ನಡೆಸುವಂತೆ ಆಗಲಿ. ಮಾನ್ಯ ಮುರುಗೇಶ್ ಆರ್ ನಿರಾಣಿಯವರು, "301 ಸ್ಥಾನ ಗೆದ್ದು ನಮ್ಮ ಪಕ್ಷ ಅಧಿಕಾರಕ್ಕೆ ಬಂದಿದೆ" ಎಂದು ಹೇಳಿದರು. ಆದರೆ, ನಾವು 400 ಸ್ಥಾನಗಳನ್ನು ಗೆದ್ದಂತಹ ಬಗ್ಗೆ ದಾಖಲೆಗಳಿವೆ. ಆದರೂ ಈಗ ನಾವು ಪ್ರತಿಪಕ್ಷದಲ್ಲಿಯೇ ಕುಳಿತುಕೊಂಡಿದ್ದೇವೆ. (ಗೊಂದಲ) 2 ಸ್ಥಾನಗಳಿಂದ ಇವತ್ತು ಇಷ್ಟು ಸಂಖ್ಯೆಯನ್ನು ತಲುಪಿ ಅವರ ಸರ್ಕಾರ ಲೋಕಸಭೆಗೆ ಹೋಗಿರುವುದರ ಗುರುತು ಸಹ ಇದೆ. ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ಬಗ್ಗೆ ಹೇಳುವುದಾರೆ, I have got a special regards for Atalji. He is the tallest personality in Indian political scene. ಅದರ ಬಗ್ಗೆ ಪ್ರಶ್ನೆಯೇ ಇಲ್ಲ. ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು When she chopped off one wing of Pakistan, East Pakistan ಅನ್ನು ಬಾಂಗ್ಲಾದೇಶವನ್ನಾಗಿ ಮಾಡಿ ಮಾನ್ಯ ಇಂದಿರಾಗಾಂಧಿಯವರು ಆ ವಿಚಾರವನ್ನು ಸಂಸತ್ತಿನಲ್ಲಿ ಅನೌನ್ಸ್ ಮಾಡಲು ಬಂದಾಗ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಮಾನ್ಯ ಇಂದಿರಾಗಾಂಧಿಯವರನ್ನು 'ಸಾಕ್ಷಾತ್ ದುರ್ಗಿ' ಎಂದು ಕರೆದರು. ಪ್ರಪ್ರಥಮ ಪ್ರಧಾನ ಮಂತ್ರಿಗಳಾಗಿ ಮಾನ್ಯ ಜವಾಹರಲಾಲ್ ನೆಹರೂರವರು ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಸಣ್ಣ ವಯಸ್ಸಿನ ಯುವಕರಾಗಿದ್ದರು. ಆಗ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರನ್ನು ನೋಡಿ 'One day he will become a Prime Minister of this country' ಎನ್ನುವಂಥ ಮಾತನ್ನು ಹೇಳಿದರು. ಆ ಸಂದರ್ಭದಲ್ಲಿ undivided Congress party ಅಧಿಕಾರದಲ್ಲಿತ್ತು. ಅಂದಿನ ದಿನಗಳಲ್ಲಿ ಕಾಂಗ್ರೆಸ್ಸಿನ ವಿರುದ್ಧ ಅಭ್ಯರ್ಥಿಗಳನ್ನೇ ನಿಲ್ಲಿಸುತ್ತಿರಲಿಲ್ಲ. ಮಾನ್ಯ ಜವಾಹರಲಾಲ್ ನೆಹರೂರವರು 'ವಿರೋಧ ಪಕ್ಷದಲ್ಲಿದ್ದಂತಹ stalwarts ಸಂಸತ್ತಿಗೆ ಆಯ್ಕೆಯಾಗಿ ಬರಲಿಲ್ಲವೆಂದರೆ, ನಮ್ಮ ಗತಿಯೇನು, ನಮಗೆ ಮಾರ್ಗದರ್ಶನ ನೀಡುವವರು ಬೇಕು' ಎಂದು without contest elect ಮಾಡುತ್ತಿದ್ದರು. ಮಾನ್ಯ ಜವಾಹರ್‌ಲಾಲ್ ನೆಹರೂರವರು ದೇಶಕ್ಕೆ ಸ್ವಾತಂತ್ರ್ಯ ದೊರಕಿದ ಸಂದರ್ಭದಲ್ಲಿ ಅಂದರೆ Undivided Congress party ಇದ್ದಂತಹ ಸಂದರ್ಭದಲ್ಲಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರಿಗೆ 'One day he will become a Prime Minister of this country' ಎಂದು ಹೇಳಿದರು. ನಾವು ಸಹ ಅದೇ ರೀತಿ ಸ್ಪೋರ್ಟಿವ್ ಆಗಿ ಇರಬೇಕು. ವಾಸ್ತವಿಕ ನೆಲಗಟ್ಟಿನಲ್ಲಿ ಕೆಲಸ-ಕಾರ್ಯಗಳನ್ನು ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಎಸ್.ಆರ್.ಪಾಟೀಲ್‌ರವರೆ ಈಗ ಏತಕ್ಕೆ ಆ ಸ್ಪೋರ್ಟಿವ್ ಇಲ್ಲ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರನ್ನು ಕಾಂಗ್ರೆಸ್ ಪಕ್ಷವು ಮಂತ್ರಿಯಾಗಿ ಮಾಡಬೇಕಾಗಿತ್ತು. ಆದರೆ, ಆ ಹೃದಯ ವೈಶಾಲ್ಯತೆಯೇ ಇಲ್ಲ. ಈ ರೀತಿ ಏತಕ್ಕೆ ಮಾಡಿದ್ದಾರೆ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮಷ್ಟು ಹೃದಯ ವೈಶಾಲ್ಯತೆ ಯಾರಿಗೂ ಇಲ್ಲ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರನ್ನು ನೋಡಿದರೆ ಬಹಳ ನೋವಾಗುತ್ತದೆ. ಈ ವಯಸ್ಸಿನಲ್ಲಿಯು ಪಾಪ್ಪ ಅವರು ಕಾಂಗ್ರೆಸ್ ಪಕ್ಷಕ್ಕಾಗಿ ಎಷ್ಟೆಲ್ಲಾ ದುಡಿಯುತ್ತಾರೆ. ಅವರಿಗೆ ಕಾಂಗ್ರೆಸ್ ಪಕ್ಷ ಸಚಿವ ಸ್ಥಾನವನ್ನು ನೀಡಲಿಲ್ಲವೆಂದರೆ ಹೇಗೆ?

**ಶ್ರೀ ಅರುಣ ಶಹಾಪುರ:-** ಮಾನ್ಯ ರವಿಕುಮಾರ್‌ರವರೆ, 'ಈ ವಯಸ್ಸಿನಲ್ಲಿಯು' ಎಂದರೆ, ಏನರ್ಥ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ರೀತಿ ಮಾತುಗಳನ್ನು ಆಡಿ ನಮ್ಮನ್ನು ಕೆಣಕುವುದೇ ಆಡಳಿತ ಪಕ್ಷದವರ ಕೆಲಸವಾಗಿದೆ. ಮತ್ತೆ ನಾನು ಸದನಕ್ಕೆ ಬರಬಾರದೆಂಬುದು ಅವರ ಭಾವನೆಯಾಗಿದ್ದರೆ ಅವರು ನೇರವಾಗಿ ಹೇಳಲಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರು ನಮ್ಮ ಪಕ್ಷದಲ್ಲಿ ಈ ರೀತಿಯಾಗಿ ದುಡಿದಿದ್ದರೆ, ಇಷ್ಟೊತ್ತಿಗೆ ಅವರನ್ನು ಮಂತ್ರಿಯನ್ನಾಗಿ ಮಾಡುತ್ತಿದ್ದರು.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಅವರಲ್ಲಿರತಕ್ಕಂಥ ದುಃಖಿ ಆತ್ಮಗಳು ಯಾರಿದ್ದಾರೆ, ಅವರನ್ನು ಮೊದಲು ಇವರು ಮಂತ್ರಿಯಾಗಿ ಮಾಡಲಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, I am loyal. My honesty and integrity cannot be questioned. I never compromise with my principles and ideologies.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ಯಾವುದೇ ಒಂದು ಪಕ್ಷಕ್ಕೆ 'ಮುತ್ಸದ್ಧಿಗಳ, ಹಿರಿಯರ, ದಕ್ಷರ ಅವಶ್ಯಕತೆ ಇದೆ. ಅದಕ್ಕಾಗಿ ಬಿಜೆಪಿ ಯಲ್ಲಿ ಅಂತಹವರಿಗೆ ಬೆಲೆ ನೀಡುತ್ತೇವೆ' ಎನ್ನುವಂಥ ಮಾತನ್ನು ಹೇಳಿದರು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನ್ನ ಪಕ್ಷವು ನನಗೆ ಪ್ರತಿಪಕ್ಷದ ನಾಯಕನ ಸ್ಥಾನವನ್ನು ಕಲ್ಪಿಸಿದೆ. ನಾನು ಅಧಿಕಾರಕ್ಕಾಗಿ ಲಾಬಿ ಮಾಡುವಂಥ ರಾಜಕಾರಣಿಯಲ್ಲ. ಕುರ್ಚಿಗೆ ಬೆನ್ನತ್ತಿ ಹೋಗುವಂಥ ವ್ಯಕ್ತಿ ನಾನಲ್ಲ. ನನಗೆ ಜನಸೇವೆ ಮಾಡಲು ಅವಕಾಶ ಸಿಕ್ಕಿದರೆ ಅದನ್ನು ಸ್ವೀಕಾರ ಮಾಡುತ್ತೇನೆ. ನನಗೆ ಅಧಿಕಾರ ಸಿಗಲಿ, ಬಿಡಲಿ. ನಾನು ನನ್ನ ಪಕ್ಷದ ಸಾಮಾನ್ಯ ಕಾರ್ಯಕರ್ತನಾಗಿದ್ದರೂ ಸಹ ಬಹಳ ಸಂತೋಷ, ಖುಷಿಯಿಂದಲೇ ಇದ್ದೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಆದರೂ ಮಾನ್ಯ ಎಸ್.ಆರ್.ಪಾಟೀಲ್‌ರವರನ್ನು ಕಾಂಗ್ರೆಸ್ ಪಕ್ಷ ಅರ್ಥ ಮಾಡಿಕೊಳ್ಳಲಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ನನಗೆ ಎಷ್ಟು ಬೇಕಾದರೂ ಮನವೊಲಿಸುವಂಥ ಕೆಲಸ ಮಾಡಿಕೊಳ್ಳಬಹುದು. ಈ ದೇಶದ ಪ್ರಧಾನಮಂತ್ರಿಯಾದ ಶ್ರೀ ನರೇಂದ್ರ ಮೋದಿಯವರು ಹಿಂದಿನ ಸರ್ಕಾರ ಅಂದರೆ, ಯು.ಪಿ.ಎ., ಸರ್ಕಾರ ಪೆಟ್ರೋಲ್, ಡೀಸೆಲ್ ಅನ್ನು ಕಡಿಮೆ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವ ಕಡೆ ಲಕ್ಷ್ಯವಹಿಸಬೇಕಾಗಿತ್ತು ಎನ್ನುವಂಥ ಮಾತನ್ನು ಹೇಳಿದರು.

**(ಮುಂದು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(561) 22.03.2021/6.50/ಎಸ್‌ಕೆ-ಜಿಆರ್**

**ಶ್ರೀ ಎಸ್.ಆರ್. ಪಾಟೀಲ್(ಮುಂದು):-**

ಮಾನ್ಯ ಸಭಾಪತಿಯವರೇ, ಅಂಕಿ-ಅಂಶಗಳನ್ನು ಹೇಳುವುದಾದರೆ, 2013-14ರಲ್ಲಿ ಯು.ಪಿ.ಎ., ಸರ್ಕಾರವಿತ್ತು. 2013-14ರಲ್ಲಿ 184.79 ಟನ್ ಕಚ್ಚಾ ತೈಲವನ್ನು ಆಮದು ಮಾಡಿಕೊಂಡಿದ್ದರು. 2019-20 ರಲ್ಲಿ ಯಾವ ಸರ್ಕಾರವಿತ್ತು? 228 ಮಿಲಿಯನ್ ಟನ್‌ಗಿಂತ ಕಚ್ಚಾ ತೈಲ ಆಮದು ಮಾಡಿಕೊಳ್ಳುವುದು ಕಡಿಮೆಯಾಗಬೇಕಲ್ಲ. 228.6 ಮಿಲಿಯನ್ ಟನ್‌ಗಳಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳಲಾಗಿದೆ. 2013-14ರಲ್ಲಿ ಯು.ಪಿ.ಎ., ಸರ್ಕಾರವಿದ್ದಾಗ, 184.79 ಮಿಲಿಯನ್ ಟನ್ ಕಚ್ಚಾ ತೈಲವಿದ್ದರೆ, 2019-20 ರಲ್ಲಿ ಎನ್.ಡಿ.ಎ., ಸರ್ಕಾರವಿದ್ದಾಗ 228.6 ಮಿಲಿಯನ್ ಟನ್‌ಗಳಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಂಡಿದ್ದಾರೆ. ಆಮೇಲೆ ಇದರಲ್ಲಿ ವ್ಯತ್ಯಾಸ ಎಷ್ಟಾಯಿತು ಎಂದರೆ,

**ಶ್ರೀ ಅರುಣ ಶಹಾಪುರ (ಪದವೀಧರರ ಕ್ಷೇತ್ರ):-** ಮಾನ್ಯ ಎಸ್.ಆರ್. ಪಾಟೀಲರವರೇ,

**ಶ್ರೀ ಎಸ್.ಆರ್. ಪಾಟೀಲ್:-** ತಾವು ನಮ್ಮ ಜಿಲ್ಲೆಯವರು. ತಾವು ಏತಕ್ಕೆ ಕೇಳುತ್ತಿದ್ದೀರಿ?

**ಶ್ರೀ ಅರುಣ ಶಹಾಪುರ:-** ತಮ್ಮ ಭಾಷಣ ಕೇಳುತ್ತಿದ್ದರೆ, ನನಗೆ ಬಹಳಷ್ಟು ಸಂತೋಷವಾಗುತ್ತಿದೆ. ತಮ್ಮ ಭಾಷಣ ಕೇಳುತ್ತಿದ್ದರೆ, ತಾವು ಎಲ್ಲೋ ರಾಜ್ಯಸಭೆಯೊಳಗೆ ಇರಬೇಕಾಗಿತ್ತು. ತಾವು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರ ತರಹ ಮಾತನಾಡುತ್ತಿದ್ದೀರಿ. ನಮಗೆ ಚಿಂತೆ ಏನಾಗಿದೆ ಎಂದರೆ, ಇದಕ್ಕೆಲ್ಲ ಉತ್ತರ ತಾವು ಯು.ಪಿ.ಎ., ಸರ್ಕಾರ

**ಶ್ರೀ ಎಸ್.ಆರ್. ಪಾಟೀಲ್:-** ಇಲ್ಲ. ಇದರೊಳಗೆ ತಮ್ಮ ಸರ್ಕಾರದ ತೆರಿಗೆಯು ಬಂದಿದೆ. ಅದರ ಪರಿಣಾಮ ಏನಾಗಿದೆ ಎಂಬುದನ್ನು ಹೇಳಬೇಕಲ್ಲ.

**ಶ್ರೀ ಅರುಣ ಶಹಾಪುರ:-** ರಾಜ್ಯಸಭಾ ಸದಸ್ಯರಾಗಿ ಅಲ್ಲಿ ವಿರೋಧ ಪಕ್ಷದ ನಾಯಕರಾಗಬೇಕೆಂಬ ಅಪೇಕ್ಷೆ ಏನಾದರೂ ಇಟ್ಟುಕೊಂಡಿದ್ದೀರಾ?

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, we are in federal structure. ನಾವು federal structure ನೊಳಗೆ ಇದ್ದವರು. ಇದರಲ್ಲಿ ಎಷ್ಟೊಂದು ವ್ಯತ್ಯಾಸವಿದೆ ಎಂದರೆ, 2013-14 ಕ್ಕೆ ಹೋಲಿಸಿದರೆ, 43.81 ಮಿಲಿಯನ್ ಟನ್ನುಗಳಷ್ಟು ಕಚ್ಚಾ ತೈಲವನ್ನು 2019-20ರಲ್ಲಿ ಹೆಚ್ಚಿಗೆ ಆಮದು ಮಾಡಿಕೊಂಡಿದ್ದಾರೆ. 184.79 ಮಿಲಿಯನ್ ಟನ್ ಕಚ್ಚಾ ತೈಲ ಕಡಿಮೆಯಾಗಬೇಕಿತ್ತು. ಈ ಹಿಂದೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದ್ದಂತಹ ಸರ್ಕಾರದವರು ಹೆಚ್ಚಿಗೆ ಕಚ್ಚಾತೈಲ ಆಮುದು ಮಾಡಿಕೊಂಡಿದ್ದು, ಅದರ ಮೇಲೆ ನಿಗಾವಹಿಸಲಾರದವರು ಯು.ಪಿ.ಎ., ಸರ್ಕಾರದ ತಪ್ಪು ಎಂದು ಹೇಳಿದರಲ್ಲ, ಈ ಸರ್ಕಾರದವರು ಇದನ್ನು ಕಡಿಮೆ ಮಾಡಿಕೊಂಡು ಬರಬೇಕಾಗಿತ್ತಲ್ಲವೆ. ಸನ್ಮಾನ್ಯ ಪ್ರಧಾನ ಮಂತ್ರಿಯವರು ಮಾರ್ಚ್ 2015ರಲ್ಲಿ ಕೊಚ್ಚಿಯಲ್ಲಿ ನಿಂತು ಮಾತನಾಡುವಾಗ ದೇಶವು ಶೆ. 78.6 ರಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ಈ ಆಮದನ್ನು ಶೇ.10 ರಷ್ಟು ಕಡಿಮೆ ಮಾಡಿದರೆ, ದೇಶವನ್ನು 2022ರ ಒಳಗೆ ಉದ್ಧಾರವಾಗಿ ಬಿಡುತ್ತದೆ ಎನ್ನುವ ಮಾತನ್ನು ಹೇಳಿದರು. ಅವರು ಹಾಗೆ ಹೇಳುವಾಗ ನಮ್ಮ ದೇಶದಲ್ಲಿ 37,788 ಟನ್ನುಗಳಷ್ಟು ಕಚ್ಚಾ ತೈಲ ಉತ್ಪಾದನೆಯಾಗುತ್ತಿತ್ತು. ಆದರೆ 2019-20 ಕ್ಕೆ ಬರುವ ಹೊತ್ತಿಗೆ ಉತ್ಪಾದನೆಯ ಪ್ರಮಾಣ ಹೆಚ್ಚಾಗಬೇಕಾಗಿತ್ತು. 37,788 ಟನ್‌ನಿಂದ ಹೆಚ್ಚಾಗಿಲ್ಲ. ಆದರೆ 32,173 ಟನ್‌ಗಳಷ್ಟು ಕುಸಿದಿದೆ. ದೇಶದಲ್ಲಿ ಕಚ್ಚಾ ತೈಲ ಉತ್ಪಾದನೆ ಕಡಿಮೆಯಾಗಿದೆ. ಆಮದು ಹೆಚ್ಚಾಗಿದೆ. ಅಂದಾಜು 5,615 ಟನ್ನುಗಳಷ್ಟು ಕಚ್ಚಾ ತೈಲದ ಉತ್ಪಾದನೆ ಕಡಿಮೆಯಾಯಿತು. ಇದು ಏಕೆ ಕಡಿಮೆಯಾಯಿತು? ಉತ್ಪಾದನೆ ಕಡಿಮೆ ಮಾಡಿ ಎಂದು ಅದಾನಿ, ಅಂಬಾನಿಯವರು ಹೇಳಿದ್ದಾರೆ. ಸ್ಥಳೀಯವಾಗಿ ಅದನ್ನು ಹೆಚ್ಚು ಮಾಡುವುದು ಮತ್ತು ಆಮದು ಕಡಿಮೆ ಮಾಡುವುದು. ಆಮದು ಕಡಿಮೆ ಮಾಡಿ, ನಮ್ಮ ದೇಶದಲ್ಲಿ ಕಚ್ಚಾ ತೈಲ ಉತ್ಪಾದನೆ ಹೆಚ್ಚು ಮಾಡಿದರೆ, ಮಾನ್ಯ ಪ್ರಧಾನ ಮಂತ್ರಿಯವರು ಕೊಚ್ಚಿಯಲ್ಲಿ ಹೇಳಿದ ಹೇಳಿಕೆಯನ್ನು ನಾವು ಒಪ್ಪಿಕೊಳ್ಳುತ್ತೇವೆ. ಮಾನ್ಯ ಮುರುಗೇಶ್ ನಿರಾಣಿಯವರೇ ತಾವು ಎಲ್ಲಿಗೆ ಹೊರಟಿರಿ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಮುರುಗೇಶ್ ಆರ್ ನಿರಾಣಿ (ಗಣಿ ಮತ್ತು ಭೂ ವಿಜ್ಞಾನ ಇಲಾಖೆ):-** ಮಾನ್ಯ ಸಭಾಪತಿಯವರೇ, ನಿಯಮ 69 ರಡಿಯಲ್ಲಿ ವಿಷಯವೊಂದು ಬಂದಿರುವುದರಿಂದ ನಾನು ಕೆಳಮನೆಗೆ ಹೋಗಬೇಕಾಗಿದೆ.

**ಶ್ರೀ ಎಸ್.ಆರ್. ಪಾಟೀಲ್:-** ತಾವು ಕೆಳಮನೆಗೆ ಹೊರಟ್ಟಿದ್ದೀರಿ. ತಾವು ಹೋಗಿ ಬನ್ನಿ. ತಮಗೆ ಸಂಬಂಧಿಸಿದ oil ಕಂಪನಿಯ ಬಗ್ಗೆ ನಾನು ಹೇಳಿದೆ. ತಾವೊಬ್ಬ ಕೈಗಾರಿಕೋದ್ಯಮಿ. ಹಿಂದೂಸ್ತಾನ್ ಪೆಟ್ರೋಲಿಯಂ, ಭಾರತ ಪೆಟ್ರೋಲಿಯಂ ಕಂಪನಿಗಳು they are doing the best. ಇವು ಬಹಳ ಅತ್ಯುತ್ತಮವಾದ oil ಕಂಪನಿಗಳು. ದೇಶದಲ್ಲಿ ಹೆಚ್ಚು ಉತ್ಪಾದನೆ ಮಾಡುವಂತಹ ಮತ್ತು ಲಾಭದಲ್ಲಿರುವಂತಹ ಕಂಪನಿಗಳು. ಇವುಗಳನ್ನು ಖಾಸಗೀಕರಣ ಮಾಡುವುದಕ್ಕೆ ಪ್ರಾರಂಭವಾಗಿದೆ. ಈ ಕಂಪನಿಗಳನ್ನು ಖರೀದಿ ಮಾಡಲು ಅಂಬಾನಿಯವರ ರಿಲಯನ್ಸ್, ಸೌದಿ ದೇಶದ Saudi Aramco ಮತ್ತು ಬ್ರಿಟೀಷ್ ಪೆಟ್ರೋಲಿಯಂ ಕಂಪನಿಗಳು ಹುನ್ನಾರ ಮಾಡುವುದಕ್ಕೆ ಪ್ರಾರಂಭವಾಗಿದೆ. ಈ ತೈಲ ಕಂಪನಿಗಳು ಹೆಚ್ಚು ಲಾಭ ಗಳಿಸುವಂತಹ ಕಂಪನಿಗಳು. ಇದು ನಮ್ಮ ದೇಶದ ಪ್ರಗತಿಯ ಸಂಕೇತಗಳಿದ್ದಂತೆ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇವೆ. ಇವುಗಳನ್ನು ಖಾಸಗೀಕರಣ ಮಾಡಿದರೆ, disinvestment ಎನ್ನುತ್ತೀರಲ್ಲ. ಸರ್ಕಾರ ತನ್ನ ಷೇರನ್ನು ತೆಗೆದುಕೊಂಡು ಬಿಟ್ಟರೆ, ಅಂಬಾನಿಯವರು ಕೊಂಡುಕೊಳ್ಳುವರು, ಸೌದಿ ಅರೇಬಿಯಾದವರು, ಬ್ರಿಟೀಷ್ ಪೆಟ್ರೋಲಿಯಂ ಕಂಪನಿಗಳು ಇವುಗಳ ಮೇಲೆ ಕಣ್ಣು ಇಟ್ಟಿದ್ದಾರೆ. ಬಹುತರವಾಗಿ ಇದರ ಮುಖಾಂತರ ಸರ್ಕಾರ ಹಿಡಿತವನ್ನು ಕಡಿಮೆ ಮಾಡಿ, ಜನರ ಹಿಡಿತವನ್ನು ತಪ್ಪಿಸುವುದಕ್ಕೆ ಹೊರಟಿದ್ದಾರೆ ಎಂದು ಹೇಳುತ್ತೇನೆ. ನನಗೆ ಅನಿಸುವುದೇನೆಂದರೆ, ಆಹಾರ, ಇಂಧನ, ಸಾರಿಗೆ, ಬಂದರು, ರಕ್ಷಣೆ ವಿದ್ಯುತ್ ಮುಂತಾದವುಗಳನ್ನು ಯಾವ ಪ್ರಜ್ಞೆ ಇರುವಂತಹ ದೇಶಗಳು ಕೂಡ ಖಾಸಗಿಯವರಿಗೆ ವಹಿಸಿಕೊಡುವುದಿಲ್ಲ. These are the very important public undertakings. ಆಹಾರ, ಇಂಧನ, ಸಾರಿಗೆ, ಬಂದರು, ರಕ್ಷಣೆ ವಿದ್ಯುತ್ ಮೇಲೆ ಸರ್ಕಾರ ತನ್ನ ಸ್ವಾಮ್ಯತ್ವದಲ್ಲಿ ಇಟ್ಟುಕೊಳ್ಳಬೇಕು. ನನ್ನ ದೃಷ್ಟಿಯಲ್ಲಿ ಯಾವ ಪ್ರಜ್ಞಾವಂತ ಸರ್ಕಾರ ಕೂಡ ಇವುಗಳನ್ನು ಖಾಸಗೀಕರಣ ಮಾಡುವಂತಹ ಕೆಲಸಕ್ಕೆ ಕೈ ಹಾಕುವುದಿಲ್ಲ. ಭಾರತೀಯ ಪರಂಪರೆಯ ಬಗ್ಗೆ, ನಮ್ಮ ರಾಜರುಗಳ ಬಗ್ಗೆ ಬಹುತರವಾಗಿ ಭಾರತ ಜನತಾ ಪಕ್ಷದ ಅನೇಕ ನಾಯಕರು ಭಾಷಣ ಮಾಡುವುದನ್ನು ನಾನು ಸಮೀಪದಿಂದ ಕೇಳಿದ್ದೇನೆ. ಈ ದೇಶದ ಉಜ್ವಲ ಪರಂಪರೆ, ಭವ್ಯ ಪರಂಪರೆ, ಅದ್ಭುತ ಸಂಸ್ಕೃತಿ ಮತ್ತು ಹಿಂದಿನ ರಾಜ ಮಹಾರಾಜರ ಬಗ್ಗೆ ಹೊಗಳಿಕೆಯ ಮಾತನ್ನು ಹೇಳುತ್ತಾರೆ. ಹಿಂದಿನ ರಾಜರುಗಳು ಹೇಗಿದ್ದರು ಎಂದರೆ, ಜಲದುರ್ಗ, ಗಿರಿದುರ್ಗ, ವನದುರ್ಗ ಇವುಗಳನ್ನು ಎಂದಿಗೂ ಕಳೆದುಕೊಳ್ಳುತ್ತಿರಲಿಲ್ಲ. ಆದರೆ ಮಾನ್ಯ ಮೋದಿಯವರು ಏನು ಮಾಡಿದ್ದಾರೆಂದರೆ, ಪ್ರಮುಖ ಜಲದುರ್ಗಗಳೆನ್ನಿಸಿದ ಬಂದರುಗಳನ್ನು ಅದಾನಿಗೆ ಬಿಟ್ಟುಕೊಟ್ಟಿದ್ದಾರೆ. ಈಗಾಗಲೇ ಎಂಟು ಬಂದರುಗಳು ಅದಾನಿಗಳ ಹಿಡಿತಕ್ಕೆ ಹೋಗಿವೆ. ಜಲದುರ್ಗ ಹೋಯಿತು. ಈಗ ಪ್ರಮುಖ ಶಕ್ತಿ ಎನಿಸಿದ ಇಂಧನವನ್ನು ಖಾಸಗಿಯವರಿಗೆ ಕೊಡುವುದಕ್ಕೆ ಹೊರಟಿದ್ದಾರೆ. ಮಾನ್ಯ ನರೇಂದ್ರ ಮೋದಿಯವರ ಕಾಲದಲ್ಲಿ ಕಚ್ಚಾ ತೈಲದ ಆಮದು ಹೆಚ್ಚಾಗಿದೆ. ಆಂತರಿಕ ಉತ್ಪತ್ತಿಯನ್ನು ಕಡಿಮೆ ಮಾಡಿದ್ದಾರೆ. ಆದರೆ ಈಗಿನ ಬೆಲೆ ಏರಿಕೆಗೆ ಹಿಂದಿನ ಸರ್ಕಾರಗಳು ಕಾರಣ ಎಂದರೆ ಇದನ್ನು ಯಾರು ನಂಬುತ್ತಾರೆ? ನನಗೆ ಒಂದು ಮಾತು ನೆನಪು ಆಗುತ್ತದೆ, ‘one can cheat all the people for sometime, one can cheat some people for all the time, one cannot cheat all the people for all the time.’ ಇದನ್ನು ಒಪ್ಪುತ್ತೀರಿ ಎಂದು ನಾನು ಭಾವಿಸುತ್ತೇನೆ. ಅದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ವೀರಪ್ಪ ಮೊಯಿಲಿಯವರು ಇಂಧನ ಸಚಿವರಾಗಿದ್ದಾಗ, ಕೃಷ್ಣಾ, ಗೋದಾವರಿ ನದಿ ತೀರಗಳಲ್ಲಿ ವ್ಯಾಪಕ ಪ್ರಮಾಣದ ತೈಲ ನಿಕ್ಷೇಪಗಳಿವೆ ಎಂಬುದರ ಬಗ್ಗೆ ಸರ್ವೇ ಮುಖಾಂತರ ಪತ್ತೆ ಹಚ್ಚಿಸಿದ್ದರು. ಇದರ ಮೇಲೂ ಅಂಬಾನಿ

ಕಣ್ಣು ಬಿದ್ದಿದೆ ಎಂಬುದರ ಬಗ್ಗೆ ನಾನು ಸತ್ಯವಾಗಿ ಹೇಳುತ್ತೇನೆ. ಈಗ Airports ಹೋಯಿತು, ತೈಲಾ ಕಂಪನಿ ಹೋಯಿತು. ಈ Public Undertaking Companies ನಲ್ಲಿ ಏನೇನು ಪ್ರಮುಖಗಳಿವೆಯೋ, ಇವೆಲ್ಲವೂ ಖಾಸಗೀಕರಣವಾಯಿತು. ಕೃಷಿ ಪ್ರಧಾನವಾದ ಭಾರತ ದೇಶದಲ್ಲಿ ಅತ್ಯಂತ ಫಲವತ್ತಾದ ರೈತರ ಭೂಮಿ ಶತ ಶತಮಾನದಲ್ಲಿ ಮಣ್ಣಿನಲ್ಲಿ ಮಣ್ಣಾಗಿ, ಮಣ್ಣಿನ ಸಂಸ್ಕಾರವನ್ನು ಹೊಂದಿದಂತಹ ರೈತರು ಸ್ವಲ್ಪ ಭೂಮಿಯನ್ನು ಇಟ್ಟುಕೊಂಡಿದ್ದಾರೆ. ಇದರ ಮೇಲೂ ಅವರ ಕಣ್ಣು ಬಿದ್ದಿದೆ. ಮೊನ್ನೆ ತಾನೇ ಭೂಸುಧಾರಣೆ ಕಾಯಿದೆಯನ್ನು ತಿದ್ದುಪಡಿ ಮಾಡಿ, ಕೃಷಿಕರಲ್ಲದವರೂ ಸಹ ಭೂಮಿಯನ್ನು ಖರೀದಿ ಮಾಡಬಹುದು ಎಂದು ಕಾನೂನು ತಿದ್ದುಪಡಿಯಾಯಿತು. ರೈತರು ಬೆಳೆಯುವಂತಹ ಉತ್ಪನ್ನಗಳ ಮೇಲೆ ಕಣ್ಣು ಬಿದ್ದಿದೆ. ಎ.ಪಿ.ಎಂ.ಸಿ., ಕಾಯಿದೆ ತಿದ್ದುಪಡಿಯಾಯಿತು. Essential Commodities Act ತಿದ್ದುಪಡಿಯಾಯಿತು. ಇದರ ಉದ್ದೇಶ ಕೋಟಿ ಕೋಟಿ ಮೆಟ್ರಿಕ್ ಟನ್ ದವಸ-ಧಾನ್ಯಗಳನ್ನು ದಾಸ್ತಾನು ಮಾಡಲು godown ಗಳನ್ನು ಈಗಾಗಲೇ ನಿರ್ಮಿಸಿದ್ದಾರೆ. Essential Commodities Act ಇದ್ದರೆ, ಈಗ ತಮ್ಮ ಜಿಲ್ಲೆಯಲ್ಲಿ ಯಾರಾದರೊಬ್ಬರು ಹಣ ಇದ್ದಂತಹವರು ದಾಸ್ತಾನನ್ನು ಖರೀದಿ ಮಾಡಿ godown ನಲ್ಲಿ ಇಟ್ಟರೆ, ಜಿಲ್ಲಾಧಿಕಾರಿಯವರಿಗೆ ಪೋನ್ ಮಾಡಿದ ಕೂಡಲೆ ಜಿಲ್ಲಾಧಿಕಾರಿಗಳು ಹೋಗಿ, ಆ godown ಅನ್ನು ಹೊಡೆದು ಮಾರುಕಟ್ಟೆಗೆ ತಂದು, ಅದನ್ನು ಮಾರುವಂತಹ ವ್ಯವಸ್ಥೆ ಮಾಡುತ್ತಿದ್ದರು. ಇಲ್ಲವೆಂದರೆ, ದವಸ-ಧಾನ್ಯಗಳ ಬೆಲೆ ಗಗನಕ್ಕೆ ಹೋಗುತ್ತಿತ್ತು. ಆದರೆ ಈಗ ಅದಾನಿ ಅಂಬಾನಿಯವರುಗಳಿಗೆ ಅನುಕೂಲವಾಗುವಂತೆ ಈ Essential Commodities Act ಅನ್ನು ತಿದ್ದುಪಡಿ ಮಾಡುವ ಅವಶ್ಯಕತೆ ಏನಿತ್ತು? Essential Commodities Act ಕಾನೂನು ಏನಿತ್ತು ಅದನ್ನು ತಿದ್ದುಪಡಿ ಮಾಡಿರುವುದರಿಂದ ಬೇಕಾದಷ್ಟು ಸಂಗ್ರಹ ಮಾಡಬಹುದು. ನಮ್ಮ ಬಡ ರೈತರಿಂದ ಎಲ್ಲವನ್ನೂ ಖರೀದಿ ಮಾಡಿ ತಮ್ಮ godown ನಲ್ಲಿ ಇಟ್ಟುಕೊಳ್ಳುತ್ತಾರೆ. ಮಾರುಕಟ್ಟೆಯಲ್ಲಿ ಏನೊಂದು ಕಾಳು ಸಿಗದ ಹಾಗೇ ಮಾಡುತ್ತಾರೆ. ಇನ್ನು ಮುಂದೆ ಬೆಲೆ ಏರುತ್ತದೆ. ಅದು ಕಾನೂನಾತ್ಮಕವಾಗಿ ಸರಿ ಇರುತ್ತದೆ. ಈಗ Essential Commodities Act ಇಲ್ಲ. They can store any quantity. ನಾನು ವಾಸ್ತವಿಕವಾಗಿ ಹೇಳುತ್ತಿದ್ದೇನೆ.

(ಮುಂದು)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(562) 22.03.2021, 7.00, ಟಿಸಿಹೆಚ್–ಎಂಡಿ**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗ ಸಮಯ 7 ಗಂಟೆ ಆಯಿತು, ಇನ್ನೂ ಹಲವಾರು ಮಾನ್ಯ ಸದಸ್ಯರುಗಳು ಮಾತನಾಡುವವರು ಇದ್ದಾರೆ; ಸದನವನ್ನು ನಾಳೆಗೆ ಮುಂದೂಡೋಣವೇ?

**Sri S.R.PATIL:-** I will conclude. ನಾನು ಮಾತನಾಡಿ ಮುಗಿಸುತ್ತೇನೆ. ಇನ್ನೊಂದು ಸ್ವಲ್ಪ ಇದೆ, ಮುಗಿಸಿಬಿಡುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ ಮುಗಿಸಲಿ. ನಾವೇನು ಮಾತನಾಡಬೇಕಿದೆ ಅದನ್ನು ನಾಳೆ ಮಾತನಾಡುತ್ತೇವೆ.

**ಸಭಾಪತಿಯವರು:–** ಆಯಿತು.

**ಶ್ರೀ ಎಸ್.ಆರ್.ಪಾಟೀಲ್:–** ಸಾರಿಗೆ ವೆಚ್ಚ ಟ್ರಕ್ ಬಾಡಿಗೆ ಕೂಡ ಜಾಸ್ತಿಯಾಗಿದೆ. ದಿನಾಂಕ 21.02.2021ರ ವರದಿಯನ್ನು ನೋಡಿದರೆ, ಒಂದೂವರೆ ತಿಂಗಳಿನಲ್ಲಿ ಶೇ.13ರಷ್ಟು ಬೆಲೆ ಏರಿಕೆಯಾಗಿದೆ. ಬಡವರ ಮಕ್ಕಳು bus charge ಕೊಟ್ಟು ಹೋಗುವಂಥ ಪರಿಸ್ಥಿತಿ ಇಲ್ಲ. ಅದೇ ರೀತಿ transportation, ನಾವು ಏನಾದರೂ material ನ್ನು ಬೆಳಗಾವಿಯಿಂದ ಬೆಂಗಳೂರಿಗೆ ತರಬೇಕೆಂದರೆ, it is impossible, we cannot afford it. ಮಾನ್ಯ ಉಪ ಮುಖ್ಯಮಂತ್ರಿಗಳೇ, ಅದರ rate ತುಂಬಾ increase ಆಗಿದೆ. ಈಗ ದೆಹಲಿಯಿಂದ ಚೆನ್ನೈಗೆ ಸರಕು ತರುವ ಬಗ್ಗೆ ಹೇಳುವುದಾದರೆ, ಜನವರಿ 2020ರ ಮೊದಲು, ಟ್ರಕ್‌ಗಳ ಬಾಡಿಗೆ 1.2 ಲಕ್ಷ ರೂಪಾಯಿಗಳು ಇತ್ತು. ಆದರೆ ಫೆಬ್ರುವರಿ–16ಕ್ಕೆ 1.4 ಲಕ್ಷ ರೂಪಾಯಿಗಳಿಗೆ ಏರಿಕೆಯಾಗಿದೆ. ಒಂದು ಟ್ರಿಪ್ ಸರಕು ಸಾಗಾಣಿಕೆಗೆ ಇಷ್ಟು ಬೆಲೆ ಏರಿದರೆ, ಇನ್ನು automatically ಅವಶ್ಯಕ ವಸ್ತುಗಳ ಬೆಲೆ ತನ್ನಷ್ಟಕ್ಕೆ ತಾನೇ increase ಆಗುತ್ತದೆ. ಅದಕ್ಕೆ ನಾನು ಅಂತಿಮವಾಗಿ ಹೇಳುವುದೇನೆಂದರೆ, largest circulation ಇರುವಂಥ ನಮ್ಮ ಕರ್ನಾಟಕ ರಾಜ್ಯದ ಕೆಲವು ದಿನಪತ್ರಿಕೆಗಳನ್ನು quote ಮಾಡಿ ಇದನ್ನು ತಮ್ಮ ಗಮನಕ್ಕೆ ತಂದು ನನ್ನ ಮಾತನ್ನು ಮುಗಿಸುತ್ತೇನೆ.

ವಿಜಯ ಕರ್ನಾಟಕ ಪತ್ರಿಕೆಯ Editorial Column ನಲ್ಲಿ "ಕುತ್ತಿಗೆ ಕುಯ್ಯುವ ತೈಲ ದರ " ಎಂದು ವರದಿಯಾಗಿದೆ. ನಾವೆಲ್ಲಾ ಹಳ್ಳಿಗಳ ಕಡೆ 'ಏನೋ ಮಾರಾಯ ನೀನು ಕುತ್ತಿಗೆ ಕುಯ್ಯುವವನು

ಇದ್ದಂಗೆ ಇದ್ದೀಯಲ್ಲ' ಎಂದು ಹೇಳುತ್ತಿರುತ್ತೇವೆ. ನೀವು ಬಹಳ ಕಡೆ ಆ ರೀತಿ ಬಯ್ಯುತ್ತೀರಿ. ಅಂದರೆ, ತೈಲ ಬೆಲೆ ಕುತ್ತಿಗೆ ಕುಯ್ಯುವ ಲೆವೆಲ್‌ಗೆ ಹೋಗಿದೆಯೆಂದು ಹೇಳಿದ್ದಾರೆ. ಆಮೇಲೆ ಪ್ರಜಾವಾಣಿ ದಿನಪತ್ರಿಕೆಯಲ್ಲಿ "ಅಡುಗೆ ಅನಿಲ ದರ ಏರಿಕೆ, ಜನರಿಗೆ ಗಾಯದ ಮೇಲೆ ಬರೆ" ಎಂದು ವರದಿ ಮಾಡಿದ್ದಾರೆ. ವಾರ್ತಾ ಭಾರತಿ ದಿನಪತ್ರಿಕೆಯವರು " ಪೆಟ್ರೋಲ್ ಜೊತೆ ಡೀಸೆಲ್ ಬೆಲೆ ಏರಿಕೆ ಪ್ರಧಾನಿ ನೀಡಿದ ಹುಸಿಸುಳ್ಳು" ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದನ್ನು ನಾನೇನು ಹೇಳಿಲ್ಲ, ಆ ರೀತಿ ನಾನೇನಾದರೂ ಹೇಳಿದರೆ, ಆಡಳಿತ ಪಕ್ಷದವರು ಜಗಳಕ್ಕೆ ಬರುತ್ತಾರೆ. ಅದನ್ನು ಆ ಪತ್ರಿಕೆಯವರು ಬರೆದಿರುವುದು. ಬೇಕಾದರೆ ಅವರ ಹತ್ತಿರ ಜಗಳವಾಡಲಿ. ಡೀಸೆಲ್ ಬೆಲೆ ಲೀಟರ್‌ಗೆ 100 ರೂಪಾಯಿಗಳವರೆಗೆ ಮುಟ್ಟಿರುವುದರಿಂದ, ಅದರಿಂದ ಈಗಿನ ಪರಿಸ್ಥಿತಿ ಏನಾಗಿದೆಯೆಂದರೆ, 50,000ಕ್ಕಿಂತ ಹೆಚ್ಚು ಟ್ರಕ್‌ಗಳು ಸರಕು ಸಾಗಾಣಿಕೆಯಿಂದ ಹೊರಗುಳಿಯುವಂಥ ಪರಿಸ್ಥಿತಿ ಇದೆ. ನಾನು ಭಯಾನಕವಾದಂಥ ಫ್ಯೂಚರ್ ಬಗ್ಗೆ ಹೇಳುತ್ತಿದ್ದೇನೆ. ಇವತ್ತಿನ ದಿವಸ ಡೀಸೆಲ್ ಬೆಲೆ 100 ರೂಪಾಯಿಗಳ ಹತ್ತಿರಕ್ಕೆ ಹೋಗಿರುವುದರಿಂದ, 50,000ಕ್ಕಿಂತಲೂ ಹೆಚ್ಚು ಸಣ್ಣ ಸಣ್ಣ ಟ್ರಕ್‌ಗಳು, they cannot afford, and they cannot pay that much of huge fare for diesel. ಅವರು ತಮ್ಮ ವಾಹನಗಳನ್ನು ಪಾರ್ಕ್‌ಗಳಲ್ಲೇ ನಿಲ್ಲಿಸುತ್ತಾರೆ. ನಾನು ಇತ್ತೀಚೆಗೆ ಒಂದು ಫೋಟೋವನ್ನು WhatsApp ನಲ್ಲಿ ನೋಡಿದೆನು. ಅದೇನೆಂದರೆ, ಒಂದು ಮೋಟರ್ ಸೈಕಲ್‌ನನ್ನು ಮರಕ್ಕೆ ನೇತಾಕಿ ತೂಗುಬಿಟ್ಟಿದ್ದರು. ಅದಕ್ಕೆ ಪೆಟ್ರೋಲ್ ಹಾಕಿಕೊಂಡು ಉಪಯೋಗಿಸುವುದಕ್ಕೆ ತಾಕತ್ ಬೇಕಲ್ಲವೇ? ಆ ರೀತಿ 50,000ಕ್ಕಿಂತಲೂ ಹೆಚ್ಚು ಟ್ರಕ್‌ಗಳು ನಿಲ್ಲುತ್ತಿವೆ. ಮತ್ತೆ ತಜ್ಞರು ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಸುಂಕ ಕಡಿಮೆ ಮಾಡಿದ್ದಾರೆಂದು ಸರ್ಕಾರಕ್ಕೆ ನಷ್ಟವಾಗುವುದಿಲ್ಲವೆಂದು ವರದಿಯನ್ನೂ ಕೂಡ ಕೊಟ್ಟಿದ್ದಾರೆ. ಸರ್ಕಾರಕ್ಕೆ ನಷ್ಟವಾಗುವುದಿಲ್ಲವೆಂದು ನಾನು ಹೇಳಿಲ್ಲ, ಶ್ರೇಷ್ಠ ಆರ್ಥಿಕ ತಜ್ಞರು ಹೇಳಿದ್ದಾರೆ. ಇನ್ನೇನು ಸರ್ಕಾರಕ್ಕೆ effect ಆಗುವುದಿಲ್ಲವೇ? ಏಕೆ ಈ ಸರ್ಕಾರ ಮಾಡಬಾರದು? ಮತ್ತೆ ಇನ್ನೊಂದು ವಿಚಾರದ ಬಗ್ಗೆ ಹೇಳುವುದಾದರೆ, ಲಕ್ಷಾಂತರ Cab and Autorickshaw ಗಳಿವೆ. ಅವರು ದುಡಿಮೆ ಮಾಡುವುದೇ ಕಷ್ಟ. ಈ ರೀತಿ ಬೆಲೆ ಏರಿಕೆಯಾದರೆ ಇನ್ನು ಮುಂದೆ ಆಟೋಗಳು ಓಡಾಡುವುದು ಬಂದ್ ಆಗುತ್ತವೆ. ಇನ್ನು ಮುಂದಿನ ದಿನಗಳಲ್ಲಿ ಪ್ರಯಾಣಿಕರು, ಆ ರಿಕ್ಷಾದವರಿಗೆ ನಿನಗೆ ಅಷ್ಟು ದುಡ್ಡು ಏತಕ್ಕೆ ಕೊಡಬೇಕು, ಅಷ್ಟು ದುಡ್ಡನ್ನು ನಾನು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಲಕ್ಷಾಂತರ Cab and Autorickshaw ಗಳು ಕೂಡ ಎಲ್ಲೆಂದರಲ್ಲೇ ಉಳಿಯುತ್ತವೆ. ಅವುಗಳನ್ನು ಅಲ್ಲೇ parking ಮಾಡಬೇಕಾಗುತ್ತದೆ. ಆಮೇಲೆ ಅದನ್ನು ನೆಚ್ಚಿಕೊಂಡಂಥ ಲಕ್ಷಾಂತರ ಕುಟುಂಬಗಳ ಗತಿಯೇನು? ಇಷ್ಟು ಪ್ರಮಾಣದಲ್ಲಿ ಬೆಲೆ ಏರಿಕೆಯಾಗಿದ್ದರು ಜನ ಸುಮ್ಮನೆ ಇದ್ದಾರೆಂದು ಮಾನ್ಯ

ಎನ್.ರವಿಕುಮಾರ್‌ರವರು ಹೇಳಿದರು. ನನಗೆ ಅನಿಸಿದ ಮಟ್ಟಿಗೆ, ಈಗ ಜನ ಸುಮ್ಮನೆ ಇರುತ್ತಾರೆ, ಆದರೆ ಯಾವಾಗ ಜನ ತಮ್ಮ ಆಕ್ರೋಶ ವ್ಯಕ್ತಪಡಿಸುತ್ತಾರೊ ಗೊತ್ತಿಲ್ಲ. ಈಗ ಜನಕ್ಕೆ ಅಂಜಿಕೆ ಕೂಡ ಇದೆ. ಒಂದು ವೇಳೆ, ಮಾನ್ಯ ನರೇಂದ್ರ ಮೋದಿಯವರಿಗೆ ಅಥವಾ ಸರ್ಕಾರಕ್ಕೆ ಏನಾದರೂ ಹೇಳಿದರೆ, ಕಾನೂನು ಪ್ರಕಾರ, IPC (Indian Penal Code) ಹಾಕಿ, ರಾಷ್ಟ್ರದ್ರೋಹ ಎಂದು ಹೇಳುತ್ತಾರೆ. Lawfully established Government overthrow ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ನಾನು ಕೂಡ ನೋಡಿದ್ದೇನೆ. ನಾನು ಪಕ್ಷಪಾತಿಯಾಗಿ ಮಾತನಾಡುವುದಿಲ್ಲ. ನಾನು ನಿಷ್ಪಕ್ಷಪಾತವಾಗಿಯೂ ಕೂಡ ಮಾತನಾಡುತ್ತೇನೆ. ಅನೇಕ ಸಂದರ್ಭದಲ್ಲಿ ನಮ್ಮ ಸರ್ಕಾರದ ವೈಫಲ್ಯಗಳಿದ್ದರೂ ಕೂಡ ನಾನು ಇಲ್ಲೇ ನಿಂತುಕೊಂಡು ಇದು ತಪ್ಪು ಎಂದು ಯು.ಕೆ.ಪಿ. ವಿಚಾರದಲ್ಲಿ ಹೇಳಿದ್ದೇನೆ. ಯಾವುದೇ ವಿಚಾರವಿದ್ದರೂ ಕೂಡ ನಾನು ಹೊರಗಡೆಯೂ ಹಾಗೆಯೇ ಇದ್ದೇನೆ ಹಾಗೂ ಒಳಗೂ ಕೂಡ ಹಾಗೆಯೇ ಇದ್ದೇನೆ. ನನ್ನ ಸಿದ್ಧಾಂತ ಸರಿ ಇದೆ. One should be very fair. ಇಲ್ಲವೆಂದರೆ ಯಾರು ನಮ್ಮನ್ನು ನಂಬುತ್ತಾರೆ? ಯಾರೂ ಕೂಡ ನಂಬುವುದಿಲ್ಲ. ಆಗ ನಮ್ಮ ವ್ಯಕ್ತಿತ್ವಕ್ಕೆ ಕುಂದು ಬರುತ್ತದೆಂದು ಭಾವಿಸುತ್ತೇನೆ. ಅದಕ್ಕಾಗಿ ಇವತ್ತಿನ ದಿನ ಈ ರೀತಿಯಾಗಿ ಬೆಲೆಗಳು ಗಗನಕ್ಕೆ ಏರಿದೆ. 130 ಕೋಟಿ ರೂಪಾಯಿಗಳು ಇಡೀ ಪ್ರಪಂಚದಲ್ಲಿ ಬೃಹತ್ ಒಂದು ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿ ಏಳು ವರ್ಷದಲ್ಲಿ ನಮಗೆ ಈ ಗತಿ ಬಂದಿದೆ. ಅದರ ಬಗ್ಗೆ ಹೇಳುವುದಕ್ಕೆ ಬಹಳಷ್ಟು ವಿಚಾರಗಳಿವೆ. ಈಗಾಗಲೇ ಏಳು ಗಂಟೆಯಾಗಿದೆ ಅದಕ್ಕೆ ತಾವು ಸದನವನ್ನು ಮುಂದೂಡಬೇಕೆಂದು ಇದ್ದೀರಿ.

**ಸಭಾಪತಿಯವರು:–** ನನಗೆ ಏನೂ ತೊಂದರೆ ಇಲ್ಲ. ನಾನು ಕುಳಿತುಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಹಾಗಾದರೆ ಇವತ್ತು ಈ ವಿಷಯವನ್ನು ಮುಗಿಸಿಬಿಡೋಣವೇ?

**ಸಭಾಪತಿಯವರು:–** ಆಯಿತು, ಅದು ನಿಮ್ಮ ಮರ್ಜಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅದಕ್ಕೆ ನನಗೆ ಇದು ಹಿಟ್ಲರ್ ಆಡಳಿತ ಎನಿಸುತ್ತದೆ. ಇದು ಒಂದು ರೀತಿಯ ಸರ್ವಾಧಿಕಾರಿಯ ಧೋರಣೆ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ಮಾತನಾಡುತ್ತೇನೆ. ಇವತ್ತಿನ ದಿವಸ ಜನ ಓಟು ಹಾಕುತ್ತಾರೆಂದು ಹೇಳುತ್ತಾರಲ್ಲ? ಅಧಿಕಾರ ಇದ್ದವರೆಲ್ಲಾ ಶ್ರೀ ಶನಿಮಹಾತ್ಮ ದೇವರು ಇದ್ದ ಹಾಗೆ, ದೇವರ ಬಗ್ಗೆ ಭಕ್ತಿ ಇರಲಿ, ಇಲ್ಲದಿರಲಿ, ಆ ಶ್ರೀ ಶನಿಮಹಾತ್ಮ ದೇವರನ್ನು ನೋಡಿದರೆ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ, ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಲ್ಲರೂ ಸಹ ಕೈಮುಗಿದುಕೊಂಡು ಹೋಗುತ್ತಾರೆ. ಆ ರೀತಿ ಅಧಿಕಾರ ಇದ್ದಂತಹವರಿಗೆ ನಮಗೆ ಏಕೆ ನಾಳೆದಿವಸ ಗ್ರಹಚಾರ ಏನೇನೋ ಕೆಲಸಗಳನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ಇದನ್ನು ನಾವು ಮತ್ತು ನೀವು ಅರ್ಥ ಮಾಡಿಕೊಳ್ಳಬೇಕು. ಅವರು ಓಟು ಹಾಕಿದ್ದಾರೆ ಎಂದ ತಕ್ಷಣ ಅವರು ನಮ್ಮ ಪರವಾಗಿ ಇದ್ದಾರೆ ಎಂದು ಅಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ಇದು ಏನಿದ್ದರೂ ಜನರಲ್ ಎಲೆಕ್ಷನ್‌ನಲ್ಲಿ ಮಾತ್ರ ನಮಗೆ ಗೊತ್ತಾಗುವುದು.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಈಗ ಪಶ್ಚಿಮ ಬಂಗಾಳದಲ್ಲಿ ಎಲೆಕ್ಷನ್ ಆಗುತ್ತದೆ. ವಿರೋಧ ಪಕ್ಷದವರಿಗೆ ಎಷ್ಟು ಸೀಟ್‌ಗಳು ಬರುತ್ತವೆ, ನಮ್ಮ ಪಕ್ಷಕ್ಕೆ ಎಷ್ಟು ಸೀಟ್‌ಗಳು ಬರುತ್ತವೆಂದು ಗೊತ್ತಾಗುತ್ತದೆ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಅಲ್ಲಿ ಪ್ರಚಾರ ಮಾಡುವುದಕ್ಕೇ ಬಿಡುತ್ತಿಲ್ಲ. ಕಪ್ಪು ಬಾವುಟಗಳನ್ನು ಹಿಡಿದುಕೊಂಡಿರುತ್ತಾರೆ. ಇತಿಹಾಸದಲ್ಲಿ ಒಬ್ಬ ಮತದಾರ ಒಂದು ರಾಜಕೀಯ ಪಕ್ಷದ ಅಭ್ಯರ್ಥಿಗಳಿಗೆ ಕಪ್ಪು ಬಾವುಟ ಹಿಡಿದಿರುವಂತಹ ಇತಿಹಾಸವಿಲ್ಲ. ಈವತ್ತು ಅದನ್ನು ಹಿಡಿದಿದ್ದಾರೆ. ಅದರಲ್ಲಿ ಬಿಜೆಪಿ ಪಕ್ಷವೇ ಮೊದಲು.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಅಲ್ಲಿ ನಮ್ಮ ಪಕ್ಷವೇ ಅಧಿಕಾರಕ್ಕೆ ಬರುವುದು.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಅವರ ಪಕ್ಷದವರನ್ನೇ ಗೆಲ್ಲಿಸಲಿ, ಅವರೇ ಅಧಿಕಾರಕ್ಕೆ ಬರಲಿ. ಮಾನ್ಯ ಎನ್.ರವಿಕುಮಾರ್‌ರವರ ಪಕ್ಷವನ್ನೇ ಗೆಲ್ಲಿಸಲಿ. ಒಬ್ಬ ಮತದಾರ ಕಪ್ಪು ಬಾವುಟ ಹಿಡಿದಂತಹ ಇತಿಹಾಸವಿಲ್ಲ. ಪಶ್ಚಿಮ ಬಂಗಾಳದಲ್ಲಿ ಅವರಿಗೆ ಕಪ್ಪು ಬಾವುಟವನ್ನು ತೋರಿಸಿದ್ದಾರೆ. ಕಪ್ಪು ಬಾವುಟವನ್ನು ಹಿಡಿಸಿಕೊಂಡಿರುವಂತಹ ರಾಜಕೀಯ ಪಕ್ಷವೆಂದರೆ ಅದು ಬಿಜೆಪಿ ಪಕ್ಷ.

**(ಗೊಂದಲ)**

**ಡಾ॥ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಕಪ್ಪು ಬಾವುಟ ಹಿಡಿಯೋದು ಬೇರೆ, ಬೀಸುವುದು ಬೇರೆ.

**(ಗೊಂದಲ)**

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಯಾರೂ ಕಪ್ಪು ಭಾವುಟ ಬೀಸುವುದಿಲ್ಲ. ಅವರಿಗೆ ಕಪ್ಪು ಬಾವುಟವನ್ನು ಬೀಸಿದ್ದಾರೆ. ಯಾರೂ ಹೇಳಿಕೊಟ್ಟು ಬೀಸಿರುವುದು ಅಲ್ಲ.

**ಶ್ರೀ ಬಿ.ಸಿ.ಪಾಟೀಲ್ (ಕೃಷಿ ಸಚಿವರು) :-** ಮಾನ್ಯ ಸಭಾಪತಿಯವರೇ, ಕೋವಿಡ್ ಎನ್ನುವಂತಹ ಶನಿಮಹಾತ್ಮ ಜಗತ್ತನ್ನು ಕಾಡಿರುವುದು ಎಲ್ಲರಿಗೂ ಗೊತ್ತಿದೆ. ಎಲ್ಲರೂ ಸಹ ಬುದ್ಧಿವಂತರಿದ್ದಾರೆ ಅದನ್ನು ತಿಳಿದುಕೊಂಡು ಜಗತ್ತಿಗೆ ಮತ್ತು ಈ ದೇಶಕ್ಕೆ ಇಂತಹ ಸಮಸ್ಯೆ ಬಂದಿದೆ ಎಂದು ಜನರು ಸುಮ್ಮನಿದ್ದಾರೆ. ಆದರೂ ಕೂಡ ಅದು ಮುಂದಿನ ದಿನಗಳಲ್ಲಿ ಸರಿಯಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ದೇಶಕ್ಕೆ ಒಳ್ಳೆಯದಾದರೆ ಸಾಕು.

**ಶ್ರೀ ಬಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೋವಿಡ್-19 ಬರದಿದ್ದರೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಏಳು ವರ್ಷದಲ್ಲಿ ಈ ರೀತಿಯ ಪರಿಸ್ಥಿತಿ ಬಂದಿಲ್ಲವೆಂದು ಈಗ ಹೇಳಿದರು. ಈ ರೀತಿಯ ಪರಿಸ್ಥಿತಿ ಜಗತ್ತಿನಲ್ಲಿ ಯಾವೊತ್ತೂ ಬಂದಿರಲಿಲ್ಲ. ಆದರೆ, ಈ ರೀತಿಯ ಪರಿಸ್ಥಿತಿ ಈಗ ಬಂದಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಈ ಕೋವಿಡ್-19 ಈ ರಾಜ್ಯಕ್ಕೆ ಅಷ್ಟೇ ಅಲ್ಲ, ಇಡೀ ದೇಶಕ್ಕೆ ಅಷ್ಟೆ ಅಲ್ಲ, ಅದು ಇಡೀ ವಿಶ್ವಕ್ಕೆ ವ್ಯಾಪಿಸಿದೆ. ಆ ಕೋವಿಡ್-19 ಕೆಳಗೆ shelter ಅನ್ನು ತೆಗೆದುಕೊಳ್ಳಬಾರದು. ಒಂದು ಕಾಲದಲ್ಲಿ ಮಾನ್ಯ ಚಂದ್ರಶೇಖರ್‌ರವರು ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದರು. ಅವರನ್ನು Young Turk ಎನ್ನುತ್ತಿದ್ದರು. ಅವರು ಪ್ರಧಾನ ಮಂತ್ರಿಗಳಾಗಿದ್ದಾಗ ಈ ರಾಷ್ಟ್ರದ ಬೊಕ್ಕಸದಲ್ಲಿ ಹಣವಿರಲಿಲ್ಲ. Foreign bills dishonour ಆಗುವಂತಹ ಸ್ಥಿತಿಗೆ ಬಂತು. ಇಡೀ ದೇಶವನ್ನು ಏಳು ದಿವಸ ನಡೆಸುವಷ್ಟು ಹಣವಿತ್ತು. ಆಗ ಮಾನ್ಯ ಚಂದ್ರಶೇಖರ್‌ರವರು, ಮಾಜಿ ಪ್ರಧಾನ ಮಂತ್ರಿಗಳಾಗಿದ್ದ ಮಾನ್ಯ ಪಿ.ವಿ.ನರಸಿಂಹರಾವ್‌ರವರ ಬಳಿಗೆ ಹೋದರು. ಈಗ African Country ದಲ್ಲಿ ಈ ರೀತಿಯಾಗುತ್ತದೆ. ಅಂದರೆ, ಮಾನ್ಯ ಎನ್. ರವಿಕುಮಾರ್ ರವರೇ, ತಾವು ಸ್ವಲ್ಪ ಕೇಳಿ. Foreign bills....

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಪಿ.ವಿ.ನರಸಿಂಹರಾವ್‌ರವರು ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದಾಗ ವಿದೇಶದಲ್ಲಿ ಬಂಗಾರವನ್ನು ಒತ್ತೆ ಇಟ್ಟು ಬಂದಿದ್ದರಲ್ಲವೇ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಬಂಗಾರ ಒತ್ತೆ ಇಟ್ಟಿದ್ದರ ಬಗ್ಗೆ ಹೇಳುತ್ತೇನೆ. I will not hide anything. I will tell.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಸಭಾಪತಿಯವರು:–** ಅವರು ಹೇಳುವುದನ್ನು ಕೇಳಿ. ಒಬ್ಬೊಬ್ಬರಾಗಿ ಮಾತನಾಡಿ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಬಿಜೆಪಿಯಿಂದ....

**(ಗೊಂದಲ)**

**ಸಭಾಪತಿಯವರು:–** ಮಾನ್ಯ ನಸೀರ್ ಅಹ್ಮದ್‌ರವರೇ, ವಿರೋಧ ಪಕ್ಷದ ನಾಯಕರು ಮಾತನಾಡುವಾಗಲೂ ಮಾತನಾಡುವುದೇ? ಅವರು ಹೇಳುವುದನ್ನು ಕೇಳಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಚಂದ್ರಶೇಖರ್‌ರವರು ಪ್ರಧಾನ ಮಂತ್ರಿಗಳಾಗಿದ್ದಾಗ, ದೇಶದ ಆರ್ಥಿಕತೆ ದುಸ್ಥಿತಿಗೆ ಬಂತು. ಈ ದೇಶದ 281 tonnes of gold was airlifted and it was pledged in London Bank. 281 ಟನ್ London Bank ಗೆ airlift ಮಾಡಿದರು. ಮಾನ್ಯ ಪಿ.ವಿ.ನರಸಿಂಹರಾವ್‌ರವರು ಅಧಿಕಾರ ಸ್ವೀಕಾರ ಮಾಡಿದ ತಕ್ಷಣವೇ ಭಾರತೀಯ ರಿಸರ್ವ್ ಬ್ಯಾಂಕ್‌ನ ಗೌರ್ನರ್ ಆಗಿದ್ದಂತಹ ಡಾ॥ ಮನಮೋಹನ್‌ಸಿಂಗ್‌ರವರನ್ನು ಕರೆಯಿಸಿಕೊಂಡು ಅವರಿಗೆ ಹಣಕಾಸು ಖಾತೆಯನ್ನು ನೀಡಿದರು. ಅವರು ಅಷ್ಟು ಚಾಕಚಕ್ಯತೆಯಿಂದ ಮಾಡಿದರು. ರಾಷ್ಟ್ರದ ಬೊಕ್ಕಸ ಖಾಲಿ ಇತ್ತು. ದೇಶ ನಡೆಸುವುದಕ್ಕೆ ಏಳು ದಿವಸಕ್ಕೆ ಸಾಕಾಗುವಷ್ಟು ಹಣವಿತ್ತು. ಆಫ್ರಿಕಾ ದೇಶದಲ್ಲಿ ಈ ರೀತಿಯಾಗುತ್ತದಂತೆ. Foreign bills dishonour ಇಡೀ ವಿಶ್ವದಲ್ಲಿ ಭಾರತದ ಹೆಸರು ಕೆಡುತ್ತಿತ್ತು.

**(ಮುಂದು)**

"ತಿದ್ದುಪಡಿಯಾಗದ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(563)22.3.2021/7.10/ಎಂ.ಎಂ–ಎಂ.ಡಿ**

**ಶ್ರೀ ಎಸ್.ಆರ್. ಪಾಟೀಲ್ (ಮುಂದು):–**

ಅಂತಹ ಸಂದರ್ಭದಲ್ಲಿ ಜಗತ್ಪ್ರಸಿದ್ಧ ಆರ್ಥಿಕ ತಜ್ಞರಾದ ಡಾ॥ ಮನಮೋಹನ್ ಸಿಂಗ್ ಅವರನ್ನು ಕರೆದುಕೊಂಡು ಬಂದು Finance portfolio ಕೊಟ್ಟರು. ಮುಂದೆ ಅವರು ತಮ್ಮ ಚಾಕಚಕ್ಯತೆಯಿಂದ, ಜಾಣ್ಮೆಯಿಂದ ಆರ್ಥಿಕ ನೀತಿಯ ಅತ್ಯುತ್ತಮವಾದಂತಹ ಧೋರಣೆಯಿಂದ pledge ಮಾಡುವುದಕ್ಕೆ ಎಷ್ಟು ಹಣ ಕೊಟ್ಟಿದ್ದರೋ ಅಷ್ಟು ಹಣ ಪೂರ್ತಿಯಾಗಿ ಲಂಡನ್ ಬ್ಯಾಂಕಿಗೆ ಕೊಟ್ಟರು. ಅಷ್ಟೇ ಅಲ್ಲದೇ, 250 ಟನ್ ಚಿನ್ನವನ್ನು ರಿಸರ್ವ್ ಬ್ಯಾಂಕಿಗೆ ಖರೀದಿ ಮಾಡಿದರು. IMF (International Monetary Fund) loan and World Bank loan clear ಮಾಡಿದರು. ನಮ್ಮ ದೇಶದಲ್ಲಿ IMF ನಲ್ಲಿ investment ಮಾಡಿದರು. ಅದು ಡಾ॥ ಮನಮೋಹನ್ ಸಿಂಗ್, ಜಗತ್ಪ್ರಸಿದ್ಧ ಆರ್ಥಿಕ ತಜ್ಞರು; ಅಂತಹವರು ಬೇಕು. ಒಮ್ಮೊಮ್ಮೆ ನಮ್ಮ ಜಡ್ಡು ಜಾಪತ್ರೆಯಲ್ಲಿ 'ಸತ್ತರೆ ಚಲೋ ಡಾಕ್ಟರ್ ಕೈನಲ್ಲಿ ಸಾಯಬೇಕೆಂದು' ಹೇಳುತ್ತೇವೆ. ಹಾಗೆ ದೇಶದ ಆಡಳಿತ ಸೂತ್ರವನ್ನು ಹಿಡಿದವರಿಗೆ ಆರ್ಥಿಕ ಸಾಮರ್ಥ್ಯದ ಚಾಕಚಕ್ಯತೆ, ಜಾಣತನ ಇರಬೇಕು. ಇಂತಹ ದೊಡ್ಡದಾದ ಪ್ರಜಾಸತ್ತಾತ್ಮಕ ರಾಷ್ಟ್ರ, 138 ಕೋಟಿ ಜನತೆ ವಿಶ್ವದಲ್ಲಿಯೇ ಬಲಾಢ್ಯ ರಾಷ್ಟ್ರ ಎನಿಸಿಕೊಳ್ಳುವ ಈ ದೇಶದ ಸ್ಥಿತಿ ಈ ನಮೂನೆಗೆ ಬಂದಿದೆಯೆಂದು ನಮಗೆ ನೋವಾಗುತ್ತದೆ. ನಾನು ಪಕ್ಷ ರಾಜಕಾರಣದ ಬಗ್ಗೆ ಹೇಳುವುದಿಲ್ಲ, ಏಕೆಂದರೆ ವ್ಯಕ್ತಿಗಿಂತ ಪಕ್ಷ ದೊಡ್ಡದು, ಪಕ್ಷಕ್ಕಿಂತ ದೇಶ ದೊಡ್ಡದು, ದೇಶವಿದ್ದರೆ ನಾವೆಲ್ಲಾ ಉಳಿಯುತ್ತೇವೆ. ಆ ದೃಷ್ಟಿಯಿಂದ ಏನು ಈ ರೀತಿಯಾದಂತಹ ಆಡಳಿತವಿದೆ, ಇದು ಈ ರಾಜ್ಯಕ್ಕೆ ಮತ್ತು ಈ ರಾಷ್ಟ್ರಕ್ಕೆ ಮಾರಕವಾಗುವಂತಹ ಒಂದು ಆಡಳಿತ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಏಕೆಂದರೆ, ಬೆಲೆ ಏರಿಕೆಯನ್ನು ಸ್ಥಿಮಿತಕ್ಕೆ ತರದಿದ್ದರೆ ಭಾರತೀಯ ಜನತಾ ಪಕ್ಷದ ನಮ್ಮ ಸ್ನೇಹಿತರು ಮನೆಯಿಂದ ಹೊರಗೆ ಹೋಗಬೇಕಾದರೆ, ಹೊರಗೆ ಯಾರಾದರೂ ಇದ್ದಾರೆಯೇ ಎಂದು ನೋಡಿಕೊಂಡು ಯಾರೂ ಇಲ್ಲದಿದ್ದಾಗ ಇವರು ಮನೆಯಿಂದ ಹೊರಗೆ ಬರುವ ಸ್ಥಿತಿ ಬಂದರೂ ಆಶ್ಚರ್ಯ ಪಡುವ ಹಾಗಿಲ್ಲ. ಇಷ್ಟು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಅರುಣ ಶಹಾಪುರ:–** 2014ರಲ್ಲಿ ಆ ರೀತಿ ಆಗಿತ್ತು.

**ಶ್ರೀ ಎಸ್.ಆರ್. ಪಾಟೀಲ್:–** ನಿಮ್ಮದೂ ಆಗುತ್ತದೆ.

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:–** ಈಗ ಸದನವನ್ನು ನಾಳೆ ಬೆಳಗ್ಗೆ 10.30ರವರೆಗೆ ಮುಂದೂಡಲಾಗುವುದು.

**(ಸದನವು ಸಾಯಂಕಾಲ 7 ಗಂಟೆ 11 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 23ನೇ ಮಾರ್ಚ್ ಮಾಹೆ 2021ರಂದು ಮಂಗಳವಾರ ಬೆಳಗ್ಗೆ 10:30 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

<><><>

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”